ಪ್ರಜಾವಾಣಿ
ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ತಂತ್ರಜ್ಞಾನ
'ಡಾರ್ಟ್' ಅಂತರಿಕ್ಷನೌಕೆಯು ಕ್ಷುದ್ರಗ್ರಹ ಜೋಡಿಯನ್ನು ಇದೇ 27ರ ಬೆಳಗಿನ ಜಾವ ಅಪ್ಪಳಿಸಲಿದೆ. ಈ ಡಿಕ್ಕಿ ಯಶಸ್ವಿಯಾದೀತೆ?

ಆಳ-ಅಗಲ
ಅರಣ್ಯವಾಸಿಗಳ ಹಕ್ಕು ಮೊಟಕು

ಕಾಂಗ್ರೆಸ್ ಅಧ್ಯಕ್ಷ ಚುನಾವಣೆ: ಚಟುವಟಿಕೆ ಬಿರುಸು 7
ಪಿಎಸ್ಐ ಅಕ್ರಮ: ವಿಧಾನಸಭೆಯಲ್ಲಿ ಜಟಾಪಟಿ 6

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
59,719 ▲	17,816 ▲	₹51,160 (ಬೆಂಗಳೂರು) ▲	₹58,100 (ಬೆಂಗಳೂರು)	79.74 ▲

ಪೊಲೀಸರ ಮೇಲಿನ ಹಲ್ಲೆ ಪ್ರಕರಣ ಹಿಂಪಡೆಯಲು ಗೃಹ ಸಚಿವರಿಂದಲೇ ಸೂಚನೆ

ದ್ವೇಷ ಭಾಷಣ: 34 ಪ್ರಕರಣ ವಾಪಸ್

● ರಾಜೇಶ್ ರೈ ಚಟ್ಲ

ಬೆಂಗಳೂರು: ಹಿಂದೂ ಸಮಾಜೋತ್ಸವ, ಜನಜಾಗೃತಿ ಸಮಾವೇಶ ಮತ್ತು 'ಲವ್ ಜಿಹಾದ್' ವಿರುದ್ಧದ ಪ್ರತಿಭಟನೆ ಸಂದರ್ಭದಲ್ಲಿ ಕೋಮುದ್ವೇಷದ ಭಾಷಣ ಮಾಡಿದ ಆರೋಪದಲ್ಲಿ ಹಿಂದೂ ಜಾಗರಣ ವೇದಿಕೆಯ ಸಂಚಾಲಕ ಜಗದೀಶ ಕಾರಂತ ಹಾಗೂ ಕೆಲವು ಹಿಂದುತ್ವ ಸಂಘಟನೆಗಳ ಪ್ರಮುಖರ ವಿರುದ್ಧ ದಾಖಲಾಗಿದ್ದ ಒಟ್ಟು 34 ಮೊಕದ್ದಮೆಗಳನ್ನು ಹಿಂಪಡೆಯಲು ರಾಜ್ಯ ಸರ್ಕಾರ ನಿರ್ಧರಿಸಿದೆ.

'ವಿವಿಧ ಪೊಲೀಸ್ ಠಾಣೆಗಳಲ್ಲಿ ದಾಖಲಾಗಿರುವ ಮತ್ತು ವಿವಿಧ ನ್ಯಾಯಾಲಯಗಳಲ್ಲಿ ವಿಚಾರಣೆಗೆ ಬಾಕಿ ಇರುವ ಈ ಮೊಕದ್ದಮೆಗಳನ್ನು ಹಿಂಪಡೆಯಬಾರದು' ಎಂದು ಪೊಲೀಸ್ ಮಹಾನಿರ್ದೇಶಕ (ಡಿಜಿ, ಐಜಿಪಿ), ಅಭಿಯೋಗ ಹಾಗೂ ಸರ್ಕಾರಿ ವ್ಯಾಜ್ಯಗಳ ಇಲಾಖೆ ಮತ್ತು ಕಾನೂನು ಇಲಾಖೆ ಅಭಿಪ್ರಾಯ ನೀಡಿದ್ದವು. ಆದರೂ ಸಚಿವ ಸಂಪುಟ ಸಭೆಯಲ್ಲಿ ವಾಪಸ್ ಪಡೆಯಲು ತೀರ್ಮಾನಿಸಲಾಗಿದೆ. ಈ ಪೈಕಿ, ರೈತರಿಗೆ ಸಂಬಂಧಿಸಿದ ಕೆಲವು ಪ್ರಕರಣಗಳಿವೆ.

ಎಲ್ಲಿ, ಎಷ್ಟು ಪ್ರಕರಣ ವಾಪಸು?

ಜಿಲ್ಲೆ	ಸಂಖ್ಯೆ (ತಲಾ)
ಕೊಡಗು, ಮೈಸೂರು, ದಕ್ಷಿಣ ಕನ್ನಡ, ತುಮಕೂರು, ಹುಬ್ಬಳ್ಳಿ-ಧಾರವಾಡ	1
ಬೆಂಗಳೂರು ಗ್ರಾಮಾಂತರ, ಬೆಂಗಳೂರು ನಗರ, ಬೆಳಗಾವಿ, ವಿಜಯಪುರ	2
ಮಂಡ್ಯ, ದಾವಣಗೆರೆ, ಚಿಕ್ಕಬಳ್ಳಾಪುರ	3
ಬಾಗಲಕೋಟೆ, ಕಲಬುರಗಿ, ಹಾವೇರಿ	4

ವಾಪಸ್‌ಗೆ ಮನವಿ ಮಾಡಿದವರು

ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಗೃಹ ಸಚಿವ ಆರಗ ಜ್ಞಾನೇಂದ್ರ, ಸಚಿವರಾದ ಜೆ.ಸಿ. ಮಾಧುಸ್ವಾಮಿ, ಎಸ್. ಅಂಗಾರ, ಶಾಸಕರಾದ ಅರುಣ್ ಕುಮಾರ್ (ರಾಣೆಬೆನ್ನೂರು), ಕೆ.ಜಿ. ಬೋಪಯ್ಯ (ವಿರಾಜಪೇಟೆ), ದೊಡ್ಡನಗೌಡ ಜಿ. ಪಾಟೀಲ (ಹುನಗುಂದ), ವೀರಣ್ಣ ಚರಂತಿಮಠ (ಬಾಗಲಕೋಟೆ), ಎಸ್. ಆರ್. ವಿಶ್ವನಾಥ (ಯಲಹಂಕ), ಬಿ. ಎಸ್. ಪಾಟೀಲ (ದೇವರಹಿಪ್ಪರಗಿ), ಸುಭಾಷ ಆರ್. ಗುತ್ತೇದಾರ (ಆಲಂದ), ರಾಜಕುಮಾರ ಪಾಟೀಲ ತೇಲ್ಕೂರು (ಸೇಡಂ), ಎಸ್.ಎ. ರವೀಂದ್ರನಾಥ (ದಾವಣಗೆರೆ ಉತ್ತರ), ಕೆ. ಮಾಡಾಳ್ ವಿರೂಪಾಕ್ಷ (ಚನ್ನಗಿರಿ), ಆನಂದ ಮಾಮನಿ (ಸವದತ್ತಿ), ಶ್ರೀಮಂತ ಪಾಟೀಲ (ಕಾಗವಾಡ), ಅರವಿಂದ ಬೆಲ್ಲದ (ಹುಬ್ಬಳ್ಳಿ- ಧಾರವಾಡ ಪಶ್ಚಿಮ), ಎಸ್.ಕೆ. ಬೆಳ್ಳುಬ್ಬಿ (ಮಾಜಿ ಶಾಸಕ), ಎನ್. ರವಿಕುಮಾರ್ (ವಿಧಾನ ಪರಿಷತ್ ಸದಸ್ಯ)

ಈ ಕುರಿತಂತೆ, ಸೋಮವಾರ (ಸೆ. 19) ನಡೆದ ಸಚಿವ ಸಂಪುಟ ಸಭೆಗೆ ಒಳಾಡಳಿತ ಇಲಾಖೆ ಮಂಡಿಸಿದ್ದ 47 ಪುಟಗಳ ಕಡತ 'ಪ್ರಜಾವಾಣಿ'ಗೆ ಲಭ್ಯವಾಗಿದೆ. ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಗೃಹ ಸಚಿವ ಆರಗ ಜ್ಞಾನೇಂದ್ರ ಸೇರಿದಂತೆ ಹಲವು ಸಚಿವರು, ಶಾಸಕರು ಮೊಕದ್ದಮೆಗಳನ್ನು ವಾಪಸ್ ಪಡೆಯುವಂತೆ ಮನವಿ ಮಾಡಿದ್ದರು.

6ನೇ ಪುಟ ನೋಡಿ

ಹಿಂದಕ್ಕೆ ಪಡೆದ ಪ್ರಮುಖ ಮೊಕದ್ದಮೆಗಳು

- ಹಾವೇರಿಯಲ್ಲಿ ಹಲಗೇರಿ ಠಾಣೆಯಲ್ಲಿ 2015ರಲ್ಲಿ ಎರಡು ಕೋಮುಗಳಿಗೆ ಸಂಬಂಧಿಸಿದಂತೆ ದಾಖಲಾದ ಪ್ರಕರಣದಲ್ಲಿ ಕರ್ತವ್ಯದಲ್ಲಿದ್ದ ಪೊಲೀಸರ ಮೇಲೆ ಹಲ್ಲೆ ನಡೆಸಿದ ಆರೋಪಿಗಳ ಮೇಲಿನ ಮೊಕದ್ದಮೆ- ಗೃಹ ಸಚಿವ ಜ್ಞಾನೇಂದ್ರ ಮನವಿ
- ನಿಷೇಧಾಜ್ಞೆ ಇದ್ದರೂ 'ಮಂಗಳೂರು ಚಲೋ' ಬೈಕ್ ರ‍್ಯಾಲಿ ನಡೆಸಿದ ಆರೋಪದಲ್ಲಿ 2017ರಲ್ಲಿ ಮೈಸೂರು ಜಿಲ್ಲೆಯ ಇಲವಾಲ ಠಾಣೆಯಲ್ಲಿ ಬಿಜೆಪಿ ಯುವಮೋರ್ಚಾ ಕಾರ್ಯಕರ್ತರ ಮೇಲೆ ದಾಖಲಾದ ಮೊಕದ್ದಮೆ- ಸಚಿವ ಜೆ.ಸಿ. ಮಾಧುಸ್ವಾಮಿ ಮನವಿ.
- ಹಿಂದೂ ಜಾಗರಣ ವೇದಿಕೆಯ ಶಿವಾನಂದ ಮಲ್ಲಪ್ಪ ಬಡಿಗೇರ ಮತ್ತು ಇತರ ಎಂಟು ಮಂದಿಯ ಗಡಿಪಾರು ವಿರೋಧಿಸಿ 'ಮುಧೋಳ ಚಲೋ' ವೇಳೆ ಪ್ರಚೋದನಕಾರಿ ಭಾಷಣ ಮಾಡಿದ ಜಗದೀಶ ಕಾರಂತ ಮತ್ತು ಸ್ಥಳೀಯ ಕಾರ್ಯಕರ್ತನ ವಿರುದ್ಧ ಮುಧೋಳ ಠಾಣೆಯಲ್ಲಿ 2017ರಲ್ಲಿ ದಾಖಲಾದ ಮೊಕದ್ದಮೆ- ಸಚಿವ ಎಸ್. ಅಂಗಾರ ಮನವಿ
- ದಕ್ಷಿಣ ಕನ್ನಡ ಜಿಲ್ಲೆಯ ಕಲ್ಲುಗುಂಡಿಯಲ್ಲಿ ಹಿಂದೂ ಸಮಾಜೋತ್ಸವದಲ್ಲಿ ಕೋಮು ದ್ವೇಷದ ಭಾಷಣ ಮಾಡಿದ ಆರೋಪದಲ್ಲಿ ಸುಳ್ಯ ಠಾಣೆಯಲ್ಲಿ ಹಿಂದೂ ಜಾಗರಣ ವೇದಿಕೆಯ ಡಿ.ವಿ. ಲೀಲಾಧರ, ಸುಬ್ರಹ್ಮಣ್ಯ ಉಪಾಧ್ಯಾಯ, ಕೆ.ಪಿ. ಜಗದೀಶ ಮತ್ತು ಜಗದೀಶ ಕಾರಂತ ವಿರುದ್ಧ 2013ರಲ್ಲಿ ದಾಖಲಾದ ಮೊಕದ್ದಮೆ- ಸಚಿವ ಎಸ್. ಅಂಗಾರ ಮನವಿ
- ದೊಡ್ಡಬಳ್ಳಾಪುರದಲ್ಲಿ 'ಲವ್ ಜಿಹಾದ್' ವಿರುದ್ಧದ ಪ್ರತಿಭಟನೆ ವೇಳೆ ಪೊಲೀಸರನ್ನು ನಿಂದಿಸಿದಕ್ಕೆ ಜಗದೀಶ ಕಾರಂತ ವಿರುದ್ಧ 2011ರಲ್ಲಿ ದಾಖಲಾದ ಮೊಕದ್ದಮೆ- ಸಚಿವ ಎಸ್. ಅಂಗಾರ ಮನವಿ
- ಶಿರಾದಲ್ಲಿ ಹಿಂದೂ ಜನ ಜಾಗೃತಿ ಸಮಾವೇಶದಲ್ಲಿ ದ್ವೇಷ ವೈಷಮ್ಯದ ಭಾಷಣ ಮಾಡಿದ ಆರೋಪದಲ್ಲಿ 2009ರಲ್ಲಿ ಜಗದೀಶ ಕಾರಂತ ವಿರುದ್ಧ ದಾಖಲಾದ ಮೊಕದ್ದಮೆ- ಸಚಿವ ಎಸ್. ಅಂಗಾರ ಮನವಿ



SDJ GOLD
ಒಂದು ಗ್ರಾಂ ಚಿನ್ನಕ್ಕೆ 5500
ನೀವು ಗಿರವಿ ಇಟ್ಟು ಬಿಡಿಸಿಕೊಳ್ಳಲಾಗದ ಚಿನ್ನ ಆಭರಣಗಳನ್ನು ನಾವೇ ಬಿಡಿಸಿ ಮಾರುಕಟ್ಟೆ ಬೆಲೆಗಿಂತ ಹೆಚ್ಚಿನ ಹಣವನ್ನು ಕೊಡುತ್ತೇವೆ.
8884304444

ನಿಷೇಧಿತ ಐಎಸ್ ನಂಟು: ಇಬ್ಬರ ಬಂಧನ

ಪ್ರಜಾವಾಣಿ ವಾರ್ತೆ

ಶಿವಮೊಗ್ಗ: ನಿಷೇಧಿತ ಭಯೋತ್ಪಾದಕ ಸಂಘಟನೆ ಐಎಸ್ ಜೊತೆ ನಂಟು ಹೊಂದಿರುವ ಆರೋಪದ ಮೇಲೆ ಇಬ್ಬರು ಯುವಕರನ್ನು ಇಲ್ಲಿನ ಗ್ರಾಮೀಣ ಠಾಣೆಯ ಪೊಲೀಸರು ಬಂಧಿಸಿದ್ದಾರೆ. ಇನ್ನೊಬ್ಬ ಆರೋಪಿ ತಲೆಮರೆಸಿಕೊಂಡಿದ್ದಾನೆ.

ಇಲ್ಲಿನ ಸಿದ್ದೇಶ್ವರ ನಗರ ನಿವಾಸಿ ಸೈಯದ್ ಯಾಸೀನ್ ಅಲಿಯಾಸ್ ಬೈಲು (21) ಹಾಗೂ ಮಂಗಳೂರಿನ ಮಾಝ್ ಮುನೀರ್ ಅಹಮದ್ (22) ಬಂಧಿತರು. ತೀರ್ಥಹಳ್ಳಿಯ ಸೊಪ್ಪುಗುಡ್ಡೆಯ ನಿವಾಸಿ ಶಾರಿಕ್ ತಲೆಮರೆಸಿಕೊಂಡಿದ್ದಾನೆ.

'ಶಿವಮೊಗ್ಗದಲ್ಲಿ ಈಚೆಗೆ ನಡೆದ ಚಾಕುಇರಿತ ಪ್ರಕರಣದಲ್ಲಿ ಬಂಧಿತರಾದವರ ವಿಚಾರಣೆ ವೇಳೆ ಈ ಆರೋಪಿಗಳ ಬಗ್ಗೆ ಸುಳಿವು ಸಿಕ್ಕಿದ್ದು, ಕಾನೂನುಬಾಹಿರ

ಮುನೀರ್ ಅಹಮದ್

ಸೈಯದ್ ಯಾಸೀನ್

ಚಟುವಟಿಕೆಗಳ ತಡೆ ಕಾಯ್ದೆ (ಯುಎಪಿಎ) ಅಡಿ ಬಂಧಿಸಲಾಗಿದೆ ಇಬ್ಬರನ್ನೂ ಮಂಗಳವಾರ ನ್ಯಾಯಾಲಯಕ್ಕೆ ಹಾಜರುಪಡಿಸಲಾಗಿದ್ದು, ನ್ಯಾಯಾಲಯವು ಆರೋಪಿಗಳನ್ನು ಇದೇ 29ರವರೆಗೆ ಪೊಲೀಸ್ ವಶಕ್ಕೆ ನೀಡಿದೆ' ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಬಿ.ಎಂ.ಲಕ್ಷ್ಮೀ ಪ್ರಸಾದ್ ಮಾಧ್ಯಮದವರಿಗೆ ಮಾಹಿತಿ ನೀಡಿದರು.

'ಆರೋಪಿಗಳ ಬಗ್ಗೆ ರಾಷ್ಟ್ರೀಯ ತನಿಖಾ ದಳ, ಕೇಂದ್ರ ಗುಪ್ತಚರ ವಿಭಾಗದೊಂದಿಗೆ ಮಾಹಿತಿ ಹಂಚಿಕೊಂಡಿದ್ದೇವೆ' ಎಂದು ಪ್ರತಿ ಕ್ರಿಯಿಸಿದರು.

ಮೂವರು ಆರೋಪಿಗಳು ತಮ್ಮ ಬಳಿ ಸ್ಫೋಟಕಗಳನ್ನು ಇಟ್ಟುಕೊಂಡಿದ್ದರು ಹಾಗೂ ರಾಷ್ಟ್ರಧ್ವಜ ಸುಟ್ಟಿದ್ದರು ಎಂದು ಶಿವಮೊಗ್ಗ ಗ್ರಾಮಾಂತರ ಠಾಣೆಯಲ್ಲಿ ದಾಖಲಾಗಿರುವ ಎಫ್ಐಆರ್‌ನಲ್ಲಿ ಉಲ್ಲೇಖಿಸಲಾಗಿದೆ.

ಮಾಝ್ ಮುನೀರ್ ಅಹಮದ್ ಹಾಗೂ ಸೈಯದ್ ಯಾಸೀನ್ ಇಬ್ಬರೂ ಎಂಜಿನಿಯರಿಂಗ್ ಪದವೀಧರರು. ಶಾರಿಕ್ ಮಂಗಳೂರಿನಲ್ಲಿ ಬಟ್ಟೆ ಅಂಗಡಿಯಲ್ಲಿ ಕೆಲಸ ಮಾಡಿಕೊಂಡಿದ್ದನು.

3ನೇ ಪುಟ ನೋಡಿ

'ಹಿಜಾಬ್ ವಿವಾದದ ಹಿಂದೆ ಪಿಎಫ್ಐ'

ನವದೆಹಲಿ: ಕರ್ನಾಟಕದ ಪದವಿ ಪೂರ್ವ ಕಾಲೇಜುಗಳಲ್ಲಿ 2021ರ ವರೆಗೆ ಯಾವುದೇ ವಿದ್ಯಾರ್ಥಿನಿ ಹಿಜಾಬ್ ಧರಿಸುತ್ತಿರಲಿಲ್ಲ. ಆದರೆ, ಪಾಪ್ಯುಲರ್ ಫ್ರಂಟ್ ಸಂಘಟನೆ ಸಾಮಾಜಿಕ ಜಾಲತಾಣದ ಮೂಲಕ ಸಮಾಜದಲ್ಲಿ ಅಶಾಂತಿ ಉಂಟು ಮಾಡಲು, ಕರ್ನಾಟಕ ಸರ್ಕಾರ ಸಾಂವಿಧಾನಿಕ ಹಕ್ಕುಗಳ ರಕ್ಷಣೆ ಹೆಸರಿನಲ್ಲಿ ಮಧ್ಯಪ್ರವೇಶಿಸುವಂತೆ ಮಾಡಲು ಚಳವಳಿ ಆರಂಭಿಸಿತು ಎಂದು ಕರ್ನಾಟಕ ಸರ್ಕಾರವು ಸುಪ್ರೀಂ ಕೋರ್ಟ್‌ಗೆ ತಿಳಿಸಿದೆ.

5

ದೇವರಕೋಲು ಮುಟ್ಟಿದ ಪರಿಶಿಷ್ಟ ಬಾಲಕನಿಗೆ ದಂಡ

ಪ್ರಜಾವಾಣಿ ವಾರ್ತೆ

ಮಾಲೂರು (ಕೋಲಾರ ಜಿಲ್ಲೆ): ತಾಲ್ಲೂಕಿನ ಟೇಕಲ್ ಹೋಬಳಿಯ ಉಳ್ಳೇರಹಳ್ಳಿ ಗ್ರಾಮ ದೇವತೆ ಭೂತಮ್ಮನ ಮೆರವಣಿಗೆಯಲ್ಲಿ ಪರಿಶಿಷ್ಟ ಜಾತಿಯ ಬಾಲಕ ಚೇತನ್ ಎಂಬಾತ ದೇವತೆಯ ಗುಜ್ಜಕೋಲು ಮುಟ್ಟಿದನೆಂದು ಆರೋಪಿಸಿ ಗ್ರಾಮದ ಕೆಲವು ಒಕ್ಕಲಿಗ ಮುಖಂಡರು ಬಾಲಕನ ಕುಟುಂಬಕ್ಕೆ ₹60 ಸಾವಿರ ದಂಡ ವಿಧಿಸಿದ ಘಟನೆ ನಡೆದಿದೆ.

ಅಕ್ಟೋಬರ್ 1ರೊಳಗೆ ದಂಡ ಪಾವತಿಸದಿದ್ದರೆ ಕುಟುಂಬಕ್ಕೆ ಸಾಮಾಜಿಕ ಬಹಿಷ್ಕಾರ ಹಾಕುವುದಾಗಿ ಬೆದರಿಕೆ ಒಡ್ಡಲಾಗಿದೆ ಎಂದು ಬಾಲಕನ ತಾಯಿ ಶೋಭಾ ಮಂಗಳವಾರ ಮಾಸ್ತಿ ಪೊಲೀಸ್ ಠಾಣೆಯಲ್ಲಿ ದೂರು ನೀಡಿದ್ದಾರೆ. ಗ್ರಾಮದ 8 ಮಂದಿ ವಿರುದ್ಧ ದೌರ್ಜನ್ಯ ಪ್ರಕರಣ ದಾಖಲಾಗಿದ್ದು ಆರೋಪಿಗಳು ತಲೆಮರೆಸಿಕೊಂಡಿದ್ದಾರೆ.

'ಗ್ರಾಮದ ನಾರಾಯಣಸ್ವಾಮಿ, ರಮೇಶ್, ಗ್ರಾಮ ಪಂಚಾಯಿತಿ ಮಾಜಿ ಸದಸ್ಯ ನಾರಾಯಣಸ್ವಾಮಿ, ವೆಂಕಟೇಶಪ್ಪ, ಕೋಟೆಪ್ಪ, ಚಲಪತಿ, ಮೋಹನ್ ರಾವ್, ಚಿನ್ನಯ್ಯ ಎಂಬುವರ ಮೇಲೆ ಪ್ರಕರಣ ದಾಖಲಾಗಿದೆ.

3ನೇ ಪುಟ ನೋಡಿ

In Revered Memory of
Sri. A.C. Venkatachalapathy
Founder - Swastiks Group



" The true measure of ones success is the difference they make in others life "
We salute our visionary founder whose ideals live on in our hearts and guide us to greater heights
Remembered Forever:
Smt. A.C. Rajalakshmi | A.V. Sridhar | A.V. Dwarakanath
Staff & Family Members:
swastiks® MASALAS | PICKLES | FOOD PRODUCTS SINCE 1973
Rala Pure Spices

ನಿಯಮ ಪಾಲಿಸಿ: ಆರ್‌ಬಿಐ ತಾಕೀತು

ಮುಂಬೈ (ಪಿಟಿಐ): ಆ್ಯಪ್ ಮೂಲಕ ಸಾಲ ಕೊಡುವ ಸಂಸ್ಥೆಗಳು ದುಬಾರಿ ಬಡ್ಡಿ ವಿಧಿಸುತ್ತಿರುವುದರ ಬಗ್ಗೆ ಕಟುವಾಗಿ ಮಾತನಾಡಿರುವ ಆರ್‌ಬಿಐ ಗವರ್ನರ್ ಶಕ್ತಿಕಾಂತ ದಾಸ್, 'ಹೊಸತನವನ್ನು ಹೊಸಕುವ ಬಯಕೆ ಇಲ್ಲ. ಆದರೆ, ಆ್ಯಪ್‌ಗಳು ನಿಯಮಗಳನ್ನು ಪಾಲಿಸಬೇಕು' ಎಂದು ಎಚ್ಚರಿಕೆ ನೀಡಿದ್ದಾರೆ.

ಆ್ಯಪ್‌ಗಳ ಮೂಲಕ ಸಾಲ ಪಡೆದಿದ್ದ ಕೆಲವರು ಆತ್ಮಹತ್ಯೆಗೆ ಶರಣಾಗುವ ಪರಿಸ್ಥಿತಿ ಸೃಷ್ಟಿಯಾಗಿದ್ದರ ಬಗ್ಗೆ ವರದಿಗಳು ಇವೆ. ಈ ಹಿನ್ನೆಲೆಯಲ್ಲಿ ಗವರ್ನರ್ ಹೇಳಿಕೆ ಮಹತ್ವ ಪಡೆದಿದೆ.

'ಡಿಜಿಟಲ್ ವೇದಿಕೆಗಳ ಮೂಲಕ ಸಾಲ ಕೊಡುವುದನ್ನು ಆರ್‌ಬಿಐ ಬೆಂಬಲಿಸುತ್ತದೆ. ಅವರು ಒಂದು ಹೆಜ್ಜೆ ಮುಂದಿರಿಸಿದರೆ, ನಾವು ಎರಡು ಹೆಜ್ಜೆ ಮುಂದಕ್ಕೆ ಇರಿಸುತ್ತೇವೆ. ಆದರೆ, ಹೊಸತನವು ಜವಾಬ್ದಾರಿಯುತವೂ ಆಗಿರಬೇಕು' ಎಂದು ಅವರು ಹೇಳಿದ್ದಾರೆ.

ಚಿನಕುರಳಿ

ಪ್ರಕಾಶ್ ಶೆಟ್ಟಿ

‘ಶಿಕ್ಷಕರ ನೇಮಕಾತಿ ಅಕ್ರಮ ಅಧಿಕಾರಿಗಳ ಮಟ್ಟದಲ್ಲಿ ನಡೆದಿದೆ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಶಿಕ್ಷಕರ ನೇಮಕಾತಿ ಅಕ್ರಮ ಅಧಿಕಾರಿಗಳ ಮಟ್ಟದಲ್ಲಿ ನಡೆದಿದೆ. ಬಿಜೆಪಿ ಸರ್ಕಾರದ ಅವಧಿಯಲ್ಲಾಗಲಿ, ಕಾಂಗ್ರೆಸ್ ಸರ್ಕಾರದ ಅವಧಿಯಲ್ಲಾಗಲಿ ಈ ಅಕ್ರಮ ನಡೆದಿಲ್ಲ’ ಎಂದು ಮಾಜಿ ಶಿಕ್ಷಣ ಸಚಿವ, ಕಾಂಗ್ರೆಸ್ ಮುಖಂಡ ಕಿಮ್ಮನೆ ರತ್ನಾಕರ ಸ್ಪಷ್ಟಪಡಿಸಿದರು.

ಸುದ್ದಿಗೋಷ್ಠಿಯಲ್ಲಿ ಸೋಮವಾರ ಮಾತನಾಡಿದ ಅವರು, ‘ಇದರಲ್ಲಿ ನಮ್ಮ ಹಸ್ತಕ್ಷೇಪ ಇದ್ದರೆ ಸಾಕ್ಷ್ಯಗಳನ್ನು ನೀಡಲಿ. ನೇರ ಆರೋಪ ಇದ್ದರೆ ಪ್ರತಿಕ್ರಿಯೆ ನೀಡಲು ಸಿದ್ಧ’ ಎಂದರು.

‘ಈ ಅಕ್ರಮದ ದಾಖಲೆಗಳನ್ನು ನೀಡುವಂತೆ ಇಲಾಖೆಗೆ ಪತ್ರ ಬರೆದಿದ್ದೇನೆ. ಯಾರೇ ದಾಖಲೆ ತಿರುಚಿ, ನಕಲಿ ದಾಖಲೆ ಮೂಲಕ ನೇಮಕಾತಿಯಾಗಿದ್ದರೆ ಅಂಥವರನ್ನು ಶಿಕ್ಷೆಗೆ ಗುರಿಪಡಿಸಬೇಕು. ಇಲಾಖೆಯಲ್ಲಿನ ಅಧಿಕಾರಿಗಳ ಸಹಾಯ ಇಲ್ಲದೆ ಈ ರೀತಿ ಅಕ್ರಮ ಸಾಧ್ಯವಿಲ್ಲ. ನಕಲಿ ದಾಖಲೆ ಸಲ್ಲಿಸಿರುವವರು ಹಾಗೂ ಅಭ್ಯರ್ಥಿಗಳಿಗೆ ನಕಲಿ ದಾಖಲೆ ಸೃಷ್ಟಿಸಿ ಪೂರೈಸಿರುವವರನ್ನು ಶಿಕ್ಷೆಗೆ ಗುರಿಪಡಿಸಬೇಕು. ಈ ನೇಮಕಾತಿ ವಿಚಾರ ಆರ್ಥಿಕ ಇಲಾಖೆ ಒಪ್ಪಿಗೆ ಪಡೆಯುವುದಕ್ಕಾಗಿ ಸಚಿವರ ವ್ಯಾಪ್ತಿಗೆ ಬರುತ್ತದೆಯೇ ಹೊರತು, ನೇಮಕಾತಿ ಪ್ರಕ್ರಿಯೆ ಬರುವುದಿಲ್ಲ’ ಎಂದೂ ಸ್ಪಷ್ಟಪಡಿಸಿದರು.

‘ಈ ನೇಮಕಾತಿ ಎರಡು ಬಾರಿ ನಡೆದಿದೆ. 2012ರ ಏಪ್ರಿಲ್ 2ಕ್ಕೆ ಮೊದಲ ನೇಮಕಾತಿ ಪ್ರಕ್ರಿಯೆ ಆರಂಭವಾಗಿ 2012ರಲ್ಲಿ ಡಿ. 26ಕ್ಕೆ ಮುಕ್ತಾಯವಾಗಿದೆ. ಆಗ ವಿಶ್ವೇಶ್ವರ ಹೆಗಡೆ ಕಾಗೇರಿ ಶಿಕ್ಷಣ ಸಚಿವರಾಗಿದ್ದರು. ನನ್ನ ಅವಧಿಯಲ್ಲಿ 2015ರಲ್ಲಿ ನೇಮಕಾತಿ ಆಗಿತ್ತು. ಈ ರೀತಿ ನೇಮಕಾತಿಯಲ್ಲಿ ಹಗರಣ ಆಗಿದೆ ಎಂದು ಮಾಧ್ಯಮದಲ್ಲಿ ಬಂದಾಗ ಸಚಿವಾಲಯದ ಅಧಿಕಾರ ವ್ಯಾಪ್ತಿಯನ್ನು ತಿಳಿಸುವುದು ಉತ್ತಮ’ ಎಂದು ಹೇಳಿದರು.

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಕಾರ್ಯಪಾಲಕ ಅಭಿಯಂತರರ ಕಚೇರಿ, ಬೃಹತ್ ಮಳೆನೀರು ಕಾಲುವೆ, ಯಲಹಂಕ ವಲಯ, 9ನೇ ಮಹಡಿ, ವಾಣಿಜ್ಯ ಸಂಕೀರ್ಣ, 4ನೇ ಬ್ಲಾಕ್, ಜಯನಗರ, ಬೆಂಗಳೂರು.

ಸಂ: ಕಾಪಾಅ/ಎಸ್‌ಡಬ್ಲ್ಯೂಡಿ/ವೈಎಲ್‌ಕೆ/ಟೆಂಡರ್/05/2022–23 ದಿನಾಂಕ: 20.09.2022

ಅಲ್ಪಾವಧಿ ಟೆಂಡರ್‌ಗಾಗಿ ಆಹ್ವಾನ (ಐಎಫ್‌ಟಿ)
(ದ್ವಿ ಲಕೋಟೆ ಪದ್ಧತಿ) (ಇ–ಪ್ರೊಕ್ಯೂರ್‌ಮೆಂಟ್ ಪದ್ಧತಿ ಮೂಲಕ ಮಾತ್ರ)

ಕಾರ್ಯಪಾಲಕ ಅಭಿಯಂತರು (ಎಸ್‌ಡಬ್ಲ್ಯೂಡಿ–ಯಲಹಂಕ ವಲಯ), ಬೃಬೆಂಮಪಾ, ಬೆಂಗಳೂರು ಇವರು ಹೆಸರಾಂತ ಸಲಹೆಗಾರರಿಂದ ಬಿಡ್‌ಗಳನ್ನು ಆಹ್ವಾನಿಸಿದ್ದಾರೆ. ಕೆಳಕಂಡ ಕಾಮಗಾರಿಗೆ ಮೇಲ್ವಿಚಾರಣೆ, ಯೋಜನಾ ನಿರ್ವಹಣೆ ಹಾಗೂ ಗುಣಮಟ್ಟ ನಿಯಂತ್ರಣ ಸಲಹಾ ಸೇವೆಗಳು.

ಕ್ರ. ಸಂ.	ಕಾಮಗಾರಿಯ ಹೆಸರು	ಯೋಜನೆಯ ಅಂದಾಜು ವೆಚ್ಚ (ರೂ.ಲಕ್ಷಗಳಲ್ಲಿ)	ಇಎಂಡಿ (ರೂ.ಗಳಲ್ಲಿ)
1	2022–23ರ ಕರ್ನಾಟಕ ಸರ್ಕಾರದ ಅನುದಾನದ ಅಡಿಯಲ್ಲಿ **ಯಲಹಂಕ ವಲಯದ ಬ್ಯಾಟರಾಯನಪುರ ವಿಧಾನಸಭಾ ಕ್ಷೇತ್ರದ** ವಿವಿಧ ಸ್ಥಳಗಳಲ್ಲಿ ಹರಡಿರುವ ಎಸ್‌ಡಬ್ಲ್ಯೂಡಿಯ ಪ್ರೈಮರಿ, ಸೆಕೆಂಡರಿ ಬೃಹತ್ ಮಳೆನೀರು ಕಾಲುವೆಗಳು, ಕಲ್ವರ್ಟ್‌ಗಳು/ಸೇತುವೆಗಳು ಮತ್ತು ಎಸ್‌ಡಬ್ಲ್ಯೂಡಿಯ ಸಂಬಂಧಿತ ಕಾಮಗಾರಿಗಳ ನಿರ್ಮಾಣ/ಪುನರ್ ವಿನ್ಯಾಸಕ್ಕಾಗಿ ಯೋಜನಾ ನಿರ್ವಹಣೆ ಸಲಹಾ ಸೇವೆಗಳನ್ನು ಒದಗಿಸುವುದು. **(ಕ್ರಿಯಾ ಯೋಜನೆ–199, 200, 201, 202, 203, 204 & 205)**	3500.00	70,000/-

ಕಾಮಗಾರಿ ಪೂರ್ಣಗೊಳಿಸುವ ಅಂದಾಜು ಅವಧಿ: 12 ತಿಂಗಳು ಅಥವಾ ಕಾಮಗಾರಿ ಪೂರ್ಣಗೊಳಿಸುವವರೆಗೆ.

ಟೆಂಡರ್ ವೇಳಾಪಟ್ಟಿ: (1) ಆರ್‌ಎಫ್‌ಪಿ ದಾಖಲೆಗಳನ್ನು ಇ–ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್ ಮೂಲಕ ದಿನಾಂಕ: **21.09.2022ರ ಸಂಜೆ 4:00 ಗಂಟೆಯಿಂದ** ಡೌನ್‌ಲೋಡ್ ಮಾಡಿಕೊಳ್ಳಬಹುದು. (2) ಪೂರ್ವಭಾವಿ ಸಭೆ ದಿನಾಂಕ: **26.09.2022ರ ಸಂಜೆ 4:00 ಗಂಟೆಗೆ.** (3) ಟೆಂಡರ್ ದಾಖಲೆಗಳನ್ನು ಸ್ವೀಕರಿಸುವ ಕೊನೆಯ ದಿನಾಂಕ: **29.09.2022ರ ಸಂಜೆ 4:00 ಗಂಟೆವರೆಗೆ.** (4) ತಾಂತ್ರಿಕ ಬಿಡ್‌ಗಳನ್ನು ತೆರೆಯುವ ದಿನಾಂಕ: **01.10.2022ರ ಸಂಜೆ 4:30 ಗಂಟೆಗೆ.**

ಹೆಚ್ಚಿನ ವಿವರಗಳಿಗಾಗಿ ಮೇಲ್ಕಂಡ ಕಚೇರಿಯನ್ನು ಕಚೇರಿ ವೇಳೆಯಲ್ಲಿ ಅಥವಾ ಇ–ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್ www.eproc.karnataka.gov.in ಸಂಪರ್ಕಿಸಬಹುದು.

ಸಹಿ/– ಕಾರ್ಯಪಾಲಕ ಅಭಿಯಂತರರು, ಬೃಹತ್ ಮಳೆನೀರು ಕಾಲುವೆ, ಯಲಹಂಕ ವಲಯ, ಬೃಬೆಂಮಪಾ.

ಕೋವಿಡ್-19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಸಿ.ಎಂ ಬೊಮ್ಮಾಯಿ ಭರವಸೆ • ದ್ವಿತೀಯ ಆವೃತ್ತಿ ‘ಫುಡ್ ಅವಾರ್ಡ್ಸ್’ ಪ್ರದಾನ

‘ಹೋಟೆಲ್ ಪರವಾನಗಿ ಏಕೀಕರಣ’

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು

- ಉದ್ಯಮಿ ಜಿ.ಶ್ರೀನಿವಾಸ ರಾವ್‌ಗೆ ‘ಜೀವಮಾನ ಸಾಧನೆ ಪ್ರಶಸ್ತಿ’
- ಕೆ.ವೈ. ಕೀರ್ತನಾ ಅವರಿಗೆ ‘ಉದಯೋನ್ಮುಖ ಮಹಿಳಾ ಉದ್ಯಮಿ ಪ್ರಶಸ್ತಿ’ ಪ್ರದಾನ

ಬೆಂಗಳೂರು: ‘ಹೋಟೆಲ್ ಉದ್ಯಮ ಇನ್ನಷ್ಟು ಬೆಳವಣಿಗೆ ಹೊಂದಲು ವಾಣಿಜ್ಯ ಸೇರಿ ವಿವಿಧ ಪರವಾನಗಿಯ ಏಕೀಕರಣ ಹಾಗೂ ಸರಳೀಕರಣಕ್ಕೆ ವ್ಯವಸ್ಥೆ ರೂಪಿಸಲು ಕ್ರಮವಹಿಸಲಾಗುವುದು’ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಭರವಸೆ ನೀಡಿದರು.

ಬೃಹತ್ ಬೆಂಗಳೂರು ಹೋಟೆಲ್‌ಗಳ ಸಂಘವು (ಬಿಬಿಎಚ್‌ಎ) ನಗರದಲ್ಲಿ ಮಂಗಳವಾರ ಹಮ್ಮಿಕೊಂಡ ದ್ವಿತೀಯ ಆವೃತ್ತಿಯ ‘ಫುಡ್ ಅವಾರ್ಡ್ಸ್’ ಪ್ರದಾನ ಸಮಾರಂಭದಲ್ಲಿ ಹೋಟೆಲ್ ಉದ್ಯಮಿ ಜಿ.ಶ್ರೀನಿವಾಸ ರಾವ್ ಅವರಿಗೆ ‘ಜೀವಮಾನ ಸಾಧನೆ ಪ್ರಶಸ್ತಿ’, ಕೆ.ವೈ. ಕೀರ್ತನಾ ಅವರಿಗೆ ‘ಉದಯೋನ್ಮುಖ ಮಹಿಳಾ ಉದ್ಯಮಿ ಪ್ರಶಸ್ತಿ’ ಪ್ರದಾನ ಮಾಡಿ, ಮಾತನಾಡಿದರು.

‘ಹೋಟೆಲ್ ಉದ್ಯಮ ಮಹತ್ವದ ಉದ್ಯಮ. ವಿವಿಧ ಸಂಘಟನೆಗಳು ಬಂದ್‌ಗೆ ಕರೆ ಕೊಟ್ಟಾಗ ಹೋಟೆಲ್‌ಗಳು ಬಾಗಿಲು ಮುಚ್ಚದಿದ್ದರೆ ಬಂದ್ ಯಶಸ್ವಿ ಆಗುವುದಿಲ್ಲ. ಉದ್ಯೋಗ ಸೇರಿ ವಿವಿಧ ಕಾರಣಗಳಿಂದ ಒಂದೆಡೆಯಿಂದ ಇನ್ನೊಂದೆಡೆಗೆ ಹೋಗಬೇಕಾಗುತ್ತದೆ. ಈ ರೀತಿ ವಲಸೆ ಹೋದವರಿಗೆ ಊಟ–ವಸತಿ ಒದಗಿಸುವವರು ಹೋಟೆಲ್ ಉದ್ಯಮಿಗಳು. ಸುಲಲಿತ ವ್ಯಾಪಾರ ವಹಿವಾಟು ಅಡಿಯಲ್ಲಿ ಎಲ್ಲ ಪರವಾನಗಿಯನ್ನು ಸಬಲೀಕರಣಗೊಳಿಸಲು ಸೂಚಿಸಲಾಗುವುದು’ ಎಂದು ಹೇಳಿದರು.

‘ಹೋಟೆಲ್ ಉದ್ಯಮಕ್ಕೆ ಕೈಗಾರಿಕಾ ಸ್ಥಾನಮಾನ ನೀಡಲು ಬದ್ಧವಿದ್ದೇವೆ. ಆದರೆ, ಹೋಟೆಲ್‌ಗಳು ಪ್ರವಾಸೋದ್ಯಮದಡಿ ನೋಂದಣಿಯಾಗಿ, ಪ್ರವಾಸೋದ್ಯಮ ಕ್ಷೇತ್ರದಲ್ಲಿ ತೊಡಗಿಕೊಳ್ಳಬೇಕು. 24 ಗಂಟೆಗಳು ಹೋಟೆಲ್ ಸೇವೆಗೆ ಅವಕಾಶ ನೀಡಲು ಪರಿಸ್ಥಿತಿ ಅವಲೋಕಿಸಬೇಕಾಗುತ್ತದೆ. ಸದ್ಯ ತಡರಾತ್ರಿವರೆಗೂ ಹೋಟೆಲ್‌ಗಳಿಗೆ ಅವಕಾಶ ನೀಡಲಾಗಿದೆ. ಹೋಟೆಲ್ ಶಿಕ್ಷಣಕ್ಕೆ ಸಂಬಂಧಿಸಿದಂತೆ ಪ್ರತ್ಯೇಕ ಕಾರ್ಯಕ್ರಮ ರೂಪಿಸಬೇಕಾದ ಅಗತ್ಯವಿದೆ. ಪ್ರವಾಸೋದ್ಯಮದ ಪ್ರಗತಿಗೆ ಹೋಟೆಲ್‌ಗಳು ಸಹಕಾರಿ’ ಎಂದರು.

ಹೋಟೆಲ್ ಉದ್ಯಮಕ್ಕೆ ಸಂಬಂಧಿಸಿದಂತೆ ಮುಖ್ಯಮಂತ್ರಿಗೆ ಮನವಿ ಸಲ್ಲಿಸಿದ ಸಂಘದ ಅಧ್ಯಕ್ಷ ಪಿ.ಸಿ.ರಾವ್, ‘ನಮ್ಮ ಉದ್ಯಮವು ಲಕ್ಷಾಂತರ ಮಂದಿಗೆ ಊಟ–ವಸತಿ ನೀಡುತ್ತಿದೆ. ರೈತರು ಬೆಳೆದ ಬೆಳೆಗಳನ್ನು ಖರೀದಿಸಿ, ಪ್ರೋತ್ಸಾಹಿಸುತ್ತಿದ್ದೇವೆ. ಬೀದಿ ಬೀದಿಯಲ್ಲಿ ಜನಸಾಮಾನ್ಯರಿಗೆ ಕುಡಿಯುವ ನೀರು ಹಾಗೂ ಶೌಚಾಲಯವನ್ನು ಉಚಿತವಾಗಿ ಒದಗಿಸುತ್ತಿದ್ದೇವೆ’ ಎಂದು ಹೇಳಿದರು.

‘₹ 1 ಸಾವಿರಕ್ಕಿಂತ ಕಡಿಮೆ ದರವಿರುವ ಲಾಡ್ಜ್‌ಗಳಿಗೆ ಶೇ 12 ಹಾಗೂ ಹೋಟೆಲ್‌ನ ಊಟ ತಿಂಡಿಯ ಮೇಲೆ ಶೇ 5ರಷ್ಟು ಜಿಎಸ್‌ಟಿ ವಿಧಿಸಿರುವುದು ಸರಿಯಾದ ಕ್ರಮವಲ್ಲ. ಪುನರ್ ಪರಿಶೀಲನೆ ಅಗತ್ಯ. ಹೋಟೆಲ್‌ಗಳಲ್ಲಿ ರಾತ್ರಿಯಿಡೀ ವ್ಯಾಪಾರಕ್ಕೆ ಅವಕಾಶ ನೀಡಬೇಕು’ ಎಂದು ಮನವಿ ಮಾಡಿಕೊಂಡರು.

ಬಸವರಾಜ ಬೊಮ್ಮಾಯಿ ಅವರು ಜಿ. ಶ್ರೀನಿವಾಸ ರಾವ್ ಅವರಿಗೆ ‘ಜೀವಮಾನ ಸಾಧನೆ ಪ್ರಶಸ್ತಿ’ ಪ್ರದಾನ ಮಾಡಿದರು. ಪಿ.ಸಿ. ರಾವ್, ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವ ಮುರುಗೇಶ್ ನಿರಾಣಿ ಹಾಗೂ ಕಾರ್ಮಿಕ ಸಚಿವ ಶಿವರಾಮ್ ಹೆಬ್ಬಾರ್ ಇದ್ದಾರೆ –ಪ್ರಜಾವಾಣಿ ಚಿತ್ರ

12 ವಿಭಾಗಗಳಲ್ಲಿ ಪ್ರಶಸ್ತಿ ಪ್ರದಾನ

ವಿಭಾಗ	ವಿಜೇತರು
ಅತ್ಯುತ್ತಮ ದರ್ಶಿನಿ ಸ್ಟೈಲ್	ಐಸಿರಿ ರೆಫೆ, ಅರೆಕೆರೆ
ಬೆಸ್ಟ್ ಕ್ಯಾಶುವಲ್ ಸ್ಟೈಲ್ ಡೈನಿಂಗ್ (ವೆಜ್)	ಶ್ರೀ ಸಾಗರ, ಮಲ್ಲೇಶ್ವರ
ಬೆಸ್ಟ್ ಕ್ಯಾಶುವಲ್ ಸ್ಟೈಲ್ ಡೈನಿಂಗ್ (ನಾನ್‌ವೆಜ್)	ನಾಗಾರ್ಜುನ ರೆಸ್ಟೋರೆಂಟ್, ರೆಸಿಡೆನ್ಸಿ ರಸ್ತೆ
ಫೈನ್ ಡೈನಿಂಗ್	ಕೇಬಲ್ ಕಾರ್, ಜಯನಗರ
ಅತ್ಯುತ್ತಮ ಹೋಟೆಲ್	ದಿ ಫರ್ನ್ ರೆಸಿಡೆನ್ಸಿ, ಯಶವಂತಪುರ
ಬೆಸ್ಟ್ ಸ್ವೀಟ್ಸ್ ಆ್ಯಂಡ್ ಸೇವರೀಸ್	ಶ್ರೀ ವೆಂಕಟೇಶ್ವರ ಸ್ವೀಟ್–ಮೀಟ್ ಸ್ಟಾಲ್, ಗಾಂಧಿ ಬಜಾರ್
ಅತ್ಯುತ್ತಮ ಬೇಕರಿ	ಅಯ್ಯಂಗಾರ್ಸ್ ಓವನ್ ಫ್ರೆಶ್, ಎಲೆಕ್ಟ್ರಾನಿಕ್ ಸಿಟಿ
ಅತ್ಯುತ್ತಮ ಐಸ್‌ಕ್ರೀಂ ಪಾರ್ಲರ್	ಫ್ರೂಟ್ಸ್ ಆ್ಯಂಡ್ ನಟ್ಸ್, ಕೋರಮಂಗಲ
ಉದಯೋನ್ಮುಖ ಮಹಿಳಾ ಉದ್ಯಮಿ	ಕೆ.ವೈ. ಕೀರ್ತನಾ
ಉದಯೋನ್ಮುಖ ಹೋಟೆಲ್	ಆಶಾ ಟಿಫನ್ಸ್
ಬೆಸ್ಟ್ ಇನೋವೇಟಿವ್ ಕಾನ್ಸೆಪ್ಟ್	ಕೊನಾರ್ಕ್ ರೆಸ್ಟೋರೆಂಟ್, ರೆಸಿಡೆನ್ಸಿ ರಸ್ತೆ
ಜೀವಮಾನ ಸಾಧನೆ ಪ್ರಶಸ್ತಿ	ಜಿ. ಶ್ರೀನಿವಾಸ ರಾವ್

ಸುದ್ದಿ 2 ನಿಮಿಷ

ಮುತಾಲಿಕ್ ನಿರ್ಬಂಧ ಆದೇಶ ರದ್ದು

ಬೆಂಗಳೂರು: ಶ್ರೀರಾಮಸೇನೆ ಸಂಸ್ಥಾಪಕ ಪ್ರಮೋದ್ ಮುತಾಲಿಕ್ ದಕ್ಷಿಣ ಕನ್ನಡ ಜಿಲ್ಲೆ ಪ್ರವೇಶಿಸದಂತೆ ಜಿಲ್ಲಾಡಳಿತ ನಿರ್ಬಂಧ ವಿಧಿಸಿ ಹೊರಡಿಸಲಾಗಿದ್ದ ಆದೇಶವನ್ನು ರದ್ದುಪಡಿಸಿರುವ ಹೈಕೋರ್ಟ್, ’ಪೊಲೀಸ್ ಆಯುಕ್ತರು ಹೊರಡಿಸಿದ್ದ ಆದೇಶದ ಅವಧಿ ಈಗಾಗಲೇ ಮುಗಿದಿದ್ದು, ವಿಚಾರಣಾ ಮಾನ್ಯತೆ ಕಳೆದುಕೊಂಡಿದೆ‘ ಎಂದು ಹೇಳಿದೆ.

ನಿರ್ಬಂಧ ಪ್ರಶ್ನಿಸಿ ಪ್ರಮೋದ್ ಮುತಾಲಿಕ್ ಸಲ್ಲಿಸಿದ್ದ ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ, ಪ್ರಕರಣವನ್ನು ಜಿಲ್ಲಾ ಮ್ಯಾಜಿಸ್ಟ್ರೇಟ್ ಕೋರ್ಟ್‌ಗೆ ವಗಾವಣೆ ಮಾಡಿ, ಕಾನೂನು ಪ್ರಕಾರ ಸೂಕ್ತ ಕ್ರಮ ಕೈಗೊಳ್ಳುವಂತೆ ಸೂಚಿಸಿದೆ.

ಬಿಜೆಪಿಯ ದಕ್ಷಿಣ ಕನ್ನಡ ಜಿಲ್ಲಾ ಯುವ ಮೋರ್ಚಾ ಕಾರ್ಯಕಾರಿಣಿ ಸದಸ್ಯ ಪ್ರವೀಣ್ ನೆಟ್ಟಾರು ಕುಟುಂಬಸ್ಥರನ್ನು ಭೇಟಿ ಮಾಡಲು ಪ್ರಮೋದ್ ಮುತಾಲಿಕ್ ಮುಂದಾಗಿದ್ದರು. ಈ ಹಿನ್ನೆಲೆಯಲ್ಲಿ 2022ರ ಜುಲೈ 28ರ ಸಂಜೆ 4 ಗಂಟೆಯಿಂದ ಮುಂದಿನ ಆದೇಶದವರೆಗೂ ಮುತಾಲಿಕ್ ದಕ್ಷಿಣ ಕನ್ನಡ ಜಿಲ್ಲೆ ಪ್ರವೇಶಿದಂತೆ ಜಿಲ್ಲಾಧಿಕಾರಿ ಆದೇಶಿಸಿದ್ದರು.

ಜುಲೈ29ರಂದು ಮಂಗಳೂರಿಗೆ ಆಗಮಿಸಿದ್ದ ಮುತಾಲಿಕ್ ಅವರನ್ನು ಪೊಲೀಸರು ತಡೆದಿದ್ದರು. ಆಗ ಮುತಾಲಿಕ್ ಮಂಗಳೂರು ಪೊಲೀಸ್ ಆಯುಕ್ತರಿಗೆ ಮನವಿ ಸಲ್ಲಿಸಿ, ಪ್ರವೀಣ್ ನೆಟ್ಟಾರು ಕುಟುಂಬಸ್ಥರ ಭೇಟಿಗೆ ಅವಕಾಶ ನೀಡಲು ಮನವಿ ಮಾಡಿದ್ದರು. ಪೊಲೀಸರು ಇದಕ್ಕೆ ಅವಕಾಶ ನೀಡಿರಲಿಲ್ಲ. ಈ ಹಿನ್ನೆಲೆಯಲ್ಲಿ ಪ್ರಮೋದ್ ಮುತಾಲಿಕ್ ಹೈಕೋರ್ಟ್ ಮೆಟ್ಟಿಲೇರಿದ್ದರು.

ವಾರ್ಡ್ ಸಮಿತಿ ಬಲಪಡಿಸಲು ಸಮಾವೇಶದಲ್ಲಿ ನಿರ್ಣಯ

ಬೆಂಗಳೂರು: ವಾರ್ಡ್ ಸಮಿತಿಗಳನ್ನು ಬಲಪಡಿಸಿ, ಆ ಮೂಲಕ ನಗರ ಆಡಳಿತ ಮತ್ತು ಬಜೆಟ್ ಪ್ರಕ್ರಿಯೆಯಲ್ಲಿ ಭಾಗವಹಿಸಬೇಕು. ನೆರೆಹೊರೆ ಮತ್ತು ನಗರ ಜೀವನ ಗುಣಮಟ್ಟ ಸುಧಾರಿಸಲು ನಾಗರಿಕರನ್ನು ಪ್ರೋತ್ಸಾಹಿಸಲು ಕರ್ನಾಟಕ ವಾರ್ಡ್ ಸಮಿತಿ ಬಳಗ ರಾಜ್ಯಮಟ್ಟದ ಸಮಾವೇಶದಲ್ಲಿ ನಿರ್ಣಯ ಕೈಗೊಳ್ಳಲಾಯಿತು.

ನಗರದ ಅಧಿಕಾರಿಗಳು, ಚುನಾಯಿತ ಪ್ರತಿನಿಧಿಗಳು, ರಾಜಕೀಯ ಮತ್ತು ನಾಗರಿಕ ಮುಖಂಡರು, ನಾಗರಿಕ ಸಮಾಜ ಸಂಸ್ಥೆಯೊಂದಿಗೆ ಜೊತೆಗೂಡಿ ಸ್ಥಳೀಯ ನಗರ ಆಡಳಿತದಲ್ಲಿ ಭಾಗವಹಿಸಲು ನಾಗರಿಕರಲ್ಲಿ ಅರಿವು ಮೂಡಿಸಲು ನಿರ್ಧರಿಸಲಾಗಿದೆ.

ಕರ್ನಾಟಕ ವಾರ್ಡ್ ಸಮಿತಿ ಬಳಗದ ರಾಜ್ಯಮಟ್ಟದ ಸಮಾವೇಶದಲ್ಲಿ ಬಿಬಿಎಂಪಿ ಮಾಜಿ ವಿರೋಧ ಪಕ್ಷದ ನಾಯಕ ಪದ್ಮನಾಭರೆಡ್ಡಿ, ಮಾಜಿ ಮೇಯರ್, ಗಂಗಾಂಬಿಕೆ ಮಲ್ಲಿಕಾರ್ಜುನ್, ಆಡಳಿತ ಸುಧಾರಣೆ ಆಯೋಗದ ವಿಶೇಷ ಕರ್ತವ್ಯ ಅಧಿಕಾರಿ ಆರ್. ಬಾಲಸುಬ್ರಮಣ್ಯ, ರಾಜ್ಯದ ಪ್ರಮುಖ ನಗರಗಳ ಪ್ರತಿನಿಧಿಗಳು ಭಾಗವಹಿಸಿದ್ದರು.

ನಗರ ಪ್ರತಿನಿಧಿಗಳು ತಮ್ಮ ಅನುಭವ, ಕಲಿಕೆ ಮತ್ತು ನಗರದಲ್ಲಿ ವಾರ್ಡ್ ಸಮಿತಿಯನ್ನು ರಚಿಸುವ ಪ್ರಕ್ರಿಯೆ ಅಥವಾ ಬಲಪಡಿಸುವ ದೃಢಸಂಕಲ್ಪದ ಚಟುವಟಿಕೆಗಳನ್ನು ಪ್ರಸ್ತುತಪಡಿಸಿದರು. ಬೆಂಗಳೂರಿನ ಜನಾಗ್ರಹದ ನಾಗರಿಕ ಸಹಭಾಗಿತ್ವ ಮುಖ್ಯಸ್ಥ ಶ್ರೀನಿವಾಸ ಅಲವಿಲ್ಲಿ, ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಶ್ರೀಕಾಂತ್ ವಿಶ್ವನಾಥನ್ ಇದ್ದರು.

ವಿಪ್ರೊ-ಸಲಾರ್‌ಪುರಿಯಾ ಕಾಂಪೌಂಡ್ ತೆರವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಹದೇವಪುರ ವಲಯ ವ್ಯಾಪ್ತಿಯಲ್ಲಿ ಸರ್ಜಾಪುರ ರಸ್ತೆ ಸಮೀಪ ವಿಪ್ರೊ ಹಾಗೂ ಸಲಾರ್ ಪುರಿಯಾಗೆ ಸೇರಿದ ಕಾಂಪೌಂಡ್ ಅನ್ನು ಬಿಬಿಎಂಪಿ ಸಿಬ್ಬಂದಿ ಮಂಗಳವಾರ ತೆರವುಗೊಳಿಸಿದರು.

ಕಾಂಪೌಂಡ್ ಒಳಭಾಗದ ಒತ್ತುವರಿಯನ್ನು ವಿಪ್ರೊದವರೇ ತೆಗೆಯುವುದಾಗಿ ಹೇಳಿದ್ದಾರೆ ಎಂದು ಬಿಬಿಎಂಪಿ ಸಿಬ್ಬಂದಿ ತಿಳಿಸಿದರು. ಆದರೆ ಮಂಗಳವಾರ ಸಂಜೆಯವರೆಗೂ ವಿಪ್ರೊ ಯಾವುದೇ ತೆರವು ಮಾಡಿಲ್ಲ. ವಿಪ್ರೊ ಕಾಂಪೌಂಡ್‌ನಿಂದ ಸನ್ನಿ ಬ್ರೂಕ್ಸ್‌ನಿಂದ ಸರ್ಜಾಪುರ ರಸ್ತೆವರೆಗೆ ಸುಮಾರು 200 ಮೀ. ರಾಜಕಾಲುವೆ ಮುಂದುವರಿಯುತ್ತದೆ ಎಂದು ಎಂಜಿನಿಯರ್ ತಿಳಿಸಿದರು. ವಿಪ್ರೊ, ಸಲಾರ್‌ಪುರಿಯಾಗೆ ಸಂಬಂಧಿಸಿದ 2.4 ಮೀ. ಅಗಲದ ಗೋಡೆ ಒಡೆಯ ಲಾಗಿದೆ. ಬಾಗ್ಮನೆ ಆವರಣದಲ್ಲಿನ ಪೂರ್ವ, ಪಶ್ಚಿಮ ಭಾಗದಲ್ಲಿದ್ದ ಸುಮಾರು 80 ಮೀ. ಉದ್ದದ ಮಳೆ ನೀರುಗಾಲುವೆಯ ಮೇಲೆ ಅಳವಡಿಸಿದ್ದ ಸ್ಲ್ಯಾಬ್ ಅನ್ನು ಬಾಗ್ಮನೆಯವರೇ ತೆರವುಗೊಳಿಸಿದ್ದಾರೆ ಎಂದು ಬಿಬಿಎಂಪಿ ತಿಳಿಸಿದೆ.

ಕಸವನಹಳ್ಳಿ ಮುಖ್ಯರಸ್ತೆ ವಲ್ಲಿಯಮ್ಮ ಲೇಔಟ್‌ನಲ್ಲಿ ಸರ್ವೆ ಮಾಡಿ ರಾಜಕಾಲುವೆ ಮೇಲಿನ ಶೆಡ್ ತೆರವುಗೊಳಿಸಲಾಗಿದೆ. ಮಾರತಹಳ್ಳಿ ಪೊಲೀಸ್ ಠಾಣೆಯ ಹಿಂಭಾಗ, ಜಲಮಂಡಳಿ ಎಸ್.ಟಿ.ಪಿ ಬಳಿ ರಾಜಕಾಲುವೆಯ ಮೇಲೆ ನಿರ್ಮಾಣ ಮಾಡಿರುವ ಸೇತುವೆ ತೆರವು ಕಾರ್ಯಾಚರಣೆ ನಡೆಯುತ್ತಿದೆ ಎಂದು ಪ್ರಕಟಣೆ ತಿಳಿಸಿದೆ.

ಸರ್ಜಾಪುರ ರಸ್ತೆ ಸಮೀಪ ವಿಪ್ರೊ, ಸಲಾರ್‌ಪುರಿಯಾಗೆ ಸೇರಿದ ಕಾಂಪೌಂಡನ್ನು ಬಿಬಿಎಂಪಿ ತೆರವುಗೊಳಿಸಿತು

ವೀರಶೈವ–ಲಿಂಗಾಯತ: ಕೇಂದ್ರದ ಒಬಿಸಿ ಪಟ್ಟಿಗೆ ಸೇರಿಸಲು ಮನವಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಎಲ್ಲ ಉಪ ಪಂಗಡಗಳನ್ನೂ ಒಳಗೊಂಡಂತೆ ವೀರಶೈವ–ಲಿಂಗಾಯತ ಸಮುದಾಯ ವನ್ನು ಕೇಂದ್ರ ಸರ್ಕಾರದ ಇತರೇ ಹಿಂದುಳಿದ ವರ್ಗಗಳ (ಒಬಿಸಿ) ಪಟ್ಟಿಯಲ್ಲಿ ಸೇರಿಸುವಂತೆ ಕೇಂದ್ರ ಸರ್ಕಾರಕ್ಕೆ ಶಿಫಾರಸು ಮಾಡಬೇಕು’ ಎಂದು ಆಗ್ರಹಿಸಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರಿಗೆ ಅಖಿಲ ಭಾರತ ವೀರಶೈವ ಮಹಾಸಭಾ ಮನವಿ ಸಲ್ಲಿಸಿದೆ.

ಆದಷ್ಟು ಬೇಗ ಶಿಫಾರಸು ಮಾಡಿ ಸಮುದಾಯಕ್ಕೆ ಸೌಲಭ್ಯ ದೊರೆಯುವಂತೆ ಮಾಡದಿದ್ದರೆ ಬೀದಿಗಿಳಿದು ಹೋರಾಟ ಮಾಡಲಾಗುವುದು ಎಂದೂ ಮಹಾಸಭಾ ಎಚ್ಚರಿಕೆ ನೀಡಿದೆ.

‘ರಾಜ್ಯದಲ್ಲಿ 60 ವರ್ಷಗಳಿಂದ ವೀರಶೈವ–ಲಿಂಗಾಯತ ಸಮುದಾಯವನ್ನು ಇತರೇ ಹಿಂದುಳಿದ ವರ್ಗ ಎಂದು ಪರಿಗಣಿಸಿದ್ದರೂ ಕೇಂದ್ರ ಸರ್ಕಾರದ ಒಬಿಸಿ ಪಟ್ಟಿಯಲ್ಲಿ ಸೇರಿಸಿಲ್ಲ. ಇದರಿಂದಾಗಿ ಕೇಂದ್ರ ಸರ್ಕಾರದಿಂದ ದೊರೆಯಬಹುದಾದ ಸೌಕರ್ಯಗಳಿಂದ ಸಮಾಜ ವಂಚಿತವಾಗಿದೆ. ಇತರ ಎಲ್ಲ ರಾಜ್ಯಗಳಲ್ಲಿಯೂ ವೀರಶೈವ–ಲಿಂಗಾಯತರು ರಾಜ್ಯ ಸರ್ಕಾರಗಳ ಇತರ ಹಿಂದುಳಿದ ವರ್ಗಗಳ ಪಟ್ಟಿಯಲ್ಲಿ ಸೇರ್ಪಡೆಯಾಗಿದೆ’ ಎಂದೂ ಮನವಿಯಲ್ಲಿ ಉಲ್ಲೇಖಿಸಲಾಗಿದೆ.

‘ಆರ್ಥಿಕ, ಸಾಮಾಜಿಕ, ಶೈಕ್ಷಣಿಕವಾಗಿ ಹಿಂದುಳಿದಿರುವ ವೀರಶೈವ–ಲಿಂಗಾಯತ 16 ಉಪ ಪಂಗಡಗಳು ಮಾತ್ರ ಕೇಂದ್ರದ ಒಬಿಸಿ ಪಟ್ಟಿಯಲ್ಲಿದ್ದು ಸೌಲಭ್ಯ ಪಡೆಯುತ್ತಿವೆ ಎಂದು ಮಹಾಸಭಾ ಹೇಳಿದೆ.

ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ ವತಿಯಿಂದ ಮುಖ್ಯಮಂತ್ರಿಗೆ ಮನವಿ ಸಲ್ಲಿಸಲಾಯಿತು. ಮಹಾಸಭಾದ ರಾಷ್ಟ್ರೀಯ ಅಧ್ಯಕ್ಷ ಶಾಮನೂರು ಶಿವಶಂಕರಪ್ಪ, ರಾಷ್ಟ್ರೀಯ ಹಿರಿಯ ಉಪಾಧ್ಯಕ್ಷರಾದ ಎನ್. ತಿಪ್ಪಣ್ಣ, ಮಹಾ ಪ್ರಧಾನ ಕಾರ್ಯದರ್ಶಿ ಈಶ್ವರ ಖಂಡ್ರೆ ಇದ್ದರು.

ಹಾಸ್ಯ ನಾಟಕ ಸ್ಪರ್ಧೆ ಆಯೋಜನೆ

ಬೆಂಗಳೂರು: ಶಿವಮೊಗ್ಗ ಮಹಾ ನಗರ ಪಾಲಿಕೆಯು ರಂಗ ದಸರಾ ಕಾರ್ಯಕ್ರಮದ ಪ್ರಯುಕ್ತ ರಾಜ್ಯ ಮಟ್ಟದ ಹಾಸ್ಯ ನಾಟಕ ಸ್ಪರ್ಧೆ ಹಮ್ಮಿಕೊಂಡಿದ್ದು, ಈ ಸ್ಪರ್ಧೆಯಲ್ಲಿ ಭಾಗವಹಿಸಲು ನಾಟಕ ತಂಡಗಳನ್ನು ಆಹ್ವಾನಿಸಿದೆ.

ಸ್ಪರ್ಧೆ ಶಿವಮೊಗ್ಗದ ಕುವೆಂಪು ರಂಗಮಂದಿರದಲ್ಲಿ ಸೆ. 28, 29, 30ರಂದು ನಡೆಯಲಿದೆ. ಸ್ಪರ್ಧೆಯಲ್ಲಿ ಪಾಲ್ಗೊಳ್ಳುವ ತಂಡದಲ್ಲಿ ಕನಿಷ್ಠ 10 ಮಂದಿ ಇರಬೇಕು. ಪ್ರತಿ ತಂಡಕ್ಕೆ ಬಂದು ಹೋಗಲು ಕಿ.ಮೀ.ಗೆ ₹ 10 ಪ್ರವಾಸ ಭತ್ಯೆ ನೀಡಲಾಗುತ್ತದೆ.

ಪ್ರಥಮ ಬಹುಮಾನ ₹ 30 ಸಾವಿರ, ದ್ವಿತೀಯ ಬಹುಮಾನ ₹ 25 ಸಾವಿರ, ತೃತೀಯ ಬಹುಮಾನ ₹20 ಸಾವಿರ ನೀಡಲಾಗುತ್ತದೆ. ಶ್ರೇಷ್ಠ ನಟ, ಶ್ರೇಷ್ಠ ನಟಿ, ಶ್ರೇಷ್ಠ ನಿರ್ದೇಶಕರಿಗೆ ತಲಾ ₹ 5 ಸಾವಿರ ಬಹುಮಾನ ಇರಲಿದೆ. ತಂಡ ಹಾಗೂ ನಾಟಕದ ವಿವರಗಳನ್ನು ಸೆ.24ರ ಒಳಗೆ ಇ ಮೇಲ್ ವಿಳಾಸ comedyscriptsmg@gmail.comಗೆ ಕಳಿಸಬೇಕು ಎಂದು ರಂಗ ದಸರಾ ಸಮಿತಿ ಪ್ರಕಟಣೆಯಲ್ಲಿ ತಿಳಿಸಿದೆ. **ಸಂಪರ್ಕಕ್ಕೆ:**9448138183 ಅಥವಾ 9844456505

ನಿರುದ್ಯೋಗಿ ಯುವಜನರ ಸಮಾವೇಶ ನಾಳೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅಖಿಲ ಭಾರತ ನಿರುದ್ಯೋಗಿ ಯುವಜನರ ಹೋರಾಟ ಸಮಿತಿಯಿಂದ ಸೆಪ್ಟೆಂಬರ್ 22ರಂದು (ಗುರುವಾರ) ರಾಜ್ಯಮಟ್ಟದ ನಿರುದ್ಯೋಗಿ ಯುವಜನರ ಸಮಾವೇಶವನ್ನು ಕೊಂಡಜ್ಜಿ ಬಸಪ್ಪ ಸ್ಕೌಟ್ ಆ್ಯಂಡ್ ಗೈಡ್ಸ್ ಸಭಾಂಗಣದಲ್ಲಿ ಆಯೋಜಿಸಲಾಗಿದೆ.

ರಾಜ್ಯ ಸರ್ಕಾರದ ವಿವಿಧ ಇಲಾಖೆಗಳಲ್ಲಿ ಖಾಲಿ ಇರುವ ಎಲ್ಲಾ ಹುದ್ದೆಗಳನ್ನು ಪಾರದರ್ಶಕವಾಗಿ ಭರ್ತಿ ಮಾಡಬೇಕು. ನೇಮಕಾತಿ ಪ್ರಕ್ರಿಯೆಯಲ್ಲಿನ ಭ್ರಷ್ಟಾಚಾರವನ್ನು ತಡೆಗಟ್ಟಬೇಕು ಎಂಬುದು ಸಮಾವೇಶದ ಮೂಲ ಉದ್ದೇಶವಾಗಿದೆ. ಸಮಾವೇಶವನ್ನು ನ್ಯಾಯಮೂರ್ತಿ ಸಂತೋಷ್ ಹೆಗ್ಡೆ ಉದ್ಘಾಟಿಸಲಿದ್ದು, ಮಂಗ್ಳೂರು ವಿಜಯ ಭಾಗವಹಿಸಲಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

ಹೆಚ್ಚುವರಿ ಪೊಲೀಸ್ ಮಹಾ ನಿರ್ದೇಶಕ ರವರ ಕಛೇರಿ ಸಂಪರ್ಕ, ಲಾಜಿಸ್ಟಿಕ್ಸ್ ಮತ್ತು ಆಧುನೀಕರಣ

ನಂ.1, ಮಹಾತ್ಮಗಾಂಧಿ ರಸ್ತೆ, ಬೆಂಗಳೂರು–560001
ದೂರವಾಣಿ : +91–80–22864626, ಈ–ಮೇಲ್: spwireless@ksp.gov.in

ಸಂಕ್ಷಿಪ್ತ ಟೆಂಡರ್ ಪ್ರಕಟಣೆ (ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ)

ಟೆಂಡರ್ ಸಂಖ್ಯೆ : 06/MDN/STS/W/UHFDigitalWirelessEQPT-6/2022-23 ದಿನಾಂಕ: 19.09.2022

ಹೆಚ್ಚುವರಿ ಪೊಲೀಸ್ ಮಹಾ ನಿರ್ದೇಶಕರು, ಸಂಪರ್ಕ, ಲಾಜಿಸ್ಟಿಕ್ಸ್ ಮತ್ತು ಆಧುನೀಕರಣ, ಬೆಂಗಳೂರು ರವರಿಂದ ಬೆಂಗಳೂರು ನಗರದಲ್ಲಿ (ರಾಣಿ ಚನ್ನಮ್ಮ ಪಡೆ) ಡಿಜಿಟಲ್ ಯು.ಹೆಚ್.ಎಫ್ ರೇಡಿಯೋ ಕಮ್ಯೂನಿಕೇಷನ್ ಉಪಕರಣಗಳ ಸರಬರಾಜು, ಅಳವಡಿಕೆ ಮತ್ತು ನಿರ್ವಹಣೆಗಾಗಿ ಆನ್‌ಲೈನ್ ಟೆಂಡರ್ ಆಹ್ವಾನಿಸಲಾಗಿದೆ. ಟೆಂಡರ್ ಅಂದಾಜು ಮೌಲ್ಯ **ರೂ.239.30 ಲಕ್ಷಗಳು,** ಟೆಂಡರ್ ಪೂರ್ವಭಾವಿ ಸಭೆಯ **ದಿನಾಂಕ: 10.10.2022 ಸಮಯ ಬೆಳಿಗ್ಗೆ 11.30 ಗಂಟೆ** ಹಾಗೂ ಟೆಂಡರ್ ಸಲ್ಲಿಸಲು ಕೊನೆಯ **ದಿನಾಂಕ: 19.10.2022, 16.00 ಗಂಟೆಗಳು.** ಇತರೆ ಮಾಹಿತಿಯನ್ನು **https://eproc.karnataka.gov.in** ರಲ್ಲಿ ಪಡೆಯಬಹುದು ಹಾಗೂ ಹೆಚ್ಚಿನ ವಿವರಗಳಿಗಾಗಿ ಮೇಲ್ಕಂಡ ಕಛೇರಿಯನ್ನು ಸಂಪರ್ಕಿಸಬಹುದಾಗಿದೆ.

ಸಹಿ/–
ಹೆಚ್ಚುವರಿ ಪೊಲೀಸ್ ಮಹಾ ನಿರ್ದೇಶಕರು
ಸಂಪರ್ಕ, ಲಾಜಿಸ್ಟಿಕ್ಸ್ ಮತ್ತು ಆಧುನೀಕರಣ

ವಾಸಾಸಂಇ/ವಾ.ಪ್ರ./2298/2022–23

ಸಿಇಟಿ ಬಿಕ್ಕಟ್ಟು: 22ಕ್ಕೆ ವಿಚಾರಣೆ ಮುಂದೂಡಿಕೆ

ಬೆಂಗಳೂರು: ‘ಸಾಮಾನ್ಯ ಪ್ರವೇಶ ಪರೀಕ್ಷೆಯ (ಸಿಇಟಿ) ಪುನರಾವರ್ತಿತ ವಿದ್ಯಾರ್ಥಿಗಳ 2021ನೇ ಸಾಲಿನ ಪಿಯು ಅಂಕಗಳನ್ನು 2022ನೇ ಸಾಲಿನ ವೃತ್ತಿಪರ ಕೋರ್ಸ್‌ಗಳ ಪ್ರವೇಶಕ್ಕೆ ಪರಿಗಣಿಸುವ ವಿಚಾರದಲ್ಲಿ ಉದ್ಭವಿಸಿರುವ ಬಿಕ್ಕಟ್ಟು ಪರಿಹರಿಸುವ ದಿಸೆಯಲ್ಲಿ ಸೂಕ್ತ ಯೋಜನೆಯೊಂದನ್ನು ರೂಪಿಸಲು ಸಮಯಾವಕಾಶ ನೀಡಬೇಕು‘ ಎಂದು ರಾಜ್ಯ ಸರ್ಕಾರ ಹೈಕೋರ್ಟ್‌ಗೆ ಮನವಿ ಮಾಡಿದೆ.

ಇದನ್ನು ಮಾನ್ಯ ಮಾಡಿದ ಹಂಗಾಮಿ ಮುಖ್ಯ ನ್ಯಾಯಮೂರ್ತಿ ಅಲೋಕ್ ಆರಾಧೆ ನೇತೃತ್ವದ ವಿಭಾಗೀಯ ನ್ಯಾಯಪೀಠ, ‘ವಿದ್ಯಾರ್ಥಿಗಳಿಗೆ ತೊಂದರೆಯಾಗದಂತಹ ಮತ್ತು ಎಲ್ಲರಿಗೂ ನೆರವಾಗುವಂತಹ ಪರಿಹಾರ ಕ್ರಮಗಳನ್ನು ರೂಪಿಸಿಕೊಂಡು ಬನ್ನಿ’ ಎಂದು ಸರ್ಕಾರಕ್ಕೆ ಸಲಹೆ ನೀಡಿ ಇದೇ 22ರವರೆಗೆ ಸಮಯಾವಕಾಶ ನೀಡಿದೆ.

ವೃತ್ತಿಪರ ಕೋರ್ಸ್‌ಗಳ ಪ್ರವೇಶಕ್ಕೆ, 2020-21ನೇ ಸಾಲಿನಲ್ಲಿ ದ್ವಿತೀಯ ಪಿಯು ತೇರ್ಗಡೆಯಾದ ವಿದ್ಯಾರ್ಥಿಗಳು ಗಳಿಸಿದ ಶೇ 50 ಹಾಗೂ ಸಾಮಾನ್ಯ ಪ್ರವೇಶ ಪರೀಕ್ಷೆಯಲ್ಲಿ (ಸಿಇಟಿ) ಪಡೆದ ಶೇ 50ರಷ್ಟು ಅಂಕಗಳನ್ನು ಪರಿಗಣಿಸಿ ರೀ–ಡೂ ಮಾಡಿ ಹೊಸ ರ‍್ಯಾಂಕ್ ಪಟ್ಟಿ ಪ್ರಕಟಿಸಬೇಕು‘ ಎಂದು ಕರ್ನಾಟಕ ಪರೀಕ್ಷಾ ಪ್ರಾಧಿಕಾರಕ್ಕೆ (ಕೆಇಎ) ನಿರ್ದೇಶಿಸಿದ್ದ ಹೈಕೋರ್ಟ್ ಏಕಸದಸ್ಯ ನ್ಯಾಯಪೀಠದ ತೀರ್ಪನ್ನು ಪ್ರಶ್ನಿಸಿ ಕೆಇಎ ಕಾರ್ಯನಿರ್ವಾಹಕ ನಿರ್ದೇಶಕ ಸಲ್ಲಿಸಿರುವ ಮೇಲ್ಮನವಿಯನ್ನು ವಿಭಾಗೀಯ ನ್ಯಾಯಪೀಠ ಸೋಮವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ರಾಜ್ಯ ಸರ್ಕಾರದ ಪರ ಹೆಚ್ಚುವರಿ ಅಡ್ವೊಕೇಟ್ ಜನರಲ್ ಧ್ಯಾನ್ ಚಿನ್ನಪ್ಪ, ‘ಪುನರಾವರ್ತಿತ ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಪರಿಹಾರ ಯೋಜನೆಯೊಂದನ್ನು ರೂಪಿಸಲಾಗುವುದು. ಅದು ಪ್ರತಿವಾದಿ (ಪುನರಾವರ್ತಿತ) ವಿದ್ಯಾರ್ಥಿಗಳಿಗೆ ಒಪ್ಪಿಗೆಯಾದರೆ ಸಮಸ್ಯೆ ಇತ್ಯರ್ಥಪಡಿಸಬಹುದು. ಅದಕ್ಕಾಗಿ ಕಾಲಾವಕಾಶ ನೀಡಬೇಕು’ ಎಂದು ಕೋರಿದರು. ವಿಚಾರಣೆಯನ್ನು ಇದೇ 22ಕ್ಕೆ ಮುಂದೂಡಲಾಗಿದೆ.

ಮೇಲ್ಸೇತುವೆಯಲ್ಲಿ ಮತ್ತೆ ಗುಂಡಿ

ಸುಮನಹಳ್ಳಿ: ತಜ್ಞರಿಂದ ಪರಿಶೀಲನೆ, ತಜ್ಞರ ವರದಿ ನಂತರ ಕ್ರಮ– ಬಿಬಿಎಂಪಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಾಗಡಿ ರಸ್ತೆಯ ಮೇಲ್ಭಾಗದಲ್ಲಿ ಸುಮನಹಳ್ಳಿ ಬಳಿ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ನಿರ್ಮಿಸಿದ್ದ ಹೊರವರ್ತುಲ ರಸ್ತೆ ಮೇಲ್ಸೇತುವೆಯ ಒಂದು ಭಾಗದಲ್ಲಿ ಸುಮಾರು ಐದು ಅಡಿಯಷ್ಟು ಸುತ್ತಳತೆಯಷ್ಟು ರಸ್ತೆ ಕುಸಿದುಬಿದ್ದಿದೆ. 2019ರಲ್ಲಿ ಕುಸಿದಿದ್ದ ಸ್ಥಳದಿಂದ ಸುಮಾರು 15 ಅಡಿ ಮುಂದೆ ಈ ಕುಸಿತವಾಗಿದೆ.

‘ಬಿಡಿಎ ಈ ಮೇಲ್ಸೇತುವೆಯನ್ನು ನಿರ್ಮಿಸಿದೆ. ಎರಡನೇ ಬಾರಿಗೆ ಈ ರೀತಿ ಕುಸಿದಿದೆ. ಹೀಗಾಗಿ ತಜ್ಞರಿಂದ ಪರಿಶೀಲನೆ ನಡೆಸಿ, ಯಾವ ರೀತಿ ದುರಸ್ತಿ ಕಾರ್ಯ ನಡೆಸಬೇಕು ಎಂಬುದನ್ನು ಬುಧವಾರ ತೀರ್ಮಾನಿಸುತ್ತೇವೆ. ಬಿಬಿಎಂಪಿ ವತಿಯಿಂದಲೇ ನಾವು ದುರಸ್ತಿ ಕಾಮಗಾರಿ ಕೈಗೊಳ್ಳಲಿದ್ದೇವೆ’ ಎಂದು ರಸ್ತೆ ಮೂಲಸೌಕರ್ಯ ವಿಭಾಗದ ಉಸ್ತುವಾರಿಯನ್ನೂ ಹೊಂದಿರುವ ಪ್ರಧಾನ ಎಂಜಿನಿಯರ್ ಸಿ.ಎಸ್. ಪ್ರಹ್ಲಾದ್ ತಿಳಿಸಿದರು.

‘ಕಳಪೆ ಕಾಂಕ್ರೀಟ್ ಬಳಸಿರುವುದರಿಂದಲೇ ಇಂತಹ ಸಮಸ್ಯೆ ಎದುರಾಗಿದೆ. ಈ ರಸ್ತೆಯ ಮುಂದಿನ ಭಾಗವನ್ನೂ ಪರಿಶೀಲಿಸಲಾಗುತ್ತದೆ. ತಜ್ಞರಿಂದ ವರದಿ ಪಡೆದು ಮುಂದುವರಿಯಲಾಗುತ್ತದೆ. ಮೇಲ್ಸೇತುವೆ ಮೇಲೆ ಕಾಮಗಾರಿ ನಡೆಸಬೇಕಿರುವುದರಿಂದ ಸಾಕಷ್ಟು ಸಮಯ ತೆಗೆದುಕೊಳ್ಳುತ್ತದೆ. ಕಾಂಕ್ರೀಟ್ ಅನ್ನು ನಿಧಾನವಾಗಿ ತೆಗೆದು, ಹೊಸದಾಗಿ ಹಾಕಬೇಕಿದೆ. ಜೋರಾಗಿ ಡ್ರಿಲ್ ಮಾಡುವಂತಿಲ್ಲ. ಹೀಗಾಗಿ ಸುಮಾರು ಮೂರು ತಿಂಗಳಷ್ಟು ಸಮಯ ಬೇಕಾಗಬಹುದು’ ಎಂದು ಹೇಳಿದರು.

ಪ್ರೀಕಾಸ್ಟ್ ಪ್ರೀಸ್ಟ್ರೆಸ್ಡ್ ಕಾಂಕ್ರೀಟ್ (ಪಿಎಸ್‌ಸಿ) ಗಿರ್ಡರ್ ಮತ್ತು ಸ್ಲ್ಯಾಬ್ ಕನ್‌ಸ್ಟ್ರಕ್ಷನ್ ಟೆಕ್ನಾಲಜಿಯಡಿ ಈ ಮೇಲ್ಸೇತುವೆ ನಿರ್ಮಾಣವಾಗಿದ್ದು, ಆರ್‌ಸಿಸಿ ಸ್ಲ್ಯಾಬ್ ಕಾಂಕ್ರೀಟ್ ಶಕ್ತಿ ಕುಂದಿದ್ದರಿಂದ ರಂಧ್ರಗಳು ಕಂಡುಬಂದಿವೆ. ಇದೇ ರೀತಿ 2019ರಲ್ಲಿಯೂ ಕಂಡುಬಂದಿತ್ತು. ಈಗ ಮತ್ತೊಂದು ಭಾಗದಲ್ಲಿ ರಂಧ್ರ ಉಂಟಾಗಿದೆ. ಸೆ.22ರಿಂದ ದುರಸ್ತಿ ಕಾಮಗಾರಿ ಪ್ರಾರಂಭಿಸಲು ಯೋಜಿಸಲಾಗಿದೆ. ಉಳಿದ ಭಾಗದ ಮೇಲ್ಸೇತುವೆ ಭದ್ರವಾಗಿದ್ದು, ಯಾವುದೇ ಆತಂಕ ಇಲ್ಲ ಎಂದು ಅವರು ತಿಳಿಸಿದರು.

ಮೇಲ್ಸೇತುವೆಯ ಮೈಸೂರು ರಸ್ತೆಯಿಂದ ತುಮಕೂರು ರಸ್ತೆ ಕಡೆಗೆ ಹೋಗುವ ಮಾರ್ಗದಲ್ಲಿ ಗುಂಡಿ ಬಿದ್ದಿದೆ. ಮೇಲ್ಸೇತುವೆಯ ಆರಂಭದಲ್ಲಿ ಸ್ವಲ್ಪ ದೂರದಲ್ಲಿ ಗುಂಡಿ ಬಿದ್ದಿರುವ ಸ್ಥಳದ ಸುತ್ತ ಬ್ಯಾರಿಕೇಡ್ ಹಾಕಲಾಗಿದ್ದು, ವಾಹನ ಸಂಚಾರ ನಿಧಾನಗತಿಯಲ್ಲಿದೆ.

ಬಿಡಿಎ 2004–06ರಲ್ಲಿ ನಿರ್ಮಿಸಿದ್ದ ಹೊರವರ್ತುಲ ರಸ್ತೆಯನ್ನು ಬಿಬಿಎಂಪಿಗೆ 2014–15ರಲ್ಲಿ ಹಸ್ತಾಂತರಿಸಲಾಗಿತ್ತು. 2019ರ ನವೆಂಬರ್ 2ರಂದು ಮೇಲುರಸ್ತೆ ಕುಸಿದು ಐದು ಅಡಿ ಸುತ್ತಳತೆಯ ಗುಂಡಿಯುಂಟಾಗಿ ಆತಂಕ ಸೃಷ್ಟಿಸಿತ್ತು. ಸುಮಾರು ಮೂರು ತಿಂಗಳು ವಾಹನ ಸಂಚಾರಕ್ಕೆ ಅವಕಾಶ ನೀಡದೆ ದುರಸ್ತಿ ಕಾರ್ಯವನ್ನು ಬಿಬಿಎಂಪಿ ಸುಮಾರು ₹40 ಲಕ್ಷ ವೆಚ್ಚದಲ್ಲಿ ನಿರ್ವಹಿಸಿತ್ತು. ಸುಮನಹಳ್ಳಿ ಮೇಲ್ಸೇತುವೆಯನ್ನು ನಿರ್ಮಿಸಿದ್ದ ಈಸ್ಟ್‌ಕೋಸ್ಟ್ ಕಾಂಟ್ರ್ಯಾಕ್ಟರ್ಸ್ ಸಂಸ್ಥೆ ಈಗಾಗಲೇ ದಿವಾಳಿಯಾಗಿದೆ.

ಬೆಂಗಳೂರಿನ ಹೊರವರ್ತುಲ ರಸ್ತೆ ಸುಮನಹಳ್ಳಿ ಬಳಿಯ ಮೇಲ್ಸೇತುವೆಯಲ್ಲಿ ಮಂಗಳವಾರ ಗುಂಡಿ ಬಿದ್ದಿರುವ ಸ್ಥಳದ ಸುತ್ತ ಪೊಲೀಸರು ಬ್ಯಾರಿಕೇಡ್ ಹಾಕಿರುವುದು —ಪ್ರಜಾವಾಣಿ ಚಿತ್ರ - ರಂಜು ಪಿ

ಸುಮನಹಳ್ಳಿ ಮೇಲ್ಸೇತುವೆಯ ಗುಂಡಿ

ಗಂಟನ್ನು ಸರ್ಕಾರಕ್ಕೆ ಹಸ್ತಾಂತರಿಸಿದ ಸಿದ್ದರಾಮಯ್ಯ

ಧಾನ್ಯದ ಗಂಟು ಕೊಟ್ಟ ಪಿಎಸ್‌ಐ ಆಕಾಂಕ್ಷಿಗಳು

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಲಂಚ ನೀಡಲು ಹಣವಿಲ್ಲ. ಲಂಚದ ಬದಲು ಪೋಷಕರು ಬೆಳೆದಿರುವ ದವಸ ಧಾನ್ಯಗಳನ್ನೇ ಸರ್ಕಾರಕ್ಕೆ ನೀಡುತ್ತೇವೆ. ಉದ್ಯೋಗ ನೀಡಲಿ’ ಎಂದು ಪಿಎಸ್‌ಐ ಹುದ್ದೆ ಆಕಾಂಕ್ಷಿಗಳು ಅಳಲು ತೋಡಿಕೊಂಡಿದ್ದಲ್ಲದೆ, ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಅವರಿಗೆ ಧಾನ್ಯದ ಗಂಟನ್ನು ನೀಡಿದರು.

ನಗರದ ಫ್ರೀಡಂ ಪಾರ್ಕ್‌ನಲ್ಲಿ ‘ಸ್ಪರ್ಧಾತ್ಮಕ ಪರೀಕ್ಷೆಯ ಆಕಾಂಕ್ಷಿಗಳ ಒಕ್ಕೂಟ’ದ ನೇತೃತ್ವದಲ್ಲಿ ನಡೆಯುತ್ತಿರುವ ಪ್ರತಿಭಟನಾ ಸ್ಥಳಕ್ಕೆ ಸಿದ್ದರಾಮಯ್ಯ ಅವರು ಮಂಗಳವಾರ ಭೇಟಿ ನೀಡಿ ಆಕಾಂಕ್ಷಿಗಳ ಅಳಲು ಆಲಿಸಿದಾಗ ನಡೆದ ಘಟನೆ ಇದು.

ಆಗ ಸಿದ್ದರಾಮಯ್ಯ ಪ್ರತಿಕ್ರಿಯಿಸಿ, ‘ನೀವು ನನಗೆ ಕೊಟ್ಟಿರುವ ಈ ಧಾನ್ಯದ ಗಂಟನ್ನು ಸರ್ಕಾರಕ್ಕೆ ತಲುಪಿಸುವ ಕೆಲಸ ಮಾಡುತ್ತೇನೆ’ ಎಂದು ಭರವಸೆ ನೀಡಿದರು. ನಂತರ, ಮಂಗಳವಾರ ಮಧ್ಯಾಹ್ನ ವಿಧಾನಸಭೆಯಲ್ಲಿ ಪಿಎಸ್‌ಐ ನೇಮಕಾತಿ ಅಕ್ರಮದ ಕುರಿತು ನಡೆದ ಚರ್ಚೆಯ ವೇಳೆ ಅವರು ಅಕ್ಕಿ–ಬೇಳೆಯ ಗಂಟನ್ನು ಸ್ಪೀಕರ್ ಕಾಗೇರಿಯವರ ಮೂಲಕ ಸರ್ಕಾರಕ್ಕೆ ಹಸ್ತಾಂತರಿಸಿದರು.

ಎಲ್ಲ ನೇಮಕಾತಿಯ ತನಿಖೆ ನಡೆಸಲಿ: ‘ಕಿಮ್ಮನೆ ರತ್ನಾಕರ ಅವರು ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವ ಸ್ಥಾನವನ್ನು ಪ್ರಾಮಾಣಿಕವಾಗಿ ನಿರ್ವಹಿಸಿದ್ದರು. ಸರ್ಕಾರವು ಭ್ರಷ್ಟಾಚಾರ ಮುಚ್ಚಿಕೊಳ್ಳಲು ಕಿಮ್ಮನೆ ರತ್ನಾಕರ ಅಧಿಕಾರದ ಅವಧಿಯಲ್ಲೂ ಭ್ರಷ್ಟಾಚಾರ ನಡೆದಿತ್ತು ಎಂಬ ಸುಳ್ಳು ಆರೋಪ ಮಾಡುತ್ತಿದೆ. 2006ರಿಂದ ಈ ವರೆಗೆ ನಡೆದಿರುವ ಎಲ್ಲ ನೇಮಕಾತಿ ಬಗ್ಗೆಯೂ ತನಿಖೆ ನಡೆಸಲಿ’ ಎಂದು ಫ್ರೀಡಂ ಪಾರ್ಕ್‌ನಲ್ಲಿ ಅವರು ಸವಾಲು ಹಾಕಿದರು.

‘ಮತ್ತೆ ನಾವು ಅಧಿಕಾರಕ್ಕೆ ಬಂದರೆ ಎಲ್ಲ ಸಮಸ್ಯೆಗಳಿಗೆ ಶಾಶ್ವತ ಪರಿಹಾರ ರೂಪಿಸುತ್ತೇವೆ. ಕೇಂದ್ರ ಲೋಕಸೇವಾ ಆಯೋಗದಲ್ಲಿ ಅಧ್ಯಕ್ಷರಾಗಿದ್ದ ಹೂಟ ನೇತೃತ್ವದಲ್ಲಿ ಸಮಿತಿ ರಚನೆ ಮಾಡಿ, ಅವರಿಂದ ಶಿಫಾರಸು ಪಡೆದು ಕೆಲವು ಜಾರಿ ಮಾಡಿದ್ದೆವು. ಇನ್ನು ಕೆಲವು ಉಳಿದಿವೆ’ ಎಂದರು.

ಪಿಎಸ್‌ಐ ನೇಮಕಾತಿಯಲ್ಲಿ ಲಂಚ ಕೊಟ್ಟು ಪರೀಕ್ಷೆಯಲ್ಲಿ ಖಾಲಿ ಉತ್ತರ ಪತ್ರಿಕೆ ಉಳಿಸಿ ಹೋಗಿ ನೇಮಕವಾಗಿದ್ದರು. ದುಡ್ಡಿದ್ದವರು ಲಂಚ ನೀಡುತ್ತಾರೆ. ದುಡ್ಡು ಇಲ್ಲದವರು ಏನು ಮಾಡಬೇಕು? ಈ ರೀತಿ ಅಕ್ರಮ ವಿರೋಧಿಸೋಣ ಎಂದು ಕರೆ ನೀಡಿದರು.

> **ಸರ್ಕಾರದ ಬುಟ್ಟಿಯ ಒಳಗೆ ಹಾವಿಲ್ಲ. ಸುಮ್ಮನೆ ಬುಸ್ ಅಂತ ಶಬ್ದ ಮಾಡುತ್ತಿದೆ. ಕೇರೆ ಹಾವೂ ಇಲ್ಲ, ನಾಗರಹಾವೂ ಇಲ್ಲ.**
> **ಸಿದ್ದರಾಮಯ್ಯ,**
> ವಿಧಾನಸಭೆ ವಿರೋಧ ಪಕ್ಷದ ನಾಯಕ

ಸರ್ಕಾರಿ ಹುದ್ದೆಗಳ ಭರ್ತಿಗೆ ಆಗ್ರಹಿಸಿ ‘ರಾಜ್ಯ ಸ್ಪರ್ಧಾತ್ಮಕ ಪರೀಕ್ಷೆಯ ಆಕಾಂಕ್ಷಿಗಳ ಒಕ್ಕೂಟ’ದ ನೇತೃತ್ವದಲ್ಲಿ ನಗರದ ಫ್ರೀಡಂ ಪಾರ್ಕ್‌ನಲ್ಲಿ ನಡೆಯುತ್ತಿರುವ ಪ್ರತಿಭಟನಾ ಸ್ಥಳಕ್ಕೆ ಮಂಗಳವಾರ ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಭೇಟಿ ನೀಡಿದಾಗ, ಪದವೀಧರರು ಧಾನ್ಯದ ಗಂಟುಗಳನ್ನು ನೀಡಿದರು

ನಿಷೇಧಿತ ಐಎಸ್ ನಂಟು: ಇಬ್ಬರ ಬಂಧನ

ಒಂದನೇ ಪುಟದಿಂದ...

ತಲೆಮರೆಸಿಕೊಂಡಿರುವ ಶಾರಿಕ್ ಹಾಗೂ ಮಾಝ್ ಮುನೀರ್ ಅಹಮದ್ 2020ರ ನವೆಂಬರ್ 27ರಂದು ಮಂಗಳೂರಿನ ಕೋರ್ಟ್ ರಸ್ತೆಯ ಹಳೆ ಪೊಲೀಸ್ ಔಟ್ ಪೋಸ್ಟ್‌ನಲ್ಲಿ ಲಷ್ಕರ್–ಎ–ತಯ್ಯಬಾ ಹಾಗೂ ತಾಲಿಬಾನ್ ಪರ ಗೋಡೆಬರಹ ಬರೆದಿದ್ದರು. ಈ ಪ್ರಕರಣದಲ್ಲಿ ಇಬ್ಬರನ್ನೂ ಬಂಧಿಸಲಾಗಿತ್ತು. 2021ರ ಸೆಪ್ಟೆಂಬರ್ 8ರಂದು ಜಾಮೀನು ಪಡೆದಿದ್ದರು ಎಂದು ತಿಳಿದುಬಂದಿದೆ.

ನಾಪತ್ತೆ ಪ್ರಕರಣ: ಮಂಗಳೂರಿನ ಆರ್ಯ ಸಮಾಜ ರಸ್ತೆಯ ನಿವಾಸಿ ಮಾಝ್ ಮುನೀರ್ ಅಹಮದ್ ಸೆ.14ರಿಂದ ಕಾಣೆಯಾಗಿದ್ದಾನೆ ಎಂದು ಆತನ ತಂದೆ ಮುನೀರ್ ಅಹಮದ್ ಕದ್ರಿ ಪೊಲೀಸ್ ಠಾಣೆಯಲ್ಲಿ ಸೋಮವಾರ ದೂರು ನೀಡಿದ್ದರು.

ದೇವರಕೋಲು ಮುಟ್ಟಿದ ಪರಿಶಿಷ್ಟ ಬಾಲಕನಿಗೆ ದಂಡ

ಒಂದನೇ ಪುಟದಿಂದ...

ತನಿಖೆ ನಡೆಸಲಾಗುತ್ತಿದ್ದು, ಗ್ರಾಮದಲ್ಲಿ ಶಾಂತಿ ಸಭೆ ನಡೆಸಿ ಎಚ್ಚರಿಕೆ ಕೂಡ ನೀಡಲಾಗಿದೆ’ ಎಂದು ಸರ್ಕಲ್ ಇನ್‌ಸ್ಪೆಕ್ಟರ್ ವಸಂತ ಕುಮಾರ್ ‘ಪ್ರಜಾವಾಣಿ’ಗೆ ತಿಳಿಸಿದರು.

ಘಟನೆ ಹಿನ್ನೆಲೆ: ಸೆಪ್ಟೆಂಬರ್ 8ರಂದು ಸಂಜೆ ಈ ಘಟನೆ ನಡೆದಿದೆ. ‘ಮೆರವಣಿಗೆ ವೇಳೆ ದೇವರ ವಿಗ್ರಹಕ್ಕೆ ಅಡಿಪಾಯವಾಗಿರುವ ಗುಜ್ಜಕೋಲು ಕೆಳಗೆ ಬಿದ್ದಿತು. ತಕ್ಷಣವೇ ನನ್ನ ಪುತ್ರ ಚೇತನ್ ಆ ಕೋಲು ಎತ್ತಿಕೊಟ್ಟಿದ್ದಾನೆ. ಇದನ್ನು ಗಮನಿಸಿದ ಒಕ್ಕಲಿಗ ಸಮುದಾಯದ ನಾರಾಯಣಸ್ವಾಮಿ, ರಮೇಶ್, ಗ್ರಾಮ ಪಂಚಾಯಿತಿ ಮಾಜಿ ಸದಸ್ಯ ನಾರಾಯಣಸ್ವಾಮಿ ಎಂಬುವರು ನನ್ನ ಪುತ್ರನಿಗೆ ಹೊಡೆದಿದ್ದಾರೆ’ ಎಂದು ಶೋಭಾ ಅವರು ದೂರಿನಲ್ಲಿ ತಿಳಿಸಿದ್ದಾರೆ.

‘ಅಲ್ಲದೇ ಗ್ರಾಮದ ಮುಖಂಡರು ಪಂಚಾಯಿತಿ ನಡೆಸಿ ಅಲ್ಲಿಗೆ ನಮ್ಮನ್ನು ಕರೆಸಿದ್ದರು. ದೇವರಿಗೆ ಮೈಲಿಗೆಯಾದ ಕಾರಣ ದೇಗುಲಕ್ಕೆ ಪೇಂಟ್ ಮಾಡಿ ಸ್ವಚ್ಛಗೊಳಿಸಬೇಕು. ಅದಕ್ಕಾಗಿ ದಂಡ ಪಾವತಿಸಬೇಕು. ದಂಡದ ಹಣ ನೀಡದಿದ್ದರೆ ಗ್ರಾಮದಿಂದ ಸಾಮಾಜಿಕ ಬಹಿಷ್ಕಾರ ಹಾಕುವುದಾಗಿ ಎಚ್ಚರಿಕೆ ನೀಡಿದ್ದಾರೆ. ವಿಚಾರವನ್ನು ಗ್ರಾಮದ ಹೊರಗೆ ತಿಳಿಸದಂತೆ ಜೀವ ಬೆದರಿಕೆ ಹಾಕಿದ್ದಾರೆ’ ಎಂದು ಬಾಲಕನ ತಾಯಿ ದೂರಿನಲ್ಲಿ ತಿಳಿಸಿದ್ದಾರೆ.

ಬಾಲಕ ಚೇತನ್ ಟೇಕಲ್‌ನಲ್ಲಿ 10ನೇ ತರಗತಿ ಓದುತ್ತಿದ್ದು, ತಾಯಿ ಶೋಭಾ ಅವರು ಬೆಂಗಳೂರಿನಲ್ಲಿ ಕೂಲಿ ಕೆಲಸ ಮಾಡುತ್ತಿದ್ದಾರೆ.

> ### ಹಣಕ್ಕೆ ಪರದಾಟ
> ದಂಡದ ಹಣ ಹೊಂದಿಸಲು ಬಾಲಕನ ತಾಯಿ ಕೊನೆಯವರೆಗೂ ಪರದಾಡಿದ್ದಾರೆ. ‘ಮನೆಗೆಲಸ ಮಾಡಿಕೊಂಡು ಬದುಕು ಸಾಗಿಸುತ್ತಿದ್ದೇನೆ. ಅಷ್ಟೊಂದು ಹಣ ಎಲ್ಲಿಂದ ತರಲಿ. ನನ್ನ ಬಳಿ ಇರುವುದು ಇಷ್ಟೇ’ ಎಂದು ಅವರು ₹5 ಸಾವಿರ ನೀಡಲು ಮುಂದಾಗಿದ್ದರು.

‘ಪ್ರಚಾರದಲ್ಲಿ ಮುಳುಗಿದ್ದರಿಂದಲೇ ಸಂಕಷ್ಟ’

ಪ್ರಜಾವಾಣಿ ವಾರ್ತೆ

ಮೈಸೂರು: ‘ಬೆಂಗಳೂರು– ಮೈಸೂರು ದಶಪಥ ಕಾಮಗಾರಿಯ ಗುಣಮಟ್ಟವನ್ನು ಕಾಯ್ದುಕೊಳ್ಳಲು ಶ್ರಮಿಸಬೇಕಾದ ಪ್ರತಿಪಕ್ಷದ ನಾಯಕರು, ಪ್ರಚಾರದಲ್ಲಿ ಮುಳುಗಿದ್ದರಿಂದ ಜನರು ಸಂಕಷ್ಟ ಎದುರಿಸುವಂತಾಯಿತು’ ಎಂದು ಕಾಂಗ್ರೆಸ್ ಮುಖಂಡ ಎಚ್.ಸಿ. ಮಹದೇವಪ್ಪ ಅವರು ಹೇಳಿದ್ದಾರೆ.

‘ಬೆಂಗಳೂರು–ಮೈಸೂರು–ಬಂಟ್ವಾಳ ರಾಷ್ಟ್ರೀಯ ಹೆದ್ದಾರಿಗೆ ಅನುಮೋದನೆಗೊಂಡ ಮೇಲೆ ಯಾವುದೇ ಪಕ್ಷದ ಸರ್ಕಾರ ಬಂದರೂ ಪೂರ್ಣಗೊಳಿಸಬೇಕು. ಆದರೆ, ವ್ಯವಸ್ಥಿತ ಹಾಗೂ ವೈಜ್ಞಾನಿಕ ಕಾಮಗಾರಿ ನಡೆಸಬೇಕಾದವರು ನಿರ್ಲಕ್ಷ್ಯ ವಹಿಸಿದರು’ ಎಂದು ಪ್ರಕಟಣೆಯಲ್ಲಿ ದೂರಿದ್ದಾರೆ.

‘ಉತ್ತಮ ರಸ್ತೆ ನಿರ್ಮಾಣದತ್ತ ವ್ಯವಸ್ಥಿತ ಪ್ರಯತ್ನವನ್ನು ಕಾಂಗ್ರೆಸ್ ಮಾಡಿದೆ. 1,882 ಕಿ.ಮೀ ರಾಜ್ಯ ಹೆದ್ದಾರಿಯನ್ನು ರಾಷ್ಟ್ರೀಯ ಹೆದ್ದಾರಿಯಾಗಿ ಪರಿವರ್ತಿಸಲು ಯುಪಿಎ ಸರ್ಕಾರ ಅನುಮೋದಿಸಿತ್ತು. ಅದರಿಂದಲೇ ದಶಪಥ ಕಾಮಗಾರಿ ಅನುಷ್ಠಾನಗೊಂಡಿದೆ’ ಎಂದು ತಿಳಿಸಿದ್ದಾರೆ.

‘ಕಾಂಗ್ರೆಸ್ ಅವಧಿಯಲ್ಲಿ ಪೂರ್ಣಗೊಂಡ ರಸ್ತೆಗಳು ಮುಂದಿನ 15 – 20 ವರ್ಷಗಳವರೆಗೆ ಸುಸ್ಥಿತಿಯಲ್ಲಿರುತ್ತವೆ. ಅವುಗಳ ಗುಣಮಟ್ಟವನ್ನು ವಿಶ್ವಬ್ಯಾಂಕ್ ಶ್ಲಾಘಿಸಿದೆ. ಕೆಲಸ ಯಾರದ್ದೋ, ಮಾತು– ಪ್ರಚಾರ ಮತ್ಯಾರದ್ದೋ ಎನ್ನುವ ಪರಿಸ್ಥಿತಿ ನಿಲ್ಲಬೇಕು. ಕೆಲಸವನ್ನು ಗೌರವಿಸುವ ಆರೋಗ್ಯಕರ ಮನಸ್ಥಿತಿ ಮತ್ತು ರಾಜಕೀಯ ಮುತ್ಸದ್ದಿತನ ಬೆಳೆಯಬೇಕು’ ಎಂದು ಅವರು ಸಲಹೆ ನೀಡಿದ್ದಾರೆ.

ಜಯಪ್ರಕಾಶಗೌಡಗೆ ಬಿಎಂಶ್ರೀ ಪ್ರತಿಷ್ಠಾನ ಪುರಸ್ಕಾರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಎಂಶ್ರೀ ಪ್ರತಿಷ್ಠಾನ ನೀಡುವ 2022ನೇ ಸಾಲಿನ ‘ಶ್ರೀಮತಿ ಸಾವಿತ್ರಮ್ಮ-ಪ್ರೊ.ಎಂ.ವಿ. ಸೀತಾರಾಮಯ್ಯ ಸಾಹಿತ್ಯ ಪುರಸ್ಕಾರ’ಕ್ಕೆ ಸಾಂಸ್ಕೃತಿಕ ಸಂಘಟಕ ಹಾಗೂ ಮಂಡ್ಯ ಕರ್ನಾಟಕ ಸಂಘದ ಅಧ್ಯಕ್ಷ ಪ್ರೊ.ಬಿ. ಜಯಪ್ರಕಾಶಗೌಡ ಅವರು ಆಯ್ಕೆಯಾಗಿದ್ದಾರೆ.

ಈ ಪುರಸ್ಕಾರ ₹30 ಸಾವಿರ ನಗದು ಮತ್ತು ಸ್ಮರಣಿಕೆ ಒಳಗೊಂಡಿದೆ.

ಅಗ್ರಹಾರ ಕೃಷ್ಣಮೂರ್ತಿ ಹಾಗೂ ಎಸ್.ಎಲ್. ಮಂಜುನಾಥ್ ಅವರನ್ನು ಒಳಗೊಂಡ ಸಮಿತಿ ಈ ಆಯ್ಕೆ ಮಾಡಿದೆ. ಸೆಪ್ಟೆಂಬರ್ 29ರಂದು ಪ್ರತಿಷ್ಠಾನದ ಸಭಾಂಗಣದಲ್ಲಿ ನಡೆಯುವ ಕಾರ್ಯಕ್ರಮದಲ್ಲಿ ಪುರಸ್ಕಾರ ಪ್ರದಾನ ಮಾಡಲಾಗುವುದು ಎಂದು ಗೌರವ ಕಾರ್ಯದರ್ಶಿ ಶಾಂತರಾಜು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ನಗರದಲ್ಲಿ ಇಂದು

ನಾ. ದಿವಾಕರ ಅವರ ಅನುವಾದಿತ ‘ಜರ್ಮನ್ ರೈತ ಯುದ್ಧ’ ಪುಸ್ತಕ ಬಿಡುಗಡೆ: ಬಿ.ಎನ್. ನಾಗರಾಜ್, ಅಧ್ಯಕ್ಷತೆ: ಪಿ.ವಿ. ಲೋಕೇಶ್, ಸಂವಾದ: ರಾಘವೇಂದ್ರ ಕುಷ್ಟಗಿ, ಬಂಜಗೆರೆ ಜಯಪ್ರಕಾಶ್, ಪುಸ್ತಕ ಪರಿಚಯ: ನವೀನ್ ಕುಮಾರ್.ಎಚ್. ಆರ್., ಉಪಸ್ಥಿತಿ: ನಾ ದಿವಾಕರ್, ಸಿದ್ಧನಗೌಡ ಪಾಟೀಲ್, ರಮೇಶ್ ಉಡುಪ, ವಸಂತರಾಜ್.ಎನ್.ಕೆ., ಸಿ.ಆರ್. ಶಾನಭಾಗ, ಆಯೋಜನೆ: ಕ್ರಿಯಾ ಮಾಧ್ಯಮ, ಸ್ಥಳ: ಕ್ರಿಯಾ ಮಾಧ್ಯಮ ಹೊಸ ಪುಸ್ತಕ ಮಳಿಗೆ, ಬಸವನಗುಡಿ, ಸಂಜೆ 5

ಡಾ.ಬಂಜಗೆರೆ ಜಯಪ್ರಕಾಶ್

ರಫ್ತು ಶ್ರೇಷ್ಠತಾ ಪ್ರಶಸ್ತಿ ಪ್ರದಾನ: ಅತಿಥಿಗಳು: ಮುರುಗೇಶ ನಿರಾಣಿ, ಇ.ವಿ. ರಮಣ ರೆಡ್ಡಿ, ಗುಂಜನ್ ಕೃಷ್ಣ, ಸಿ. ಶಿಖಾ, ರಾಧಾಕೃಷ್ಣನ್, ಸತ್ಯಕಿ ರಸ್ತೋಗಿ, ಅಧ್ಯಕ್ಷತೆ: ಐ.ಎಸ್. ಪ್ರಸಾದ್, ಆಯೋಜನೆ: ಎಫ್‌ಕೆಸಿಸಿಐ, ಸ್ಥಳ: ಹೋಟೆಲ್ ರ್‍ಯಾಡಿಸನ್ ಬ್ಲ್ಯೂ, ಅರಮನೆ ರಸ್ತೆ, ಸಂಜೆ 5

> **ಅನಂತಕುಮಾರ್–63 ಪ್ರಯುಕ್ತ ‘ಅನಂತಯಾನ’ ಪುಸ್ತಕ ಬಿಡುಗಡೆ:** ಅತಿಥಿಗಳು: ವಿಶ್ವೇಶ್ವರ ಹೆಗಡೆ ಕಾಗೇರಿ, ಆಯೋಜನೆ: ಅದಮ್ಯ ಚೇತನ, ಸ್ಥಳ: ಕರ್ನಾಟಕ ಜೈನ್ ಭವನ, ವಿ.ವಿ. ಪುರ ಕಾಲೇಜು ಎದುರು, ಸಂಜೆ 4.30



ಅನಂತಕುಮಾರ್

ಪೊಲೀಸರ ವಶದಲ್ಲಿ ಚಿನ್ನ: ತಿಂಗಳು ಮಾತ್ರವೇ ಅವಕಾಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಅಪರಾಧ ಪ್ರಕರಣಗಳ ತನಿಖೆ ಸಂದರ್ಭದಲ್ಲಿ ಜಪ್ತಿ ಮಾಡಿದ ಚಿನ್ನದ ಗಟ್ಟಿ ಅಥವಾ ಆಭರಣಗಳನ್ನು ಪೊಲೀಸರು 15 ದಿನಗಳಿಂದ ಗರಿಷ್ಠ ಒಂದು ತಿಂಗಳವರೆಗೆ ಮಾತ್ರ ತಮ್ಮ ವಶದಲ್ಲಿ ಇಟ್ಟುಕೊಳ್ಳಲು ಅವಕಾಶವಿದೆ. ನಂತರ ಅವುಗಳನ್ನು ಸಂತ್ರಸ್ತರು ಅಥವಾ ದೂರುದಾರರ ಮಧ್ಯಂತರ ಸುಪರ್ದಿಗೆ ಒಪ್ಪಿಸಬೇಕು' ಎಂದು ಹೈಕೋರ್ಟ್ ಆದೇಶ ನೀಡಿದೆ.

ಈ ಸಂಬಂಧ ಬೆಂಗಳೂರಿನ ಚಿನ್ನಾಭರಣ ಮಳಿಗೆಯೊಂದರ ಮಾಲೀಕ ಸಲ್ಲಿಸಿದ್ದ ಅರ್ಜಿಯನ್ನು ನ್ಯಾಯಮೂರ್ತಿ ಎಂ. ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ ಪುರಸ್ಕರಿಸಿದ್ದು, 'ಅರ್ಜಿದಾರರಿಂದ ವಶಪಡಿಸಿಕೊಂಡಿದ್ದ ಚಿನ್ನದ ಗಟ್ಟಿಯನ್ನು ಮಾಲೀಕರ ಮಧ್ಯಂತರ ಸುಪರ್ದಿಗೆ ನೀಡಬೇಕು' ಎಂದು ಮೈಸೂರಿನ ಲಷ್ಕರ್ ಠಾಣಾ ಪೊಲೀಸರಿಗೆ ನಿರ್ದೇಶಿಸಿದೆ.

'ತನಿಖೆ ಸಂದರ್ಭದಲ್ಲಿ ಜಪ್ತಿ ಮಾಡಿದ ಚಿನ್ನ, ಬೆಳ್ಳಿ ಮತ್ತು ಅಮೂಲ್ಯ ರತ್ನಗಳನ್ನು ಪ್ರಕರಣದ ವಿಚಾರಣೆ ಪೂರ್ಣಗೊಳ್ಳುವವರೆಗೂ ಪೊಲೀಸರ ವಶದಲ್ಲಿ ವರ್ಷಾನುಗಟ್ಟಲೆ ಇಟ್ಟುಕೊಳ್ಳುವುದರಿಂದ ಯಾವುದೇ ಪ್ರಯೋಜನ ಇಲ್ಲ. ಸುಪ್ರೀಂ ಕೋರ್ಟ್ ಆದೇಶದನ್ವಯ ಜಪ್ತಿ ಮಾಡಿದ ಚಿನ್ನಾಭರಣಗಳನ್ನು ಸಂಬಂಧಪಟ್ಟ ದೂರುದಾರರ ಹಾಗೂ ಸಂತ್ರಸ್ತರ ಮಧ್ಯಂತರ ಸುಪರ್ದಿಗೆ ನೀಡಬೇಕು. ಈ ಸಂಬಂಧ ಯಾವುದೇ ಷರತ್ತುಗಳನ್ನು ವಿಧಿಸುವುದು ಮ್ಯಾಜಿಸ್ಟ್ರೇಟ್ ಕೋರ್ಟ್ ವಿವೇಚನೆಗೆ ಒಳಪಟ್ಟಿರುತ್ತದೆ' ಎಂದು ನ್ಯಾಯಪೀಠವು ಆದೇಶಿಸಿದೆ.

₹ 69 ಕೋಟಿ ನಷ್ಟ • ₹262 ಕೋಟಿ ವೆಚ್ಚಕ್ಕೆ ಸಂಶಯ

ಎಲ್ಲರಿಗೆ ತಲುಪದ 'ಸೌಭಾಗ್ಯ': ಸಿಎಜಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಗ್ರಾಮೀಣ ಪ್ರದೇಶದ ಪ್ರತಿಮನೆಗೂ ವಿದ್ಯುತ್ ಸಂಪರ್ಕ ಕಲ್ಪಿಸುವ 'ಪ್ರಧಾನ ಮಂತ್ರಿ ಮನೆ ಮನೆಗೂ ವಿದ್ಯುತ್ ಯೋಜನೆ'ಯಡಿ (ಸೌಭಾಗ್ಯ) ಗ್ರಾಮದ ಶೇ 10 ಕುಟುಂಬಗಳಿಗಷ್ಟೇ ವಿದ್ಯುದ್ದೀಕರಣ ವ್ಯವಸ್ಥೆ ಮಾಡಿದ್ದರೂ ಗ್ರಾಮವೇ ವಿದ್ಯುದ್ದೀಕರಣವಾಗಿದೆ ಎಂದು ಪರಿಗಣಿಸಿದ್ದರಿಂದಾಗಿ ಉದ್ದೇಶ ಸಂಪೂರ್ಣವಾಗಿ ಈಡೇರಲಿಲ್ಲ ಎಂದು ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರ (ಸಿಎಜಿ) ವರದಿ ಹೇಳಿದೆ.

2015ರಲ್ಲಿ ಆರಂಭವಾದ ದೀನ್ ದಯಾಳ್ ಉಪಾಧ್ಯಾಯ ಗ್ರಾಮಜ್ಯೋತಿ ಯೋಜನೆ ಹಾಗೂ ಸೌಭಾಗ್ಯ ಯೋಜನೆಗಳ ಅನುಷ್ಠಾನದ ಪ್ರಗತಿ ಕುರಿತ ಸಿಎಜಿ ವರದಿಯನ್ನು ವಿಧಾನಸಭೆಯಲ್ಲಿ ಮಂಗಳವಾರ ಮಂಡಿಸಲಾಯಿತು.

ಅನರ್ಹ ಗುತ್ತಿಗೆದಾರರಿಗೆ ಕಾಮಗಾರಿ ಹಂಚಿಕೆ, ನಿಯಮ ಉಲ್ಲಂಘಿಸಿ ಅನರ್ಹ ಸಂಸ್ಥೆಗಳಿಗೆ ಗುತ್ತಿಗೆ ನೀಡಿರುವುದು, ನಿರ್ವಹಣಾ ಸಂಸ್ಥೆಗಳ ನೇಮಕಾತಿಗೆ ಹೆಚ್ಚುವರಿ ವೆಚ್ಚಗಳು ಈ ಎರಡೂ ಯೋಜನೆಗಳಲ್ಲಿ ನಡೆದಿವೆ ಎಂದೂ ವರದಿ ಹೇಳಿದೆ.

₹ 69 ಕೋಟಿ ನಷ್ಟ: ನಿರ್ವಹಣಾ ಸಂಸ್ಥೆಗಳಿಗೆ ಹೆಚ್ಚುವರಿ ಮೊತ್ತ ನೀಡಿರುವುದು, ಗುತ್ತಿಗೆ ನೀಡುವಾಗ ಕೇಂದ್ರ ಸರ್ಕಾರದ ನಿಯಮ ಮೀರಿ ಶೇ 30.68ರಷ್ಟು ಮೊತ್ತ ಹೆಚ್ಚಿಸಿರುವುದು, ಕುಟುಂಬಗಳ ಸಂಖ್ಯೆಯನ್ನು ಹೆಚ್ಚಾಗಿ ಸೇರಿಸಿರುವುದು ಹಾಗೂ ಕೇಂದ್ರ ನಿಗದಿಪಡಿಸಿದ ಮೊತ್ತಕ್ಕಿಂತ ಹೆಚ್ಚಿನ ಮೊತ್ತವನ್ನು ವೆಚ್ಚ ಮಾಡಿರುವುದರಿಂದಾಗಿ ಒಟ್ಟಾರೆ ₹69 ಕೋಟಿ ನಷ್ಟ ಉಂಟಾಗಿದೆ. ಯೋಜನೆ ಅನುಷ್ಠಾನದಲ್ಲಿನ ದೋಷ ಹಾಗೂ ನಿರ್ದಿಷ್ಟ ಷರತ್ತು ಪೂರೈಸದೇ ಇದ್ದರೂ ಎಸ್ಕಾಂಗಳು ₹262 ಕೋಟಿ ಹೆಚ್ಚುವರಿ ಮೊತ್ತವನ್ನು ಪಡೆದುಕೊಂಡಿರುವುದು ಅನುಮಾನಾಸ್ಪದವಾಗಿದೆ.

ಪ್ರಮುಖ ಆಕ್ಷೇಪಗಳು

- ಗ್ರಾಮಗಳಲ್ಲಿ ವಿದ್ಯುದ್ದೀಕರಣಕ್ಕಾಗಿ ₹1747 ಕೋಟಿ ನಿಗದಿಯಾಗಿತ್ತು. ಶೇ 0.5ರ ದರದಂತೆ ₹8.48 ಕೋಟಿಯನ್ನು ನಿರ್ವಹಣಾ ಸಂಸ್ಥೆಗೆ ನೀಡಬೇಕಾಗಿತ್ತು. ಆದರೆ ಶೇ 1.5ರಷ್ಟು ನೀಡಿದ್ದರಿಂದಾಗಿ ₹17.89 ಕೋಟಿ ಹೆಚ್ಚುವರಿ ನೀಡಲಾಯಿತು. ನಿಗದಿತ ಅವಧಿಯಲ್ಲಿ ಮುಗಿಸದೇ ಇದ್ದರೂ ನಿರ್ವಹಣಾ ಸಂಸ್ಥೆಯ ಅವಧಿ ವಿಸ್ತರಿಸಿದ್ದರಿಂದ ₹8.53 ಕೋಟಿ ಹೆಚ್ಚುವರಿ ಹೊರೆಯಾಯಿತು.
- ಬಡತನ ರೇಖೆಗಿಂತ ಕೆಳಗಿನ ಕುಟುಂಬಗಳಿಗೆ ಸಂಪರ್ಕ ಕಲ್ಪಿಸಲು ಮಾಡುವ ವೆಚ್ಚ ₹3 ಸಾವಿರ ಮೀರಕೂಡದು ಎಂದು ಕೇಂದ್ರ ಹೇಳಿತ್ತು. ಆದರೆ, ಒಂದು ಸಂಪರ್ಕಕ್ಕೆ ₹4121ರಿಂದ ₹6600ವರೆಗೆ ವೆಚ್ಚ ಮಾಡಲಾಯಿತು. ಹೀಗಾಗಿ ₹ 31.8 ಕೋಟಿ ನಷ್ಟವಾಯಿತು.
- ವಿವಿಧ ಸಾಮಗ್ರಿಗಳ ಖರೀದಿಗೆ ಕೇಂದ್ರ ಸರ್ಕಾರ ₹121 ಕೋಟಿ ನಿಗದಿ ಮಾಡಿತ್ತು. ರಾಜ್ಯ ಸರ್ಕಾರ ₹161 ಕೋಟಿ ವೆಚ್ಚ ಮಾಡಿದ್ದರಿಂದಾಗಿ ₹40 ಕೋಟಿ ಹೆಚ್ಚುವರಿ ಹೊರೆಯಾಯಿತು.

ಚಿತ್ರಾವಳಿ

ಅನುದಾನಿತ ಶಾಲಾ–ಕಾಲೇಜುಗಳ ನೌಕರರಿಗೆ ಪಿಂಚಣಿ ನೀಡದಿರುವುದು ಕಾನೂನುಬಾಹಿರ ಕ್ರಮವಾಗಿದೆ ಎಂದು ಆರೋಪಿಸಿ ನಗರದ ಫ್ರೀಡಂ ಪಾರ್ಕ್‌ನಲ್ಲಿ ರಾಜ್ಯ ಅನುದಾನಿತ ಶಾಲಾ ಕಾಲೇಜುಗಳ ಪಿಂಚಣಿ ವಂಚಿತ ನೌಕರರ ಸಂಘದಿಂದ ಪ್ರತಿಭಟನೆ ನಡೆಯಿತು – ಪ್ರಜಾವಾಣಿ ಚಿತ್ರಗಳು

ಜಾತಿ ಪ್ರಮಾಣಪತ್ರಕ್ಕೆ ಆಗ್ರಹಿಸಿ ವಿಜಯಪುರ ಜಿಲ್ಲಾ ತಳವಾರ ಪರಿವಾರ ಹಿತರಕ್ಷಣಾ ಸಮಿತಿ ಸದಸ್ಯರು ನಗರದ ಫ್ರೀಡಂ ಪಾರ್ಕ್‌ನಲ್ಲಿ ಪ್ರತಿಭಟನೆ ನಡೆಸಿದರು

ಅತ್ಯಾಚಾರ ಪ್ರಕರಣ: ಅಪರಾಧಿಗೆ 20 ವರ್ಷ ಶಿಕ್ಷೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಂದಿನಿ ಲೇಔಟ್ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಬಾಲಕಿಯ ಮೇಲೆ ನಡೆದಿದ್ದ ಅತ್ಯಾಚಾರ ಪ್ರಕರಣದ ಅಪರಾಧಿ ಸೈಯದ್ ಖಾಜಾ (28) ಎಂಬಾತನಿಗೆ 2ನೇ ತ್ವರಿತಗತಿಯ ವಿಶೇಷ ನ್ಯಾಯಾಲಯವು 20 ವರ್ಷಗಳ ಶಿಕ್ಷೆ ಹಾಗೂ ₹ 12,500 ದಂಡ ವಿಧಿಸಿ ಆದೇಶಿಸಿದೆ.

2018ರ ಡಿಸೆಂಬರ್ 24ರಂದು ಬಾಲಕಿ ಕಾಣೆಯಾದ ಸಂಬಂಧ ಪ್ರಕರಣ ದಾಖಲಾಗಿತ್ತು. ಅದಾದ ಮೇಲೆ 2019ರ ಜನವರಿ 11ರಂದು ಪೋಕ್ಸೊ ಕಾಯ್ದೆ ಅಡಿ ಪ್ರಕರಣ ದಾಖಲಾಗಿತ್ತು. ಅಂದಿನ ಇನ್‌ಸ್ಪೆಕ್ಟರ್ ಬಿ.ಎನ್. ಲೋಹಿತ್ ಪ್ರಕರಣದ ತನಿಖೆ ನಡೆಸಿ ನ್ಯಾಯಾಲಯಕ್ಕೆ ಆರೋಪ ಪಟ್ಟಿ ಸಲ್ಲಿಸಿದ್ದರು.

ಆರೋಪವು ಸಾಬೀತಾದ ಹಿನ್ನೆಲೆಯಲ್ಲಿ ಅಪರಾಧಿಗೆ ಕಲಂ 376 ಐಪಿಸಿ ಅಡಿಯ ಅಪರಾಧಕ್ಕೆ 20 ವರ್ಷ ಶಿಕ್ಷೆ, ₹ 10 ಸಾವಿರ ದಂಡ, ಕಲಂ 366 ಐಪಿಸಿ ಅಡಿಯ ಅಪರಾಧಕ್ಕೆ 5 ವರ್ಷ ಕಾರಾಗೃಹ ಶಿಕ್ಷೆ ಮತ್ತು ₹ 2,500 ದಂಡ ವಿಧಿಸಿ ಆದೇಶಿಸಿದೆ. ಸರ್ಕಾರಿ ವಕೀಲರಾಗಿ ಕೆ.ವಿ. ಅಶ್ವತನಾರಾಯಣ ವಾದ ಮಂಡಿಸಿದ್ದರು.

ಸುಕನ್ಯಾ ಸಮೃದ್ಧಿ ಮಹೋತ್ಸವ 24ಕ್ಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸ್ವಾತಂತ್ರ್ಯದ ಅಮೃತ ಮಹೋತ್ಸವದ ಪ್ರಯುಕ್ತ ಅಂಚೆ ಇಲಾಖೆಯಿಂದ ಸೆಪ್ಟೆಂಬರ್ 24ರಂದು (ಶನಿವಾರ) ಸುಕನ್ಯಾ ಸಮೃದ್ಧಿ ಮಹೋತ್ಸವವನ್ನು ಪೀಣ್ಯ ದಾಸರಹಳ್ಳಿಯಲ್ಲಿ ಹಮ್ಮಿಕೊಳ್ಳಲಾಗಿದೆ.

ಮಹಿಳೆಯರು ಆರ್ಥಿಕ ಒಳಗೊಳ್ಳುವಿಕೆ ಮತ್ತು ಸುಕನ್ಯಾ ಸಮೃದ್ಧಿ ಯೋಜನೆ ಅಡಿಯಲ್ಲಿ ಹೆಣ್ಣು ಮಗುವಿನ ಸೇರ್ಪಡೆ ವ್ಯಾಪ್ತಿಯನ್ನು ಶೇ 100ರಷ್ಟು ಖಚಿತಪಡಿಸುವುದು ಈ ಕಾರ್ಯಕ್ರಮದ ಉದ್ದೇಶವಾಗಿದೆ. ಇದರ ಜೊತೆಗೆ ಆರ್ಥಿಕ ಸಾಕ್ಷರತಾ ಅಭಿಯಾನ, ಸಾರ್ವಜನಿಕ ಅಂಚೆ ಇಲಾಖೆಯ ವಿವಿಧ ಉಳಿತಾಯ ಮತ್ತು ವಿಮಾ ಯೋಜನೆಗಳಲ್ಲಿ ನೋಂದಾಯಿಸಿ ಆಧಾರ ಸೇವೆಗಳನ್ನು ಪಡೆಯಬಹುದು ಎಂದು ಪ್ರಕಟಣೆ ತಿಳಿಸಿದೆ. ಹೆಚ್ಚಿನ ಮಾಹಿತಿಗಾಗಿ ಪೀಣ್ಯ ದಾಸರಹಳ್ಳಿ ಅಂಚೆ ಕಚೇರಿಯನ್ನು ಸಂಪರ್ಕಿಸಿ.

ಇಂದಿನಿಂದ 'ಡ್ರೈಡ್ಯಾಕ್ಟ್ ಇಂಡಿಯಾ' ಸಮಾವೇಶ

ಬೆಂಗಳೂರು: ಅಂತರರಾಷ್ಟ್ರೀಯ ವಸ್ತುಪ್ರದರ್ಶನ ಕೇಂದ್ರದಲ್ಲಿ (ಬಿಐಇಸಿ) ಸೆ.21ರಿಂದ 23ರವರೆಗೆ ಶಿಕ್ಷಣ ಮತ್ತು ಕೌಶಲ ಕ್ಷೇತ್ರದ ಸಮಾವೇಶ 'ಡ್ರೈಡ್ಯಾಕ್ಟ್ ಇಂಡಿಯಾ' ನಡೆಯಲಿದೆ ಉನ್ನತ ಶಿಕ್ಷಣ ಸಚಿವ ಡಾ.ಸಿ ಎನ್ ಅಶ್ವತ್ಥ ನಾರಾಯಣ ಹೇಳಿದರು.

ಅವರು ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದರು. ಇಂಡಿಯಾ ಡ್ರೈಡ್ಯಾಕ್ಟಿಕ್ಸ್ ಅಸೋಸಿಯೇಷನ್ ಸಿಇಒ ಆದಿತ್ಯ ಗುಪ್ತಾ ಇದ್ದರು.

'ಇಡಬ್ಲ್ಯುಎಸ್‌ನಿಂದ ಮೀಸಲಿಗೆ ಚ್ಯುತಿ ಇಲ್ಲ'

ನವದೆಹಲಿ (ಪಿಟಿಐ): ಶಿಕ್ಷಣ ಮತ್ತು ಉದ್ಯೋಗದಲ್ಲಿ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಮತ್ತು ಇತರೆ ಹಿಂದುಳಿದ ವರ್ಗಗಳ ಮೀಸಲಾತಿ ಬುಟ್ಟಿಗೆ ಕೈಹಾಕದೇ, ಸಾಮಾನ್ಯ ವರ್ಗಕ್ಕೆ ಮೀಸಲಿದ್ದ ಶೇ 50 ಮೀಸಲಾತಿಯಲ್ಲಿ ಶೇ 10ರಷ್ಟನ್ನು ಇದೇ ಮೊದಲ ಬಾರಿಗೆ ಆರ್ಥಿಕವಾಗಿ ದುರ್ಬಲವಾದ ವರ್ಗಗಳಿಗೆ (ಇಡಬ್ಲ್ಯುಎಸ್) ನೀಡಲಾಗುತ್ತಿದೆ ಎಂದು ಕೇಂದ್ರ ಸರ್ಕಾರ ಮಂಗಳವಾರ ಸುಪ್ರೀಂ ಕೋರ್ಟ್‌ಗೆ ತಿಳಿಸಿದೆ.

ಮುಖ್ಯ ನ್ಯಾಯಮೂರ್ತಿ ಯು.ಯು. ಲಲಿತ್ ಅವರ ನೇತೃತ್ವದ ಐವರು ನ್ಯಾಯಮೂರ್ತಿಗಳನ್ನು ಒಳಗೊಂಡ ಸಾಂವಿಧಾನಿಕ ಪೀಠಕ್ಕೆ, ಅಟಾರ್ನಿ ಜನರಲ್ ಕೆ.ಕೆ. ವೇಣುಗೋಪಾಲ್ ಈ ಮಾಹಿತಿ ನೀಡಿದರು.

ಪ್ರಜಾವಾಣಿ

ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

JOB OPPORTUNITIES

Teachers/ Professors

REQUIRED EXPERIENCED Assistant Professor's in commerce for a reputed college near Yelahanka. Qualification M.Com with NET/SLET/Ph.D. send resumes to hrmvs1992@gmail.com Contact: 9035219389

RES POLYTECHNIC
5, Sunkadakatte, Magadi Main Road, Hegganahalli Cross, Bengaluru-560091 Phone: 080-23484814
PRINCIPAL / VICE PRINCIPAL
Around 45 age, Teaching + industry experience with having knowledge of Karnataka BTE / DTE WORKS
LECTURERS-FULLTIME/PARTTIME
Fresher or Experienced for polytechnic courses CS / EC / CIVIL / MECH / EE / FASHION / COMMERCE / AUTO
LAB INSTRUCTORS / ASSISTANTS
Experienced DIPLOMA / ITI
OFFICE ADMIN STAFF
Any Degree / Diploma with computer knowledge for online activities
Note: Send your resume to: respt450@gmail.com
WITH stating branch of your specialization in SUBJECT line
Apply to CHAIRMAN within 5 days
RES-22316

Bharatiya Vidya Bhavan's BBMP Public School (CBSE), Srirampuram, B-21
Require Teachers for
- English - Primary & High School
- Hindi - Primary & High School
- Maths - Primary
- Librarian
- PET (Female)

Walk In Interview from 22nd to 29th Sep 2022 11:00am-2:00pm in School campus
Scan for Location
9448252256,9686542903

Sri Rakum High School
421/I, Sri Krishna Temple Road, Indiranagar 1st stage, Bengaluru-560038
Tel: 080 - 25215705
Email: rakumarakum@yahoo.com
Wanted
Science, Maths, English and Social science Teacher, for Primary & High School Students
Female Teacher - Rs.15000- 20000

St. Benedict's Academy School (CBSE), Asirvanam, Anchepalya, Kengeri, Mysore Road, Bangalore-74
Requires Trained & Experienced
TEACHERS
CBSE High School
Grade KG - 5 : English
Grade 6 - 10 : English
Grade 9 - 12 : Maths
Call: 9740245828
Mail your resume to: jeromeosb@gmail.com

WANTED TEACHERS for NTT Primary & High School Maths, English, Sanskrit, Science, Social, Physical Education. Contact MES Convent, Nagarabhavi. Ph-9740382364

WANTED ENGLISH Teacher for School SagarConvent Kanakapura Main Bangalore 82 Near APS Engineering College Good Salary: 9342552428

Wanted TEACHERS for the Primary Section
Qualified and Experienced teachers can send their resume to: franciskor.sslc@rediffmail.com
St. Francis High School, Koramangala.
Ph: 25635757/ 25635858/ and 8296051217

NEW FLORENCE English School, Rajajinagar, Bengaluru- 10. High School Physics, Maths, Chemistry, Biology, Kannada, Lady Teachers: 9620396782/ 9845346754

GURUKULA INTERNATIONAL School Requires Nursery Co-Ordinator, Computer Teachers for High School and Lady Accountant with Kannada Typing. 9th Cross, Near Magadi Road, Metro Station Bangalore-23. 7829338292, 7676676629

Accounts & Finance

WANTED ACCOUNTS ASSISTANT Experienced in TALLY, ESI, EPF, GST, to work at Wilson Garden, from 1st of October. Salary will commensurate with experience. Please send in your resumes to: anubis082000@yahoo.com

General

SAFEGUARD SYSTEMS: ACCOUNTANT, SALES EXECUTIVES, OFFICE EXECUTIVES. Graduates 5Years Experience. 9343544350 9341220862 safeguard_systems@yahoo.com

WANTED FOR reputed company Graduates Age 30-70, Bangalore only. Earn 30,000- 50,000. Contact: 9008305194/ 6364099311

REQUIRED ONE ACCOUNTS ASSISTANT and one OFFICE ASSISTANT for our Organization. Kindly contact 080- 22250423 between 10 A.M. to 4 P.M.

PERSONAL ASSISTANT: Female candidate with good knowledge in Basic Computer operation (Near Brigade Road.) Interested candidates can WhatsApp resume: 9980758212

Graphic Designers

WANTED GRAPHIC DESIGNER, Computer Typist Male & Female& Supervisor Jayanagar 9th Block, Call: 9845934508

Marketing & Sales

WANTED COUNTER Sales Executives (M/F) for Two Wheeler Showroom Koramanagala, JPNagar, Rajajinagar. Salary + Incentives. 9945083900, 9731028676.

BUSINESS EXECUTIVE (Male) TELECALLER (Female) with Good English, Computer Skills for Advertising Company Basveswarnagar 9845411113

WANTED MARKETING Executives for leading Book Publisher in Bangalore. Two wheeler is must. Contact: 9611185999

Multiple Vacancy

WANTED ACCOUNTANTS 3-5years Experience with Tally-3no, Marketing Executives-10no,`Back Office Executives-5no, Assistantto CEO 3-no to a financial Services Company,`South Bengaluru Preferred Very`Good Salary- Contact: 9246571820/ 9247755671. Email:srinivas@sreesoftsol.com.

OPPORTUNITY OF Career & Income for Retired Officials, Bankers, Teachers, CAs,Professionals, Homemakers. Call: 8095301555

REQUIRED, TEAMLEADER, & FieldExecutive For BankLoan collection. direct recruitment to company. Contact: 9620206756, 9620200756.

Wanted

WANTED FEMALE Office Assistant Below 40 Years Qualification any Degree, Good Communication Skills: Kannada, English, Hindi. in around Rajajinagar Contact: 23384085/ 9108458798

WANTED MSW candidate to work with Disabled children. For more details contact: 9036037737

THE BANGALORE PRESS
(No.88, Mysore Road, Chamarajpet, Bangalore-18)
has opening for the below roles;

ROLE	REQUIREMENT
Senior/Junior Marketing Officers	Matriculates. 1+ years experience in field sales of consumer goods. Fluency in Kannada and English
Production Supervisor	2+ years experience in a production unit, preferably a paper/book industry
DTP Operator	Experience in Coreldraw, Pagemaker and Microsoft Office applications Fluency in Kannada and English
Office Staff	Computer knowledge, including Microsoft Word, Excel

Please email details (including resume with your work experience and expected salary) to bangalorepressjobs@gmail.com

INDIA'S BEST Financial Brand offers a Revolutionary opportunity for Senior Citizens, Retd, VRS, NRI & Housewives. Limited seats only. 9591583662/ 9972169164.

WANTED EXPERIENCED Sales Girls For Show Room, Around Rajajinagar Contact: 080- 23353406/ 9845359345/ 9880778440

Overseas

HOUSEHOLD HELP needed in USA. Valid US visa holder only. Competitive salary Email: Kalyan.j@gmail.com Call: +91 9881469493 WhatsApp: +16073424158

Part-Time Jobs

MNC CO, Great Opportunity Work from Home, Earn Unlimited, Part/ Full. Time Job: 7019215243/ 9886641282

WANTED PART-TIME Field Verification Executives all over Karnataka. Call or WhatsApp : +91 8197713169

Receptionist/ Secretary

REQUIRED OFFICE receptionist and Secretary fresher or experienced salary 12 to 15 k, to the Management of Kenmore school, 31, Kanakapura Road, Basavanagudi, Bangalore-560004, whatsapp resume to 9901501185 or email kenmorenotes@gmail.com

Security & Detectives

WANTED EXPERIENCED SECURITY FIELD OFFICER for SOUTH BANGALORE. Contact RITEMAN SECURITY AGENCY: 9945273400

REAL ESTATE SELLING

Flat

Malleshwaram

GOOD FLAT, Penthouse sale Malleswaram Contact: 9845027880 Brokers Excuse.

WE ARRANGE mortgage, Housing & Purchase loan on A-B & E Khata,CMC and Panchayat Khatas, from Schedule Bank. Jyothi 8971377299.

BUSINESS

Business to Business

Business

ARE YOU Hunger for Money? Earn unlimited income if you are Graduate and age in between 35- 65 yrs Ideal for House wife's, Retired & Self Employed. Part-time/ Full-Time. Contact: 9986585550

Business Offers

Finance

NRI'S INVESTMENT And Finance Available On Low Interest Against Properties, Land& Building,Sites,Flats, Converted& Agriculture Lands Call: 7411265189

OPPORTUNITY FOR Retired Officials, Bankers, Professionals, Teachers, Homemakers, CAs. Work part time/ full time. Earn unlimited income. Please call: 9008403686/ 9945114828.

DH ಪ್ರಜಾವಾಣಿ Book Your Classifieds Ads
Online Log in to dhclassifieds.com
Contact :
Jerry Louis : 9731810277
Vishal GM : 9845114560
Ravichandra : 9901641752
Tanveer : 9886213331

EDUCATIONAL

Admission

DIRECT FINAL Year Admission: LLB (Can Practice,No Age Limit) BTech/Diploma/MBA/MCA MSc/BCA/BBA/BSc/BCom DPharm/BPharm/BAMS BNYS. Govt Recognised courses. Asha Academy, Bangalore. Ph:9448460103/ 7676477541

Tuitions

BEST HOME Tuitions Now At Your Door Step (ANY) Maths/ Physics/ Chemistry/ French/ Hindi/ English/ Civil/ Aero nautical/ Mechanical/ Electrical & Electronics From 1st To 12th Standard CBSE/ ICSE/ ISC/ IIT, JEE (Main & Advance) BSC/ BE All Subjects At All and Different Levels In All Major Areas of Bangalore Including Peenya, Kengeri, & Yelahanka, & Metro Routes From Mahalaxmi Layout, Big/ Special Push Given For Maths, Instant Results to follow Special Cash Returns/ Incentives for Those Who Study & Prove So Through Out The Academic Year with Built in Safety Measures By T.S. Shivashankar, PHD (USA) (Maths and Physics) Educated In USA, Brazil, Canada, England, France, Germany, Holland, Greece & Russia, (Many Times Over) Also Educated In Kendriya Vidyalaya I.I.T Kanpur (Twice) (1981, 12th Standard Pass out) T.S. Shivashankar Living In Mahalaxmi Layout Contact: 9743095715

PERSONAL

Change of Name

I, ANNADANI, residing at D3, 902 SNN Raj Serenity, Begur Koppa Road, Yellenhalli, Bengaluru 560068 have changed my name to ANNADANI MALLIGAVAD vide affidavit dated 20.09.2022 before Notary D. Guna Shekar, Bangalore. Henceforth I shall be called ANNADANI MALLIGAVAD only.

I, LATHA Kumari Subraya Kamath W/o M Subraya Kamath R/o Villa No- 17, Edifice Villa Valley, 10th B main, Ananthapura Yelahanka, B'luru- 560064 have changed my name to Latha S Kamath for all purposes vide affidavit dt. 26.08.2022 sworn before notary G. Dayananda

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
GM-Advertisement

I, BATAVIA RAJENDRA KUMAR VANECHAND BATAVIA resident at Arihant No.4/2, Crescent Road, High Grounds, Bengaluru-560001 have changed my name to RAJENDRA VANECHAND BATAVIA vide affidavit dated 19/09/2022 sworn before notary N.Peruvazhuthi, Bangalore

I, ASHOK Kumar aged 62 years residing at No. 15, 3G Home Crimson, Kadugodi Main Road, Opp FCI, Kadugodi Plantation, Bengaluru -560067. have changed my name to Ashok Kumar Gudadur vide affidavit dated 19.09.2022 before notary S.I Balaguru, Bangalore

I, PALLAVI NARAYAN Resding at Anaveri Post, Bhadravathi Taluk, Shimoga District, Karntaka- 577243, have changed my name to PALLAVI, vide affidavit dated 16/09/2022, before notary V. Rangaraju, Bangalore.

RANJANA KUMARI, Wife/o, 14847782K, HAV/MT, RAM LOBHIT YADAV, Vill- Chatra, Madhubani, Bihar changed name RANJANA KUMARI to RANJANA DEVI, 17/09/2022, Notary K.V. Mani, Bangalore

NEELAM, WIFE/O JC674890X, NB SUB, DHARMENDRA KUMAR, Vill- Alinagar, Lakhisarai, Bihar changed name NEELAM to NILAM DEVI, 20/09/2022, Notary K.V. Mani, Bangalore

I, P. SAROJINI DEVI is legally wedded spouse of Service No.JC65023P, Rank: Sub Maj (Hony Lt) Name: KADABA KESHAVA MURTHY GOPINATH, do hereby declare that both names P. SAROJINI DEVI and SAROJINI GOPINATH are the same and belongs to me only, hereafter I shall be known/ called as SAROJINI GOPINATH only, vide affidavit dated 15-09-2022, sworn before Advocate/ Notary RATNA .N, Bangalore.

14857911M HAV/CLK BASAVARAJ KAMBAR K ASC CENTRE & COLLEGE FATHER NAME RECORDS KAMAL instead of KAMAL BASAPPA KAMBAR NOTARY KV MANI

I, RAJENDER SINGH F/o 14850137A–Hav/Clk (SD)- PRAMOD SINGH. R/a Khudia Ka Bass, Badangarh, Chirawa, Jhunjhunu, Rajasthan changed name from RAJENDER SINGH to RAJENDRA SINGH notary K.V.Mani, Bangalore.

I, VADIVUKARASI residing at #187, Seppings Road cross, Nehrupuram, Shivajinagar, Bangalore North 560001 have changed my name to ESTHER ARASI vide affidavit dated 20.09.2022 before Notary Chandrakala, Bangalore.

SRIDEVI SPOUSE of 6497174A HAV/ASH MUDUGULLA SUBBA REDDY R/a No 6-40 BAYANAPALLI NARAVA PRAKASAM AP have changed my name SRIDEVI TO MUDUGULLA SRIDEVI NOTARY S RAMESH

I, BHAGYA LAXMI W/o 14817511X–Hav/MT– K. SANTOSH KUMAR. R/a Baruva, Sompeta, Srikakulam, AP changed name from BHAGYA LAXMI to K. BHAGYA LAXMI notary K.V.Mani, Bangalore.

I, SWATHI.K R/at No.70, 7th Cross, Maruthi Layout, Basaveshwaranagar, Bangalore- 560079, have changed my name to SWATHI HOLLA.A vide affidavit dated :17/9/2022 Before Notary Onkarappa N.R Bangalore.

6497174A HAV/ASH MUDUGULLA SUBBA REDDY 2ATC DAUGHTER NAME RECORDS MUDUGULLA SUBBA REDDY instead of MUDUGULLA PAVITHRA NOTARY S RAMESH

SUSHMA, WIFE/O JC671265L, SUB/CLK (SD), MADHU KUMAR, Vill- Ichilam Pady, Puttur Dakshina Kannada, Karnataka changed name SUSHMA to SUSHMA K, 20/09/2022, Notary K.V. Mani, Bangalore

6497174A HAV/ASH MUDUGULLA SUBBA REDDY 2ATC DAUGHTER NAME RECORDS MUDUGULLA THANAMMA LAHARI instead of MUDUGULLA THANMAI LAHARI NOTARY S RAMESH

14857911M HAV/CLK BASAVARAJ KAMBAR K ASC CENTRE & COLLEGE MOTHER NAME RECORDS KALAWATI instead of KALAVATI KAMAL KAMBAR NOTARY KV MANI

Lost

LOST
I, N. Vijayalakshmi have lost my Original Site Documents 150200201300220624 / 2196 / 871 while shifting the house. Finders please contact: 98940 88715

EDUCATION CORNER

2nd PU Failed?
Don't be left behind!
A golden opportunity to study degree under Bangalore University this academic year and save one precious year of your life.
BBA B.Com BCA BA
Limited seats. For admissions call:
2ನೇ ಪಿಯುಸಿ ಅನುತ್ತೀರ್ಣವಾದ ವಿದ್ಯಾರ್ಥಿಗಳಿಗೆ ಒಂದು ಸುವರ್ಣ ಅವಕಾಶ. ಸಂಪರ್ಕಿಸಿ:
7846000222

CONNECT

SAGAR STEEL PVT. LTD.
Manufacturers & Galvanizers of:
1) Transmission Line & Communication Towers
2) Switchyard Steel Structure
3) G.I Flat & Earthing Materials
4) Line Hardware Materials
5) Sky walk/Foot over Bridge
6) Iron & Steel Products
7) Railway Electrical Steel Structure
8) Factory Shed & PEB Structure
9) Modification & Shifting of Power Transmission line
Turn key Project Executor of Transmission Line & Switch yard up to 220KV.
Approved KPTCL Vendor having Super Grade License
for Enquiry Contact :
M: 9845039680 / sagarsteelblr@yahoo.co.in

DH ಪ್ರಜಾವಾಣಿ
BOOK YOUR CLASSIFIEDS ADVERTISEMENT
DECCAN HERALD & PRAJAVANI CLASSIFIEDS PACKAGE RATES

Per word	Ordinary	Bold	Ordinary Semi Display	Bold Semi Display
	80	125	95	150

CD Per Sqcm	Single Col	Double Col	Multi Col
	535	500	515

SPECIAL OFFER

PAY	2	And	GET	1	Free
PAY	3	And	GET	2	Free
PAY	5	And	GET	5	Free

For More Details Contact:
Ph:080- 45557160 | 163 | 164 |
9731810277 | 9901641752 | 9845114560 | 9886213331
condition apply*
dhclassifieds@deccanherald.co.in www.dhclassifieds.com

ರಸ್ತೆ ಮೇಲೆ ವಾಹನ ನಿಲ್ಲಿಸುವ ಪೋಷಕರು ● ಪೊಲೀಸರ ಸೂಚನೆಗೂ ಕಿಮ್ಮತ್ತು ನೀಡದ ಆಡಳಿತ ಮಂಡಳಿ ● ಸಾರ್ವಜನಿಕರಿಗೆ ಗೋಳು

ಶಾಲಾ ವಲಯ: ದಟ್ಟಣೆ ತಾಪತ್ರಯ

ಪ್ರಜಾವಾಣಿ ವಾರ್ತೆ

ರೆಸಿಡೆನ್ಸಿ ರಸ್ತೆಯ ಬಿಷಪ್ ಕಾಟನ್ ಶಾಲೆ ಎದುರು ವಿಪರೀತ ದಟ್ಟಣೆಯಲ್ಲೇ ರಸ್ತೆ ದಾಟುವ ಮಕ್ಕಳು – ಪ್ರಜಾವಾಣಿ ಚಿತ್ರಗಳು / ರಂಜು ಪಿ.

ರೆಸಿಡೆನ್ಸಿ ರಸ್ತೆಯ ಬಿಷಪ್ ಕಾಟನ್ ಶಾಲೆ ಎದುರು ರಸ್ತೆಗಳಲ್ಲಿ ಸಾಲುಗಟ್ಟಿ ನಿಲ್ಲಿಸಿದ ಪೋಷಕರು ಹಾಗೂ ಖಾಸಗಿ ವಾಹನಗಳು

ಬೆಂಗಳೂರು: ನಗರದ ಪ್ರಮುಖ ಶಾಲೆ-ಕಾಲೇಜು ವಲಯಗಳು ದಿನದಿಂದ ದಿನಕ್ಕೆ ಸಂಚಾರ ದಟ್ಟಣೆ ಪ್ರದೇಶವಾಗಿ ಮಾರ್ಪಡುತ್ತಿದ್ದು, ಸಾರ್ವಜನಿಕರು ನಿತ್ಯವೂ ಗೋಳು ಅನುಭವಿಸುವಂತಾಗಿದೆ. ಶಾಲೆ ಆರಂಭ ಹಾಗೂ ಬಿಡುವ ಸಮಯದಲ್ಲಿ ಪ್ರಮುಖ ರಸ್ತೆಗಳಲ್ಲಿ ವಾಹನಗಳು ಸಾಲುಗಟ್ಟಿ ನಿಲ್ಲುತ್ತಿದ್ದು, ದಟ್ಟಣೆ ನಿಯಂತ್ರಿಸಲು ಪೊಲೀಸರೂ ಹರಸಾಹಸಪಡುವ ಸ್ಥಿತಿ ನಿರ್ಮಾಣವಾಗಿದೆ.

ನಗರದಲ್ಲಿ ದಟ್ಟಣೆ ಸಮಸ್ಯೆ ವಿಪರೀತವಾಗಿದ್ದು, ಶಾಲಾ-ಕಾಲೇಜು ಆಡಳಿತ ಮಂಡಳಿಗಳ ವರ್ತನೆ ಮತ್ತಷ್ಟು ಬಿಗಡಾಯಿಸಲು ಕಾರಣವಾಗುತ್ತಿದೆ. ಪ್ರಮುಖ ಸ್ಥಳಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಶಾಲಾ-ಕಾಲೇಜುಗಳು, ದಟ್ಟಣೆ ನಿಯಂತ್ರಿಸಲು ಯಾವುದೇ ಕ್ರಮ ಕೈಗೊಳ್ಳದಿರುವುದು ಸಾರ್ವಜನಿಕರ ಕೆಂಗಣ್ಣಿಗೆ ಗುರಿಯಾಗಿದೆ.

ರೆಸಿಡೆನ್ಸಿ ರಸ್ತೆ, ಬಸವೇಶ್ವರ ವೃತ್ತ (ಚಾಲುಕ್ಯ ವೃತ್ತ), ಮೈಸೂರು ಬ್ಯಾಂಕ್ ವೃತ್ತ, ವಿಠಲ್ ಮಲ್ಯ ರಸ್ತೆ, ಬಸವನಗುಡಿ ಹಾಗೂ ಇತರ ಪ್ರದೇಶಗಳಲ್ಲಿ ನಿತ್ಯವೂ ಬೆಳಿಗ್ಗೆ ಹಾಗೂ ಸಂಜೆ ವಿಪರೀತ ದಟ್ಟಣೆ ಉಂಟಾಗುತ್ತಿದೆ. ಈ ಪ್ರದೇಶಗಳಲ್ಲಿರುವ ಶಾಲಾ-ಕಾಲೇಜುಗಳೇ ಸಂಚಾರ ದಟ್ಟಣೆಗೆ ನೇರ ಕಾರಣವೆಂದು ಸಾರ್ವಜನಿಕರು ಆರೋಪಿಸುತ್ತಿದ್ದಾರೆ.

ಹೃದಯಭಾಗದ ರಸ್ತೆಯೇ ಬಂದ್: ಶಾಂತಿನಗರ ಜೋಡು ರಸ್ತೆಯ ಮಿಷನ್ ರಸ್ತೆ ಹಾಗೂ ರಿಚ್ಮಂಡ್ ವೃತ್ತಕ್ಕೆ ಹೊಂದಿಕೊಂಡಿರುವ ರೆಸಿಡೆನ್ಸಿ ರಸ್ತೆ, ನಗರದ ಹೃದಯ ಭಾಗದ ರಸ್ತೆ ಎನಿಸಿಕೊಂಡಿದೆ. ಪ್ರಮುಖ ಪ್ರದೇಶಗಳಿಗೆ ಸಂಪರ್ಕ ಕಲ್ಪಿಸುವ ಈ ರಸ್ತೆಯಲ್ಲಿ ದಿನಪೂರ್ತಿ ಲಕ್ಷಾಂತರ ವಾಹನಗಳು ಓಡಾಡುತ್ತವೆ. ಒಂದು ನಿಮಿಷ ವಾಹನ ತಡೆದರೂ ಇಡೀ ರಸ್ತೆ ದಟ್ಟಣೆಗೆ ತುತ್ತಾಗುತ್ತದೆ.

ಜನಾರ್ದನ್ ಟವರ್ ಬಹುಮಹಡಿ ಕಟ್ಟಡ, ದಿ ಚಾನ್ಸರಿ ಪೆವಿಲಿಯನ್, ದಿ ರಿಟ್ಜ್ ಕಾರ್ಲ್‌ಟನ್ ಹೋಟೆಲ್, ಪ್ರೆಸ್ಟೀಜ್ ಡಾಟ್ ಕಾಮ್ ಬಹುಮಹಡಿ ಕಟ್ಟಡ ಸೇರಿ ಹಲವು ಕಟ್ಟಡಗಳು ಈ ರಸ್ತೆಯಲ್ಲಿವೆ. ಇಂಥ ರೆಸಿಡೆನ್ಸಿ ರಸ್ತೆಯಲ್ಲಿ ಬಿಷಪ್ ಕಾಟನ್ ಬಾಲಕರ ಹಾಗೂ ಬಾಲಕಿಯರ ಪ್ರತ್ಯೇಕ ಶಾಲೆಗಳಿವೆ. ಈ ಶಾಲೆಗಳು ಆರಂಭವಾಗುವ ಸಮಯ ಹಾಗೂ ಬಿಡುವ ಸಮಯದಲ್ಲಿ ರೆಸಿಡೆನ್ಸಿ ರಸ್ತೆಯಲ್ಲಿ ದಟ್ಟಣೆ ಸಾಮಾನ್ಯವಾಗಿ ಬಿಟ್ಟಿದೆ. ಸಂಚಾರ ಪೊಲೀಸರು ನೀಡುವ ಸೂಚನೆಗಳನ್ನು ಆಡಳಿತ ಮಂಡಳಿ ಪಾಲಿಸುತ್ತಿಲ್ಲ. ಹೀಗಾಗಿ, 'ಇದರಿಂದ ದಟ್ಟಣೆ ಸಮಸ್ಯೆ ದಿನದಿಂದ ದಿನಕ್ಕೆ ಹೆಚ್ಚುತ್ತಿರುವ ಆರೋಪವಿದೆ.

'ಎರಡೂ ಶಾಲೆಗಳ ಬಳಿ ನಿತ್ಯವೂ ಬೆಳಿಗ್ಗೆ 7.30ರಿಂದ 8 ಗಂಟೆ ಹಾಗೂ ಮಧ್ಯಾಹ್ನ 2.30ರಿಂದ 4 ಗಂಟೆವರೆಗೆ ದಟ್ಟಣೆ ಇರುತ್ತದೆ. ಈ ಅವಧಿಯಲ್ಲಿ ಸಾರ್ವಜನಿಕರ ವಾಹನ ಸಂಚಾರ ತುಂಬಾ ಕಷ್ಟ. ಹಾರ್ನ್‌ಗಳ ಸದ್ದು, ಹೊಗೆ ಸಹ ವಿಪರೀತವಾಗಿ ಸ್ಥಳೀಯರೂ ಕಿರಿಕಿರಿ ಆಗುತ್ತಿದೆ' ಎಂದು ವಾಹನ ಬಿಡಿಭಾಗ ಮಾರಾಟ ಮಳಿಗೆ ವ್ಯಾಪಾರಿ ರಾಹುಲ್ ಹೇಳಿದರು.

'ಮಕ್ಕಳನ್ನು ಶಾಲೆಗೆ ಬಿಡಲು ಹಾಗೂ ಮನೆಗೆ ಕರೆದೊಯ್ಯಲು ಬಹುತೇಕ ಪೋಷಕರು ಸ್ವಂತ ವಾಹನಗಳಲ್ಲಿ ಬರುತ್ತಿದ್ದಾರೆ. ರಸ್ತೆಯಲ್ಲೇ ಪೋಷಕರ ಕಾರು ಹಾಗೂ ದ್ವಿಚಕ್ರ ವಾಹನಗಳೇ ಹೆಚ್ಚಾಗಿರುತ್ತವೆ. ಅದರ ಜೊತೆಯಲ್ಲೇ, ಶಾಲೆಯ ಖಾಸಗಿ ವಾಹನಗಳೂ ಇರುತ್ತವೆ. ಈ ಸಂದರ್ಭದಲ್ಲಿ ಸಾರ್ವಜನಿಕರ ವಾಹನಗಳ ಸಂಚಾರವೇ ಬಂದ್ ಆಗುತ್ತದೆ. ಶಾಲಾ ಮಕ್ಕಳು ಹೋಗುವವರೆಗೂ ವಾಹನಗಳು ಸಾಲುಗಟ್ಟಿ ನಿಂತಲೇ ನಿಲ್ಲುತ್ತವೆ' ಎಂದು ತಿಳಿಸಿದರು.

ಆಂಬುಲೆನ್ಸ್ ಸಂಚಾರಕ್ಕೆ ಪರದಾಟ: ರೆಸಿಡೆನ್ಸಿ ರಸ್ತೆಯಲ್ಲಿ ಆಂಬುಲೆನ್ಸ್ ಸಂಚಾರಕ್ಕೂ ಚಾಲಕರು ಪರದಾಡುವ ಸ್ಥಿತಿ ಇದೆ. ಸಾಲುಗಟ್ಟಿ ನಿಂತ ವಾಹನಗಳ ನಡುವೆ ಆಂಬುಲೆನ್ಸ್ ದಾಟಿಸುವುದು ಪೊಲೀಸರಿಗೆ ತಲೆನೋವಾಗಿದೆ.

ಸುಗಮ ಸಂಚಾರ ವ್ಯವಸ್ಥೆ ಮಾಡಲೆಂದು ನಿತ್ಯವೂ ಐವರು ಸಂಚಾರ ಪೊಲೀಸರನ್ನು ಸ್ಥಳದಲ್ಲಿ ನಿಯೋಜಿಸಲಾಗುತ್ತದೆ. ನಿತ್ಯದ ದಟ್ಟಣೆ ನಿಯಂತ್ರಿಸಲಾಗದೇ ಇವರೆಲ್ಲ ಬಸವಳಿದಿದ್ದಾರೆ. ಯಾವುದಾದರೂ ಆಂಬುಲೆನ್ಸ್ ಬಂದರೂ ಅದಕ್ಕೆ ದಾರಿ ಮಾಡಿಕೊಡಲು ಪ್ರಯತ್ನಿಸಿ ವಿಫಲರಾಗುತ್ತಿದ್ದಾರೆ.

'ಶಾಂತಿನಗರದಿಂದ ರೋಗಿ ಕರೆದೊಯ್ಯುವಾಗ ರೆಸಿಡೆನ್ಸಿ ರಸ್ತೆಯಲ್ಲಿ ಆಂಬುಲೆನ್ಸ್ ಸಿಲುಕಿತ್ತು. ಎಷ್ಟೇ ಸೈರನ್ ಹಾಕಿದರೂ ದಾರಿ ಬಿಡಲಿಲ್ಲ. ಅನಿವಾರ್ಯವಾಗಿ 30 ನಿಮಿಷ ಕಾಯಬೇಕಾಯಿತು. ರೋಗಿ ಆರೋಗ್ಯ ಸ್ಥಿತಿ ಸ್ವಲ್ಪ ಉತ್ತಮವಾಗಿತ್ತು. ಹೀಗಾಗಿ, ಪ್ರಾಣಕ್ಕೆ ಹಾನಿ ಆಗಲಿಲ್ಲ. ತುರ್ತು ಸ್ಥಿತಿ ಇದ್ದರೆ ಗತಿಯೇನು' ಎಂದು ಚಾಲಕ ರಾಮಚಂದ್ರ ಪ್ರಶ್ನಿಸಿದರು.

ಮಕ್ಕಳ ಸುರಕ್ಷತೆಗೂ ಒತ್ತು: ಶಾಲೆ ಆರಂಭ ಹಾಗೂ ಬಿಡುವ ಸಂದರ್ಭದಲ್ಲಿ ಪ್ರವೇಶ ದ್ವಾರದ ಬಳಿಯೇ ಸಂಚಾರ ಪೊಲೀಸರು ಕರ್ತವ್ಯ ನಿರ್ವಹಿಸುತ್ತಿದ್ದಾರೆ. ಮೊದಲ ಸಿಗ್ನಲ್‌ನಲ್ಲಿ ಕಾದು ಬರುವ ವಾಹನಗಳನ್ನು ಶಾಲೆ ಎದುರೇ ತಡೆದು ನಿಲ್ಲಿಸುವ ಪೊಲೀಸರು, ಮಕ್ಕಳ ಸಂಚಾರಕ್ಕೆ ಅನುಕೂಲ ಮಾಡಿಕೊಡುತ್ತಿದ್ದಾರೆ. ಇದರಿಂದಾಗಿಯೂ ದಟ್ಟಣೆ ಹೆಚ್ಚುತ್ತಿದೆ.

'ಹಲವು ವರ್ಷಗಳಿಂದ ರೆಸಿಡೆನ್ಸಿ ರಸ್ತೆಯಲ್ಲಿ ದಟ್ಟಣೆ ಸಮಸ್ಯೆ ಇದೆ. ಇದಕ್ಕೆ ಶಾಶ್ವತ ಪರಿಹಾರವೇ ಇಲ್ಲದಂತಾಗಿದೆ. ಮಕ್ಕಳ ಸುರಕ್ಷತೆ ದೃಷ್ಟಿಯಿಂದ ಪ್ರವೇಶ ದ್ವಾರದ ಬಳಿ ವಾಹನಗಳನ್ನು ತಡೆದು, ಮಕ್ಕಳ ಓಡಾಟಕ್ಕೆ ವ್ಯವಸ್ಥೆ ಮಾಡಿಕೊಡಲಾಗುತ್ತಿದೆ' ಎಂದು ಕರ್ತವ್ಯನಿರತ ಪೊಲೀಸರೊಬ್ಬರು ಹೇಳಿದರು.

ಶಾಲೆ ವಾಹನಗಳಿಗೆ ಪ್ರವೇಶ: ಮಕ್ಕಳ ಓಡಾಟಕ್ಕೆಂದು ಒಪ್ಪಂದದ ಮೇರೆಗೆ ಬಿಎಂಟಿಸಿ ಬಸ್‌ಗಳನ್ನು ಶಾಲೆಯವರು ಪಡೆದುಕೊಂಡಿದ್ದಾರೆ. ಜೊತೆಯಲ್ಲೇ ಕೆಲ ಮಿನಿ ಬಸ್‌ಗಳನ್ನು ಇಟ್ಟುಕೊಂಡಿದ್ದಾರೆ. ಈ ವಾಹನಗಳಿಗೆ ಆಡಳಿತ ಮಂಡಳಿ, ಶಾಲೆ ಕ್ಯಾಂಪಸ್‌ಗೆ ಪ್ರವೇಶ ನೀಡಿದೆ. ಅತಿ ಹೆಚ್ಚು ಸಂಖ್ಯೆಯಲ್ಲಿರುವ ಪೋಷಕರ ವಾಹನಕ್ಕೆ ಮಾತ್ರ ಪ್ರವೇಶ ನಿರಾಕರಿಸುತ್ತಿದೆ.

'ವಿಡಿಯೊ' ನೋಡಲು ಕೋಡ್ ಸ್ಕ್ಯಾನ್ ಮಾಡಿ.... ಪ್ರಜಾವಾಣಿ ನೋಡಿಯ

ರೆಸಿಡೆನ್ಸಿ ರಸ್ತೆಯ ಬಿಷಪ್ ಕಾಟನ್ ಶಾಲೆ ಎದುರು ಬಾಲಕಿಯನ್ನು ಕೈ ಹಿಡಿದು ರಸ್ತೆ ದಾಟಿಸಿದ ಪೋಷಕ – ಪ್ರಜಾವಾಣಿ / ರಂಜು ಪಿ.

'ಮನವಿಗೆ ಸ್ಪಂದಿಸದಿದ್ದಕ್ಕೆ ನೋಟಿಸ್ ಜಾರಿ'



'ನಗರದ ಪ್ರಮುಖ ಶಾಲಾ ವಲಯಗಳ ರಸ್ತೆಗಳಲ್ಲಿ ಬೆಳಿಗ್ಗೆ ಹಾಗೂ ಸಂಜೆ ಸಂಚಾರ ದಟ್ಟಣೆ ಹೆಚ್ಚಾಗುತ್ತಿದೆ. ಇದರ ನಿಯಂತ್ರಣಕ್ಕೆ ಕ್ರಮ ಕೈಗೊಳ್ಳುವಂತೆ ಶಾಲೆ ಆಡಳಿತ ಮಂಡಳಿ ಹಾಗೂ ಪೋಷಕರಿಗೆ ಮನವಿ ಮಾಡಲಾಗಿದೆ. ಇದಕ್ಕೆ ಸ್ಪಂದಿಸದಿದ್ದರಿಂದ ನೋಟಿಸ್ ಸಹ ನೀಡಲಾಗಿದೆ' ಎಂದು ಸಂಚಾರ ವಿಭಾಗದ ಜಂಟಿ ಕಮಿಷನರ್ ಬಿ.ಆರ್. ರವಿಕಾಂತೇಗೌಡ ಹೇಳಿದರು.

'ಪ್ರಜಾವಾಣಿ' ಜೊತೆ ಮಾತನಾಡಿದ ಅವರು, 'ಕೇಂದ್ರ ವಾಣಿಜ್ಯ ಪ್ರದೇಶ (ಸಿಬಿಡಿ), ಇಂದಿರಾನಗರ, ರಾಜಾಜಿನಗರ, ಮಲ್ಲೇಶ್ವರ ಹಾಗೂ ಇತರೆ ಅಭಿವೃದ್ಧಿ ಬಡಾವಣೆಗಳ ಶಾಲಾ ವಲಯಗಳಲ್ಲಿ ದಟ್ಟಣೆ ಸಮಸ್ಯೆ ಹೆಚ್ಚಿದೆ. ಈ ಬಗ್ಗೆ ಶಾಲಾ ಆಡಳಿತ ಮಂಡಳಿ ಜೊತೆ ಹಲವು ಬಾರಿ ಮಾತುಕತೆ ನಡೆಸಲಾಗಿದೆ' ಎಂದರು.

'ಶಾಲೆ ತೆರೆಯುವ ಹಾಗೂ ಬಿಡುವ ಸಮಯದಲ್ಲಿ ಪೋಷಕರು, ರಸ್ತೆ ಮೇಲೆಯೇ ವಾಹನ ನಿಲ್ಲಿಸುತ್ತಿದ್ದಾರೆ. ಜೊತೆಗೆ, ಪೋಷಕರ ವಾಹನಗಳಿಗೆ ಶಾಲೆಯವರು ಮೈದಾನದಲ್ಲಿ ಪ್ರವೇಶ ನೀಡುತ್ತಿಲ್ಲ. ಇದುವೇ ದಟ್ಟಣೆಗೆ ಕಾರಣವಾಗುತ್ತಿದೆ' ಎಂದು ಹೇಳಿದರು.

'ಪಾರ್ಕಿಂಗ್ ಜಾಗದಲ್ಲಿ ವಾಹನ ನಿಲ್ಲಿಸಿ, ಮಕ್ಕಳನ್ನು ಶಾಲೆಯವರೆಗೆ ಪಾದಚಾರಿ ಮಾರ್ಗದಲ್ಲಿ ಕರೆದೊಯ್ಯುವಂತೆ ಹೇಳಲಾಗಿದೆ. ಈ ಬಗ್ಗೆ ಜಾಗೃತಿ ಮೂಡಿಸಲಾಗಿದೆ. ಯಾರೊಬ್ಬರೂ ನಿಯಮ ಪಾಲಿಸುತ್ತಿಲ್ಲ. ಪೋಷಕರ ವಾಹನಗಳಿಗೆ ದಂಡ ಸಹ ವಿಧಿಸಲಾಗುತ್ತಿದೆ' ಎಂದರು.

'ಪ್ರವೇಶ ನಿರಾಕರಿಸುವ ಆಡಳಿತ ಮಂಡಳಿ'

'ಬಿಷಪ್ ಕಾಟನ್ ಶಾಲೆಗಳಿಗೆ ದೊಡ್ಡ ಮೈದಾನವಿದೆ. ಆದರೆ, ಪೋಷಕರ ವಾಹನಗಳನ್ನು ಒಳಗೆ ಬಿಟ್ಟುಕೊಳ್ಳಲು ಆಡಳಿತ ಮಂಡಳಿ ನಿರಾಕರಿಸುತ್ತಿದೆ. ಹೀಗಾಗಿ, ಪೋಷಕರು ರಸ್ತೆ ಮೇಲೆಯೇ ಎಲ್ಲೆಂದರಲ್ಲಿ ವಾಹನಗಳನ್ನು ನಿಲ್ಲಿಸಿ ಸಾರ್ವಜನಿಕರಿಗೆ ತೊಂದರೆಯನ್ನುಂಟು ಮಾಡುತ್ತಿದ್ದಾರೆ' ಎಂದು ಶಾಂತಿನಗರದ ಕಂಪನಿಯೊಂದರ ಉದ್ಯೋಗಿ ಆರ್. ಪ್ರವೀಣ್ ಹೇಳಿದರು.

ಈ ಕುರಿತು ಮಾತನಾಡಿದ ಪೋಷಕರೊಬ್ಬರು, 'ನಾವೂ ಮೈದಾನದೊಳಗೆ ವಾಹನ ಬಿಡಲು ಕೇಳುತ್ತಿದ್ದೇವೆ. ಆದರೆ, ತಿಂಗಳಿಗೆ ₹ 3 ಸಾವಿರ ಕೊಡಿ ಎಂದು ಆಡಳಿತ ಮಂಡಳಿಯವರು ಕೇಳುತ್ತಿದ್ದಾರೆ. ಮೊದಲೇ ಲಕ್ಷಾಂತರ ರೂಪಾಯಿ ಶುಲ್ಕ ನೀಡಿದ್ದೇವೆ. ಪುನಃ ಹಣ ಎಲ್ಲಿಂದ ಕೊಡುವುದು? ಹೀಗಾಗಿ, ಬೆಳಿಗ್ಗೆ ಹಾಗೂ ಸಂಜೆ ರಸ್ತೆಯಲ್ಲೇ ವಾಹನ ನಿಲ್ಲಿಸಿ ಮಕ್ಕಳಿಗಾಗಿ ಕಾಯುತ್ತೇವೆ' ಎಂದರು.

ಚಿನ್ನಾಭರಣ ಕಳವು ಪ್ರಕರಣ: ಮೂವರು ಆರೋಪಿಗಳ ಬಂಧನ

ಹೆಬ್ಬಾಳ ಪೊಲೀಸರು ಆರೋಪಿಯಿಂದ ಜಪ್ತಿ ಮಾಡಿದ ಚಿನ್ನಾಭರಣ

ಬೆಂಗಳೂರು: ಹೆಬ್ಬಾಳ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ನಡೆದಿದ್ದ ಕಳವು ಪ್ರಕರಣದ ಆರೋಪಿಯನ್ನು ಬಂಧಿಸುವಲ್ಲಿ ಪೊಲೀಸರು ಯಶಸ್ವಿ ಆಗಿದ್ದಾರೆ.

ಆರ್‌ಟಿ ನಗರದ ಇಮ್ರಾನ್ ಉಲ್ಲಾ ಖಾನ್ (40) ಬಂಧಿತ ಆರೋಪಿ.

'ಬಂಧಿತನಿಂದ 309 ಗ್ರಾಂ ಚಿನ್ನಾಭರಣ, 150 ಗ್ರಾಂ ಬೆಳ್ಳಿಯ ಆಭರಣ ಹಾಗೂ ಒಂದು ದ್ವಿಚಕ್ರ ವಾಹನ ವಶಕ್ಕೆ ಪಡೆಯಲಾಗಿದೆ' ಎಂದು ಪೊಲೀಸ್ ಮೂಲಗಳು ತಿಳಿಸಿವೆ.

'ಜುಲೈ 26ರಂದು ಹೆಬ್ಬಾಳದ ಮನೆಯೊಂದರ ಬಾಗಿಲು ಒಡೆದು ಬೀರುವಿನಲ್ಲಿದ್ದ ಚಿನ್ನಾಭರಣ ಕಳವು ಮಾಡಿದ್ದ. ಆರೋಪಿಯು ವಿಮಾ ಏಜೆಂಟ್ ಆಗಿ ಕೆಲಸ ಮಾಡುತ್ತಿದ್ದ. ಪಾಲಿಸಿ ಮಾಡಿಸಲು ಬಡಾವಣೆಗಳಲ್ಲಿ ಸುತ್ತಾಟ ನಡೆಸುವಾಗ ಬೀಗ ಹಾಕಿದ ಮನೆಗಳನ್ನೇ ಗುರಿಯಾಗಿಸಿ, ಚಿನ್ನಾಭರಣ ಕಳವು ಮಾಡುತ್ತಿದ್ದ' ಎಂದು ಮೂಲಗಳು ಹೇಳಿವೆ.

ಮತ್ತೊಂದು ಪ್ರಕರಣದಲ್ಲಿ ಮನೆ ಕಳವನ್ನೇ ಕಸುಬು ಮಾಡಿಕೊಂಡಿದ್ದ ಪೀಣ್ಯದ ನಿವಾಸಿಗಳಾದ ಕಾಂತರಾಜ್ ಅಲಿಯಾಸ್ ಮೋರಿ ಹಾಗೂ ಆತನ ಸಹಚರ ಸುರೇಶ್ ಎಂಬಾತರನ್ನು ಅಶೋಕ್ ನಗರ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಬಂಧಿತರಿಂದ ₹12.5 ಲಕ್ಷ ಮೌಲ್ಯದ 26 ಗ್ರಾಂ ಚಿನ್ನದ ಒಡವೆಗಳನ್ನು ಪೊಲೀಸರು ಜಪ್ತಿ ಮಾಡಿದ್ದಾರೆ. ಆರೋಪಿಗಳ ಬಂಧನದಿಂದ ಅಶೋಕ ನಗರ ಪೊಲೀಸ್ ಠಾಣೆ, ಆರ್‌ಎಂಸಿ ಯಾರ್ಡ್ ಹಾಗೂ ನೆಲಮಂಗಲ ಗ್ರಾಮಾಂತರ ಪೊಲೀಸ್ ಠಾಣೆಯ ಒಂದು ಪ್ರಕರಣ ಸೇರಿ ಒಟ್ಟು ಮೂರು ಪ್ರಕರಣಗಳು ಪತ್ತೆಯಾಗಿವೆ.

'ಬೀಗ ಹಾಕಿರುವ ಮನೆಗಳಲ್ಲಿ ಕನ್ನ ಹಾಕುತ್ತಿದ್ದರು. ಕದ್ದ ಚಿನ್ನಾಭರಣ ಮಾರಾಟ ಹಾಗೂ ಗಿರವಿ ಇಟ್ಟು ಅದರಿಂದ ಬಂದ ಹಣದಲ್ಲಿ ಮೋಜಿನ ಜೀವನ ನಡೆಸುತ್ತಿದ್ದರು. ಇಬ್ಬರೂ ಆರೋಪಿಗಳು ಈ ಹಿಂದೆಯೂ ಇಂತಹ ಕೃತ್ಯದಲ್ಲಿ ಭಾಗಿಯಾಗಿ ಬಂಧನಕ್ಕೆ ಒಳಗಾಗಿದ್ದರು. ಮತ್ತೆ ಅದೇ ರೀತಿಯಲ್ಲಿ ಕಳವು ನಡೆಸುತ್ತಿದ್ದರು' ಎಂದು ಪೊಲೀಸರು ತಿಳಿಸಿದರು.

ಕಾರಿಗೆ ಬೈಕ್ ವಿಮೆ ಮಾಡಿಸಿ ವಂಚನೆ

ಏಜೆಂಟ್ ಇರ್ಫಾನ್ ಶೇಖ್ ಬಂಧನ, ವಿಮೆ ಬದಲಾವಣೆ ಜಾಲ ಪತ್ತೆ

ಪ್ರಜಾವಾಣಿ ವಾರ್ತೆ

ಇರ್ಫಾನ್ ಶೇಖ್

ಅಪರಾಧ ಸುದ್ದಿ

ಬೆಂಗಳೂರು: ವಾಣಿಜ್ಯ ಬಳಕೆಯ ಕಾರುಗಳಿಗೆ ಬೈಕ್ ವಿಮೆ ಮಾಡಿಸಿ ಗ್ರಾಹಕರು ಹಾಗೂ ವಿಮಾ ಕಂಪನಿಗೆ ವಂಚಿಸುತ್ತಿದ್ದ ಧಾರವಾಡದ ಆರೋಪಿ ಇರ್ಫಾನ್ ಶೇಖ್ ಎಂಬಾತನನ್ನು ಆಗ್ನೇಯ ವಿಭಾಗದ ಸಿಇಎನ್ ಪೊಲೀಸರು ಮಂಗಳವಾರ ಬಂಧಿಸಿದ್ದಾರೆ.

ವಾಹನಗಳ ಮಾಲೀಕರು ವಿಮೆ ಮೊತ್ತ ಪಾವತಿಸಿದ ತಕ್ಷಣ ಸಾರಿಗೆ ಇಲಾಖೆಯ ವೆಬ್‌ಸೈಟ್‌ನ ದಾಖಲೆಯಲ್ಲಿ ವಿಮೆಯ ಅವಧಿ ಮಾತ್ರ ನಮೂದಾಗುತ್ತದೆ. ಯಾವ ಮೊತ್ತದ ವಿಮೆ ಎಂಬುದು ಗೊತ್ತಾಗುವುದಿಲ್ಲ. ಇದನ್ನೇ ಬಂಡವಾಳ ಮಾಡಿಕೊಂಡಿದ್ದ ಆರೋಪಿ ಕಂಪನಿಗೆ ವಂಚಿಸುತ್ತಿದ್ದ.

ಅಪಘಾತ ಪ್ರಕರಣವೊಂದರಲ್ಲಿ ವಿಮೆ ಮಾಡಿಸಿದವರು ವಿಮೆಯ ಹಣ ಪಡೆಯಲು ಬಂದಾಗ ಪ್ರಕರಣ ಬೆಳಕಿಗೆ ಬಂದಿದೆ. 'ಅಕೋ ಜನರಲ್ ವಿಮಾ ಕಂಪನಿ' ನೀಡಿದ ದೂರು ಆಧರಿಸಿ ಪೊಲೀಸರು ತನಿಖೆ ಕೈಗೊಂಡಿದ್ದರು. ಈ ಕಂಪನಿಗೆ ದೊಡ್ಡ ಮೊತ್ತದ ಹಣ ವಂಚಿಸಿರುವುದು ಪತ್ತೆಯಾಗಿದೆ.

'ಆರೋಪಿ ವಿಮೆ ಏಜೆಂಟ್ ಆಗಿ ಕೆಲಸ ಮಾಡುತ್ತಿದ್ದ. ಇನ್ಶೂರೆನ್ಸ್ ಕಂಪನಿಯ ಅಪ್ಲಿಕೇಶನಲ್ಲಿ ತನ್ನ ಮೊಬೈಲ್, ಇ-ಮೇಲ್ ಐ.ಡಿ, ಆಧಾರ್ ನಂಬರ್ ನೀಡಿ ನೋಂದಣಿ ಮಾಡಿಕೊಂಡು ₹ 14 ಸಾವಿರ ಪಾವತಿ ಮಾಡಬೇಕಾದ ವಿಮೆಗೆ ವಾಹನದ ಮಾದರಿ ಬದಲಾವಣೆ ಮಾಡುತ್ತಿದ್ದ. ಬೇರೆ ಬೇರೆ ವ್ಯಕ್ತಿಗಳ ಹೆಸರು ಹಾಗೂ ವಾಹನಗಳ ಮಾದರಿ ವಿಭಾಗದಲ್ಲಿ ಟಿ.ವಿ.ಎಸ್, ಟಿ.ವಿ.ಎಸ್–50, ಸ್ಕೂಟಿ, ಎಕ್ಸ್‌ಎಲ್ ಸೂಪರ್ ಎಂದು ನಮೂದಿಸಿ ವಿಮೆ ನವೀಕರಣ ಮಾಡುತ್ತಿದ್ದ. ಕೇವಲ ₹ 500ರಿಂದ ₹ 700 ಪಾವತಿಸಿ ಪ್ರತಿ ವಾಹನಕ್ಕೆ ಕಮಿಷನ್ ಪಡೆಯುತ್ತಿದ್ದ. ಇದರಿಂದ ಬಂದ ಹಣದಲ್ಲಿ ವಿಲಾಸಿ ಜೀವನ ನಡೆಸುತ್ತಿದ್ದ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಇದೇ ಮಾದರಿಯಲ್ಲಿ ಆನ್‌ಲೈನ್ ವಿಮಾ ಅಪ್ಲಿಕೇಶನ್ ಮೂಲಕ ದೇಶದಾದ್ಯಂತ ಸುಮಾರು 2 ಲಕ್ಷಕ್ಕೂ ಹೆಚ್ಚಿನ ವಾಹನಗಳ ನಕಲಿ ವಿಮೆ ಮಾಡಿ ವಂಚಿಸಿರುವ ಮಾಹಿತಿಯಿದೆ. ಅಂತಹ ವಾಹನಗಳ ಮಾಹಿತಿ ಕಲೆ ಹಾಕಲಾಗುತ್ತಿದೆ' ಎಂದು ಮೂಲಗಳು ತಿಳಿಸಿವೆ.

ಕೋವಿಡ್ ಸಾಂಕ್ರಾಮಿಕ ಕಾಯಿಲೆ ನಿಯಂತ್ರಣಕ್ಕೆ ಹೇರಿದ್ದ ಲಾಕ್‌ಡೌನ್ ವೇಳೆ ಬಾಡಿಗೆಯ ವಿವಿಧ ಕಂಪನಿಯ ವಾಹನಗಳು ನಿಂತಲ್ಲೇ ನಿಂತಿದ್ದವು. ವಿಮೆ ಮುಕ್ತಾಯವಾಗಿದ್ದ ವಾಹನಗಳನ್ನು ಕೆಲವು ಕಂಪನಿಗಳು ಮಾರಾಟ ಮಾಡಿದ್ದವು. ಆರೋಪಿಯ ಸಂಪರ್ಕದಲ್ಲಿದ್ದ ಹಲವು ಚಾಲಕರು 200ಕ್ಕೂ ಅಧಿಕ ಕಾರು ಖರೀದಿಸಿದ್ದರು. ಈ ಕಾರುಗಳಿಗೆ ಇರ್ಫಾನ್ ಮೋಸದಿಂದ ವಿಮೆ ಮಾಡಿಸಿರುವುದು ತನಿಖೆಯಿಂದ ಗೊತ್తಾಗಿದೆ.

ಗ್ರಾಹಕನ ಸೋಗಿನಲ್ಲಿ ಚಿನ್ನದ ಸರ ಕಳವು: ಆರೋಪಿ ಬಂಧನ

ಬೆಂಗಳೂರು: ಗ್ರಾಹಕನ ಸೋಗಿನಲ್ಲಿ ಚಿನ್ನಾಭರಣ ಮಳಿಗೆಗೆ ಬಂದು ಚಿನ್ನದ ಸರ ಕಳವು ಮಾಡಿ ಪರಾರಿಯಾಗಿದ್ದ ಆರೋಪಿ ಹೆಗ್ಗನಹಳ್ಳಿ ಸಂಜೀವನಗರದ ನಿವಾಸಿ ರಮೇಶ್ (28) ಎಂಬಾತನನ್ನು ಕಾಮಾಕ್ಷಿಪಾಳ್ಯದ ಪೊಲೀಸರು ಬಂಧಿಸಿದ್ದಾರೆ.

ಆರೋಪಿಯಿಂದ ₹ 3 ಲಕ್ಷ ಮೌಲ್ಯದ ಚಿನ್ನಾಭರಣ ಜಪ್ತಿ ಮಾಡಲಾಗಿದೆ.

'ಮಾಗಡಿ ಮುಖ್ಯರಸ್ತೆಯ ಸುಂಕದಕಟ್ಟೆಯ ಕೃಷ್ಣ ಚಿನ್ನಾಭರಣ ಅಂಗಡಿಗೆ ಆಗಸ್ಟ್ 31ರಂದು ಚಿನ್ನದ ಸರ ಖರೀದಿಸುವ ಸೋಗಿನಲ್ಲಿ ಆರೋಪಿ ಬಂದಿದ್ದ. ಸಿಬ್ಬಂದಿಗೆ ಚಿನ್ನದ ಸರ ತೋರಿಸುವಂತೆ ಸೂಚಿಸಿದ್ದ. ಅದರಲ್ಲಿ ₹ 2.25 ಲಕ್ಷ ಮೌಲ್ಯದ 45 ಗ್ರಾಂನ ಎರಡು ಚಿನ್ನದ ಸರ ಕದ್ದು ಪರಾರಿಯಾಗಿದ್ದ. ಸಿಬ್ಬಂದಿ ಆತನ ಬೆನ್ನಟ್ಟಿದರೂ ಸಿಕ್ಕಿರಲಿಲ್ಲ. ಸಿಸಿಟಿವಿ ಕ್ಯಾಮೆರಾದಲ್ಲಿ ಸೆರೆಯಾದ ಆರೋಪಿಯ ಸುಳಿವು ಆಧರಿಸಿ ಬಂಧಿಸಲಾಯಿತು' ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಭಾರತ ಜೋಡೊ ಯಾತ್ರೆಗೆ ಬೆಂಬಲ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಾಂಗ್ರೆಸ್ ಹಮ್ಮಿಕೊಂಡಿರುವ ಭಾರತ ಜೋಡೊ ಯಾತ್ರೆಗೆ ಹಲವು ಚಿಂತಕರು, ಸಂಘಟನೆಗಳ ಮುಖಂಡರು ಷರತ್ತು ಬದ್ಧ ಬೆಂಬಲ ಸೂಚಿಸಿದರು.

ಸಮಾಜವಾದಿ ವೇದಿಕೆ ಮಂಗಳವಾರ ಹಮ್ಮಿಕೊಂಡಿದ್ದ ಭಾರತ ಜೋಡೊ ಯಾತ್ರೆಯ ಪೂರ್ವಭಾವಿ ಸಭೆಯಲ್ಲಿ ನಿರ್ಧಾರ ಪ್ರಕಟಿಸಿದರು.

'ಕಾಂಗ್ರೆಸ್ ಹಮ್ಮಿಕೊಂಡಿರುವ ಯಾತ್ರೆ ಯಾವುದೇ ಪಕ್ಷಕ್ಕೆ ಸೀಮಿತವಾಗಿಲ್ಲ. ದೇಶದ ಆಗುಹೋಗುಗಳ ಬಗ್ಗೆ ಕಾಳಜಿ ಇರುವ, ಸಂವಿಧಾನ ಮತ್ತು ಪ್ರಜಾತಂತ್ರದಲ್ಲಿ ನಂಬಿಕೆ ಇಟ್ಟಿರುವ ವ್ಯಕ್ತಿ ಮತ್ತು ಸಂಘಟನೆಗಳ ಯಾತ್ರೆಯಾಗಿದೆ. ಹಾಗಾಗಿ, ಎಲ್ಲರೂ ಪಕ್ಷ, ಸಿದ್ಧಾಂತ, ವಿಚಾರಗಳ ಭೇದವಿಲ್ಲದೆ ಬೆಂಬಲಿಸುವೆವು. ಆದರೆ, ಕಾಂಗ್ರೆಸ್ ತನ್ನ ಹಿಂದಿನ ತಪ್ಪುಗಳಿಗೆ ಆತ್ಮಾವಲೋಕನ ಮಾಡಿಕೊಳ್ಳಬೇಕು. ಅಂತಹ ತಪ್ಪುಗಳಿಂದಾಗಿಯೇ ನರೇಂದ್ರ ಮೋದಿ ಮತ್ತು ಸಂಘ ಪರಿವಾರ ದೇಶದ ಮೇಲೆ ಪ್ರಭುತ್ವ ಸಾಧಿಸಲು ಸಾಧ್ಯವಾಗಿದೆ. ತಪ್ಪುಗಳು ಮರುಕಳಿಸದಂತೆ ಎಚ್ಚರಿಕೆಯ ಹೆಜ್ಜೆ ಇಡಬೇಕು ಎನ್ನುವುದೇ ಎಲ್ಲರ ಒಕ್ಕೊರಲ ಷರತ್ತು' ಎಂದು ವಿವಿಧ ಚಿಂತಕರು ಹೇಳಿದರು.

ಜಿ.ಎನ್. ದೇವಿ, ರಾಜಕೀಯ ಚಿಂತಕ ಸುಧೀಂದ್ರ ಕುಲಕರ್ಣಿ, ರಾಜಕೀಯ ವಿಶ್ಲೇಷಕ ಎ.ನಾರಾಯಣ ಮಾತನಾಡಿದರು.

'ಭಾರತ ಜೋಡೊ ಯಾತ್ರೆಯಂತಹ ಐತಿಹಾಸಿಕ ನಿರ್ಧಾರ ತೆಗೆದುಕೊಂಡಿರುವುದು ರಾಹುಲ್ ಅವರ ಕಠಿಣ ಬದ್ಧತೆಗೆ ಸಾಕ್ಷಿ. ಅವರ ಪ್ರಯತ್ನಗಳಿಗೆ ಭವಿಷ್ಯದಲ್ಲಿ ಫಲ ಸಿಗುತ್ತದೆ' ಎಂದು ಅವರು ವಿಶ್ವಾಸ ವ್ಯಕ್ತಪಡಿಸಿದರು.

ಭಯ ಉತ್ಪಾದಿಸುವ ಸಂಸ್ಥೆ ಇ.ಡಿ: ರಾಜಕೀಯ ವಿರೋಧಿಗಳಲ್ಲಿ ಭಯ ಹುಟ್ಟಿಸಲು ಜಾರಿ ನಿರ್ದೇಶನಾಲಯ ಬಳಸಿಕೊಳ್ಳಲಾಗುತ್ತಿದೆ. ಪ್ರಜಾಸತ್ತಾತ್ಮಕವಾಗಿ ಆಯ್ಕೆಯಾದ ಶಾಸಕರನ್ನೇ ಖರೀದಿ ಮಾಡಲಾಗುತ್ತಿದೆ. ಅಭಿವ್ಯಕ್ತಿ ಸ್ವಾತಂತ್ರ್ಯದ ಧ್ವನಿಗಳನ್ನು ಹತ್ತಿಕ್ಕಲಾಗುತ್ತಿದೆ. ಧರ್ಮ, ಜಾತಿ, ಪ್ರದೇಶ ವಿಭಜಿಸಿ ರಾಜಕೀಯ ಮಾಡುತ್ತಿದ್ದಾರೆ. ಇಂತಹ ಕುತಂತ್ರಗಳ ವಿರುದ್ಧ ಎಲ್ಲರೂ ಒಗ್ಗಟ್ಟಾಗಿ ಹೋರಾಟ ನಡೆಸಬೇಕಿದೆ ಎಂದು ಲೇಖಕಿ ಕೆ.ಶರೀಫ ಕೋರಿದರು.

ವಿರೋಧ ಪಕ್ಷದ ನಾಯಕರಾದ ಸಿದ್ದರಾಮಯ್ಯ, ಬಿ.ಕೆ. ಹರಿಪ್ರಸಾದ್ ಹಾಗೂ ವಿ.ಆರ್.ಸುದರ್ಶನ್, ಬಿ.ಆರ್. ಪಾಟೀಲ್, ಸಿದ್ದನಗೌಡ ಪಾಟೀಲ, ರಾಜೇಂದ್ರಚೆನ್ನಿ, ತೇಜಸ್ವಿ ಪಟೇಲ್, ಕಾಳೇಗೌಡ ನಾಗವಾರ, ಸಿ.ಬಸವಲಿಂಗಪ್ಪ, ಮೋಹನ್ ಕೊಂಡಜ್ಜಿ, ವಿಜಯಮ್ಮ, ಬಾಬುಮ್ಯಾಥ್ಯು ಸೇರಿದಂತೆ ಹಲವರು ಇದ್ದರು.

'37 ಲಕ್ಷ ಕಟ್ಟಡ ಕಾರ್ಮಿಕರಿಗೂ ಬಸ್‌ಪಾಸ್'

ಪ್ರಜಾವಾಣಿ ವಾರ್ತೆ



ವಿಧಾನಸೌಧದಲ್ಲಿ ಮಂಗಳವಾರ ಕಾರ್ಮಿಕ ಇಲಾಖೆ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಕಟ್ಟಡ ಕಾರ್ಮಿಕ ಕುಟುಂಬದ ಪ್ರತಿಭಾಂತ ವಿದ್ಯಾರ್ಥಿನಿ ಸವೇರಾ ಅವರಿಗೆ ನಗದು ಪುರಸ್ಕಾರ ನೀಡಿದರು. ಸಚಿವ ಶಿವರಾಮ್ ಹೆಬ್ಬಾರ್, ಕೆಎಸ್‌ಆರ್‌ಟಿಸಿ ಅಧ್ಯಕ್ಷ ಎಂ.ಚಂದ್ರಪ್ಪ ಇದ್ದಾರೆ

ಬೆಂಗಳೂರು: ರಾಜ್ಯದ 70 ಸಾವಿರ ಕಟ್ಟಡ ಕಾರ್ಮಿಕರಿಗೆ ಮೊದಲ ಹಂತದಲ್ಲಿ ಉಚಿತ ಬಸ್‌ಪಾಸ್ ನೀಡಲಾಗಿದ್ದು, ಅರ್ಜಿ ಸಲ್ಲಿಸುವ ಎಲ್ಲರಿಗೂ ವಿತರಿಸಲು ಸೂಚಿಸಿರುವೆ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದರು.

ಕಾರ್ಮಿಕ ಇಲಾಖೆ, ಕಾರ್ಮಿಕ ಕಲ್ಯಾಣ ಮಂಡಳಿ ಮಂಗಳವಾರ ಆಯೋಜಿಸಿದ್ದ ನೂತನ ತಂತ್ರಾಂಶ ಪರಿಚಯ, ಕಟ್ಟಡ ಕಾರ್ಮಿಕರಿಗೆ ಉಚಿತ ಬಸ್‌ಪಾಸ್ ವಿತರಣೆ ಹಾಗೂ ಕಟ್ಟಡ ಕಾರ್ಮಿಕರ ಮಕ್ಕಳಿಗೆ ಪ್ರತಿಭಾ ಪುರಸ್ಕಾರ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ರಾಜ್ಯದಲ್ಲಿ 37 ಲಕ್ಷ ಕಟ್ಟಡ ಕಾರ್ಮಿಕರು ಇದ್ದಾರೆ. ಬಸ್‌ಪಾಸ್ ಬಯಸುವ ಎಲ್ಲರಿಗೂ ಸೌಲಭ್ಯ ನೀಡಬೇಕು. ಬಸ್‌ಪಾಸ್ ಪಡೆಯಲು ಸೇವಾಸಿಂಧು ತಂತ್ರಾಂಶಗಳ ಮೂಲಕ ಅರ್ಜಿ ಸಲ್ಲಿಸಬಹುದು. ಇಲಾಖೆ ನೀಡುವ ಕೆಎಸ್‌ಆರ್‌ಟಿಸಿ ಸ್ಮಾರ್ಟ್‌ಕಾರ್ಡ್ ಪಡೆದವರು ನೆಲೆಸಿದ ಸ್ಥಳದಿಂದ, ಕೆಲಸ ಮಾಡುವ ಸ್ಥಳದವರೆಗೆ 45 ಕಿ.ಮೀ. ವ್ಯಾಪ್ತಿಯಲ್ಲಿ ಉಚಿತವಾಗಿ ಪ್ರಯಾಣಿಸಬಹುದು. ಬೇರೆ ಜಿಲ್ಲೆಗಳಲ್ಲಿ ನೋಂದಣಿಯಾಗಿದ್ದರೂ, ಅವರು ಬಯಸುವ ಸ್ಥಳ ಆಯ್ಕೆಮಾಡಿಕೊಳ್ಳಬಹುದು. ಪ್ರತಿ ಮೂರು ತಿಂಗಳಿಗೊಮ್ಮೆ ನವೀಕರಣ ಮಾಡಿಸಬೇಕು ಎಂದು ಮಾಹಿತಿ ನೀಡಿದರು.

ದೇಶದ ಆರ್ಥಿಕ ಚಕ್ರ ತಿರುಗಿಸುವಲ್ಲಿ ಕಾರ್ಮಿಕರ ಪಾತ್ರ ಮಹತ್ವದ್ದು. ಅವರ ಬದುಕಿಗೆ ಭದ್ರತೆಯ ಅಗತ್ಯವಿದೆ. ಅದಕ್ಕಾಗಿ ರಾಜ್ಯ ಸರ್ಕಾರ 19 ವಿವಿಧ ನೆರವುಗಳನ್ನು ನೀಡುತ್ತಿದೆ. ವಿವಿಧ ಪ್ರಕರಣಗಳಲ್ಲಿ 2.95 ಲಕ್ಷ ಕಾರ್ಮಿಕರಿಗೆ ₹ 92 ಕೋಟಿ ಪರಿಹಾರ ಒದಗಿಸಲಾಗಿದೆ ಎಂದರು.

ಕಾರ್ಮಿಕ ಸಚಿವ ಶಿವರಾಮ್ ಹೆಬ್ಬಾರ್, ಎಸ್ಸೆಸ್ಸೆಲ್ಸಿ ತೇರ್ಗಡೆಯಾದ 2,307 ಪ್ರತಿಭಾವಂತ ಮಕ್ಕಳಿಗೆ ತಲಾ ₹ 10 ಸಾವಿರ ಪುರಸ್ಕಾರ ನೀಡಲಾಗಿದೆ. ಕಾರ್ಮಿಕರ ನೋಂದಣಿ, ನವೀಕರಣ ಹಾಗೂ ವಿವಿಧ ಸೌಲಭ್ಯಗಳನ್ನು ವಿತರಿಸಲು ಪ್ರತ್ಯೇಕ ತಂತ್ರಾಂಶ ಸಿದ್ಧಪಡಿಸಲಾಗಿದೆ. 4.19 ಲಕ್ಷ ಫಲಾನುಭವಿಗಳಿಗೆ ನೇರ ನಗದು ರೂಪದಲ್ಲಿ ₹ 654 ಕೋಟಿ ಶೈಕ್ಷಣಿಕ ಸಹಾಯಧನ ವಿತರಿಸಲಾಗಿದೆ ಎಂದು ವಿವರ ನೀಡಿದರು.

ಕೈಗಾರಿಕಾ ಸಚಿವ ಮುರುಗೇಶ ನಿರಾಣಿ, ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ ಅಧ್ಯಕ್ಷ ಎಂ.ಚಂದ್ರಪ್ಪ, ಅಧಿಕಾರಿಗಳಾದ ಅನ್ಬುಕುಮಾರ್, ಅಕ್ರಂ ಪಾಷಾ, ಮನೋಜ್ ಜೈನ್ ಉಪಸ್ಥಿತರಿದ್ದರು.

ಅಂಗಡಿ ಮಾಲೀಕನಿಗೆ ಮಚ್ಚಿನಿಂದ ಹಲ್ಲೆ

ಬೆಂಗಳೂರು: ಹೆಣ್ಣೂರು ಪೊಲೀಸ್ ಠಾಣೆ ವ್ಯಾಪ್ತಿಯ ಪ್ಲೈವುಡ್ ಅಂಗಡಿಗೆ ಯುವಕರ ಗುಂಪು ನುಗ್ಗಿ ಹಣಕ್ಕಾಗಿ ಬೆದರಿಕೆ ಒಡ್ಡಿರುವ ಘಟನೆ ನಡೆದಿದೆ.

ಅಂಗಡಿ ಮಾಲೀಕ ಪನ್ನಾ ಲಾಲ್ ಮೇಲೆ ಮಾರಕಾಸ್ತ್ರಗಳಿಂದ ಹಲ್ಲೆ ನಡೆಸಲಾಗಿದೆ. ಹಲ್ಲೆಯ ದೃಶ್ಯವು ಸಿಸಿಟಿವಿ ಕ್ಯಾಮೆರಾದಲ್ಲಿ ಸೆರೆಯಾಗಿದೆ. ಭಯದಿಂದ ಮಾಲೀಕ ಕಿರುಚಿದಾಗ ಅಕ್ಕಪಕ್ಕದವರು ಓಡಿಬಂದಿದ್ದಾರೆ. ಆಗ ಯುವಕರು ಅಲ್ಲಿಂದ ಓಡಿಹೋಗಿದ್ದಾರೆ. ಪೊಲೀಸರು ಪ್ರಕರಣ ದಾಖಲಿಸಿಕೊಂಡು ಆರೋಪಿಗಳ ಪತ್ತೆಗೆ ಶೋಧ ಮುಂದುವರಿಸಿದ್ದಾರೆ.

ನಿರುದ್ಯೋಗ ಸಮಸ್ಯೆ ಚರ್ಚೆಗೆ ಕಾಂಗ್ರೆಸ್ ಪಟ್ಟು; ಗದ್ದಲ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಿರುದ್ಯೋಗ ಸಮಸ್ಯೆ, ನೇಮಕಾತಿ ಹಗರಣ, ಭ್ರಷ್ಟಾಚಾರ ವಿಷಯಗಳಿಗೆ ಸಂಬಂಧಿಸಿದಂತೆ ನಿಯಮ 59ರ ಅಡಿ ಚರ್ಚೆಗೆ ಅವಕಾಶ ಕೋರಿ ಕಾಂಗ್ರೆಸ್ ಮಂಡಿಸಿದ ನಿಲುವಳಿ ಸೂಚನೆಗೆ ಆಡಳಿತ ಪಕ್ಷದ ಸದಸ್ಯರು ತೀವ್ರ ವಿರೋಧ ವ್ಯಕ್ತಪಡಿಸಿದ್ದರಿಂದ ವಿಧಾನ ಪರಿಷತ್‌ನಲ್ಲಿ ಕೆಲಹೊತ್ತು ಗದ್ದಲದ ವಾತಾವರಣ ಸೃಷ್ಟಿಯಾಯಿತು.

ನಿಯಮ 330ರ ಅಡಿ ಚರ್ಚೆಗೆ ಅವಕಾಶ ನೀಡುತ್ತೇನೆಂದು ಸಭಾಪತಿ ರಘುನಾಥರಾವ್ ಮಲ್ಕಾಪುರೆ ಹೇಳಿದರು. ಆದರೆ, ವಿರೋಧಪಕ್ಷ ಸದಸ್ಯರು ಪಟ್ಟು ಸಡಿಲಿಸಲಿಲ್ಲ. ಆಗ 10 ನಿಮಿಷ ಕಲಾಪ ಮುಂದೂಡಿದರು. ಕಲಾಪ ಮತ್ತೆ ಆರಂಭವಾಗುತ್ತಿದ್ದಂತೆ, ನಿರುದ್ಯೋಗ ವಿಷಯಕ್ಕೆ ಸೀಮಿತವಾಗಿ ನಿಯಮ 330ರ ಅಡಿ ಚರ್ಚಿಸಲು ಎಲ್ಲರಿಗೂ ಅವಕಾಶ ನೀಡುವುದಾಗಿ ಸಭಾಪತಿ ಹೇಳಿದ್ದು, ಕಾಂಗ್ರೆಸ್ ಸದಸ್ಯರು ಒಪ್ಪಿದರು.

ವಿರೋಧ ಪಕ್ಷದ ನಾಯಕ ಬಿ.ಕೆ. ಹರಿಪ್ರಸಾದ್ ಮಂಡಿಸಿದ ನಿಲುವಳಿ ನಿಲುವಳಿ ಸೂಚನೆ ಸಮರ್ಪಕವಾಗಿಲ್ಲ, ತಿರಸ್ಕರಿಸಬೇಕು' ಎಂದು ಸಭಾ ನಾಯಕ ಕೋಟ ಶ್ರೀನಿವಾಸ ಪೂಜಾರಿ ವಾದಿಸಿದರು. ಮುಖ್ಯ ಸಚೇತಕ ವೈ.ಎ. ನಾರಾಯಣ ಸ್ವಾಮಿ, 'ನಿಯಮ 59ರ ಅಡಿ ನಿರ್ದಿಷ್ಟ ವಿಷಯ ಕುರಿತು ಚರ್ಚೆಗೆ ಅವಕಾಶವಿದೆ. ಈಗ ಕೆಪಿಎಸ್‌ಸಿ ಅಕ್ರಮ, ಪಿಎಸ್‌ಐ ನೇಮಕ ಅಕ್ರಮ ಸೇರಿ ಹಲವುವಿಷಯಗಳಿವೆ' ಎಂದರು.

ಈ ವಿಚಾರವಾಗಿ ಆಡಳಿತ ಮತ್ತು ವಿರೋಧ ಪಕ್ಷದ ಸದಸ್ಯರ ಮಧ್ಯೆ ಕೆಲಹೊತ್ತು ವಾಗ್ವಾದ ನಡೆಯಿತು. ಕಾಂಗ್ರೆಸ್ಸಿನ ಪ್ರಕಾಶ್ ರಾಠೋಡ್, ಪಿ.ಆರ್. ರಮೇಶ್, ಎಂ. ನಾಗರಾಜ್, ಜೆಡಿಎಸ್ಸಿನ ಎಸ್.ಎಲ್. ಭೋಜೇಗೌಡ, ಮರಿತಿಬ್ಬೇಗೌಡ ನಿಲುವಳಿ ಪರ ಮಾತನಾಡಿದರೆ, ಬಿಜೆಪಿಯ ತೇಜಸ್ವಿನಿಗೌಡ, ಭಾರತಿ ಶೆಟ್ಟಿ, ಪ್ರತಾಪ್ ಸಿಂಹ ನಾಯಕ್, ಎಂ.ಕೆ. ಪ್ರಾಣೇಶ್, ಆಯನೂರು ಮಂಜುನಾಥ್ ವಿರೋಧಿಸಿದರು.

ನಿರುದ್ಯೋಗ ವಿಷಯಕ್ಕೆ ಮಾತ್ರ ಸೀಮಿತಗೊಳಿಸಿ 330ರ ಅಡಿ ಚರ್ಚೆಗೆ ಸಭಾಪತಿ ಅವಕಾಶ ನೀಡಿದರೂ ವಿರೋಧ ಪಕ್ಷದ ಸದಸ್ಯರು ಒಪ್ಪದೇ ಇದ್ದಾಗ, ಬಿಜೆಪಿ ಸದಸ್ಯರು, 'ಸಭಾಪತಿಯ ರೂಲಿಂಗ್ ಪ್ರಶ್ನಿಸುವುದು ಸರಿಯಲ್ಲ' ಎಂದರು. ಆಗ ಕಾಂಗ್ರೆಸ್ ಸದಸ್ಯರು, 'ರೂಲಿಂಗ್ ಪ್ರಶ್ನಿಸಿಲ್ಲ, ಅವಕಾಶಕ್ಕೆ ಮನವಿ ಮಾಡಿದ್ದೇವೆ' ಎಂದರು.

'ಹೆಸರಘಟ್ಟ ಹುಲ್ಲುಗಾವಲು: ಜನಸ್ನೇಹಿ ಕ್ರಮ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹೆಸರಘಟ್ಟ ಹುಲ್ಲುಗಾವಲಿಗೆ ಸಂಬಂಧಿಸಿದಂತೆ ಕಾನೂನು ಪ್ರಕಾರ 'ಜನಸ್ನೇಹಿ' ಕ್ರಮ ತೆಗೆದುಕೊಳ್ಳಲಾಗುವುದು ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಭರವಸೆ ನೀಡಿದರು.

ವಿಧಾನಸಭೆಯಲ್ಲಿ ಶೂನ್ಯವೇಳೆಯಲ್ಲಿಬಿಜೆಪಿಯ ಎಸ್.ಆರ್.ವಿಶ್ವನಾಥ್ ಅವರ ಪ್ರಶ್ನೆಗೆ ಉತ್ತರಿಸಿ ಈ ವಿಷಯ ತಿಳಿಸಿದರು.

'ಹೆಸರಘಟ್ಟ ಹುಲ್ಲುಗಾವಲು ಪಶುಸಂಗೋಪನೆ ಇಲಾಖೆ ಸೇರಿ ಹಲವು ಇಲಾಖೆಗಳ ವ್ಯಾಪ್ತಿಯಲ್ಲಿದೆ. ಐದು ಗ್ರಾಮ ಪಂಚಾಯಿತಿ ವ್ಯಾಪ್ತಿಗೂ ಸೇರಿದೆ. ಇಲ್ಲಿ ಜನವಸತಿಯೂ ಇದೆ. ಇದನ್ನು ವನ್ಯಜೀವಿ ರಕ್ಷಿತ ಪ್ರದೇಶವೆಂದು ಎಂದು ಘೋಷಿಸಲು ವನ್ಯಜೀವಿ ಮಂಡಳಿ ಪ್ರಸ್ತಾವನೆ ತರಲು ಮುಂದಾಗಿದೆ. ಯಾರೋ ಮೂರು ಜನ ಪರಿಸರವಾದಿಗಳು ಸೇರಿ ಅರಣ್ಯ ಇಲಾಖೆಗೆ ಪತ್ರ ಬರೆದಿದ್ದಾರೆ' ಎಂದು ಎಸ್.ಆರ್.ವಿಶ್ವನಾಥ್ ಹೇಳಿದರು.

'ಜನಪ್ರತಿನಿಧಿಗಳು, ಸ್ಥಳೀಯರನ್ನು ವಿಶ್ವಾಸಕ್ಕೆ ತೆಗೆದುಕೊಳ್ಳದೇ ಸಂರಕ್ಷಿತ ಪ್ರದೇಶ ಮಾಡಲು ಹೊರಟಿರುವುದು ಸರಿಯಲ್ಲ. ಚಿರತೆ ಇದೆ ಎಂದು ಹೇಳುತ್ತಾರೆ. ಇಲ್ಲಿ ಹಂದಿ ಮತ್ತು ನವಿಲು ಬಿಟ್ಟರೆ ಬೇರೆ ಯಾವುದೇ ಪ್ರಾಣಿಗಳೂ ಇಲ್ಲ. ನಾವೂ ಹೆಸರಘಟ್ಟ ವಾಸಿಗಳು ಇದರ ರಕ್ಷಣೆ ನಮ್ಮ ಜವಾಬ್ದಾರಿಯೂ ಆಗಿದೆ' ಎಂದರು.

'ವ್ಯಾಜ್ಯ ಜಾಗ: ಲೋಕಾಯುಕ್ತದಿಂದ ತನಿಖೆ'

ಬೆಂಗಳೂರು: '42 ವರ್ಷಗಳಿಂದ ಹಾಪ್ ಕಾಪ್ಸ್ ವಶದಲ್ಲಿರುವ ಬೆಂಗಳೂರು ಉತ್ತರ ತಾಲ್ಲೂಕು ಕಸಬಾ ಹೋಬಳಿ ಅಣ್ಣೇಪುರ ಗ್ರಾಮದ ಸರ್ವೆ ನಂಬರ್ 18ರಲ್ಲಿ (ಪ್ರಸ್ತುತ ಬಿಬಿಎಂಪಿ ವಾರ್ಡ್ ನಂ. 143ರಲ್ಲಿ) 2.08 ಎಕರೆ ವಿಸ್ತೀರ್ಣದ ಜಮೀನಿಗೆ ಸಂಬಂಧಿಸಿದ ವ್ಯಾಜ್ಯವನ್ನು ಲೋಕಾಯುಕ್ತಕ್ಕೆ ವಹಿಸಿ ತನಿಖೆ ನಡೆಸಲಾಗುವುದು' ಎಂದು ತೋಟಗಾರಿಕೆ ಸಚಿವ ಮುನಿರತ್ನ ತಿಳಿಸಿದರು.

ವಿಧಾನ ಪರಿಷತ್‌ನಲ್ಲಿ ಜೆಡಿಎಸ್ಸಿನ ಕೆ.ಎ. ತಿಪ್ಪೇಸ್ವಾಮಿ ಅವರ ಗಮನಸೆಳೆಯುವ ವಿಷಯಕ್ಕೆ ಉತ್ತರಿಸಿದ ಅವರು, 'ಯಾರೊ ಬಂದು ಸರ್ಕಾರದ ವಶದಲ್ಲಿರುವ ಆಸ್ತಿ ತಮ್ಮದೆಂದು ಪರಿಹಾರ ಕೇಳಿದರೆ ಕೊಡಲು ಸಾಧ್ಯವಿಲ್ಲ. ಜಾಗ ನೈಜವಾಗಿ ಯಾರಿಗೆ ಸೇರಿದೆ ಎಂದು ಖಚಿತವಾದ ಬಳಿಕ ಸರ್ಕಾರ ಅಗತ್ಯ ಕ್ರಮಗಳನ್ನು ತೆಗೆದುಕೊಳ್ಳಲಿದೆ' ಎಂದರು.

'ಲಾಲ್‌ಬಾಗ್‌ಗೆ ಹೊಂದಿಕೊಂಡಿರುವ ಈ ಜಾಗದ ವಿಚಾರವಾಗಿ ನನ್ನ ಮೇಲೂ ಸಾಕಷ್ಟು ಒತ್ತಡ ಇದೆ. ಮುಂಬೈಯ ಚರಿಷ್ಮಾ ಬಿಲ್ಡರ್ಸ್ 2017ರಲ್ಲಿ ಸಿವಿಲ್ ನ್ಯಾಯಾಲಯದಲ್ಲಿ ದಾವೆ ಹೂಡಿದೆ. ಇಷ್ಟು ವರ್ಷ ಜಾಗದ ಬಗ್ಗೆ ಯಾರೂ ಪ್ರಸ್ತಾಪಿಸದೆ, 2013ರಿಂದ ಈಚೆಗೆ ಒಂದೊಂದೇ ದಾಖಲೆಗಳು ಹೊರಬರುತ್ತಿವೆ. ಹೀಗಾಗಿ, ಜಾಗದ ಕುರಿತು ನೈಜತೆ ಪರಿಶೀಲಿಸದೆ ಯಾವುದೇ ನಿರ್ಧಾರ ತೆಗೆದುಕೊಳ್ಳಲು ಸಾಧ್ಯ ಇಲ್ಲ' ಎಂದು ವಿವರಿಸಿದರು.

'ಸ್ವತ್ತಿನ ಹಕ್ಕುದಾರಿಕೆ ಸಂಬಂಧಿಸಿದಂತೆ ನಬಿಷಾ ದರ್ಗಾ ಆಡಳಿತ ಮಂಡಳಿಯು ವಕ್ಫ್ ಬೋರ್ಡ್‌ನಲ್ಲಿ ದೂರು ದಾಖಲಿಸಿದ್ದು, ಪ್ರಕರಣ ವಿಚಾರಣಾ ಹಂತದಲ್ಲಿದೆ. ಹೈಕೋರ್ಟ್ ಮತ್ತು ಇತರ ನ್ಯಾಯಾಲಯಗಳಲ್ಲಿ ಒಂದಕ್ಕಿಂತ ಹೆಚ್ಚು ಹಕ್ಕುದಾರರು ದಾವೆ ಹೂಡಿದ್ದು, ಈ ಪೈಕಿ ವಕ್ಫ್ ಬೋರ್ಡ್ ಕೂಡಾ ಹಕ್ಕುದಾರರಲ್ಲಿ ಒಂದು. ಹಾಪ್ ಕಾಮ್ಸ್ ಮತ್ತು ವಕ್ಫ್ ಬೋರ್ಡ್ ಎರಡೂ ಸರ್ಕಾರಿ ಸಂಸ್ಥೆಗಳಾಗಿರುವುದರಿಂದ, ಈ ಸರ್ಕಾರಿ ಆಸ್ತಿಯನ್ನು ರಕ್ಷಿಸಲು ಕ್ರಮ ತೆಗೆದುಕೊಳ್ಳಬೇಕಿದೆ' ಎಂದರು.



EXAM DH ಪ್ರಜಾವಾಣಿ MASTERMIND™
ವಾರ್ಷಿಕ ಚಂದಾದಾರಿಕೆ ಈಗ ಕೇವಲ ₹599 ₹399ಕ್ಕೆ ಮಾತ್ರ
ಯುಪಿಎಸ್‌ಸಿ, ಕೆಪಿಎಸ್‌ಸಿ, ಪಿಎಸ್‌ಐ, ಎಫ್‌ಡಿಎ, ಬ್ಯಾಂಕಿಂಗ್ ಪಿ.ಒ.... ಸ್ಪರ್ಧಾತ್ಮಕ ಪರೀಕ್ಷೆಗಳಿಗಾಗಿ ಇ-ಮಿತ್ರ
ಈಗಲೇ ಚಂದಾದಾರರಾಗಲು QR ಕೋಡ್ ಸ್ಕ್ಯಾನ್ ಮಾಡಿ ಅಥವಾ
www.exammastermind.comಗೆ ಭೇಟಿ ಕೊಡಿ

ಡಾರ್ಟ್ ಆತ್ಮಾಹುತಿ ರೋಬಾಟ್!



ಡಾರ್ಟ್ ಅಭಿಯಾನದ ವಿವರಗಳು (ಚಿತ್ರಕೃಪೆ: ನಾಸಾ)



ಡೈಡಿಮೋಸ್ ಡೈಮಾರ್ಫೋಸ್ ಜೋಡಿಯತ್ತ ಸಾಗುತ್ತಿರುವ ಡಾರ್ಟ್ ನೌಕೆ, ಕಲಾವಿದನ ಕಲ್ಪನೆಯಲ್ಲಿ (ಚಿತ್ರಕೃಪೆ: ನಾಸಾ)

ಬಿ. ಆರ್. ಗುರುಪ್ರಸಾದ್

> ಅಲೆಮಾರಿ ಕ್ಷುದ್ರಗ್ರಹಗಳಿಂದ ಭೂಮಿಯ ರಕ್ಷಿಸುವಲ್ಲಿ ಡಾರ್ಟ್ ಮೊದಲ ಯಶಸ್ವಿ ಹೆಜ್ಜೆಯಾಗುವುದೇ?...

ನಮ್ಮ ಭೂಮಿಯ ನಾನ್ನೂರೈವತ್ತು ಕೋಟಿ ವರ್ಷಗಳ ಇತಿಹಾಸದಲ್ಲಿ ಅನೇಕ ಬಾರಿ ಕ್ಷುದ್ರಗ್ರಹ (ಆಸ್ಟರಾಯ್ಡ್), ಧೂಮಕೇತು (ಕಾಮೆಟ್) ಹಾಗೂ ಅವುಗಳ ಚೂರುಗಳು ಬಂದಪ್ಪಳಿಸಿ ಡೈನೋಸಾರ್‌ಗಳೂ ಸೇರಿದಂತೆ ಸಾವಿರಾರು ಬಗೆಯ ಜೀವಿಗಳ ವಿನಾಶಕ್ಕೆ ಕಾರಣವಾಗಿವೆ ಎಂದು ವಿಜ್ಞಾನಿಗಳು ನುಡಿಯುತ್ತಾರೆ. ಆದರೆ ಬುದ್ಧಿಶಕ್ತಿಯನ್ನು ಹೊಂದಿರುವ ಭೂಜೀವಿಯಾದ ಮಾನವ ಇಂದು ಪುಟ್ಟ ಕ್ಷುದ್ರಗ್ರಹವೊಂದಕ್ಕೆ ತಾನು ನಿರ್ಮಿಸಿದ ಸಾಧನವೊಂದನ್ನು ಅಪ್ಪಳಿಸುವ ಕಷ್ಟಕರವಾದ ಸಾಹಸಕ್ಕೆ ಕೈಹಾಕಿದ್ದಾನೆ. ಆ ಮೂಲಕ ಕ್ಷುದ್ರಗ್ರಹಗಳಿಂದ ಮುಂದೊಂದು ದಿನ ಒದಗಬಹುದಾದ ಅಪಾಯದಿಂದ ತನ್ನನ್ನು ರಕ್ಷಿಸಿಕೊಳ್ಳುವ ಉದ್ದೇಶವನ್ನು ಹೊಂದಿದ್ದಾನೆ. ಇಂದು 'ಡಾರ್ಟ್' ಎಂಬ ಹೆಸರಿನ ರೋಬಾಟ್ ಅಂತರಿಕ್ಷನೌಕೆಯೊಂದು ಇಲ್ಲಿಂದ ಸುಮಾರು ಒಂದು ಕೋಟಿ ಕಿಲೋಮೀಟರ್ ದೂರದಲ್ಲಿ ಶರವೇಗದಿಂದ ಧಾವಿಸುತ್ತಿರುವ 'ಡೈಡಿಮೋಸ್-ಡೈಮಾರ್ಫೋಸ್' ಕ್ಷುದ್ರಗ್ರಹ ಜೋಡಿಯನ್ನು ಸಮೀಪಿಸುತ್ತಿದೆ. ಕಳೆದ ವರ್ಷದ ನವೆಂಬರ್ ಅಂತ್ಯದಲ್ಲಿ ಅಮೆರಿಕದ ಅಂತರಿಕ್ಷ ಸಂಸ್ಥೆ 'ನಾಸಾ' ಉಡಾಯಿಸಿದ ಆ 600 ಕಿಲೋಗ್ರಾಂ ತೂಕದ ನೌಕೆ ಇದೇ ಸೆಪ್ಟೆಂಬರ್ 26(ಭಾರತೀಯ ಕಾಲಮಾನದ ಪ್ರಕಾರ ಸೆಪ್ಟೆಂಬರ್ 27ರ ಬೆಳಗಿನ ಜಾವ)ರಂದು ಡೈಡಿಮೋಸ್ ಅನ್ನು ಸುತ್ತುತ್ತಿರುವ ಡೈಮಾರ್ಫೋಸ್‌ಅನ್ನು ಶರವೇಗದಲ್ಲಿ ಅಪ್ಪಳಿಸಲಿದೆ.

ಆ ಮೂಲಕ ಪುಟ್ಟ ಡೈಮಾರ್ಫೋಸ್‌ನ ಕಕ್ಷೆಯಲ್ಲಿ ಅತ್ಯಲ್ಪ ಬದಲಾವಣೆಯನ್ನು ಆ ನೌಕೆ ಉಂಟುಮಾಡಲಿದೆ ಎಂದು ನಾಸಾ ವಿಜ್ಞಾನಿಗಳು ಅಂದಾಜುಮಾಡಿದ್ದಾರೆ. ಇದು ಯಶಸ್ವಿಯಾದಲ್ಲಿ ಭವಿಷ್ಯದಲ್ಲಿ ಇಂತಹುದೇ ವಿಧಾನವನ್ನು ಅನುಸರಿಸುವ ಮೂಲಕ ಭೂಮಿಯ ಸಮೀಪಕ್ಕೆ ಧಾವಿಸಿ ಇಲ್ಲಿನ ಜೀವಿಗಳಿಗೆ ಅಪಾಯವನ್ನುಂಟುಮಾಡುವ ಆಕಾಶಕಾಯಗಳ ಭೀತಿಯಿಂದ ಪಾರಾಗಬಹುದು ಎಂದವರು ಆಶಿಸಿದ್ದಾರೆ.

'ಡಾರ್ಟ್' ಎಂಬುದು 'ಜೋಡಿ ಕ್ಷುದ್ರಗ್ರಹ ಪುನರ್ ನಿರ್ದೇಶನಾ ಪರೀಕ್ಷೆ' ಎಂಬ ಇಂಗ್ಲಿಷ್ ಪದಗಳ ಹ್ರಸ್ವರೂಪದ ಕನ್ನಡಾನುವಾದ. 'ಡಾರ್ಟ್' ಎಂಬ ಪದಕ್ಕೆ ಇಂಗ್ಲಿಷಿನಲ್ಲಿ 'ಬಾಣ', 'ಬರ್ಜಿ'. ಇಲ್ಲವೇ 'ಈಟಿ' ಎಂಬ ಅರ್ಥವೂ ಇದೆ. ಸೌರವ್ಯೂಹದ ಕೇಂದ್ರವಾದ ಸೂರ್ಯನನ್ನು ಇಂದು ಎಂಟು ಗ್ರಹಗಳೊಂದಿಗೇ, ಅನೇಕ ಕುಬ್ಜಗ್ರಹಗಳು (ಡ್ವಾರ್ಫ್ ಪ್ಲ್ಯಾನೆಟ್ಸ್) ಹಾಗೂ ಕ್ಷುದ್ರಗ್ರಹ ಮತ್ತು ಧೂಮಕೇತುಗಳೆಂಬ ಪುಟ್ಟದಾದ ಹಾಗೂ ಸುಮಾರಾಗಿ ಅಲೂಗೆಡ್ಡೆಯಾಕಾರದ ಆಕಾಶಕಾಯಗಳು ಸುತ್ತುತ್ತಿವೆ. ಸೂರ್ಯನಿಂದ ದೂರವಿರುವಾಗ ಹಿಮ, ದೂಳು ಹಾಗೂ ಶಿಲೆಯ 'ಉಂಡೆ'ಯಂತಿರುವ ಧೂಮಕೇತುವೊಂದು ತನ್ನ ಕೋಳಿಮೊಟ್ಟೆಯಾಕಾರದ ಕಕ್ಷೆಯಲ್ಲಿ ಸೂರ್ಯನನ್ನು ಸಮೀಪಿಸಿದಂತೆ ಅದರ ಮೇಲ್ಮೈಯಲ್ಲಿನ ಹಿಮ ಅನಿಲರೂಪಕ್ಕೆ ತಿರುಗಿ ಅದನ್ನು ಆವರಿಸುತ್ತದೆ. ನಂತರ ಅದು ಸೂರ್ಯನಿಗೆ ವಿರುದ್ಧವಾದ ದಿಕ್ಕಿನಲ್ಲಿ ಲಕ್ಷಾಂತರ ಕಿಲೋಮೀಟರ್ ದೂರ ಬಾಲದಂತೆ ವ್ಯಾಪಿಸುತ್ತದೆ. ಧೂಮಕೇತುವೊಂದು ಪೊರಕೆಯಾಕಾರದ್ದಾಗಿ ನಮಗೆ ಕಾಣುವುದಕ್ಕೆ ಇದೇ ಕಾರಣ. ಆದರೆ ಸಾಮಾನ್ಯವಾಗಿ ಕ್ಷುದ್ರಗ್ರಹವೊಂದರ ಮೇಲೆ ಹಿಮವಿರುವುದಿಲ್ಲವಾಗಿ ಅದು ಧೂಮಕೇತುವೊಂದರಂತೆ ಬಾಲವನ್ನು ತಳೆದು ಬರಿಗಣ್ಣಿಗೆ ಕಾಣುವುದಿಲ್ಲ.

ಬಹುತೇಕ ಕ್ಷುದ್ರಗ್ರಹಗಳು ಮಂಗಳ (ಮಾರ್ಸ್) ಹಾಗೂ ಗುರು (ಜ್ಯೂಪಿಟರ್) ಗ್ರಹಗಳ ನಡುವೆ ಇರುವ ಒಂದು 'ಪಟ್ಟಿ'ಯಲ್ಲಿ ಸೂರ್ಯನನ್ನು ಸುತ್ತುತ್ತವೆ. ಹಾಗಾದರೆ ಅವುಗಳು ಈ ಹಿಂದೆ ಭೂಮಿಗೆ ಬಂದು ಅಪ್ಪಳಿಸಿದ್ದಾದರೂ ಹೇಗೆ?

ಕ್ಷುದ್ರಗ್ರಹಗಳಲ್ಲಿ ಬಹುತೇಕವು ಭೂಮಿಯಿಂದ ದೂರವಿದ್ದರೂ ಕೆಲವು ಕ್ಷುದ್ರಗ್ರಹಗಳು ತಮ್ಮ ಕೋಳಿಮೊಟ್ಟೆಯಾಕಾರದ ಕಕ್ಷೆಗಳಲ್ಲಿ ಸೂರ್ಯನನ್ನು ಸುತ್ತುವ ನಡುವೆ ಭೂಮಿಯ ಸಮೀಪಕ್ಕೆ ಬರುತ್ತವೆ. ಇಂತಹ ಕ್ಷುದ್ರಗ್ರಹ (ಹಾಗೂ ಧೂಮಕೇತುಗಳಿಗೆ) 'ಭೂಮಿಯ ಸಮೀಪದ ಆಕಾಶಕಾಯಗಳು (ನಿಯರ್ ಅರ್ಥ್ ಆಬ್ಜೆಕ್ಟ್ಸ್)' ಎಂಬ ಹೆಸರಿದೆ. ಈ ಹಿಂದೆ ಭೂಮಿಗೆ ಬಂದಪ್ಪಳಿಸಿ ಇಲ್ಲಿನ ಇತಿಹಾಸದ ದಿಕ್ಕನ್ನೇ ಬದಲಿಸಿದ ಕಾಯಗಳು ಇಂತಹವೇ ಆಗಿವೆ.

ಇವುಗಳನ್ನು ಗುರುತಿಸುವುದೇ ಅಲ್ಲದೇ ಆ ಬಗೆಯ ಆಕಾಶಕಾಯಗಳ ಕಕ್ಷೆಯನ್ನು ನಿಖರವಾಗಿ ಲೆಕ್ಕಹಾಕುವ ಕಾರ್ಯದಲ್ಲಿ ಜಗತ್ತಿನಾದ್ಯಂತ ಕೆಲವು ಸಂಸ್ಥೆಗಳು ನಿರತವಾಗಿವೆ. ಆದರೆ ಆ ಆಕಾಶಕಾಯಗಳ ಪೈಕಿ ಶೇ 40ರಷ್ಟನ್ನು ಮಾತ್ರ ಗುರುತಿಸಲಾಗಿದೆ ಎಂದು ವಿಜ್ಞಾನಿಗಳು ಅಂದಾಜು ಮಾಡುತ್ತಾರೆ.

ಒಂದು ವೇಳೆ ಭೂಮಿಗೆ ಬಂದಪ್ಪಳಿಸುವ ಅಂತರಿಕ್ಷದ ಅದೃಶ್ಯ ಹಾದಿಯಲ್ಲಿ (ಪಥದಲ್ಲಿ) ಧಾವಿಸಿ ಬರುತ್ತಿರುವ ಕ್ಷುದ್ರಗ್ರಹವೇನಾದರೂ ಸಾಕಷ್ಟು ಮೊದಲೇ ಗುರುತಿಸಲ್ಪಟ್ಟರೆ ಆಗ ಏನು ಮಾಡಬಹುದು?

ಆಗ ಆ ಕ್ಷುದ್ರಗ್ರಹಕ್ಕೆ ಮಾನವನಿರ್ಮಿತ ಸಾಧನವೊಂದನ್ನು ಕಳುಹಿಸಿ ಆ ಸಾಧನ ಅದಕ್ಕೆ ಅಪ್ಪಳಿಸುವಂತೆ ಮಾಡಿ ಕ್ಷುದ್ರಗ್ರಹದ ಪಥವನ್ನು ಅಲ್ಪಪ್ರಮಾಣದಲ್ಲಿ ಬದಲಿಸಲು ಸಾಧ್ಯವಾಗಬಹುದು ಎಂದು ವಿಜ್ಞಾನಿಗಳು ಹೇಳುತ್ತಾರೆ. ಮೊದಲಿಗೆ ಅದರ ಪಥ ಅಲ್ಪಪ್ರಮಾಣದಲ್ಲಿ ಬದಲಾದರೂ ಕಾಲ ಕಳೆದಂತೆ ಅದು ಭೂಮಿಯಿಂದ ದೂರ ಸರಿಯಲಾರಂಭಿಸುತ್ತದೆ. ಭೂಮಿಗಿರುವ ಭೀತಿ ದೂರವಾಗುತ್ತದೆ. ಡಾರ್ಟ್ ಅಂತರಿಕ್ಷನೌಕೆಯ ಅಭಿಯಾನ ಪರೀಕ್ಷಿಸಲು ಉದ್ದೇಶಿಸಿರುವುದು ಈ ವಿಧಾನವನ್ನೇ.

2021ರ ನವೆಂಬರ್ 24ರಂದು ಉಡಾಯಿಸಲಾದ ಡಾರ್ಟ್ ನೌಕೆ ಈಗಾಗಲೇ ಒಂದು ಕೋಟಿ ಕಿಲೋಮೀಟರ್‌ಗಿಂತ ಹೆಚ್ಚು ದೂರ ಅಂತರಿಕ್ಷದಲ್ಲಿ ಕ್ರಮಿಸಿ ಡೈಡಿಮೋಸ್-ಡೈಮಾರ್ಫೋಸ್ ಜೋಡಿಯನ್ನು ಸಮೀಪಿಸುತ್ತಿದೆ. ಆ ಪೈಕಿ ಡೈಡಿಮೋಸ್ ಸುಮಾರು 800 ಮೀಟರ್ ಅಗಲವಿದ್ದರೆ ಅದನ್ನು ಸುತ್ತುತ್ತಿರುವ ಡೈಮಾರ್ಫೋಸ್ ಕೇವಲ 170 ಮೀಟರ್‌ನಷ್ಟಿದೆ. ಈ ಕ್ಷುದ್ರಗ್ರಹ ಜೋಡಿ ಭೂಮಿಯನ್ನು ಅಪ್ಪಳಿಸುವ ಸಾಧ್ಯತೆ ಬಹು ಕಡಿಮೆ. ಹಾಗಾಗಿ ಭೂಮಿಯ ರಕ್ಷಣೆಗೆ ಸಂಬಂಧಿಸಿದ ಒಂದು ಕ್ರಾಂತಿಕಾರಕ ವಿಧಾನವನ್ನು ನಿರಾತಂಕವಾಗಿ ಪರೀಕ್ಷಿಸಲು ಈ ಜೋಡಿ ಸೂಕ್ತವಾಗಿದೆ.

ಒಂದು ಪುಟ್ಟ ಕಾರ್‌ನಷ್ಟಿರುವ ಡಾರ್ಟ್ ನೌಕೆಯಲ್ಲಿ ಅನೇಕ ಹೊಸ ತಂತ್ರಜ್ಞಾನಗಳನ್ನು ಅಳವಡಿಸಲಾಗಿದೆ. ಆ ಪೈಕಿ ಬಿಚ್ಚಿಕೊಳ್ಳುವ ಸುರಳಿಯೊಂದನ್ನು ಹೋಲುವ ದೊಡ್ಡ ಸೌರಫಲಕಗಳು, ದಕ್ಷವಾದ ಒಂದು 'ಅಯಾನ್' ರಾಕೆಟ್ ಯಂತ್ರ, ಸ್ವತಂತ್ರ ಯಾನ ನಿರ್ವಹಣಾ (ನ್ಯಾವಿಗೇಷನ್) ವ್ಯವಸ್ಥೆ, ಪುಟ್ಟದಾದ ಒಂದು ಮೈಕ್ರೋ ಉಪಗ್ರಹ, ಇವುಗಳನ್ನು ಉದಾಹರಿಸಬಹುದು.

ಉಡಾವಣೆಯ ವೇಳೆಯಲ್ಲಿ ಸುರುಳಿಯಂತೆ ಸುತ್ತಿಕೊಂಡಿದ್ದ ನೌಕೆಯ ಎರಡು ಸೌರಫಲಕಗಳ ಪೈಕಿ ಪ್ರತಿಯೊಂದೂ ಅಂತರಿಕ್ಷಕ್ಕೆ ತೆರಳಿದ ನಂತರ 28 ಅಡಿ ದೂರ ಹರಡಿಕೊಂಡು ನೌಕೆಯ ಕಾರ್ಯನಿರ್ವಹಣೆಗೆ ಅಗತ್ಯವಾದ ವಿದ್ಯುತ್ತನ್ನು ಉತ್ಪಾದಿಸುತ್ತಿವೆ. ಅದೇ ರೀತಿ ಅದರ ಅಯಾನ್ ರಾಕೆಟ್ ಯಂತ್ರನೌಕೆ ತನ್ನ ಗುರಿಯತ್ತ ದಕ್ಷವಾಗಿ ಸಾಗುವಲ್ಲಿ ನೆರವಿಗೆ ಬಂದಿದೆ. ಅಂತೆಯೇ ಅದರ ಸ್ವತಂತ್ರ ಯಾನ ನಿರ್ವಹಣಾ ವ್ಯವಸ್ಥೆ ಯಾನದ ಅಂತಿಮ ಹಂತದಲ್ಲಿ ನೌಕೆ ಸ್ವತಂತ್ರವಾದ ನಿರ್ಧಾರಗಳನ್ನು ಸ್ವತಃ ತಾನೇ ತೆಗೆದುಕೊಂಡು ಡೈಮಾರ್ಫೋಸ್‌ಗೆ ಅಪ್ಪಳಿಸುವುದನ್ನು ಸಾಧ್ಯ ಮಾಡಲಿದೆ.

ಭೂಮಿಯಿಂದ ಡಾರ್ಟ್ ನೌಕೆಯಲ್ಲಿ ಸವಾರಿಮಾಡಿದ ಹಾಗೂ ಈಗ ಅದರಿಂದ ಬೇರ್ಪಟ್ಟು ಸ್ವತಂತ್ರವಾಗಿ ವಿಹರಿಸುತ್ತಿರುವ 'ಲಿಸಿಯಾ ಕ್ಯೂಬ್' ಎಂಬ ಕೇವಲ 14 ಕಿಲೋಗ್ರಾಂ ತೂಕದ ಮೈಕ್ರೋ ಉಪಗ್ರಹ ಮೊದಲಿಗೆ ಡೈಮಾರ್ಫೋಸ್‌ನಿಂದ ಸುಮಾರು ಒಂದು ಸಾವಿರ ಕಿಲೋಮೀಟರ್ ದೂರದಲ್ಲಿರುವ ಸುರಕ್ಷಿತವಾದ ಸ್ಥಾನದಿಂದ ಡಾರ್ಟ್ ನೌಕೆಯ ಅಪ್ಪಳಿಸುವಿಕೆಯನ್ನು ವೀಕ್ಷಿಸಲಿದೆ. ಅದಾದ ಸುಮಾರು ಮೂರು ನಿಮಿಷಗಳ ನಂತರ ಡೈಮಾರ್ಫೋಸ್‌ನಿಂದ ಕೇವಲ 55 ಕಿಲೋಮೀಟರ್‌ನಷ್ಟು ಸಮೀಪದಲ್ಲಿ ಹಾದುಹೋಗುವ ಮೂಲಕ ಅಪ್ಪಳಿಸುವಿಕೆಯಿಂದ ಅಲ್ಲಿ ಉಂಟಾದ ಕುಳಿಯನ್ನು, ಮೇಲೆ ಎಸೆಯಲ್ಪಟ್ಟ ವಸ್ತುಗಳನ್ನು ಹಾಗೂ ಇತರ ಪರಿಣಾಮಗಳನ್ನು ಅಭ್ಯಸಿಸಲಿದೆ.

ಡಾರ್ಟ್‌ನ ಅಪ್ಪಳಿಸುವಿಕೆ ಭೂಮಿಯ ಮೇಲಿನ ದೂರದರ್ಶಕಗಳಿಗೆ (ಟೆಲಿಸ್ಕೋಪ್ಸ್) ಕಾಣದಿದ್ದರೂ ಡೈಮಾರ್ಫೋಸ್‌ನ ಕಕ್ಷೆಯಲ್ಲಿ ಆಗಿರಬಹುದಾದ ಬದಲಾವಣೆಯನ್ನಾದರೂ ಗ್ರಹಿಸುವ ಸಾಮರ್ಥ್ಯ ಅವುಗಳಿಗಿದೆ. ಹೀಗಾಗಿ ಸರ್ವವಿಧದಲ್ಲೂ ಸಜ್ಜಾಗಿರುವ ನಾಸಾದ ಹಾಗೂ ಇತರ ಅನೇಕ ವಿಜ್ಞಾನಿಗಳು ಮಾನವನ ರೋಬಾಟ್ ಪ್ರತಿನಿಧಿಯಾದ 'ಡಾರ್ಟ್'ನ 'ಆತ್ಮಾಹುತಿ' ಪಯಣದ ಯಶಸ್ಸನ್ನು ಕಾಯುತ್ತಾ ಕುಳಿತಿದ್ದಾರೆ. ದುಷ್ಟ ಅಲೆಮಾರಿ ಕ್ಷುದ್ರಗ್ರಹಗಳಿಂದ ಭೂಮಿಯ ರಕ್ಷಿಸುವಲ್ಲಿ ಡಾರ್ಟ್ ಮೊದಲ ಯಶಸ್ವಿ ಹೆಜ್ಜೆಯಾಗುವುದೇ? ಕಾದು ನೋಡೋಣ.

❖

ಆ್ಯಪ್ ಬಳಕೆಯಲ್ಲಿ ಎಚ್ಚರ!

ಅವಿನಾಶ್ ಬಿ.

> ತಮ್ಮ ಭಾವಚಿತ್ರಗಳು ಸುಂದರವಾಗಿ ಕಾಣಬೇಕೆಂದು ತವಕಿಸಿ ಆ್ಯಪ್‌ಗಳನ್ನು ಬಳಸುವವರಿಗೊಂದು ಎಚ್ಚರಿಕೆಯ ಮಾಹಿತಿ ಇಲ್ಲಿದೆ.

ಕಳೆದೆರಡು ವಾರಗಳಿಂದ ಫೇಸ್‌ಬುಕ್, ಇನ್‌ಸ್ಟಾಗ್ರಾಂ ಸಾಮಾಜಿಕ ಜಾಲತಾಣಗಳಲ್ಲೆಲ್ಲಾ ಕಪ್ಪು ಬಿಳುಪಿನ, ಸುಂದರವಾದ ಕಲಾಕೃತಿಯಂತಿರುವ ಭಾವಚಿತ್ರಗಳು. ಎಲ್ಲರೂ ತಮ್ಮದೂ ಒಂದು ಇರಲಿ ಅಂತ ಇದನ್ನು ಬಳಸುವವರೇ! ಏನಿದು?

ಈಗ ವೈರಲ್ ಆಗುತ್ತಿರುವುದು 'ವೋಯ್ಲಾ ಎಐ ಆರ್ಟಿಸ್ಟ್' (Voila AI Artist) ಆ್ಯಪ್. ನೀವಿದನ್ನು ಇನ್‌ಸ್ಟಾಲ್ ಮಾಡಿಕೊಂಡು, ಅದಕ್ಕೆ ನಿಮ್ಮ ಸೆಲ್ಫೀ ಅಥವಾ ಈಗಾಗಲೇ ಇರುವ ಫೋಟೋ ಅಪ್‌ಲೋಡ್ ಮಾಡಿದರಾಯಿತು. ಕೃತಕ ಬುದ್ಧಿಮತ್ತೆ (ಆರ್ಟಿಫಿಶಿಯಲ್ ಇಂಟೆಲಿಜೆನ್ಸ್) ತಂತ್ರಜ್ಞಾನವನ್ನು ಬಳಸಿ ಅದು ಆ ಚಿತ್ರವನ್ನು ಸುಂದರವಾಗಿಸಿ, ನಿಮ್ಮ ಮನಸ್ಸನ್ನು ಖುಷಿಪಡಿಸಿ, ಕಾರ್ಟೂನ್ ಆಗಿಯೋ, ಕ್ಯಾರಿಕೇಚರ್ ಆಗಿಯೋ, ಅಥವಾ ಹಳೆಯ ಚಿತ್ರವಾಗಿಯೋ ಪರಿವರ್ತಿಸುತ್ತದೆ.

ಹಿಂದೆಯೂ ಪಿಕ್ಸಾರ್, ಫೇಸ್‌ಆ್ಯಪ್ ಹೆಸರಿನ ಆ್ಯಪ್‌ಗಳೂ ವೈರಲ್ ಆಗಿದ್ದವು. ಇಂಥ ಆ್ಯಪ್‌ಗಳು ನಮ್ಮ ಖಾಸಗಿ ಮಾಹಿತಿಗಳನ್ನು ಕದಿಯುತ್ತವೆ ಎಂಬ ಮುನ್ನೆಚ್ಚರಿಕೆ ನಮಗೆ ಇರಬೇಕಲ್ಲವೇ? ಇತ್ತೀಚೆಗಷ್ಟೇ 'ಸೋವಾ' (Sova) ಎಂಬ ವೈರಸ್, ತಾನಾಗಿಯೇ ನಮ್ಮ ಸ್ಮಾರ್ಟ್‌ಫೋನ್ ಒಳಗೆ ಸೇರಿಕೊಂಡು, ಬ್ಯಾಂಕಿಂಗ್ ಆ್ಯಪ್‌ಗಳಿಂದ ಮಾಹಿತಿ ಕದ್ದು, ಪಾಸ್‌ವರ್ಡ್‌ಗಳನ್ನೂ ಕದ್ದು, ನಮ್ಮ ಖಾತೆಯನ್ನು ನಿಯಂತ್ರಿಸುವ ಅಪಾಯದ ಬಗ್ಗೆ ಸಾಕಷ್ಟು ಸದ್ದಾಗಿದೆ. ಹೀಗಾಗಿ ಅಂತರಜಾಲದಲ್ಲಿ ಪ್ರತಿ ಹೆಜ್ಜೆಯನ್ನೂ ಎಚ್ಚರಿಕೆಯಿಂದ ಇರಿಸಬೇಕಾಗುತ್ತದೆ.

ವಾಟ್ಸ್‌ಆ್ಯಪ್, ಟೆಲಿಗ್ರಾಂ, ಟ್ವಿಟರ್, ಫೇಸ್‌ಬುಕ್, ಇನ್‌ಸ್ಟಾಗ್ರಾಂ ಮುಂತಾಗಿ ನಾವು ಸಾಮಾನ್ಯವಾಗಿ ಬಳಸುವ ಸಾಮಾಜಿಕ ಜಾಲತಾಣಗಳಲ್ಲಿ ಬರುವ ಯಾವುದೇ ಅಪರಿಚಿತ ಲಿಂಕ್‌ಗಳನ್ನಾಗಲೀ ಕ್ಲಿಕ್ ಮಾಡುವ ಮುನ್ನ ಮತ್ತು ಪಾಪ್-ಅಪ್ (ಸ್ಕ್ರೀನ್ ಮೇಲೆ ಧುತ್ತನೇ ಬರುವ) ವಿಂಡೋಗಳಲ್ಲಿರುವ ಬಟನ್‌ಗಳನ್ನು (Submit, Yes, Install, OK) ಒತ್ತುವ ಮೊದಲು ಹಲವು ಬಾರಿ ಯೋಚನೆ ಮಾಡಬೇಕು.

ವೋಯ್ಲಾ ಅಥವಾ ಅಂಥದ್ದೇ 'ಕ್ಲಿಕ್ ಮಾಡಿಸುವ' ಆ್ಯಪ್‌ಗಳ ಸೇವಾ ನಿಯಮಗಳು ಹಾಗೂ ಖಾಸಗಿತನ ನೀತಿಯನ್ನು ಓದುವ ತಾಳ್ಮೆ ನಮಗಿದೆಯೇ? ಅಲ್ಲೊಂದು ವಾಕ್ಯವಿರುತ್ತದೆ - ಅದೆಂದರೆ, ನೀವು ಅಪ್‌ಲೋಡ್ ಮಾಡುವ ಚಿತ್ರಗಳನ್ನು ನಿಮಗೆ ಸೂಚಿಸದೆಯೇ ಅಥವಾ ಅದಕ್ಕಾಗಿ ಯಾವುದೇ ಹಣ ನೀಡದೆ ಅದನ್ನು 'ಆ್ಯಪ್ ಅಭಿವೃದ್ಧಿಪಡಿಸುವ ನಿಟ್ಟಿನಲ್ಲಿ' ಯಾವುದೇ ರೀತಿ ಬಳಸಿಕೊಳ್ಳಬಹುದು. ಮತ್ತೊಂದು ವಾಕ್ಯ, 'ನಿಮಗೆ ತಿಳಿಸದೆಯೇ ಈ ಷರತ್ತುಗಳನ್ನು ಮಾರ್ಪಡಿಸುವ ಹಕ್ಕು ನಮಗಿದೆ'. ಸರಕಾರಕ್ಕೆ ನಮ್ಮ ಮಾಹಿತಿಯನ್ನು ನೀಡಲು 'ಗೋಪ್ಯತೆ ಬಹಿರಂಗವಾಗುತ್ತದೆ' ಎಂಬ ಕಾರಣಕ್ಕೆ ಹಿಂದೇಟು ಹಾಕುವ ನಾವು ವೈರಲ್ ಆಗುವ ಇಂಥ ಯಾವುದೇ ಆ್ಯಪ್‌ಗಳಿಗೆ ಮಾಹಿತಿಯನ್ನು ಕೈಯಾರೆ ಧಾರೆಯೆರೆದು ನೀಡುತ್ತೇವೆ!

ಹೀಗಾಗಿ, ಇಂಟರ್ನೆಟ್‌ಗೆ ನಾವು ಬಂದೆವೆಂದರೆ ನಮ್ಮ ಖಾಸಗಿತನ ಅಥವಾ ಗೋಪ್ಯತೆಯ ಬಗೆಗಿನ ಕಾಳಜಿಯನ್ನು ಮರೆತುಬಿಡಬೇಕಾಗುತ್ತದೆ. ಇದೇರೀತಿ ಕ್ಲಿಕ್ ಮಾಡಲು ಪ್ರೇರೇಪಿಸಿ, ಸ್ವಯಂಚಾಲಿತವಾಗಿ ಪೋಸ್ಟ್ ಮಾಡಿಸುವ ಹಲವಾರು ಆಟಗಳೂ ಫೇಸ್‌ಬುಕ್, ಇನ್‌ಸ್ಟಾಗ್ರಾಂನಲ್ಲಿ ಹರಿದಾಡುತ್ತವೆ. ಉದಾಹರಣೆಗೆ, 'ಸಾವಿನ ದಿನಾಂಕ ಯಾವುದು ತಿಳಿಯಿರಿ, ನಿಮ್ಮ ಆತ್ಮೀಯ ಮಿತ್ರ ಯಾರು, ನಿಮ್ಮ ಉತ್ತಮ ಗುಣ ಯಾವುದು? ನಿಮ್ಮ ಹೆಸರಿನ ಅರ್ಥ ಏನು? ನಿಮ್ಮ ಭವಿಷ್ಯ ತಿಳಿಯಲು ಕ್ಲಿಕ್ ಮಾಡಿ' ಅಂತೆಲ್ಲ ಇರುತ್ತವಲ್ಲ? ಅವನ್ನು ನಾವೂ ಕ್ಲಿಕ್ ಮಾಡುತ್ತೇವೆ.

ಈ ಸಂದರ್ಭದಲ್ಲೆಲ್ಲಾ, ನಮ್ಮ ಮಾಹಿತಿಯನ್ನಷ್ಟೇ ಅಲ್ಲ, ಸ್ನೇಹಿತರ ಪಟ್ಟಿಯನ್ನೂ ಈ ಆ್ಯಪ್‌ಗಳಿಗೆ ನೀಡಿರುತ್ತೇವೆ! ಯಾರೂ ಆ ಆ್ಯಪ್‌ನ ಸೇವಾ ನಿಯಮಗಳನ್ನಾಗಲೀ, ಷರತ್ತುಗಳನ್ನಾಗಲೀ ಓದುವುದಿಲ್ಲ, ಓದಿದರೂ ಅವುಗಳು ಅರ್ಥವಾಗದಿರುವುದಿಲ್ಲ!

ಅಶ್ಲೀಲ ವಿಡಿಯೊಗಳನ್ನು ನೋಡುವವರು ಅಥವಾ ಗೇಮ್‌ಗಳನ್ನು ಆಡುವವರಿಗೆ ಹಾಗೂ ಕೆಲವೊಂದು ಬ್ರೌಸರ್‌ಗಳಲ್ಲಿ ಅರಿವಿಲ್ಲದೆ ಯಾವುದೋ ಲಿಂಕ್ ಕ್ಲಿಕ್ ಮಾಡಿದ ಬಳಿಕ, ಪದೇ ಪದೇ ನಕಲಿ ಎಚ್ಚರಿಕೆ ನೀಡುವ ಪಾಪ್-ಅಪ್ ವಿಂಡೋಗಳು ಗೋಚರಿಸುತ್ತವೆ. 'ನಿಮ್ಮ ಫೋನ್ ಅಪಾಯದಲ್ಲಿದೆ, ಆ್ಯಂಟಿ ವೈರಸ್ ಇನ್‌ಸ್ಟಾಲ್ ಮಾಡಿಕೊಳ್ಳಲು ಕ್ಲಿಕ್ ಮಾಡಿ' ಎಂದೋ, 'ನಿಮ್ಮ ಫೋನ್ ಕ್ಲೀನ್ ಮಾಡಲು ಕ್ಲಿಕ್ ಮಾಡಿ' ಅಂತಲೋ ಸಂದೇಶ ಗೋಚರಿಸುತ್ತದೆ. ಅಧಿಕೃತ ಆ್ಯಪ್ ಸ್ಟೋರ್‌ನಿಂದ ಮಾತ್ರವೇ ಆ್ಯಪ್‌ಗಳನ್ನು ಅಳವಡಿಸಿಕೊಳ್ಳಬೇಕು ಎಂದು ಎಷ್ಟು ಬಾರಿ ಎಚ್ಚರಿಸಿದರೂ, ನಾವು ಕ್ಲಿಕ್ ಮಾಡುತ್ತೇವೆ. ಅವು 'ಫಿಶಿಂಗ್' (phishing) ಆ್ಯಪ್‌ಗಳನ್ನು ಇನ್‌ಸ್ಟಾಲ್ ಮಾಡುವ ಲಿಂಕ್‌ಗಳಾಗಿರಬಹುದು. ಎಸ್‌ಎಂಎಸ್, ಇಮೇಲ್, ವಾಟ್ಸ್‌ಆ್ಯಪ್, ಟೆಲಿಗ್ರಾಂ ಮೂಲಕ ಇಂಥವು ಸಾಕಷ್ಟು ಲಿಂಕ್‌ಗಳು ಬರುತ್ತವೆ. ಕ್ಲಿಕ್ ಮಾಡಿದರೆ, ನಿಮಗೆ ತಿಳಿಯದೆಯೇ ಅಥವಾ ತಿಳಿದೇ ಕೆಲವೊಂದು ಆ್ಯಪ್‌ಗಳು (ಎಪಿಕೆ ಫೈಲ್‌ಗಳು) ಇನ್‌ಸ್ಟಾಲ್ ಆಗಿಬಿಡುತ್ತವೆ. ಅವುಗಳು ನಿಮ್ಮ ಮೊಬೈಲ್‌ನಲ್ಲಿದ್ದ ಎಲ್ಲ ಮಾಹಿತಿಯನ್ನೂ ಕದ್ದು, ಆ್ಯಪ್ ಸೃಷ್ಟಿಕರ್ತರಿಗೆ ರವಾನಿಸಬಲ್ಲವು.

ಹೀಗಾಗಿ ಆನ್‌ಲೈನ್‌ನಲ್ಲಿ ಸುರಕ್ಷಿತವಾಗಿರಬೇಕಿದ್ದರೆ ಏಕೈಕ ದಾರಿ ಎಂದರೆ ವಿವೇಚನೆ ಬಳಸುವುದು. ಕ್ಲಿಕ್ ಮಾಡುವ ಮುನ್ನ, ಮುಖ್ಯವಾದ ಮಾಹಿತಿ ಹಂಚಿಕೊಳ್ಳುವ ಮುನ್ನ ಈ ಲೇಖನವನ್ನು ಮತ್ತೊಮ್ಮೆ ನೆನಪಿಸಿಕೊಳ್ಳಿ.

❖

ಮಂಗಳನ ಅಂಗಳದಲ್ಲಿ ಜೈವಿಕಾಂಶ?

ನೇಸರ ಕಾಡನಕುಪ್ಪೆ

ಅನ್ಯಗ್ರಹಗಳಲ್ಲಿ ಜೀವಶೋಧದ ಕುತೂಹಲದ ಹಿಂದೆ ಮಾನವನ ಸ್ವಾರ್ಥವಿದೆ. ಭೂಮಿಯಲ್ಲಿ ಸಂಪನ್ಮೂಲಗಳು ಖಾಲಿಯಾಗುತ್ತ ಬಂದ ಹಾಗೆ ಮಾನವನಿಗೆ ಹೊಸದೊಂದು ಮನೆಯ ಅಗತ್ಯ ಒದಗಿ ಬಂದದ್ದೇ ಇದಕ್ಕೆ ಮುಖ್ಯ ಕಾರಣ. ಭೂಮಿಯನ್ನೇ ಹೋಲುವ ಇನ್ನೊಂದು ಗ್ರಹವೊಂದು ಸಿಕ್ಕರೆ ಅಲ್ಲಿ ಬಿಡಾರ ಹೂಡುವ ತವಕವದು. ಜೀವಶೋಧವನ್ನು ಅನ್ಯಗ್ರಹವೊಂದರಲ್ಲಿ ಮಾಡಿದ್ದೇ ಆದಲ್ಲಿ, ಮುಂದೊಂದು ದಿನ ತಾನೂ ಅಲ್ಲಿಗೆ ಗುಳೆ ಹೋಗಬಹುದು ಎನ್ನುವುದೇ ಇದರ ಹಿಂದಿನ ತರ್ಕ!

ಅನ್ಯಗ್ರಹ ಹಾಗೂ ಜೀವಶೋಧದ ಪ್ರಯತ್ನದಲ್ಲಿ ಮುಂಚೂಣಿಯಲ್ಲಿರುವ ಅಮೆರಿಕದ 'ನಾಸಾ' ಈಗಾಗಲೇ ಹಲವು ಮೈಲುಗಳನ್ನು ತುಳಿದಿರುವುದು ಈಗ ಹೊಸ ವಿಚಾರವಲ್ಲ. ಹೊಸ ವಿಚಾರವೆಂದರೆ, ಮಂಗಳಗ್ರಹದ ಅಂಗದಳಲ್ಲಿ ಹಿಂದೊಮ್ಮೆ ಜೀವಪರಿಸರವಿತ್ತು, ಅಲ್ಲಿ ನದಿ, ಸರೋವರಗಳಿದ್ದವು ಎಂಬ ವಾದಕ್ಕೆ ಪುಷ್ಟಿ ಎಂಬಂತಹ ಮಹತ್ವದ ಸಂಶೋಧನೆಯನ್ನು ಕಳೆದ ವಾರವಷ್ಟೇ 'ನಾಸಾ' ಮಾಡಿರುವುದು. ನಾಸಾದ 'ಪರ್ಸೀವರೆನ್ಸ್' ವಾಹನವು 2021ರ ಫೆಬ್ರುವರಿ 18ರಿಂದ ಮಂಗಳನ ಅಂಗಳದಲ್ಲಿ ತಿರುಗಾಟ ನಡೆಸುತ್ತಾ ವಾತಾವರಣ ಹಾಗೂ ಮೇಲ್ಮೈ ಅಧ್ಯಯನವನ್ನು ನಡೆಸಿ ಸಾಕಷ್ಟು ದತ್ತಾಂಶವನ್ನು ಈಗಾಗಲೇ ಭೂಮಿಗೆ ಕಳುಹಿಸಿದೆ. ಆದರೆ, ಇದೇ ಮೊದಲ ಬಾರಿಗೆ 'ಪರ್ಸೀವರೆನ್ಸ್' ವಾಹನವು ಮಂಗಳನ 'ಜೆಸೇರೋ' ಕುಳಿಯಲ್ಲಿರುವ 'ಸ್ಕಿನ್ನರ್' ಪರ್ವತಶ್ರೇಣಿಯ ನೆಲವನ್ನು ಕೊರೆದು ಸೀಮೆಸುಣ್ಣದ ಗಾತ್ರದ ಎರಡು ಕಲ್ಲುಮಿಶ್ರಿತ ಮಣ್ಣಿನ ಮಾದರಿಗಳನ್ನು ಸಂಗ್ರಹಿಸಿದೆ.

ನಾಸಾದ ಶೆರ್ಲಾಕ್ ಬೈರಿಗೆಯು ಸಂಗ್ರಹಸಿರುವ ಮಾದರಿ ಹಾಗೂ ಸ್ಥಳ (ಚಿತ್ರಕೃಪೆ: ನಾಸಾ)

ಇಲ್ಲಿ ಸಂಶೋಧನೆಯ ಮಹತ್ವವಿರುವುದು ಈ ಬಗೆಯ ಮಾದರಿಯ ಸಂಗ್ರಹಣೆಯಲ್ಲ. ನಾಸಾ ಈ ಹಿಂದೆಯೂ ಇದೇ ಬಗೆಯ ಮಾದರಿಗಳನ್ನು ಹಲವು ಬಾರಿ ಸಂಗ್ರಹಿಸಿದೆ. ಆದರೆ, ಈ ಬಾರಿಯ ಸಂಗ್ರಹಣೆ ಬಹುವಿಶೇಷವಾಗಿದೆ. ಈಗ ದೊರೆತಿರುವ ಮಾದರಿಯು ಮಂಗಳನ ಅಂಗಳದಲ್ಲಿ ಜೀವ ಪೋಷಣೆಗೆ ಅಗತ್ಯವಾದ ಸಾಕಷ್ಟು ಅಂಶಗಳು ಇರುವುದನ್ನು ಸಾಬೀತುಗೊಳಿಸಿದೆ. ನಾಸಾ ಇದನ್ನು ಹೀಗೆ ವ್ಯಾಖ್ಯಾನಿಸಿದೆ: 'ಪರ್ಸೀವರೆನ್ಸ್ ಸಂಗ್ರಹಿಸಿರುವ ಮಾದರಿಯಿಂದ ಮಂಗಳನ ಅಂಗಳದಲ್ಲಿ ಹಿಂದೊಮ್ಮೆ ಜೀವವಿತ್ತು ಎಂದು ಹೇಳಲಾಗದು. ಅಥವಾ ಮಾದರಿಯಲ್ಲಿ ಜೀವಿಗಳ ಅವಶೇಷಗಳಿಗೆ ಎಂದೂ ಹೇಳಲಾಗದು. ಆದರೆ, ಜೀವಪೋಷಣೆಗೆ ಅಗತ್ಯವಾದ ಜೈವಿಕ ಅಂಶಗಳು ಮಂಗಳನ ಮಣ್ಣಿನಲ್ಲಿವೆ' ಎಂದು ಹೇಳಿಕೆ ನೀಡಿರುವುದು ಬಹುದೊಡ್ಡ ಸಂಶೋಧನೆಯೆಂದೇ ಹೇಳಬಹುದು.

ಏನಿದು ಸಂಶೋಧನೆ?

ನಾಸಾ ಪರ್ಸೀವರೆನ್ಸ್ ವಾಹನವನ್ನು ನಿರ್ಮಾಣ ಮಾಡುವಾಗಲೇ 'ಶೆರ್ಲಾಕ್' ಎಂಬ ಬೈರಿಗೆಯನ್ನು ವಿಶೇಷವಾಗಿ ನಿರ್ಮಿಸಿ ಅದನ್ನು ವಾಹನಕ್ಕೆ ಅಳವಡಿಸಲಾಗಿತ್ತು. ಮಂಗಳನ ಅಂಗಳದ ಮೇಲೆ ಪರ್ಸೀವರೆನ್ಸ್ ಇಳಿದು ಸಾಕಷ್ಟು ತಿರುಗಾಟ ನಡೆಸುವವರೆಗೆ ಈ ಬೈರಿಗೆಯನ್ನು ಚಾಲೂಗೊಳಿಸಿರಲಿಲ್ಲ. ಆದರೆ, ಪರ್ಸೀವರೆನ್ಸ್ ವಾಹನವು ಸಾಕಷ್ಟು ದತ್ತಾಂಶವನ್ನು ಭೂಮಿಗೆ ರವಾನೆ ಮಾಡಿ, ದತ್ತಾಂಶದ ತೀವ್ರ ಸಂಶೋಧನೆಯ ಬಳಿಕ ಶೆರ್ಲಾಕ್ ತನ್ನ ಅಸಲಿ ಕಾರ್ಯ ಶುರು ಮಾಡಿದೆ. ಮಂಗಳ ಅಂಗಳದಲ್ಲಿ ಗರಿಷ್ಠ ಉಷ್ಣಾಂಶ ಹಾಗೂ ಬರಡು ನೆಲವನ್ನು ಕೊರೆಯುವಂತೆ ಸದೃಢವಾಗಿ ಶೆರ್ಲಾಕ್ ಬೈರಿಗೆಯನ್ನು ಸಿದ್ಧಪಡಿಸಲಾಗಿದೆ.

ನಾಸಾ ಹೇಳಿದ ಕೆಲಸವನ್ನು ಶೆರ್ಲಾಕ್ ಅಚ್ಚುಕಟ್ಟಾಗಿ ಮುಗಿಸಿದೆ. 'ಸ್ಕಿನ್ನರ್' ಪರ್ವತಶ್ರೇಣಿಯ ನೆಲದಲ್ಲಿ ಸುಮಾರು 100 ನೀಲನಕ್ಷೆಗಳನ್ನು ತಯಾರಿಸಿ ಅವುಗಳಲ್ಲಿ ಕೇವಲ ಎರಡು ಜಾಗಗಳಲ್ಲಿ ಮಾತ್ರ ರಂಧ್ರವನ್ನು ಕೊರೆದು ಮಾದರಿ ಸಂಗ್ರಹಿಸಿದೆ.

ಏನಿದೆ ಈ ಮಾದರಿಗಳಲ್ಲಿ?

ನಾಸಾ ಈ ಕುರಿತು ಕೇವಲ ಒಂದು ವಾಕ್ಯದ ಹೇಳಿಕೆಯನ್ನು ಮಾತ್ರ ನೀಡಿದೆ. ಆದರೆ, ಈ ಹೇಳಿಕೆಯು ಅನೇಕ ಚರ್ಚೆಗಳನ್ನು ಹುಟ್ಟುಹಾಕಿದೆ. ಹೊಸ ವ್ಯಾಖ್ಯಾನಗಳಿಗೆ ದಾರಿ ಮಾಡಿಕೊಟ್ಟಿದೆ. 'ಶೆರ್ಲಾಕ್ ಸಂಗ್ರಹಿಸಿರುವ ಮಾದರಿಯಲ್ಲಿ ಜೈವಿಕ (ಆರ್ಗ್ಯಾನಿಕ್) ಅಂಶಗಳಿವೆ' ಎಂದು ನಾಸಾ ಹೇಳಿದೆ. ಆದರೆ, ನಾಸಾ ಅತಿ ಸ್ಪಷ್ಟವಾಗಿ, 'ಜೈವಿಕ ಎಂದರೆ ಜೀವವಲ್ಲ' ಎಂದೂ ಹೇಳಿದೆ. ನಾಸಾದ ಪ್ರಕಾರ 'ಜೈವಿಕ ಎಂದರೆ ನೀರು ಹಾಗೂ ಕಲ್ಲು-ಮಣ್ಣುಗಳ ಪರಸ್ಪರ ಬೆರೆಯುವ ನೈಸರ್ಗಿಕ ಕ್ರಿಯೆಯಿಂದ ಆಗುವ ಉತ್ಪತ್ತಿ'. ಹಾಗಾಗಿ, ಈ ಹೇಳಿಕೆಗಳನ್ನು ಯಾವ ರೀತಿ ಅರ್ಥೈಸಬೇಕು ಎಂಬುದೇ ಈಗ ನಮ್ಮ ಮುಂದಿರುವ ಪ್ರಶ್ನೆ. ಒಂದು ಕಾಲದಲ್ಲಿ ಮಂಗಳನ ಅಂಗಳದ ಮೇಲೆ ನೀರು ಹರಿದಿತ್ತು ಎಂಬ ವಾದಕ್ಕೆ ಬಲವಾದ ಸಾಕ್ಷಿಯಂತೂ ಈ ಸಂಶೋಧನೆಯಿಂದ ದೊರೆತಂತಾಗಿದೆ.

ಮಹತ್ತರವಾದ ಸುಳಿವು

ಇದರ ಬೆನ್ನಲ್ಲೇ ನಾಸಾ ಮಹತ್ತರವಾದ ಮತ್ತೊಂದು ಸುಳಿವನ್ನೂ ಈ ಸಂಶೋಧನೆಯ ಬೆನ್ನಲ್ಲೇ ನೀಡಿದೆ. ಸಂಗ್ರಹವಾಗಿರುವ ಈ ಮಾದರಿಗಳನ್ನು ಭೂಮಿಗೆ ತಂದು ಇಲ್ಲಿನ ಅನೇಕ ಪ್ರಯೋಗಾಲಯಗಳಲ್ಲಿ ಸಂಶೋಧನೆ ನಡೆಸಲಾಗುವುದು ಎಂದು ಅಧಿಕೃತ ಹೇಳಿಕೆ ನೀಡಿದೆ. ಇದು ನಾಸಾ ಇತಿಹಾಸದಲ್ಲೇ ಅತಿ ದೊಡ್ಡ ಹೆಜ್ಜೆಗೆ ಮುನ್ನುಡಿ. ಏಕೆಂದರೆ, ಇದುವರೆಗೂ ಮಂಗಳನ ಅಂಗಳದ ಮೇಲೆ ಮಾನವ ನಿರ್ಮಿತ ವಾಹನಗಳು ಇಳಿದಿವೆಯೇ ಹೊರತು, ಮಾನವ ಇಳಿದಿಲ್ಲ. ತಕ್ಷಣವೇ ಇಳಿಯುವ ಸಾಧ್ಯತೆಗಳೂ ಕಡಿಮೆ; ಯಂತ್ರಗಳೇ ಈ ಮಾದರಿಯನ್ನು ಸಂಗ್ರಹಿಸಿ ಅಂತರಿಕ್ಷ ವಾಹನದ ಮೂಲಕ ವಾಪಸ್ಸು ಭೂಮಿಗೆ ಕಳುಹಿಸಬಹುದು.

ಆದರೂ, ಅದು ಮಹತ್ವದ ಸಾಧನೆಯೇ. ಏಕೆಂದರೆ, ಇದುವರೆಗೂ ಮಂಗಳನ ಅಂಗಳದಿಂದ ಯಾವುದೇ ಮಾನವ ನಿರ್ಮಿತ ಅಂತರಿಕ್ಷ ವಾಹನವು ಭೂಮಿಗೆ ವಾಪಸಾಗಿಲ್ಲ. ಭವಿಷ್ಯದಲ್ಲಿ ಅಂತಹ ವಾಹನವೊಂದು ಮಾದರಿ ಹೊತ್ತು ಭೂಮಿಗೆ ಮರಳುತ್ತದೆ ಎನ್ನುವುದಾದರೆ, ಸೀಮೆಸುಣ್ಣ ಗಾತ್ರದ ಮಾದರಿಯನ್ನು ಮಾತ್ರ ಹೊತ್ತಂತೂ ಬರುವುದಿಲ್ಲ. ಸಾಕಷ್ಟು ಇತರ ಮಾದರಿಗಳೂ ಖಂಡಿತವಾಗಿಯೂ ಇರುತ್ತವೆ. ಸದ್ಯಕ್ಕಂತೂ ಈ ಮಾದರಿಗಳು 'ಪರ್ಸೀವರೆನ್ಸ್' ವಾಹನದ ಹೊಟ್ಟೆಯ ಭಾಗದಲ್ಲಿ ಸುರಕ್ಷಿತವಾಗಿ ಕುಳಿತಿವೆ!

❖

ಸುಪ್ರೀಂ ಕೋರ್ಟ್‌ನಲ್ಲಿ ಸಾಲಿಸಿಟರ್ ಜನರಲ್ ತುಷಾರ್ ಮೆಹ್ತಾ ವಾದ ಮಂಡನೆ

ಹಿಜಾಬ್ ವಿವಾದದ ಹಿಂದೆ ಪಿಎಫ್‌ಐ ಕೈವಾಡ

ಪ್ರಜಾವಾಣಿ ವಾರ್ತೆ

ನವದೆಹಲಿ: ಕರ್ನಾಟಕದ ಪದವಿ ಪೂರ್ವ ಕಾಲೇಜುಗಳಲ್ಲಿ 2021ರ ವರೆಗೆ ಯಾವುದೇ ವಿದ್ಯಾರ್ಥಿನಿ ಹಿಜಾಬ್ ಧರಿಸುತ್ತಿರಲಿಲ್ಲ. ಆದರೆ, ಪಾಪ್ಯುಲರ್ ಫ್ರಂಟ್ ಸಂಘಟನೆ ಸಾಮಾಜಿಕ ಜಾಲತಾಣದ ಮೂಲಕ ಸಮಾಜದಲ್ಲಿ ಅಶಾಂತಿ ಉಂಟು ಮಾಡಲು ಹಾಗೂ ಕರ್ನಾಟಕ ಸರ್ಕಾರ ಸಾಂವಿಧಾನಿಕ ಹಕ್ಕುಗಳ ರಕ್ಷಣೆ ಹೆಸರಿನಲ್ಲಿ ಮಧ್ಯಪ್ರವೇಶಿಸುವಂತೆ ಮಾಡಲು ಚಳವಳಿ ಆರಂಭಿಸಿತು ಎಂದು ಕರ್ನಾಟಕ ಸರ್ಕಾರವು ಸುಪ್ರೀಂ ಕೋರ್ಟ್‌ಗೆ ತಿಳಿಸಿದೆ.

ಕರ್ನಾಟಕದ ಪದವಿಪೂರ್ವ ಕಾಲೇಜುಗಳಲ್ಲಿ ಹಿಜಾಬ್ ನಿಷೇಧಿಸಿರುವ ಹೈಕೋರ್ಟ್ ಆದೇಶ ಪ್ರಶ್ನಿಸಿ ಸಲ್ಲಿಕೆಯಾಗಿರುವ ಮೇಲ್ಮನವಿಗಳ ವಿಚಾರಣೆಯನ್ನು ನ್ಯಾಯಮೂರ್ತಿಗಳಾದ ಹೇಮಂತ್ ಗುಪ್ತ ಹಾಗೂ ಸುಧಾಂಶು ಧುಲಿಯಾ ಅವರನ್ನು ಒಳಗೊಂಡ ಪೀಠ ಮಂಗಳವಾರ ಮುಂದುವರಿಸಿದ್ದು, ಈ ವೇಳೆ ಕರ್ನಾಟಕ ಸರ್ಕಾರದ ಪರವಾಗಿ ಸಾಲಿಸಿಟರ್ ಜನರಲ್ ತುಷಾರ್ ಮೆಹ್ತಾ ವಾದ ಮಂಡಿಸಿದರು.

'ಇದು ಸಹಜ ಪ್ರತಿಕ್ರಿಯೆ ಅಲ್ಲ. ಬದಲಿಗೆ ಸಾಮಾಜಿಕ ಅಶಾಂತಿ ಉಂಟು ಮಾಡಲು ಶೈಕ್ಷಣಿಕ ವರ್ಷದಲ್ಲಿ ನಡೆಸಿದಂತಹ ದೊಡ್ಡ ಸಂಚಿನ ಭಾಗ. ಹಿಜಾಬ್ ಧರಿಸಲು ಅನುಮತಿ ನೀಡುವಂತೆ ವಿದ್ಯಾರ್ಥಿಗಳು ಏಕಾಏಕಿ ಪ್ರತಿಭಟನೆಗೆ ಇಳಿದಿದ್ದು ಸ್ವಂತ ಯೋಚನೆಯಿಂದ ಅಲ್ಲ' ಎಂದೂ ಅವರು ಹೇಳಿದರು.

ಶಾಲಾ ಕಾಲೇಜುಗಳಲ್ಲಿ ಹಿಜಾಬ್ ನಿಷೇಧಿಸಿ 2022ರ ಫೆಬ್ರುವರಿ 5ರಂದು ಕರ್ನಾಟಕ ಸರ್ಕಾರ ಹೊರಡಿಸಿದ ಆದೇಶವನ್ನು ಸಮರ್ಥಿಸಿಕೊಂಡ ಅವರು, 'ಅದೇ ವೇಳೆ ಕೇಸರಿ ಮಫ್ಲರ್, ಗಾಮ್ಚಾ ಇತ್ಯಾದಿಗಳನ್ನು ಸಹ ನಿಷೇಧಿಸಲಾಗಿತ್ತು. ಇದು ಕೇವಲ ಒಂದು ಸಮುದಾಯವನ್ನು ಗುರಿಯಾಗಿಸಿದ ಆದೇಶ ಎಂದು ಹೇಳುವುದು ತಪ್ಪು' ಎಂದರು.

ಆ ಸಂದರ್ಭದಲ್ಲಿ ಸರ್ಕಾರ ಕಠಿಣ ನಿರ್ಧಾರ ತೆಗೆದುಕೊಳ್ಳದಿದ್ದರೆ ತನ್ನ ಹೊಣೆಗಾರಿಕೆಯಿಂದ ದೂರ ಸರಿದಂತೆ ಆಗುತ್ತಿತ್ತು. ಶಾಲೆಗಳಲ್ಲಿ ವಸ್ತ್ರಸಂಹಿತೆ ಜಾರಿಗೊಳಿಸುವುದರ ಉದ್ದೇಶ ಸಮಾನತೆ, ಏಕರೂಪತೆಯನ್ನು ಖಾತರಿಪಡಿಸುವುದು ಆಗಿದೆ ಎಂದು ಅವರು ವಾದ ಮಂಡಿಸಿದರು.

'ಭಾರತ ಒಂದು ಜಾತ್ಯತೀತ ದೇಶ. ಇಸ್ಲಾಮಿಕ್ ದೇಶಗಳೆಂದು ಈಗಾಗಲೇ ಗುರುತಿಸಿಕೊಂಡಿರುವ ಇರಾನ್‌ನಂತಹ ದೇಶದಲ್ಲಿ ಸಹ ಎಲ್ಲ ಮಹಿಳೆಯರು ಹಿಜಾಬ್ ಧರಿಸುತ್ತಿಲ್ಲ, ಕೆಲವರು ಅದರ ವಿರುದ್ಧ ಹೋರಾಟ ಮಾಡುತ್ತಿದ್ದಾರೆ. ಕುರಾನ್‌ನಲ್ಲಿ ಹಿಜಾಬ್ ಕುರಿತು ಉಲ್ಲೇಖವಿದೆ ಮಾತ್ರಕ್ಕೆ ಅದು ಧಾರ್ಮಿಕ ಪದ್ಧತಿ ಆಗುತ್ತದೆಯೇ ಹೊರತು ಅತಿ ಅಗತ್ಯ ಎಂದಲ್ಲ' ಎಂದು ಅವರು ಪ್ರತಿಪಾದಿಸಿಕೊಂಡರು.

ಕರ್ನಾಟಕ ಸರ್ಕಾರದ ಅಡ್ವೊಕೇಟ್ ಜನರಲ್ ಪ್ರಭುಲಿಂಗ ನಾವಡಗಿ ವಾದ ಮಂಡಿಸಿ, 'ಧರ್ಮದ ಪ್ರತಿಯೊಂದು ಅಂಶಗಳನ್ನು ರಕ್ಷಿಸುವುದು ಪ್ರಾಯೋಗಿಕವಾಗಿ ಅಸಾಧ್ಯ. ಆದ್ದರಿಂದ, ಅಗತ್ಯ ಧಾರ್ಮಿಕ ಪದ್ಧತಿಗಳು ಎಂಬ ಸಿದ್ಧಾಂತ ವಿಕಸನಗೊಂಡಿದೆ' ಎಂದರು.

ವಿಚಾರಣೆಯ ವೇಳೆ ನ್ಯಾಯಪೀಠ, ವಿದ್ಯಾರ್ಥಿಗಳು ಸಮವಸ್ತ್ರ ಧರಿಸುವುದೇ ಇಲ್ಲ ಎಂದು ಅರ್ಜಿದಾರರು ಹೇಳುತ್ತಿಲ್ಲ. ವಿದ್ಯಾರ್ಥಿನಿಯರು ಚಳಿಗಾಲದಲ್ಲಿ ಮಫ್ಲರ್ ಧರಿಸುವುದನ್ನು ತಡೆಯಲು ಸಾಧ್ಯವೇ ಎಂದು ಪ್ರಶ್ನಿಸಿತು.

ಇದಕ್ಕೆ ತುಷಾರ್ ಮೆಹ್ತಾ ಉತ್ತರಿಸಿ, 'ನಿಯಮದ ಪ್ರಕಾರ ವಿದ್ಯಾರ್ಥಿಗಳು ಯಾವುದೇ ಧಾರ್ಮಿಕ ಗುರುತನ್ನು ಧರಿಸುವಂತಿಲ್ಲ. ಸಮವಸ್ತ್ರ ಎಂದರೆ ಸಮವಸ್ತ್ರ ಅಷ್ಟೇ. ಜಾತ್ಯತೀತ ಶಾಲೆಯಲ್ಲಿ ವಿದ್ಯಾರ್ಥಿಗಳು ಸಮವಸ್ತ್ರ ಧರಿಸಬೇಕು' ಎಂದರು.

ಆಗ ನ್ಯಾಯಪೀಠ, ಕರ್ನಾಟಕ ಹೈಕೋರ್ಟ್ ಅಗತ್ಯ ಧಾರ್ಮಿಕ ಪದ್ಧತಿಗಳ ಪರೀಕ್ಷೆಗೆ ಮುಂದಾಗಬಾರದಿತ್ತು ಎಂದು ಅಭಿಪ್ರಾಯ ವ್ಯಕ್ತಪಡಿಸಿತು. ಆಗ ತುಷಾರ್ ಮೆಹ್ತಾ, 'ಅಗತ್ಯ ಧಾರ್ಮಿಕ ಪದ್ಧತಿಗಳ ವಿಷಯದ ಚರ್ಚೆಯನ್ನು ಹೈಕೋರ್ಟ್ ತಡೆಯಬಹುದಿತ್ತು. ಅರ್ಜಿದಾರರೇ ಖುದ್ದಾಗಿ ಹಿಜಾಬ್ ಒಂದು ಅಗತ್ಯ ಧಾರ್ಮಿಕ ಪದ್ಧತಿ ಎಂಬ ವಾದದೊಂದಿಗೆ ಹೈಕೋರ್ಟ್ ಮೆಟ್ಟಿಲೇರಿದ್ದರು' ಎಂದರು.

ಬಳಿಕ ನ್ಯಾಯಪೀಠವು ವಿಚಾರಣೆಯನ್ನು ಬುಧವಾರಕ್ಕೆ ಮುಂದೂಡಿತು.

'ಹಿಜಾಬ್ ನಿಷೇಧ ಕಾನೂನುಬಾಹಿರ'

ನವದೆಹಲಿ: 'ತರಗತಿಗಳಲ್ಲಿ ಹಿಜಾಬ್ ನಿಷೇಧಿಸುವ ಕರ್ನಾಟಕ ಸರ್ಕಾರದ ನಿರ್ಧಾರ ಕಾನೂನುಬಾಹಿರ, ಅಸಾಂವಿಧಾನಿಕ ಹಾಗೂ ದುರುದ್ದೇಶದಿಂದ ಕೂಡಿದೆ' ಎಂದು ಅರ್ಜಿದಾರರ ಪರ ವಕೀಲರು ಸುಪ್ರೀಂ ಕೋರ್ಟ್‌ಗೆ ತಿಳಿಸಿದರು.

ನ್ಯಾಯಪೀಠದ ಎದುರು ಅರ್ಜಿದಾರರ ಪರವಾಗಿ ಹಿರಿಯ ವಕೀಲ ದುಷ್ಯಂತ್ ದವೆ ವಾದ ಮಂಡಿಸಿ, 'ಹಿಜಾಬ್ ಅನ್ನುವುದು ಮಹಿಳೆಯರ ಘನತೆಯನ್ನು ಹೆಚ್ಚಿಸುತ್ತದೆ. ಹಿಜಾಬ್ ಧರಿಸಿದಾಗ ಆಕೆ ತಲೆ ಮೇಲೆ ವಸ್ತ್ರ ಧರಿಸಿದ ಹಿಂದೂ ಮಹಿಳೆಯಂತೆಯೇ ಗೌರವಯುತವಾಗಿ ಕಾಣುತ್ತಾಳೆ' ಎಂದರು.

ಈ ವೇಳೆ ಪೀಠವು, ಘನತೆಯ ವ್ಯಾಖ್ಯಾನವು ಕಾಲದಿಂದ ಕಾಲಕ್ಕೆ ಬದಲಾಗಿದೆ ಮತ್ತು ಅದು ಬದಲಾಗುತ್ತಲೇ ಇರುತ್ತದೆ ಎಂದಿತು.

ನಂತರ ದವೆ, ವಿದ್ಯಾರ್ಥಿನಿಯರು ಶಾಲೆಗಳಲ್ಲಿ ಹಿಜಾಬ್ ಧರಿಸುವುದರಿಂದ ಯಾರದ್ದೇ ಶಾಂತಿ ಹಾಗೂ ಸುರಕ್ಷತೆಯ ಭಂಗ ಆಗುವುದಿಲ್ಲ ಎಂದು ವಾದಿಸಿದರು.

ಆಗ ನ್ಯಾಯಪೀಠ, ಹಲವು ಶಾಲೆಗಳಲ್ಲಿ ತಾರತಮ್ಯ ಇರುವ ಸಾಧ್ಯತೆ ಇದೆ. ಆದ್ದರಿಂದ ಮಕ್ಕಳಲ್ಲಿ ಸಿರಿವಂತರು, ಬಡವರು ಎಂಬ ವ್ಯತ್ಯಾಸ ಕಾಣಬಾರದು ಎಂಬ ಉದ್ದೇಶದಿಂದ ಸಮವಸ್ತ್ರವನ್ನು ಜಾರಿಗೊಳಿಸಲಾಗಿದೆ ಎಂದು ಅಭಿಪ್ರಾಯಪಟ್ಟಿತು.

ವಿಚಾರಣೆಯ ವೇಳೆ ನ್ಯಾಯಪೀಠ, ತಾವು ಹಿಜಾಬ್ ಅನುಮತಿ ನಿರಾಕರಣೆ ಎಂಬುದರ ಕುರಿತು ಕೆಲವು ವಾದಗಳನ್ನು ಆಲಿಸುತ್ತಿದ್ದೇವೆ ಎಂದಿತು.

ಆಗ ದವೆ, 'ವಸ್ತ್ರಸಂಹಿತೆ ಎಂಬುದು ಸಮಾಜದ ಮೇಲೆ ಅನಗತ್ಯ ಹೊರೆ ಹಾಕುವ ಬಹುಸಂಖ್ಯಾತರ ಕೂಡಿಕೊಳ್ಳಲು ಆಗುವುದಿಲ್ಲ' ಎಂದರು.

ನಂತರ ದವೆ, 'ಕರ್ನಾಟಕ ಸರ್ಕಾರ ಅಲ್ಪಸಂಖ್ಯಾತ ಸಮುದಾಯವನ್ನು ಗುರಿಯಾಗಿಸಿಕೊಂಡು ಹಲವು ಕ್ರಮಗಳನ್ನು ಕೈಗೊಂಡಿದೆ' ಎಂದು ಆರೋಪಿಸಿದರು.

ಆಗ ಸಾಲಿಸಿಟರ್ ಜನರಲ್ ತುಷಾರ್ ಮೆಹ್ತಾ, 'ಇದು ಸಾರ್ವಜನಿಕ ವೇದಿಕೆಯಲ್ಲ, ಅರ್ಜಿಯಲ್ಲಿರುವ ಅಂಶಗಳಿಗೆ ಸೀಮಿತವಾಗಿ ವಾದ ಮಂಡಿಸಿ' ಎಂದರು.

'ಗೌರಿ'ಗೆ ಬೆಸ್ಟ್ ಹ್ಯೂಮನ್ ರೈಟ್ಸ್ ಪ್ರಶಸ್ತಿ

'ಗೌರಿ' ಸಾಕ್ಷ್ಯಚಿತ್ರದ ಪೋಸ್ಟರ್

ಬೆಂಗಳೂರು: ಪತ್ರಕರ್ತೆ ದಿವಂಗತ ಗೌರಿ ಲಂಕೇಶ್ ಅವರ ಕುರಿತ ಸಾಕ್ಷ್ಯಚಿತ್ರ 'ಗೌರಿ'ಗೆ ಟೊರಂಟೊದಲ್ಲಿ ನಡೆದ ಮಹಿಳಾ ಚಲನಚಿತ್ರೋತ್ಸವದಲ್ಲಿ 'ಬೆಸ್ಟ್ ಹ್ಯೂಮನ್ ರೈಟ್ಸ್' ಪ್ರಶಸ್ತಿ ಲಭಿಸಿದೆ.

'ಗೌರಿ ಲಂಕೇಶ್ ಅವರ ಹತ್ಯೆ ಪ್ರಕರಣ ದೇಶದಾದ್ಯಂತ ಆಕ್ರೋಶವನ್ನು ಹುಟ್ಟುಹಾಕಿತ್ತು. ಈ ಸಾಕ್ಷ್ಯಚಿತ್ರವು ಭಾರತದಲ್ಲಿ ಪತ್ರಕರ್ತರು ಪ್ರತಿದಿನ ಎದುರಿಸುತ್ತಿರುವ ಮೌಖಿಕ ಮತ್ತು ದೈಹಿಕ ದಾಳಿಗಳ ವಿಷಯಗಳನ್ನು ತೆರೆದಿಟ್ಟಿದೆ. ಕಳೆದ ಐದು ವರ್ಷಗಳಲ್ಲಿ ಭಾರತದಲ್ಲಿ 200ಕ್ಕೂ ಹೆಚ್ಚು ಪತ್ರಕರ್ತರ ಮೇಲೆ ದಾಳಿಗಳಾಗಿವೆ. ಕಳೆದ ದಶಕದಲ್ಲಿ 30ಕ್ಕೂ ಹೆಚ್ಚು ಪತ್ರಕರ್ತರನ್ನು ಹತ್ಯೆ ಮಾಡಲಾಗಿದೆ. ಮಾತ್ರವಲ್ಲ, ಗೌರಿ ಲಂಕೇಶ್ ಪ್ರಕಟಿಸಿದ ವರದಿಗಳ ಪರಿಣಾಮವಾಗಿ ಅವರು 80ಕ್ಕೂ ಹೆಚ್ಚು ಪ್ರಕರಣಗಳನ್ನು ರಾಜ್ಯದ ವಿವಿಧ ಕೋರ್ಟ್‌ಗಳಲ್ಲಿ ಎದುರಿಸಬೇಕಾಗಿ ಬಂತು. ಇಂಥ ಗಂಭೀರ ವಿಷಯದ ಸುತ್ತ ಸಾಕ್ಷ್ಯಚಿತ್ರ ಸಂದಿದೆ' ಎಂದಿದ್ದಾರೆ ಚಿತ್ರದ ನಿರ್ದೇಶಕಿ ಕವಿತಾ ಲಂಕೇಶ್.

'ಈ ಸಾಕ್ಷ್ಯಚಿತ್ರ ಮಾಂಟ್ರಿಯಲ್‌ನ ದಕ್ಷಿಣ ಏಷ್ಯಾ ಫಿಲಂ ಫೆಸ್ಟಿವಲ್, ಡಾಕ್ ನ್ಯೂಯಾರ್ಕ್, ಆಮ್‌ಸ್ಟರ್‌ಡ್ಯಾಮ್‌ನ ಅಂತರರಾಷ್ಟ್ರೀಯ ಸಾಕ್ಷ್ಯಚಿತ್ರ ಉತ್ಸವ, ಸನ್‌ಡಾನ್ಸ್ ಚಿತ್ರೋತ್ಸವಗಳಿಗೂ ಆಯ್ಕೆಯಾಗಿದೆ' ಎಂದು ಕವಿತಾ ತಿಳಿಸಿದ್ದಾರೆ. ಆಮ್‌ಸ್ಟರ್‌ಡ್ಯಾಮ್ ಫ್ರೀ ಪ್ರೆಸ್ ಅನ್‌ಲಿಮಿಟೆಡ್ 'ಗೌರಿ' ಸಾಕ್ಷ್ಯಚಿತ್ರವನ್ನು ನಿರ್ಮಿಸಿದೆ.

ಚೆಕ್‌ಗೆ ಸಹಿ: ಮುರುಘಾ ಶ್ರೀ ಅರ್ಜಿ ತಿರಸ್ಕೃತ

ಚಿತ್ರದುರ್ಗ: ಪ್ರೌಢಶಾಲೆ ವಿದ್ಯಾರ್ಥಿನಿಯರಿಗೆ ಲೈಂಗಿಕ ಕಿರುಕುಳ ನೀಡಿದ ಆರೋಪದಲ್ಲಿ ಬಂಧಿತರಾಗಿರುವ ಶಿವಮೂರ್ತಿ ಮುರುಘಾ ಶರಣರು, ಮುರುಘಾ ಮಠ ಹಾಗೂ ಅಧೀನ ಸಂಸ್ಥೆಗಳಿಗೆ ಸಂಬಂಧಿಸಿದ ಚೆಕ್‌ಗಳಿಗೆ ಸಹಿ ಹಾಕಲು ಅನುಮತಿ ಕೋರಿ ಸಲ್ಲಿಸಿದ್ದ ಅರ್ಜಿಯನ್ನು ಜಿಲ್ಲಾ ನ್ಯಾಯಾಲಯ ಮಂಗಳವಾರ ತಿರಸ್ಕರಿಸಿದೆ.

ಮುರುಘಾ ಮಠ ಹಾಗೂ ಎಸ್‌ಜೆಎಂ ವಿದ್ಯಾಪೀಠದ ನೌಕರರಿಗೆ ಮಾಸಿಕ ವೇತನ ಮಂಜೂರು ಮಾಡುವ ಅಧಿಕಾರವನ್ನು ಶಿವಮೂರ್ತಿ ಮುರುಘಾ ಶರಣರು ಹೊಂದಿದ್ದು, ನ್ಯಾಯಾಂಗ ಬಂಧನದಲ್ಲಿರುವ ಸಂದರ್ಭ ಚೆಕ್‌ಗಳಿಗೆ ಸಹಿ ಹಾಕಲು ಅವಕಾಶ ಕಲ್ಪಿಸಬೇಕು ಎಂದು ಎರಡನೇ ಹೆಚ್ಚುವರಿ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಲಾಗಿತ್ತು.

ಮುರುಘಾ ಮಠಕ್ಕೆ ಪ್ರಭಾರ ಪೀಠಾಧಿಪತಿ ಹಾಗೂ ಎಸ್‌ಜೆಎಂ ವಿದ್ಯಾಪೀಠಕ್ಕೆ ಕಾರ್ಯದರ್ಶಿ ನೇಮಕಗೊಂಡಿದ್ದು, ಆಡಳಿತಾತ್ಮಕ ನಿರ್ಧಾರ ಕೈಗೊಳ್ಳಲು ಸಮಸ್ಯೆ ಇಲ್ಲ ಎಂದು ವಿಶೇಷ ಸರ್ಕಾರಿ ವಕೀಲರು ತಕರಾರು ಸಲ್ಲಿಸಿದ್ದರು. ವಿಚಾರಣೆ ಪೂರ್ಣಗೊಳಿಸಿದ್ದ ನ್ಯಾಯಾಧೀಶ ಬಿ.ಕೆ. ಕೋಮಲಾ ಆದೇಶವನ್ನು ಕಾಯ್ದಿರಿಸಿದ್ದರು.

ಕೊಡಗು: 13 ವರ್ಷದ ಗಂಡು ಹುಲಿ ಸೆರೆ

ಹುಲಿಯನ್ನು ಅರಣ್ಯ ಇಲಾಖೆ ಸಿಬ್ಬಂದಿ ಮಂಗಳವಾರ ಅರಿವಳಿಕೆ ಚುಚ್ಚುಮದ್ದು ನೀಡಿ ಸೆರೆ ಹಿಡಿದರು

ಸಿದ್ದಾಪುರ (ಕೊಡಗು ಜಿಲ್ಲೆ): ಇಲ್ಲಿನ ಮಾಲ್ದಾರೆ ಭಾಗದಲ್ಲಿ ಕಳೆದ ಕೆಲವು ದಿನಗಳಿಂದ ಜಾನುವಾರುಗಳನ್ನು ಕೊಂದು ಹಾವಳಿಯಿಟ್ಟಿದ್ದ ಹುಲಿಯನ್ನು ಅರಣ್ಯ ಇಲಾಖೆ ಸಿಬ್ಬಂದಿ ಮಂಗಳವಾರ ಸೆರೆ ಹಿಡಿದರು.

ಸುಮಾರು 13 ವಯಸ್ಸಿನ ಗಂಡು ಹುಲಿಗೆ ಎರಡು ಬಾರಿ ಅರಿವಳಿಕೆ ಚುಚ್ಚುಮದ್ದು ನೀಡಿದ ನಂತರ ಸೆರೆ ಹಿಡಿಯಲಾಯಿತು.

4 ಸಾಕಾನೆಗಳ ಸಹಾಯದಿಂದ ಕಾರ್ಯಾಚರಣೆ ನಡೆಸಲಾಗಿತ್ತು. ಒಮ್ಮೆ ಅರಿವಳಿಕೆ ಚುಚ್ಚುಮದ್ದು ನೀಡಿದ ನಂತರವೂ ಹುಲಿ ತಪ್ಪಿಸಿಕೊಂಡಿತ್ತು. ಸದ್ಯ, ಸಿಕ್ಕಿರುವ ಹುಲಿಯ ಕಾಲಿಗೆ ಗಾಯವಾಗಿದ್ದು, ಮೈಸೂರಿನ ಚಾಮರಾಜೇಂದ್ರ ಮೃಗಾಲಯಕ್ಕೆ ಚಿಕಿತ್ಸೆಗಾಗಿ ಕಳುಹಿಸಲು ಅರಣ್ಯ ಇಲಾಖೆ ಅಧಿಕಾರಿಗಳು ನಿರ್ಧರಿಸಿದ್ದಾರೆ.

'ಯಡಿಯೂರಪ್ಪಗೆ ಕಪ್ಪುಬಾವುಟ ತೋರಿಸಿ'

2ಎ ಮೀಸಲಾತಿಗಾಗಿ ಶಿಗ್ಗಾವಿಯಲ್ಲಿರುವ ಸಿ.ಎಂ ಮನೆ ಎದುರು ಧರಣಿ

ಪ್ರಜಾವಾಣಿ ವಾರ್ತೆ

ಹಾವೇರಿ ಜಿಲ್ಲೆ ಶಿಗ್ಗಾವಿ ಪಟ್ಟಣದಲ್ಲಿ ಮಂಗಳವಾರ ಪಂಚಮಸಾಲಿ ಸಮಾಜಕ್ಕೆ 2ಎ ಮೀಸಲಾತಿ ನೀಡುವಂತೆ ಆಗ್ರಹಿಸಿ ಕೂಡಲಸಂಗಮದ ಬಸವಜಯ ಮೃತ್ಯುಂಜಯ ಸ್ವಾಮೀಜಿ ನೇತೃತ್ವದಲ್ಲಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರ ಮನೆಯವರೆಗೆ ಪಾದಯಾತ್ರೆ ನಡೆಸಲಾಯಿತು

ಶಿಗ್ಗಾವಿ (ಹಾವೇರಿ ಜಿಲ್ಲೆ): 'ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರಿಗೆ ಪಂಚಮಸಾಲಿ ಸಮಾಜಕ್ಕೆ 2ಎ ಮೀಸಲಾತಿ ನೀಡುವ ಮನಸ್ಸಿದೆ. ಆದರೆ ಮಾಜಿ ಮುಖ್ಯಮಂತ್ರಿ, ಶಾಸಕ ಬಿ.ಎಸ್. ಯಡಿಯೂರಪ್ಪ ಮೀಸಲಾತಿ ನೀಡದಂತೆ ಒತ್ತಡ ತರುತ್ತಿದ್ದಾರೆ' ಎಂದು ಆರೋಪಿಸಿದ ಕೂಡಲಸಂಗಮ ಪಂಚಮಸಾಲಿ ಪೀಠದ ಬಸವಜಯ ಮೃತ್ಯುಂಜಯ ಸ್ವಾಮೀಜಿ, 'ರಾಜ್ಯದ ಪಂಚಮಸಾಲಿ ಸಮಾಜ ಯಡಿಯೂರಪ್ಪನವರಿಗೆ ಕಪ್ಪು ಬಾವುಟ ತೋರಿಸಬೇಕು' ಎಂದು ಸೂಚನೆ ನೀಡಿದರು.

2ಎ ಮೀಸಲಾತಿ ನೀಡುವಂತೆ ಆಗ್ರಹಿಸಿ ಮಂಗಳವಾರ ಶಿಗ್ಗಾವಿ ಪಟ್ಟಣದಲ್ಲಿ ಪಾದಯಾತ್ರೆ ನಡೆಸಿ, ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಮನೆ ಮುಂದೆ ನಡೆದ ಬೃಹತ್ ಧರಣಿ ನೇತೃತ್ವ ವಹಿಸಿ ಅವರು ಮಾತನಾಡಿದರು.

'ಸಮಾಜದ ಮಕ್ಕಳ ಶಿಕ್ಷಣ, ಉದ್ಯೋಗಕ್ಕಾಗಿ ಮೀಸಲಾತಿ ನೀಡಬೇಕು. ಮೀಸಲಾತಿ ನೀಡಿದರೆ ಯಡಿಯೂರಪ್ಪ, ಬೊಮ್ಮಾಯಿ ಫೋಟೊಗಳನ್ನು ಮನೆ, ಮಠಗಳಲ್ಲಿ ಇಟ್ಟು, ಚನ್ನಮ್ಮನಷ್ಟೇ ಅವರನ್ನು ಸ್ಮರಿಸುತ್ತೇವೆ. ಇಲ್ಲವಾದಲ್ಲಿ ರಾಜ್ಯದ ಪ್ರತಿ ಜಿಲ್ಲೆಯಲ್ಲಿ ಪಂಚಮಸಾಲಿಗಳನ್ನು ಸಂಘಟಿಸಿ ಬೆಂಗಳೂರಿಗೆ ತೆರಳಿ ವಿಧಾನಸೌಧಕ್ಕೆ ಮುತ್ತಿಗೆ ಹಾಕುತ್ತೇವೆ' ಎಂದು ಗುಡುಗಿದರು.

ಮುಖಂಡರಾದ ವಿಜಯಾನಂದ ಕಾಶಪ್ಪನವರ, ಹರಿಹರದ ಮಾಜಿ ಶಾಸಕ ಎಚ್.ಎಸ್.ಶಿವಶಂಕರಪ್ಪ, ವಿಧಾನ ಪರಿಷತ್ ಮಾಜಿ ಸದಸ್ಯ ಸೋಮಣ್ಣ ಬೇವಿನಮರದ, ಮಾಜಿ ಸಚಿವರಾದ ವಿನಯ ಕುಲಕರ್ಣಿ, ಬಿ.ಎ.ಪಾಟೀಲ, ಪಿ.ಸಿ.ಸಿದ್ದನಗೌಡ್ರ, ಮುಖಂಡರಾದ ಶಶಿಧರ ಯಲಿಗಾರ, ಶಿವಾನಂದ ಬಾಗೂರ ಪಾಲ್ಗೊಂಡಿದ್ದರು.

'ಪಂಚಮಸಾಲಿಗೆ 2 ಎ: ವರದಿ ನಂತರ ಕ್ರಮ'

ಬೆಂಗಳೂರು: ಪಂಚಮಸಾಲಿ ಸಮುದಾಯವನ್ನು 2ಎ ಗೆ ಸೇರ್ಪಡೆಗೊಳಿಸುವ ಬಗ್ಗೆ ಹಿಂದುಳಿದ ವರ್ಗಗಳ ಆಯೋಗ ವರದಿ ಸಲ್ಲಿಸಿದ ನಂತರ ಯಾರಿಗೂ ಅನ್ಯಾಯವಾಗದಂತೆ ಕ್ರಮ ತೆಗೆದುಕೊಳ್ಳುವುದಾಗಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ವಿಧಾನಸಭೆಯಲ್ಲಿ ಮಂಗಳವಾರ ತಿಳಿಸಿದರು.

ಮುಖ್ಯಮಂತ್ರಿಯವರ ಉತ್ತರದಿಂದ ಸಮಾಧಾನಗೊಳ್ಳದ ಬಿಜೆಪಿಯ ಬಸನಗೌಡ ಪಾಟೀಲ ಯತ್ನಾಳ ಮತ್ತು ಕಾಂಗ್ರೆಸ್‌ನ ಲಕ್ಷ್ಮೀ ಹೆಬ್ಬಾಳ್ಕರ್ ಅವರು ಸಭಾಧ್ಯಕ್ಷರ ಪೀಠದ ಮುಂದೆ ಧರಣಿ ನಡೆಸಿದರು.

'ಹಿಂದೆಯೂ ಒಮ್ಮೆ ವೈಜ್ಞಾನಿಕವಾಗಿ ಪ್ರಸ್ತಾವನೆ ಸಲ್ಲಿಸದ ಕಾರಣ ತಿರಸ್ಕೃತವಾಗಿತ್ತು. ಈ ಬಾರಿ ವೈಜ್ಞಾನಿಕವಾಗಿ ಮಾಡುತ್ತೇವೆ. ಇದಕ್ಕೆ ಮುಂದೆ ಕಾನೂನು ತೊಡಕುಗಳು ಬರಬಾರದು. ಮೀಸಲಾತಿ ಪ್ರಮಾಣ ಶೇ 50 ಮೀರಬಾರದು. ಯಾವುದೇ ಸಮುದಾಯಕ್ಕೆ ಅನ್ಯಾಯವೂ ಆಗದಂತೆ ಕ್ರಮ ತೆಗೆದುಕೊಳ್ಳುತ್ತೇನೆ' ಎಂದು ಸಿ.ಎಂ ಭರವಸೆ ನೀಡಿದರು.

ವಾಲ್ಮೀಕಿ ಸಮುದಾಯ, ಪರಿಶಿಷ್ಟ ಜಾತಿ/ಪಂಗಡ ಸೇರಿದಂತೆ ಹಲವು ಸಮುದಾಯಗಳು ಮೀಸಲಾತಿ ಹೆಚ್ಚಿಸಬೇಕು ಎಂದು ಹೋರಾಟ ನಡೆಸುತ್ತಿವೆ. ತಮ್ಮ ನ್ಯಾಯಯುತ ಬೇಡಿಕೆಗಳ ಈಡೇರಿಕೆಗಾಗಿ ಸಮುದಾಯಗಳು ಪ್ರತಿಭಟನೆ ನಡೆಸುವುದರಲ್ಲಿ ತಪ್ಪಿಲ್ಲ ಎಂದರು.

ಹಿಂದುಳಿದ ವರ್ಗಗಳ ಆಯೋಗದವರು ಈಗಾಗಲೇ 10 ರಿಂದ 12 ಜಿಲ್ಲೆಗಳಿಗೆ ಭೇಟಿ ನೀಡಿದ್ದಾರೆ. ಉಳಿದ ಜಿಲ್ಲೆಗಳಿಗೆ ಭೇಟಿ ನೀಡಿ ಮಾಹಿತಿ ಸಂಗ್ರಹಿಸಲಿದ್ದಾರೆ. ಆದಷ್ಟು ಬೇಗ ವರದಿ ನೀಡುವಂತೆ ಹಿಂದುಳಿದ ವರ್ಗಗಳ ಆಯೋಗಕ್ಕೆ ಸೂಚನೆ ನೀಡಿರುವುದಾಗಿ ಬೊಮ್ಮಾಯಿ ಹೇಳಿದರು.

ಬೊಮ್ಮಾಯಿ ಉತ್ತರದಿಂದ ಸಮಾಧಾನಗೊಳ್ಳದ ಯತ್ನಾಳ ಅವರು, ಸರ್ವಪಕ್ಷಗಳ ಸಭೆ ಕರೆಯಬೇಕು. ಈ ವಿಚಾರವಾಗಿ ಇಲ್ಲಿಯವರೆಗೂ ಸರ್ವಪಕ್ಷಗಳ ಸಭೆಯನ್ನೂ ಕರೆದಿಲ್ಲ ಎಂದು ಸಭಾಧ್ಯಕ್ಷರ ಪೀಠದ ಮುಂದೆ ಧರಣಿ ನಡೆಸಿದರು.

ಪರಿಸರ ಪ್ರೇಮಿ ಸಾಲುಮರದ ವೀರಾಚಾರಿ ಆತ್ಮಹತ್ಯೆ

ಪ್ರಜಾವಾಣಿ ವಾರ್ತೆ


ಸಾಲುಮರದ ವೀರಾಚಾರಿ

ದಾವಣಗೆರೆ: ವಿವಿಧೆಡೆ 2,500ಕ್ಕೂ ಹೆಚ್ಚು ಮರಗಳನ್ನು ಬೆಳೆಸಿ, ಪರಿಸರ ಜಾಗೃತಿ ಕಾರ್ಯದಲ್ಲಿ ತೊಡಗಿದ್ದ ಸಾಲುಮರದ ವೀರಾಚಾರಿ (72) ಅವರು ಜಿಲ್ಲೆಯ ಹರಿಹರ ತಾಲ್ಲೂಕಿನ ಮಿಟ್ಲಕಟ್ಟೆ ಗ್ರಾಮದ ಬಳಿ ತಾವು ಬೆಳೆಸಿದ್ದ ಮರಕ್ಕೇ ನೇಣು ಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ಮಂಗಳವಾರ ಬೆಳಗಿನಜಾವ ನಡೆದಿದೆ.

ಗ್ರಾಮದಲ್ಲಿನ ನ್ಯಾಯಬೆಲೆ ಅಂಗಡಿಯಲ್ಲಿ ಸಾರ್ವಜನಿಕರಿಗೆ ಮೋಸ ಮಾಡಲಾಗುತ್ತಿದೆ ಎಂದು ಆರೋಪಿಸಿ ವೀರಾಚಾರಿ ಹಲವು ಬಾರಿ ಪ್ರತಿಭಟನೆ ನಡೆಸಿದ್ದರು. ಜಿಲ್ಲಾಧಿಕಾರಿಯವರು ಅಂಗಡಿಯ ಪರವಾನಗಿ ರದ್ದುಗೊಳಿಸಿದ್ದರಾದರೂ, ಅಂಗಡಿ ಮಾಲೀಕ ನ್ಯಾಯಾಲಯದಿಂದ ತಡೆಯಾಜ್ಞೆ ತಂದಿದ್ದರು. ಈ ಕಾರಣಕ್ಕೆ ಮನನೊಂದು ವೀರಾಚಾರಿ ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಎಂದು ಗ್ರಾಮಸ್ಥರು ದೂರಿದ್ದಾರೆ.

ಶವವನ್ನು ಮರದಿಂದ ಕೆಳಗಿಳಿಸಲು ಬಿಡದೇ ಪ್ರತಿಭಟಿಸಿದ ಗ್ರಾಮಸ್ಥರು, ಆಹಾರ ಇಲಾಖೆಯ ಅಧಿಕಾರಿ ವಿರುದ್ಧ ಕ್ರಮ ಕೈಗೊಳ್ಳುವಂತೆ ಒತ್ತಾಯಿಸಿದರು. ಜಿಲ್ಲಾಧಿಕಾರಿ ಶಿವಾನಂದ ಕಾಪಶಿ ಸ್ಥಳಕ್ಕೆ ಭೇಟಿ ನೀಡಿ ಗ್ರಾಮಸ್ಥರ ಮನವೊಲಿಸಿದ ನಂತರ ಶವವನ್ನು ಕೆಳಕ್ಕಿಳಿಸಿ, ಮರಣೋತ್ತರ ಪರೀಕ್ಷೆಗೆ ಆಸ್ಪತ್ರೆಗೆ ಸಾಗಿಸಲಾಯಿತು.

ತಾಲ್ಲೂಕಿನ ಶಾಮನೂರಿನಿಂದ ಮಿಟ್ಲಕಟ್ಟೆವರೆಗಿನ ರಸ್ತೆಯ ಬದಿಯಲ್ಲಿ ಸಾಲುಮರ ಬೆಳೆಸಿದ್ದ ವೀರಾಚಾರಿ, ಸ್ವಂತದ ಸರಕು ಸಾಗಣೆ ವಾಹನದಲ್ಲಿ ಸಂಚರಿಸಿ ಜನರಿಗೆ ಸಸಿಗಳನ್ನು ವಿತರಿಸುತ್ತಿದ್ದರು. ಧ್ವನಿವರ್ಧಕದ ಮೂಲಕ ಪರಿಸರ ಜಾಗೃತಿ ಮೂಡಿಸುತ್ತಿದ್ದರು.

ವೀರಾಚಾರಿ ಅವರಿಗೆ ಪತ್ನಿ, ಒಬ್ಬ ಪುತ್ರ, ಮೂವರು ಪುತ್ರಿಯರಿದ್ದಾರೆ. ಪರಿಸರ ಕ್ಷೇತ್ರದಲ್ಲಿ ಅವರ ಕೊಡುಗೆಯನ್ನು ಪರಿಗಣಿಸಿ ರಾಜ್ಯ ಸರ್ಕಾರ 2019ರಲ್ಲಿ ರಾಜ್ಯೋತ್ಸವ ಪ್ರಶಸ್ತಿ ನೀಡಿ ಗೌರವಿಸಿತ್ತು.

ಗಾಣಗಾಪುರ, ಘತ್ತರಗಾ ಸೇತುವೆ ಜಲಾವೃತ

ಕಲಬುರಗಿ: ಮಹಾರಾಷ್ಟ್ರದ ಉಜನಿ ಜಲಾಶಯ ಸಂಪೂರ್ಣ ಭರ್ತಿಯಾಗಿದ್ದರಿಂದ ಹೆಚ್ಚುವರಿ ನೀರನ್ನು ನದಿಗೆ ಬಿಡಲಾಗುತ್ತಿದ್ದು, ತಾಲ್ಲೂಕಿನ ಭೀಮಾ ನದಿಗೆ ಅಡ್ಡಲಾಗಿ ಕಟ್ಟಿರುವ ಮಣ್ಣೂರು ಗ್ರಾಮದ ಹತ್ತಿರವಿರುವ ಭುಯ್ಯಾರ ಸೇತುವೆ ಹಾಗೂ ಘತ್ತರಗಾ, ದೇವಲ ಗಾಣಗಾಪುರ ಸೇತುವೆಗಳು ಮುಳುಗಡೆಯಾಗಿವೆ.

ಸಂಜೆಯವರೆಗೂ ನೀರು ಕಡಿಮೆಯಾಗದ ಪರಿಣಾಮ ತಾಲ್ಲೂಕಿನ ಜನರು ಇಂಡಿ ತಾಲ್ಲೂಕಿನ ವಿಜಯಪುರಕ್ಕೆ ಹಾಗೂ ಜೇವರ್ಗಿ ತಾಲ್ಲೂಕಿಗೆ ಸಂಚರಿಸಲು ಸಾಧ್ಯವಾಗುತ್ತಿಲ್ಲ ಎಂದು ಭೀಮಾ ಏತ ನೀರಾವರಿ ಉಪ ವಿಭಾಗದ ಸಹಾಯಕ ಕಾರ್ಯನಿರ್ವಾಹಕ ಎಂಜಿನಿಯರ್ ಸಂತೋಷಕುಮಾರ್ ಪಾಟೀಲ ತಿಳಿಸಿದರು. ಭೀಮಾ ನದಿಯಲ್ಲಿ ಪ್ರವಾಹ ಉಂಟಾಗಿದ್ದರಿಂದ ತಾಲ್ಲೂಕಿನ ಮಣ್ಣೂರು ಗ್ರಾಮದ ಎಲ್ಲಮ್ಮ ದೇವಿ ದೇವಸ್ಥಾನ ಜಲಾವೃತವಾಗಿದ್ದು, ಭಕ್ತರ ದರ್ಶನ ನಿಷೇಧಿಸಲಾಗಿದೆ.

ಬೀದರ್, ಕಮಲಾನಗರ, ಔರಾದ್‌ನಲ್ಲಿ ಅರ್ಧ ಗಂಟೆ ಮಳೆಯಾಗಿದೆ.

ಜಲಾಶಯದ ನೀರಿನ ಮಟ್ಟ (ಸಮುದ್ರ ಮಟ್ಟದಿಂದ)

ಜಲಾಶಯ	ಗರಿಷ್ಠ ಮಟ್ಟ (ಅಡಿಗಳಲ್ಲಿ)	ಇಂದಿನ ಮಟ್ಟ	ಒಳಹರಿವು (ಕ್ಯುಸೆಕ್‌ಗಳಲ್ಲಿ)	ಹೊರಹರಿವು (ಕ್ಯುಸೆಕ್‌ಗಳಲ್ಲಿ)
ಕೆ ಆರ್ ಎಸ್*	124.80	124.42	10,146	8,900
ಹಾರಂಗಿ	2,859	2,857.87	1,428	1,350
ಕಬಿನಿ	2,284	2,283.02	5,420	2,050
ಹೇಮಾವತಿ	2,922	2,921.97	4,960	4,900
ಲಿಂಗನಮಕ್ಕಿ	1,819	1,816	4,614	6,948
ಸೂಪಾ (ಮೀ)	564	553.92	3,563	600
ಮಾಣಿ	594	590	96	487
ತುಂಗಭದ್ರಾ	1,633	1,633	21,196	21,524
ಮಲಪ್ರಭಾ	2,079.50	2,079.50	1,794	1,794
ಘಟಪ್ರಭಾ	2,175	2,174.81	7,555	4,599
ಭದ್ರಾ	186	184	4,770	4,770
ಆಲಮಟ್ಟಿ (ಮೀ)	519.6	519.46	1,07,985	1,00,000
ನಾರಾಯಣಪುರ (ಮೀ)	492.25	491.51	54,000	39,900

* ನೆಲಮಟ್ಟದಿಂದ

'ವಾದ ಕೇಳಿ ಕೇಳಿ ಕೂದಲು ಉದುರಿ ಹೋಗಿದೆ..!'

ಬೆಂಗಳೂರು: ನಿಮ್ಮ ವಾದ ಕೇಳಿ ಕೇಳಿ ನನ್ನ ತಲೆಯ ಕೂದಲೆಲ್ಲಾ ಉದುರಿ ಹೋಗಿವೆ...!

ಹೈಕೋರ್ಟ್‌ನ ಹಿರಿಯ ನ್ಯಾಯಮೂರ್ತಿಯೊಬ್ಬರು ಮಂಗಳವಾರ ಚುನಾವಣಾ ತಕರಾರಿಗೆ ಸಂಬಂಧಿಸಿದ ಪ್ರಮುಖ ಅರ್ಜಿಯೊಂದನ್ನು ವಿಚಾರಣೆ ನಡೆಸುತ್ತಿದ್ದರು. ಈ ವೇಳೆ ಅರ್ಜಿದಾರರ ಪರ ಹಿರಿಯ ವಕೀಲೆ, 'ಸ್ವಾಮಿ, ಪ್ರಕರಣದಲ್ಲಿ ಇನ್ನೊಂದಿಷ್ಟು ಅಂಶಗಳನ್ನು ನಾನು ವಿವರಿಸಬೇಕಿದ್ದು, ವಿಚಾರಣೆಯನ್ನು ಶುಕ್ರವಾರಕ್ಕೆ ನಿಗದಿ ಮಾಡಿ' ಎಂದು ಮನವಿ ಮಾಡಿದರು.

ಈ ಮಾತಿಗೆ ಕೂಡಲೇ ನ್ಯಾಯಮೂರ್ತಿಗಳು, 'ನಿಮ್ಮ ವಾದ ಕೇಳಿ ಕೇಳಿ ನನ್ನ ತಲೆಯ ಕೂದಲೆಲ್ಲಾ ಉದುರಿ ಹೋಗಿವೆ. ಇನ್ನೂ ಎಷ್ಟು ವಾದ ಮುಂದುವರಿಸುತ್ತೀರಿ. ಬೇಗ ಮುಗಿಸಿ' ಎಂದು ಚಟಾಕಿ ಹಾರಿಸಿದರು.

ಉದ್ಯೋಗ ವಾಣಿ

SBI
ಭಾರತೀಯ ಸ್ಟೇಟ್ ಬ್ಯಾಂಕ್
ಕೇಂದ್ರ ನೇಮಕಾತಿ ಮತ್ತು ಪದೋನ್ನತಿ ವಿಭಾಗ
ಕಾರ್ಪೊರೇಟ್ ಸೆಂಟರ್, ಮುಂಬೈ
(ಜಾಹೀರಾತು ನಂ. CRPD/CR/2022-23/15)

ಭಾರತೀಯ ಸ್ಟೇಟ್ ಬ್ಯಾಂಕ್ ನಲ್ಲಿ (ಎಸ್‌ಬಿಐ) ಗುಮಾಸ್ತರ ವಿಭಾಗದಲ್ಲಿ ಜ್ಯೂನಿಯರ್ ಅಸೋಸಿಯೇಟ್ಸ್‌ಗಳ (ಗ್ರಾಹಕ ಬೆಂಬಲ ಮತ್ತು ಮಾರಾಟಗಳು) ನೇಮಕಾತಿ

ಎಸ್‌ಬಿಐಯಲ್ಲಿ ಗುಮಾಸ್ತರ ವಿಭಾಗದಲ್ಲಿ ಜ್ಯೂನಿಯರ್ ಅಸೋಸಿಯೇಟ್ಸ್ (ಗ್ರಾಹಕ ಬೆಂಬಲ ಮತ್ತು ಮಾರಾಟಗಳು) ಗಳ ನೇಮಕಾತಿಗಾಗಿ ಭಾರತೀಯ ನಾಗರಿಕರಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ಖಾಲಿ ಹುದ್ದೆಗಳ: 5212 **(ಎಸ್‌ಸಿ, ಎಸ್‌ಟಿ ಮತ್ತು ಒಬಿಸಿಗಳಿಗಾಗಿ 204 ಬಾಕಿ ಇರುವ ಖಾಲಿ ಹುದ್ದೆಗಳನ್ನು ಒಳಗೊಂಡು).**

ಖಾಲಿ ಹುದ್ದೆಗಳು ವಿವರಗಳು, ಅರ್ಹತೆಯ ಮಾನದಂಡಗಳು, ನಿಯಮಗಳು ಮತ್ತು ಷರತ್ತುಗಳು ಮತ್ತು ಆನ್‌ಲೈನ್ ಅರ್ಜಿಗಾಗಿ ದಯವಿಟ್ಟು ಬ್ಯಾಂಕ್‌ನ ವೆಬ್‌ಸೈಟ್ https://www.sbi.co.in/careers ಅಥವಾ https://bank.sbi/careers- **"Latest Announcement/Current Openings"** ಇಲ್ಲಿಗೆ ಭೇಟಿ ನೀಡಿರಿ. ಅಭ್ಯರ್ಥಿಗಳು ಅಲ್ಲಿ ಲಭ್ಯವಿರುವ ಲಿಂಕ್‌ನ ಮೂಲಕ ತಮ್ಮ ಅರ್ಜಿಯನ್ನು ನೋಂದಾಯಿಸಿಕೊಳ್ಳಬಹುದು.

- ಅರ್ಜಿಯ ಆನ್‌ಲೈನ್ ನೋಂದಾವಣೆ ಮತ್ತು ಶುಲ್ಕಗಳ ಪಾವತಿ: 07.09.2022 ರಿಂದ 27.09.2022
- ಆನ್‌ಲೈನ್ ಪ್ರಿಲಿಮಿನರಿ ಪರೀಕ್ಷೆಯ ದಿನಾಂಕ (ತಾತ್ಕಾಲಿಕ): ನವಂಬರ್ 2022ರಲ್ಲಿ ಬೇರೆ ಬೇರೆ ದಿನಾಂಕಗಳು
- ಆನ್‌ಲೈನ್ ಮುಖ್ಯ ಪರೀಕ್ಷೆಯ ದಿನಾಂಕ (ತಾತ್ಕಾಲಿಕ) : ಡಿಸೆಂಬರ್ 2022 / ಜನವರಿ 2023ರಲ್ಲಿ.

ಸ್ಥಳ : ಮುಂಬೈ
ದಿನಾಂಕ : 07.09.2022
ಪ್ರಧಾನ ವ್ಯವಸ್ಥಾಪಕರು (ಆರ್‌ಪಿ ಮತ್ತು ಪಿಎಮ್)

JSS MAHAVIDYAPEETHA
Jagadguru Dr. Sri Shivarathri Rajendra Circle,
Mysore-570 004. Ph.: 0821-2548201 Fax: 0821-2548218
E-mail: dce@jssonline.org, Web: www.jssonline.org

REQUIRED

No. CED-I/EST/02/2021-22 Dt: 21.09.2022

Applications are invited for the posts of **Assistant Professors** in the following subjects, for **Undergraduate / Postgraduate Departments.**

Sl.No.	Subject		
1.	Physics	9.	Physical Education
2.	Chemistry	10.	Computer Science
3.	Botany	11.	Animation
4.	Biotechnology	12.	Master of Computer Applications
5.	Micro Biology	13.	Food Processing & Engineering (B.Voc & M.Voc)
6.	Zoology		
7.	Journalism	14.	Software Development (B.Voc & M.Voc)
8.	Biochemistry	15.	English

Qualifications: 1. As per UGC Norms
2. For More Details Visit www.jssonline.org

Eligible candidates have to send their detailed profiles along with the certificates to dce@jssonline.org within 10days.

Salary as per JSS Mahavidyapeetha norms.

Sd/-
Executive Secretary

Shamanur Education Trust (R.)
SMT. PUSHPA SHAMANUR MAHALINGAPPA RESIDENTIAL CBSE, ICSE SCHOOL & PU SCIENCE COLLEGE
\# 5335, 1st Main Road, Near Bapuji Engineering College, Swamy Vivekananda Badavane, Davanagere, Karnataka.

REQUIRED TEACHERS

We invite well qualified & experienced Teachers for our CBSE & ICSE Schools.

SCIENCE, MATHS, SOCIAL & ENGLISH

Class	Salary
1st - 4th Std	Upto ₹ 37 K
5th - 8th Std	Upto ₹ 45 K
9th - 10th Std	Upto ₹ 55 K

SUBJECT MATTER EXPERTS FOR R&D (Research & Development) WING
SCIENCE (PHYSICS, CHEMISTRY, BIOLOGY), MATHS, SOCIAL, ENGLISH
Qualification : M.Sc./M.A. in respective discipline & B.Ed.
Salary : Best in the industry. No bar for the deserving Candidates.

Co-ordinator For Pre-School, Middle School & High School. Salary : Upto ₹ 50K

Manager (Campus Incharge) Salary : ₹ 35K to 50K

Vice Principal for CBSE & ICSE School Salary : Upto ₹ 9 Lakh per Annum

Principal for CBSE & ICSE School Salary : ₹ 12 Lakh to 15 Lakh per Annum

Eligible candidates can walk-in from 22- Sep to 29-Sep including Sunday, 10-00am to 5-00pm.
For Residential Teachers Food & Accomodation will be provided.

Mail your Resume along with Experience to : hrspsm.set@gmail.com OR

WHATSAPP : 9686266990 FOR ENQUIRY CALL : 8970071100

ಬಿ.ಎಲ್.ಡಿ.ಇ. ಸಂಸ್ಥೆ
ಬಂಗಾರಮ್ಮ ಸಜ್ಜನ ಆವರಣ, ಬಿ. ಎಂ. ಪಾಟೀಲ ರಸ್ತೆ (ಸೋಲಾಪುರ ರಸ್ತೆ), ವಿಜಯಪುರ 586103 (ಕರ್ನಾಟಕ),
ದೂರವಾಣಿ: 08352-262770, ಫ್ಯಾಕ್ಸ್: 262609

ಪ್ರಕಟಣೆ

ಮಾನ್ಯ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಧಾರವಾಡ ಇವರ ಜ್ಞಾಪನ ಸಂಖ್ಯೆ: ಜಿ12:ಖಾಶಿಅ:ಬಿಎಲ್‌ಡಿ:ಖಾಹುತುಂ:85:2019-20/1633 ದಿನಾಂಕ: **26-08-2022** ರನ್ವಯ ಸಂಸ್ಥೆಯ ಆಧೀನದಲ್ಲಿ ನಡೆಯುವ ಅನುದಾನಿತ ಪ್ರೌಢಶಾಲೆಗಳಲ್ಲಿ ಈ ಕೆಳಗೆ ಖಾಲಿ ಇರುವ ಸಹ ಶಿಕ್ಷಕರ ಹುದ್ದೆಗಳನ್ನು ಭರ್ತಿ ಮಾಡಿಕೊಳ್ಳಲು ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ಹುದ್ದೆಗಳ ವಿವರಗಳು

ಅ. ನಂ.	ಹುದ್ದೆಗಳ ವಿವರ	ವಿದ್ಯಾರ್ಹತೆ	ಅನುಮತಿಸಿದ ವಿಷಯ	ಮೀಸಲಾತಿ ಗುಂಪು	ಸೂಚ್ಯಾಂಕ	ಮಾಧ್ಯಮ	ಹುದ್ದೆಗಳ ಸಂಖ್ಯೆ
01	ಸಹ ಶಿಕ್ಷಕರು	ಬಿ.ಎಸ್ಸಿ. ಬಿ.ಇಡಿ.	ಗಣಿತ	ಸಾಮಾನ್ಯ	62ನೇ ಸೂಚ್ಯಾಂಕ	ಕನ್ನಡ	1
02	ಸಹ ಶಿಕ್ಷಕರು	ಆರ್.ಬಿ.ವಿ.ಎಚ್.ಎಸ್./ ಬಿ.ಎ. ಬಿ.ಇಡಿ.	ಹಿಂದಿ	2ಎ (ಪಿ.ಎಚ್.)	63ನೇ ಸೂಚ್ಯಾಂಕ	ಕನ್ನಡ	1
03	ಸಹ ಶಿಕ್ಷಕರು	ಬಿ.ಎಸ್ಸಿ. ಬಿ.ಇಡಿ.	ವಿಜ್ಞಾನ (ಸಿ.ಬಿ.ಝಡ್)	ಸಾಮಾನ್ಯ (ಮಹಿಳೆ)	64ನೇ ಸೂಚ್ಯಾಂಕ	ಕನ್ನಡ	1
04	ಸಹ ಶಿಕ್ಷಕರು	ಬಿ.ಎ. ಬಿ.ಇಡಿ.	ಸಮಾಜ ವಿಜ್ಞಾನ	3ಬಿ(ಗ್ರಾಮೀಣ)	65ನೇ ಸೂಚ್ಯಾಂಕ	ಕನ್ನಡ	1
05	ಸಹ ಶಿಕ್ಷಕರು	ಬಿ.ಎಸ್ಸಿ. ಬಿ.ಇಡಿ.	ಗಣಿತ	ಸಾಮಾನ್ಯ (ಗ್ರಾಮೀಣ)	66ನೇ ಸೂಚ್ಯಾಂಕ	ಕನ್ನಡ	1
06	ಸಹ ಶಿಕ್ಷಕರು	ಬಿ.ಎ. ಬಿ.ಇಡಿ.	ಸಮಾಜ ವಿಜ್ಞಾನ	ಪರಿಶಿಷ್ಟ ಜಾತಿ (ಗ್ರಾಮೀಣ)	67ನೇ ಸೂಚ್ಯಾಂಕ	ಕನ್ನಡ	1
07	ಸಹ ಶಿಕ್ಷಕರು	ಆರ್.ಬಿ.ವಿ.ಎಚ್.ಎಸ್./ ಬಿ.ಎ. ಬಿ.ಇಡಿ.	ಹಿಂದಿ	ಸಾಮಾನ್ಯ (ಕನ್ನಡ ಮಾಧ್ಯಮ)	68ನೇ ಸೂಚ್ಯಾಂಕ	ಕನ್ನಡ	1
08	ಸಹ ಶಿಕ್ಷಕರು	ಬಿ.ಎ. ಬಿ.ಇಡಿ.	ಸಮಾಜ ವಿಜ್ಞಾನ	2ಎ (ಮಹಿಳೆ)	69ನೇ ಸೂಚ್ಯಾಂಕ	ಕನ್ನಡ	1
09	ಸಹ ಶಿಕ್ಷಕರು	ಬಿ.ಎಸ್ಸಿ. ಬಿ.ಇಡಿ.	ಗಣಿತ	ಸಾಮಾನ್ಯ (ಮಹಿಳೆ)	70ನೇ ಸೂಚ್ಯಾಂಕ	ಕನ್ನಡ	1
10	ಸಹ ಶಿಕ್ಷಕರು	ಬಿ.ಎಸ್ಸಿ. ಬಿ.ಇಡಿ.	ಗಣಿತ	ಪರಿಶಿಷ್ಟ ಪಂಗಡ (ಗ್ರಾಮೀಣ)	71ನೇ ಸೂಚ್ಯಾಂಕ	ಕನ್ನಡ	1
11	ಸಹ ಶಿಕ್ಷಕರು	ಬಿ.ಎ. ಬಿ.ಇಡಿ.	ಉರ್ದು	ಸಾಮಾನ್ಯ (ಗ್ರಾಮೀಣ)	72ನೇ ಸೂಚ್ಯಾಂಕ	ಕನ್ನಡ	1
12	ಸಹ ಶಿಕ್ಷಕರು	ಬಿ.ಎಸ್ಸಿ. ಬಿ.ಇಡಿ.	ಗಣಿತ	3ಎ (ಮಹಿಳೆ)	73ನೇ ಸೂಚ್ಯಾಂಕ	ಕನ್ನಡ	1
13	ಸಹ ಶಿಕ್ಷಕರು	ಬಿ.ಎಸ್ಸಿ. ಬಿ.ಇಡಿ.	ಗಣಿತ	ಸಾಮಾನ್ಯ (ಯೋ.ನಿ)	74ನೇ ಸೂಚ್ಯಾಂಕ	ಕನ್ನಡ	1
14	ಸಹ ಶಿಕ್ಷಕರು	ಬಿ.ಎ. ಬಿ.ಇಡಿ.	ಕನ್ನಡ	ಪರಿಶಿಷ್ಟ ಜಾತಿ (ಮಹಿಳೆ)	75ನೇ ಸೂಚ್ಯಾಂಕ	ಕನ್ನಡ	1
15	ಸಹ ಶಿಕ್ಷಕರು	ಬಿ.ಎ. ಬಿ.ಇಡಿ.	ಸಮಾಜ ವಿಜ್ಞಾನ	ಸಾಮಾನ್ಯ (ಮಹಿಳೆ)	76ನೇ ಸೂಚ್ಯಾಂಕ	ಕನ್ನಡ	1

ಮರು ಪ್ರಕಟಣೆ-03

ಮಾನ್ಯ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಧಾರವಾಡ ಇವರ ಜ್ಞಾಪನ ಸಂಖ್ಯೆ: ಜಿ12:ಖಾಶಿಅ:ಬಿಎಲ್‌ಡಿ:ಖಾಹುತು:ಅನು:05:2015-16/213 ದಿನಾಂಕ: **22-04-2015** ರನ್ವಯ ಸಂಸ್ಥೆಯ ಆಧೀನದಲ್ಲಿ ನಡೆಯುವ ಅನುದಾನಿತ ಪ್ರೌಢಶಾಲೆಗಳಲ್ಲಿ ಈ ಕೆಳಗೆ ಖಾಲಿ ಇರುವ ಸಹ ಶಿಕ್ಷಕರ ಹುದ್ದೆಗಳನ್ನು ಭರ್ತಿ ಮಾಡಿಕೊಳ್ಳಲು ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ಅ. ನಂ.	ಹುದ್ದೆಗಳ ವಿವರ	ವಿದ್ಯಾರ್ಹತೆ	ಅನುಮತಿಸಿದ ವಿಷಯ	ಮೀಸಲಾತಿ ಗುಂಪು	ಸೂಚ್ಯಾಂಕ	ಮಾಧ್ಯಮ	ಹುದ್ದೆಗಳ ಸಂಖ್ಯೆ
01	ಸಹ ಶಿಕ್ಷಕರು	ಬಿ.ಎ. ಬಿ.ಇಡಿ.	ಇಂಗ್ಲೀಷ	ಸಾಮಾನ್ಯ (ಮಾಜಿ ಸೈನಿಕ)	58ನೇ ಸೂಚ್ಯಾಂಕ	ಕನ್ನಡ	1

ಸೂಚನೆಗಳು:
1) ವಿದ್ಯಾರ್ಹತೆ ವಯೋಮಿತಿ ಹಾಗೂ ವೇತನಶ್ರೇಣಿ ಸರಕಾರದ ನಿಯಮಾನುಸಾರವಾಗಿರುತ್ತದೆ.
2) ಅರ್ಜಿ ಸಲ್ಲಿಸುವ ಅಭ್ಯರ್ಥಿಗಳು ಲಕೋಟೆಯ ಮೇಲೆ ದಪ್ಪಕ್ಷರಗಳಲ್ಲಿ ಹುದ್ದೆಯ ಹೆಸರನ್ನು ನಮೂದಿಸಬೇಕು.

ಅರ್ಜಿ ಸಲ್ಲಿಸುವ ವಿಧಾನ:
ಅರ್ಹ ಅಭ್ಯರ್ಥಿಗಳು ತಮ್ಮ ಸಂಪೂರ್ಣ ವಿವರದ ಸ್ವಂತ ಕೈಬರಹದ ಅರ್ಜಿಯೊಂದಿಗೆ ತಮ್ಮ ಶೈಕ್ಷಣಿಕ ವಿದ್ಯಾರ್ಹತೆ, ಜಾತಿ ಪ್ರಮಾಣಪತ್ರ, ಜನ್ಮ ದಾಖಲೆ ಮತ್ತು ಇತರೆ ಚಟುವಟಿಕೆಗಳಿಗೆ ಸಂಬಂಧಿಸಿದ ಪ್ರಮಾಣ ಪತ್ರಗಳನ್ನು ಧೃಡೀಕರಿಸಿದ ನಕಲುಗಳೊಂದಿಗೆ ರೂ.**1,000-00** (ಸಾಮಾನ್ಯ ಅಭ್ಯರ್ಥಿ/ 2ಎ/ 2ಬಿ/ 3ಎ/ 3ಬಿ) ಹಾಗೂ ರೂ. **500-00** (ಪ.ಜಾ./ ಪ.ಪಂ./ ಪ್ರವರ್ಗ-1/ ಮಾಜಿ ಸೈನಿಕ)ಗಳ **ರಾಷ್ಟ್ರೀಕೃತ ಬ್ಯಾಂಕ್ ಡಿ.ಡಿ. ಯೊಂದಿಗೆ "ಪ್ರಧಾನ ಕಾರ್ಯದರ್ಶಿಗಳು, ಬಿ.ಎಲ್.ಡಿ.ಇ. ಸಂಸ್ಥೆ, ವಿಜಯಪುರ"** ಇವರ ಹೆಸರಿಗೆ ಪಡೆದು ಅರ್ಜಿಯ ಜೊತೆಗೆ ಲಗತ್ತಿಸಿ ಈ ಪ್ರಕಟಣೆ ಪ್ರಕಟಗೊಂಡ 21 ದಿವಸಗಳ ಒಳಗಾಗಿ ಈ ಕೆಳಗಿನ ವಿಳಾಸಕ್ಕೆ ಅರ್ಜಿಯನ್ನು ಸಲ್ಲಿಸಬೇಕು ಮತ್ತು ಅರ್ಜಿಯ ಪ್ರತಿಯೊಂದನ್ನು ಅಗತ್ಯ ದಾಖಲೆಗಳ ಸಹಿತವಾಗಿ ಉಪ ನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ, ವಿಜಯಪುರ ಇವರಿಗೆ ನಿಗದಿತ ಸಮಯದೊಳಗೆ ಅರ್ಜಿ ಸಲ್ಲಿಸಬೇಕು.

ಅರ್ಜಿ ಸಲ್ಲಿಸುವ ವಿಳಾಸ
ಪ್ರಧಾನ ಕಾರ್ಯದರ್ಶಿಗಳು, ಬಿ.ಎಲ್.ಡಿ.ಇ. ಸಂಸ್ಥೆ, ಆಡಳಿತ ಕಛೇರಿ, ಶ್ರೀಮತಿ ಬಂಗಾರಮ್ಮ ಸಜ್ಜನ ಆವರಣ, ಬಿ.ಎಮ್. ಪಾಟೀಲ ರಸ್ತೆ (ಸೋಲಾಪುರ ರಸ್ತೆ), ವಿಜಯಪುರ-586103

ವಿಜಯಪುರ
ದಿನಾಂಕ: 20/09/2022

ಜಿ. ಕೆ. ಪಾಟೀಲ
ಪ್ರಧಾನ ಕಾರ್ಯದರ್ಶಿಗಳು

ಡಾ. ಎಂ.ಬಿ. ಪಾಟೀಲ
ಅಧ್ಯಕ್ಷರು

ವಿಶೇಷ ಸೂಚನೆ: 1) ನೇಮಕಾತಿಯನ್ನು ಸಂಪೂರ್ಣ ಅರ್ಹತೆ ಆಧರಿಸಿ ಮಾಡಲಾಗುವುದು. ಯಾವುದೇ ರೀತಿಯ ಪ್ರಭಾವ ಬೀರುವುದನ್ನು ಅನರ್ಹತೆ ಎಂದು ಪರಿಗಣಿಸಲಾಗುವುದು.

ಪಿಎಸ್‌ಐ ಅಕ್ರಮ: 'ಪ್ರಜಾವಾಣಿ' ಸಂಪಾದಕೀಯ ಪ್ರದರ್ಶಿಸಿದ ಸಿದ್ದರಾಮಯ್ಯ • ಸುಳ್ಳುಪತ್ತೆ ಪರೀಕ್ಷೆಗೆ ಸಹಕರಿಸದ ಪೌಲ್

ಆಡಳಿತ –ಪ್ರತಿಪಕ್ಷ ಸದಸ್ಯರ ಜಟಾಪಟಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: 545 ಪೊಲೀಸ್ ಸಬ್ ಇನ್‌ಸ್ಪೆಕ್ಟರ್ ನೇಮಕಾತಿ ಪರೀಕ್ಷೆಯಲ್ಲಿನ ಅಕ್ರಮ ವಿಧಾನಸಭೆಯಲ್ಲಿ ಆಡಳಿತ- ವಿರೋಧ ಪಕ್ಷದ ನಡುವೆ ತೀವ್ರ ಜಟಾಪಟಿಗೆ ಕಾರಣವಾಯಿತು. ನ್ಯಾಯಾಂಗ ತನಿಖೆಗೆ ಕಾಂಗ್ರೆಸ್ ಪಟ್ಟು ಹಿಡಿದರೆ, ಕಾಂಗ್ರೆಸ್ ಆಡಳಿತದ ಅವಧಿಯ ಪರೀಕ್ಷಾ ಅಕ್ರಮಗಳನ್ನು ಕೆದಕಿ ಬಿಜೆಪಿ ಸದಸ್ಯರು ತಿರುಗೇಟು ನೀಡಿದರು.

ಪ್ರಕರಣದ ಕುರಿತು ನಿಯಮ 69ರಡಿ ಸುದೀರ್ಘ ಕಾಲ ಚರ್ಚೆ ನಡೆಯಿತು. 'ಸರ್ಕಾರದಲ್ಲಿರುವವರು ಶಾಮೀಲಾಗಿದ್ದಾರೆ' ಎಂದು ಪ್ರತಿಪಕ್ಷ ಕಾಂಗ್ರೆಸ್‌ನ ಸದಸ್ಯರು ಆರೋಪಿಸಿದರೆ, 'ಕಾಂಗ್ರೆಸ್ ಕಾಲದಲ್ಲೂ ನೇಮಕಾತಿ ಅಕ್ರಮಗಳು ನಡೆದಿವೆ' ಎಂದು ಆಡಳಿತ ಪಕ್ಷದ ಸದಸ್ಯರು ಪ್ರತ್ಯುತ್ತರದ ಗುರಾಣಿ ಹಿಡಿದರು. ಗದ್ದಲ, ಘೋಷಣೆ, ಧರಣಿಯಿಂದ ಸದನದಲ್ಲಿ ಕೋಲಾಹಲದ ವಾತಾವರಣ ಸೃಷ್ಟಿಯಾಯಿತು.

'ಪಿಎಸ್‌ಐ ನೇಮಕಾತಿ ಪರೀಕ್ಷೆಯ ಫಲಿತಾಂಶ ಪ್ರಕಟವಾಗುವ ಮೊದಲೇ ಅಕ್ರಮದ ಕುರಿತು ದೂರುಗಳು ಸಲ್ಲಿಕೆಯಾಗಿದ್ದವು. ಆದರೆ, 'ಅಕ್ರಮವೇ ನಡೆದಿಲ್ಲ' ಎಂದು ಗೃಹ ಸಚಿವರು ವಿಧಾನಪರಿಷತ್‌ನಲ್ಲಿ ಮೂರು ಬಾರಿ ಉತ್ತರ ನೀಡಿದ್ದರು. 'ಹಿರಿಯ ಅಧಿಕಾರಿಗಳು ದೂರುಗಳನ್ನು ಪರಿಶೀಲಿಸಿದ್ದಾರೆ, ಅಕ್ರಮ ನಡೆದಿಲ್ಲ ಎಂಬ ವರದಿ ನೀಡಿದ್ದಾರೆ' ಎಂದು ತಿಳಿಸಿದ್ದರು. ಅಂತಹ ವರದಿ ನೀಡಿದ ಅಧಿಕಾರಿಗಳು ಯಾರು? ಬಹಿರಂಗಪಡಿಸಿ' ಎಂದು ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಆಗ್ರಹಿಸಿದರು.

'ಪ್ರಕರಣದ ಕುರಿತು ಪತ್ರಿಕಾಗೋಷ್ಠಿ ನಡೆಸಿದ್ದ ನಮ್ಮ ಸದಸ್ಯ ಪ್ರಿಯಾಂಕ್ ಖರ್ಗೆ ಅವರಿಗೆ ಪೊಲೀಸರು ಮೂರು ಬಾರಿ ನೋಟಿಸ್ ನೀಡಿದ್ದರು. ಮಾಜಿ ಮುಖ್ಯಮಂತ್ರಿಯೊಬ್ಬರ ಮಗ ಈ ಹಗರಣದಲ್ಲಿ ಭಾಗಿಯಾಗಿದ್ದಾರೆ ಎಂದು ಬಿಜೆಪಿ ಶಾಸಕ ಬಸನಗೌಡ ಪಾಟೀಲ ಯತ್ನಾಳ ಹೇಳಿಕೆ ನೀಡಿದ್ದರು. ಬಿಜೆಪಿ ಶಾಸಕ ಬಸವರಾಜ ದಢೇಸುಗೂರ್, ಪಿಎಸ್‌ಐ ನೇಮಕಾತಿ ಮಾಡಿಸಿಕೊಡುವುದಾಗಿ ₹ 15 ಲಕ್ಷ ಪಡೆದಿರುವ ಆರೋಪಕ್ಕೆ ಸಂಬಂಧಿಸಿದ ಆಡಿಯೊ ಬಹಿರಂಗವಾಗಿದೆ. ಈ ಬಗ್ಗೆ ಏಕೆ ತನಿಖೆ ನಡೆದಿಲ್ಲ' ಎಂದು ಪ್ರಶ್ನಿಸಿದರು.

ಪ್ರಿಯಾಂಕ್ ಅವರಿಗೆ ನೋಟಿಸ್ ಜಾರಿಗೊಳಿಸಿದ್ದ ವಿಚಾರ ಕೋಲಾಹಲಕ್ಕೆ ಕಾರಣವಾಯಿತು. ಮುಖ್ಯಮಂತ್ರಿ, ಗೃಹ ಸಚಿವರು ಮತ್ತು ಕಾನೂನು ಸಚಿವ ಜೆ.ಸಿ.ಮಾಧುಸ್ವಾಮಿ ಪೊಲೀಸರ ಕ್ರಮವನ್ನು ಸಮರ್ಥಿಸಿಕೊಂಡರು. ಕಾಂಗ್ರೆಸ್‌ನ ಹಲವರು ಪೊಲೀಸರ ಕ್ರಮವನ್ನು ಟೀಕಿಸಿದರು.

'ಪ್ರಕರಣಕ್ಕ ಸಂಬಂಧಿಸಿದ ಸಾಕ್ಷ್ಯ ನನ್ನ ಬಳಿ ಇದೆ ಎಂದು ಪ್ರಿಯಾಂಕ್ ಹೇಳಿದ್ದರು. ಈಗ ಸುಳ್ಳು ಹೇಳುತ್ತಿದ್ದಾರೆ. ಸಾಕ್ಷ್ಯವಿದ್ದರೆ ತನಿಖಾಧಿಕಾರಿ ಎದುರು ಹಾಜರಾಗಿ ದಾಖಲೆ ಕೊಡಿ ಎಂದು ನೋಟಿಸ್ ನೀಡುವುದು ತಪ್ಪೆ' ಎಂದು ಬೊಮ್ಮಾಯಿ ಮತ್ತು ಮಾಧುಸ್ವಾಮಿ ಪ್ರಶ್ನಿಸಿದರು.

ಪ್ರಕರಣದ ಕುರಿತು ಹೈಕೋರ್ಟ್ ಹಾಲಿ ನ್ಯಾಯಮೂರ್ತಿ ನೇತೃತ್ವದಲ್ಲಿ ತನಿಖೆಗೆ ಆಗ್ರಹಿಸಿ ಕಾಂಗ್ರೆಸ್ ಸದಸ್ಯರು ಧರಣಿ ಆರಂಭಿಸಿದರು. ಬಿಜೆಪಿ ಸದಸ್ಯರು ಕಾಂಗ್ರೆಸ್ ಸರ್ಕಾರದ ಅವಧಿಯಲ್ಲಿ ನೇಮಕಾತಿ ಅಕ್ರಮಗಳು ನಡೆದಿವೆ ಎಂಬ ಆರೋಪವುಳ್ಳ ಫಲಕ ಹಿಡಿದು ಘೋಷಣೆ ಕೂಗಲಾರಂಭಿಸಿದರು. ಗದ್ದಲದ ನಡುವೆಯೇ ಗೃಹ ಸಚಿವ ಆರಗ ಜ್ಞಾನೇಂದ್ರ ಅವರು ಉತ್ತರ ನೀಡಿದರು.

ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಮತ್ತು ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಅವರು ಮಂಗಳವಾರ ವಿಧಾನಸಭೆ ಕಲಾಪದಲ್ಲಿ ಮಾತಿನ ಚಕಮಕಿ ನಡೆಸಿದರು –ಪ್ರಜಾವಾಣಿ ಚಿತ್ರ

ಮುಖ್ಯಾಂಶಗಳು

- ಪಿಎಸ್‌ಐ ನೇಮಕಾತಿ ಹಗರಣ: ನ್ಯಾಯಾಂಗ ತನಿಖೆಗೆ ಕಾಂಗ್ರೆಸ್ ಪಟ್ಟು
- ಕಾಂಗ್ರೆಸ್ ಆಡಳಿತದ ಅವಧಿಯ ಪರೀಕ್ಷಾ ಅಕ್ರಮ ಕೆದಕಿದ ಬಿಜೆಪಿ
- ಗದ್ದಲ, ಘೋಷಣೆ, ಧರಣಿಯಿಂದ ಸದನದಲ್ಲಿ ಕೋಲಾಹಲ

ನಿಷ್ಪಕ್ಷಪಾತ ತನಿಖೆ: ಆರಗ ಜ್ಞಾನೇಂದ್ರ

'ಪಿಎಸ್‌ಐ ನೇಮಕಾತಿಯಲ್ಲಿ ಅಕ್ರಮ ನಡೆದಿರುವ ದೂರು ಬರುತ್ತಿದ್ದಂತೆ ತನಿಖೆಗೆ ಆದೇಶಿಸಿದ್ದೇನೆ. ಸರ್ಕಾರದಿಂದ ಯಾವ ಲೋಪವೂ ಆಗಿಲ್ಲ. ನಿಷ್ಪಕ್ಷಪಾತ ತನಿಖೆ ನಡೆಯುತ್ತಿದೆ' ಎಂದು ಗೃಹ ಸಚಿವ ಆರಗ ಜ್ಞಾನೇಂದ್ರ ಹೇಳಿದರು.

ವಿಧಾನಸಭೆಯಲ್ಲಿ ಈ ಕುರಿತ ಚರ್ಚೆಗೆ ಉತ್ತರಿಸುತ್ತಾ, 'ಪ್ರಕರಣದಲ್ಲಿ ಈವರೆಗೆ ಪೊಲೀಸ್ ಅಧಿಕಾರಿಗಳೂ ಸೇರಿ 97 ಮಂದಿಯನ್ನು ಬಂಧಿಸಲಾಗಿದೆ. ಕಾಂಗ್ರೆಸ್ ಕಾರ್ಯಕರ್ತ ಆರ್.ಡಿ. ಪಾಟೀಲ ಸೇರಿದಂತೆ ಹಲವರ ಬಳಿ ಇದ್ದ ಕೋಟ್ಯಂತರ ರೂಪಾಯಿ ನಗದು, ಚಿನ್ನಾಭರಣ ವಶಪಡಿಸಿಕೊಳ್ಳಲಾಗಿದೆ' ಎಂದರು. 'ನೇಮಕಾತಿ ವಿಭಾಗದ ಎಡಿಜಿಪಿ ಹುದ್ದೆಯಲ್ಲಿದ್ದ ಅಮ್ರಿತ್ ಪೌಲ್ ಅವರನ್ನೂ ಬಂಧಿಸಲಾಗಿದೆ. ಸುಳ್ಳು ಪತ್ತೆ ಪರೀಕ್ಷೆ ನಡೆಸಲು ಅವರು ಸಹಕರಿಸಿಲ್ಲ' ಎಂದು ಹೇಳಿದರು.

'ದಢೇಸುಗೂರು ಆಡಿಯೊ ತನಿಖೆಗೆ'

'ಪಿಎಸ್‌ಐ ನೇಮಕಾತಿ ಪರೀಕ್ಷೆಯಲ್ಲಿನ ಅಕ್ರಮಕ್ಕೆ ಸಂಬಂಧಿಸಿ ಶಾಸಕ ಬಸವರಾಜ ದಢೇಸುಗೂರು ವಿರುದ್ಧದ ಆರೋಪ ಹಾಗೂ ಆಡಿಯೊ ಕುರಿತೂ ತನಿಖೆ ನಡೆಯಲಿದೆ' ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಿಳಿಸಿದರು.

ದಢೇಸುಗೂರು ವಿರುದ್ಧದ ಆರೋಪದ ಕುರಿತು ತನಿಖೆ ಅಗತ್ಯ ಎಂದು 'ಪ್ರಜಾವಾಣಿ' ಪ್ರಕಟಿಸಿದ್ದ ಸಂಪಾದಕೀಯವನ್ನು ಸದನದಲ್ಲಿ ಪ್ರದರ್ಶಿಸಿದ ಸಿದ್ದರಾಮಯ್ಯ, 'ಬಿಜೆಪಿ ಶಾಸಕರ ವಿರುದ್ಧ ತನಿಖೆ ಏಕಿಲ್ಲ' ಎಂದು ಪ್ರಶ್ನಿಸಿದ್ದರು.

ನನ್ನ ವಿರುದ್ಧವೂ ತನಿಖೆ ನಡೆಸಿ: ಪ್ರಿಯಾಂಕ್ ಸವಾಲು

'ಪತ್ರಿಕೆಗಳ ವರದಿ ಮತ್ತು ಸಾಮಾಜಿಕ ಮಾಧ್ಯಮಗಳಲ್ಲಿ ಲಭ್ಯವಿದ್ದ ಆಡಿಯೊ ಆಧರಿಸಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ್ದೆ. ಅದನ್ನೇ ಮುಂದಿಟ್ಟುಕೊಂಡು ನನ್ನನ್ನು ಹಣಿಯುವ ಷಡ್ಯಂತ್ರ ನಡೆಯಿತು. ಸರ್ಕಾರಕ್ಕೆ ತಾಕತ್ತಿದ್ದರೆ ನ್ಯಾಯಾಂಗ ತನಿಖೆಗೆ ಆದೇಶಿಸಲಿ. ನನ್ನ ವಿರುದ್ಧವೂ ತನಿಖೆ ನಡೆಸಲಿ' ಎಂದು ಪ್ರಿಯಾಂಕ್ ಖರ್ಗೆ ಸವಾಲು ಹಾಕಿದರು.

ಅರ್ಹರಿಗೆ ನ್ಯಾಯ ಒದಗಿಸಿ: ಎಚ್‌.ಡಿ.ಕುಮಾರಸ್ವಾಮಿ ಆಗ್ರಹ

ಲಂಚ ಕೊಟ್ಟು ಕೆಲಸ ಪಡೆಯಲು ಯುವಜನರು ರಾಜಕಾರಣಿಗಳನ್ನು ಸಂಪರ್ಕಿಸುತ್ತಾರೆ ಎಂಬುದು ಗುಟ್ಟೇನೂ ಅಲ್ಲ. ಪಿಎಸ್‌ಐ ಹುದ್ದೆಗೆ ಆಯ್ಕೆಯಾಗಿದ್ದ 545 ಮಂದಿಯೂ ಅಕ್ರಮದಲ್ಲಿ ಭಾಗಿಯಾಗಿಲ್ಲ ಎಂಬುದನ್ನು ತನಿಖೆ ಹೇಳುತ್ತಿದೆ. ಸರ್ಕಾರ ಅರ್ಹರಿಗೆ ನ್ಯಾಯ ಒದಗಿಸಬೇಕು' ಎಂದು ಜೆಡಿಎಸ್ ನಾಯಕ ಎಚ್‌.ಡಿ. ಕುಮಾರಸ್ವಾಮಿ ಆಗ್ರಹಿಸಿದರು.

ಸುದ್ದಿ 2 ನಿಮಿಷ

'ಎಪಿಎಂಸಿ ಕಾಯ್ದೆ ರದ್ದು ಇಲ್ಲ'

ಬೆಂಗಳೂರು: 'ಎಪಿಎಂಸಿ ಕಾಯ್ದೆ ರದ್ದುಪಡಿಸುವ ಪ್ರಶ್ನೆಯೇ ಇಲ್ಲ' ಎಂದು ಸಹಕಾರ ಸಚಿವ ಎಸ್‌.ಟಿ. ಸೋಮಶೇಖರ್ ಸ್ಪಷ್ಟಪಡಿಸಿದ್ದಾರೆ.

ವಿಧಾನ ಪರಿಷತ್‌ನಲ್ಲಿ ಮಂಗಳವಾರ ಕಾಂಗ್ರೆಸ್‌ನ ಎಂ.ನಾಗರಾಜ್ ಅವರ ಪ್ರಶ್ನೆಗೆ ಉತ್ತರಿಸಿದ ಸಚಿವರು, 'ರೈತರು ಕೃಷಿ ಉತ್ಪನ್ನಗಳನ್ನು ಯಾವುದೇ ಸ್ಥಳದಲ್ಲಿ ಮಾರಾಟ ಮಾಡಬಹುದು. ಇದರಿಂದ, ಮಾರಾಟಕ್ಕೆ ಸಂಪೂರ್ಣ ಸ್ವಾತಂತ್ರ್ಯ ದೊರೆತಿದೆ' ಎಂದು ಸಮರ್ಥಿಸಿಕೊಂಡರು.

'ಈ ಮೊದಲು ಆಯಾ ಎಪಿಎಂಸಿ ವ್ಯಾಪ್ತಿಗಳಲ್ಲಿ ಮಾತ್ರ ಕೃಷಿ ಉತ್ಪನ್ನಗಳನ್ನು ಮಾರಾಟ ಮಾಡಬೇಕಾಗಿತ್ತು. ಬೇರೆ ಸ್ಥಳಗಳಲ್ಲಿ ಮಾರಾಟ ಮಾಡಿದರೆ ದಂಡ ಪಾವತಿಸುವ ಪರಿಸ್ಥಿತಿ ಇತ್ತು. ಮೂರು ವರ್ಷಗಳಲ್ಲಿ ₹25 ಕೋಟಿ ದಂಡ ಸಂಗ್ರಹಿಸಿದ ಉದಾಹರಣೆಗಳಿವೆ. ಇದರಿಂದ, ರೈತರು ಸಂಕಷ್ಟಕ್ಕೆ ಸಿಲುಕಿದ್ದರು. ಹೀಗಾಗಿ, ಈ ವ್ಯವಸ್ಥೆಯನ್ನು ರದ್ದುಪಡಿಸಲಾಗಿದೆ' ಎಂದು ತಿಳಿಸಿದರು.

'ಹೊಸ ಎಪಿಎಂಸಿ ಕಾಯ್ದೆ ಬಗ್ಗೆ ರೈತರಿಂದ ದೂರು ಬಂದಿಲ್ಲ. ಎಲ್ಲರೂ ಒಪ್ಪಿದ್ದಾರೆ' ಎಂದರು.

3 ವರ್ಷಗಳಲ್ಲಿ 15 ಕೈಗಾರಿಕೆ ಸ್ಥಗಿತ

ಬೆಂಗಳೂರು: ರಾಜ್ಯದಲ್ಲಿ ಕಳೆದ ಮೂರು ವರ್ಷಗಳಲ್ಲಿ 15 ಬೃಹತ್ ಮತ್ತು ಮಧ್ಯಮ ಕೈಗಾರಿಕೆಗಳು ಮುಚ್ಚಿವೆ.

ವಿಧಾನ ಪರಿಷತ್‌ನಲ್ಲಿ ಮಂಗಳವಾರ ಜೆಡಿಎಸ್ ಸದಸ್ಯ ಟಿ.ಎ.ಶರವಣ ಅವರ ಪ್ರಶ್ನೆಗೆ ಈ ಮಾಹಿತಿ ನೀಡಿರುವ ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವ ಮುರುಗೇಶ ಆರ್. ನಿರಾಣಿ, 'ಈ ಕಾರ್ಖಾನೆಗಳ ಬೀಗಮುದ್ರೆಯಿಂದ 2086 ಮಂದಿ ನಿರುದ್ಯೋಗಿಗಳಾಗಿದ್ದಾರೆ' ಎಂದರು.

'ಕಚ್ಚಾ ವಸ್ತುಗಳ ಕೊರತೆ, ಹಣಕಾಸಿನ ತೊಂದರೆ ಮುಂತಾದ ಸಮಸ್ಯೆಗಳಿಂದ ಈ ಕಾರ್ಖಾನೆಗಳು ಮುಚ್ಚಿವೆ' ಎಂದು ತಿಳಿಸಿದರು.

'ಆದರೆ, ರಾಜ್ಯ ಸರ್ಕಾರ ಉದ್ಯಮದ ಬೆಳವಣಿಗೆ ಪ್ರೋತ್ಸಾಹ ನೀಡುತ್ತಿದೆ. ವಿದೇಶಿ ನೇರ ಬಂಡವಾಳ ಹೂಡಿಕೆ ಮತ್ತು ಸುಲಲಿತ ವ್ಯಾಪಾರದಲ್ಲಿ ಕರ್ನಾಟಕ ಮೊದಲ ಸ್ಥಾನದಲ್ಲಿದೆ' ಎಂದು ಸಮರ್ಥಿಸಿಕೊಂಡರು.

'2014ರ ಶಿಕ್ಷಕರ ನೇಮಕಾತಿ ಅಕ್ರಮ: ಸಿಐಡಿ ತನಿಖೆ'

ಬೆಂಗಳೂರು: 2014–15ರ ಸಾಲಿನಲ್ಲಿ ಅರ್ಜಿ ಪಡೆಯದೇ, ಪರೀಕ್ಷೆ ಮಾಡದೇ ಶಿಕ್ಷಕರನ್ನು ನೇಮಿಸಿರುವ ಪ್ರಕರಣದ ಸಂಬಂಧ ಸಿಐಡಿ ತನಿಖೆ ನಡೆಯುತ್ತಿದ್ದು, ಬೆಂಗಳೂರು ವಿಭಾಗದಲ್ಲಿ 16 ಶಿಕ್ಷಕರ ಬಂಧನವಾಗಿದೆ. ಇಂತಹ ಇನ್ನೂ 35 ರಿಂದ 40 ಶಿಕ್ಷಕರ ಮಾಹಿತಿ ಸಿಕ್ಕಿದೆ ಎಂದು ಶಿಕ್ಷಣ ಸಚಿವ ಬಿ.ಸಿ.ನಾಗೇಶ್ ಮಂಗಳವಾರ ತಿಳಿಸಿದರು.

ವಿಧಾನಸಭೆಯ ಶೂನ್ಯವೇಳೆಯಲ್ಲಿ ಬಿಜೆಪಿ ಪಿ.ರಾಜೀವ್ ಪ್ರಶ್ನೆಗೆ ಉತ್ತರಿಸಿದ ಅವರು, ಬೆಂಗಳೂರು ಅಲ್ಲದೇ, ಉಳಿದ ವಿಭಾಗಗಳಲ್ಲಿ ನಡೆದಿರುವ ನೇಮಕಾತಿಯನ್ನೂ ತನಿಖೆಗೆ ಒಳಪಡಿಸಲಾಗುವುದು ಎಂದು ಹೇಳಿದರು.

'ನೇಮಕಾತಿಯಲ್ಲಿ ಅಕ್ರಮ ನಡೆದಿರುವ ವಿಚಾರ ಗಮನಕ್ಕೆ ಬಂದಾಗ, ಎಸ್‌ಎಸ್‌ಎಲ್‌ಸಿ ಮಂಡಳಿಯ ನಿರ್ದೇಶಕರಿಂದಲೇ ತನಿಖೆ ನಡೆಸಿದೆವು. ತನಿಖೆಯಿಂದ ಅಕ್ರಮ ನಡೆದಿರುವುದು ದೃಢಪಟ್ಟ ಬಳಿಕ ಪ್ರಕರಣವನ್ನು ಸಿಐಡಿಗೆ ವಹಿಸಲಾಯಿತು. ಇವರು ಅರ್ಜಿಯೂ ಹಾಕದೇ, ಸ್ಪರ್ಧಾತ್ಮಕ ಪರೀಕ್ಷೆಯನ್ನೂ ಬರೆಯದೇ ನೇಮಕಾತಿ ಪಡೆದಿದ್ದಾರೆ' ಎಂದು ನಾಗೇಶ್ ತಿಳಿಸಿದರು.

ವಿಷಯ ಪ್ರಸ್ತಾಪಿಸಿದ ಪಿ.ರಾಜೀವ್ ಅವರು, 'ಸಿಇಟಿ ಪರೀಕ್ಷೆಯನ್ನೂ ಬರೆಯದೇ ನೇರ ನೇಮಕಾತಿ ಆದೇಶ ಪಡೆದು ಶಿಕ್ಷಕ ಹುದ್ದೆ ಪಡೆದಿರುವುದು ದೊಡ್ಡ ಹಗರಣ. ಈ ಬಗ್ಗೆ ಸಮಗ್ರ ತನಿಖೆ ಆಗಬೇಕು' ಎಂದು ಹೇಳಿದರು.

ಎ.ಎಸ್.ಪಾಟೀಲ ನಡಹಳ್ಳಿ ಮಾತನಾಡಿ, 'ಇದೊಂದು ದೊಡ್ಡ ಹಗರಣ. ಇದರಲ್ಲಿ ತಪ್ಪಿತಸ್ಥರು ಯಾರು ಎಂಬುದು ಬಯಲಿಗೆ ತರಬೇಕು ಮತ್ತು ತಪ್ಪಿತಸ್ಥರನ್ನು ಶಿಕ್ಷೆಗೆ ಗುರಿಪಡಿಸಬೇಕು' ಎಂದು ಆಗ್ರಹಿಸಿದರು.

'ಹಗರಣ ನಡೆದಿದ್ದರೆ ಇಷ್ಟು ದಿನ ಸುಮ್ಮನೆ ಇದ್ದದ್ದು ಯಾಕೆ' ಎಂದು ವಿರೋಧ ಪಕ್ಷದ ಉಪನಾಯಕ ಯು.ಟಿ.ಖಾದರ್ ಪ್ರಶ್ನಿಸಿದರು.

ಆಗ ಬಿಜೆಪಿ ಸದಸ್ಯರು 'ಈ ಅಕ್ರಮದ ಬಗ್ಗೆ ಚರ್ಚೆಗೆ ಅವಕಾಶ ನೀಡಬೇಕು' ಎಂದು ಪಟ್ಟುಹಿಡಿದರು. ಇದಕ್ಕೆ ಪ್ರತಿಕ್ರಿಯಿಸಿದ ಕಾನೂನು ಸಚಿವ ಜೆ.ಸಿ. ಮಾಧುಸ್ವಾಮಿ, 'ನಿಮ್ಮ ಬಳಿ ಇರುವ ಮಾಹಿತಿಗಳೆಲ್ಲವನ್ನು ಕೊಡಿ, ಎಲ್ಲವನ್ನು ಸೇರಿಸಿ ತನಿಖೆ ನಡೆಸಲಾಗುವುದು' ಎಂದು ಹೇಳಿದರು.

ಬಳಕೆಯಾಗದ 9.5 ಸಾವಿರ ಎಕರೆ 1,117 ಉದ್ದಿಮೆದಾರರಿಗೆ ನೋಟಿಸ್

ಬೆಂಗಳೂರು: ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ ವತಿಯಿಂದ ಬೇರೆ ಬೇರೆ ಅಳತೆಯ ಜಮೀನು ಸೇರಿದಂತೆ ಒಟ್ಟು 9572.63 ಎಕರೆಯಷ್ಟು ಜಮೀನು ಹಂಚಿಕೆ ಮಾಡಿದ್ದರೂ ಈವರೆಗೆ ಕಾರ್ಖಾನೆ ಆರಂಭಿಸದ 1117 ಉದ್ದಿಮೆದಾರರಿಗೆ ನೋಟಿಸ್ ನೀಡಲಾಗಿದೆ.

ವಿಧಾನ ಪರಿಷತ್‌ನಲ್ಲಿ ಮಂಗಳವಾರ ಪ್ರಶ್ನೋತ್ತರ ವೇಳೆಯಲ್ಲಿ ಬಿಜೆಪಿಯ ಎಸ್. ರುದ್ರೇಗೌಡ ಅವರ ಪ್ರಶ್ನೆಗೆ ಉತ್ತರಿಸಿದ ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವ ಮುರುಗೇಶ ನಿರಾಣಿ, 'ಉದ್ದಿಮೆದಾರರಿಗೆ ಕೆಐಎಡಿಬಿ ಕಾಯ್ದೆ ಕಲಂ 34–ಬಿ ಅಡಿಯಲ್ಲಿ ನೋಟಿಸ್ ನೀಡಲಾಗಿದ್ದು, ವಿಚಾರಣೆಯು ವಿವಿಧ ಹಂತದಲ್ಲಿದೆ' ಎಂದು ತಿಳಿಸಿದರು.

'ಈ ಜಮೀನಿನಲ್ಲಿ 7,500 ಎಕರೆ ಪ್ರದೇಶವನ್ನು ಉಕ್ಕು ಉದ್ಯಮ ಆರಂಭಿಸಲು ನೀಡಲಾಗಿತ್ತು. ಆದರೆ, ಕಬ್ಬಿಣದ ಅದಿರು ಸೇರಿದಂತೆ ವಿವಿಧ ಸಮಸ್ಯೆಗಳಿಂದ ಉಕ್ಕು ಕೈಗಾರಿಕೆ ಆರಂಭಿಸಿಲ್ಲ. ಈ ಸಮಸ್ಯೆ ಬಗೆಹರಿಸಲು ಪ್ರಯತ್ನಿಸಲಾಗುತ್ತಿದೆ. ಬಳಕೆಯಾಗದ ಉಳಿದ ಜಮೀನನ್ನು ವಾಪಸ್ ಪಡೆಯಲು ಕ್ರಮಕೈಗೊಳ್ಳಲಾಗಿದೆ' ಎಂದು ತಿಳಿಸಿದರು.

ಗ್ರಾಮೀಣ ಪ್ರದೇಶದ ಅಕ್ರಮ ಸಕ್ರಮಕ್ಕೆ ಮಸೂದೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸ್ಥಳೀಯ ಯೋಜನಾ ಪ್ರಾಧಿಕಾರಗಳ ಅಧಿಕಾರ ವ್ಯಾಪ್ತಿಗೆ ಒಳಪಡದ ಪ್ರದೇಶಗಳಲ್ಲಿ ಕಟ್ಟಡಗಳ ನಕ್ಷೆ ಮಂಜೂರಾತಿ ಪಡೆಯಲು ಇರುವ ತಾಂತ್ರಿಕ ತೊಂದರೆಗಳನ್ನು ತೆಗೆದುಹಾಕುವ 'ಕರ್ನಾಟಕ ಮುನಿಸಿಪಾಲಿಟಿಗಳ (ತಿದ್ದುಪಡಿ) ಮಸೂದೆ 2022'ಕ್ಕೆ ವಿಧಾನಸಭೆ ಮಂಗಳವಾರ ಅಂಗೀಕಾರ ನೀಡಿತು.

ಪ್ರತ್ಯೇಕ ನಗರ ಯೋಜನಾ ಪ್ರಾಧಿಕಾರಗಳ ವ್ಯಾಪ್ತಿಯಲ್ಲಿಲ್ಲದ ಪುರಸಭೆ, ಪಟ್ಟಣ ಪಂಚಾಯಿತಿ, ಗ್ರಾಮೀಣ ಪ್ರದೇಶಗಳಲ್ಲಿ ಬಿಡಿ ನಿವೇಶನ ಹಾಗೂ ಒಂದು ಎಕರೆವರೆಗಿನ ವಿಸ್ತೀರ್ಣದಲ್ಲಿ ಕಟ್ಟಡ ನಿರ್ಮಾಣಕ್ಕೆ ಪರವಾನಗಿ, ನಕ್ಷೆ ಅನುಮೋದನೆ, 11ಇ ನಕ್ಷೆ ಹಾಗೂ ಇ-ಸ್ವತ್ತುಗಳನ್ನು ಸ್ಥಳೀಯ ಸಂಸ್ಥೆಗಳ ಮೂಲಕವೇ ನೀಡುವ ವ್ಯವಸ್ಥೆ ಜಾರಿ ಬರಲಿದೆ. ಇದಕ್ಕಾಗಿ ಹಿಂದೆ ಸುಗ್ರೀವಾಜ್ಞೆ ಹೊರಡಿಸಲಾಗಿತ್ತು.

ಈ ಮಸೂದೆಗೆ ಜೆಡಿಎಸ್ ಮತ್ತು ಕಾಂಗ್ರೆಸ್‌ನ ಕೆಲವು ಶಾಸಕರು ಆಕ್ಷೇಪ ವ್ಯಕ್ತಪಡಿಸಿ, 'ಇದು ರಿಯಲ್ ಎಸ್ಟೇಟ್ ವ್ಯಕ್ತಿಗಳಿಗೆ ಅನುಕೂಲ ಮಾಡಿಕೊಡುವ ಮಸೂದೆಯಾಗಿದೆ. ಅಕ್ರಮ ಮಾಡಿದವರಿಗೆ ಸಕ್ರಮ ಮಾಡಿಕೊಡಲು ಸಹಾಯ ಆಗಬೇಕು ಎಂಬ ಕಾರಣಕ್ಕೆ ಮಸೂದೆ ತರಲಾಗಿದೆ. ಆದ್ದರಿಂದ ಮರುಪರಿಶೀಲಿಸಬೇಕು' ಎಂದು ಹೇಳಿದರು.

ಕಾನೂನು ಸಚಿವ ಜೆ.ಸಿ. ಮಾಧುಸ್ವಾಮಿ,'ಗ್ರಾಮಪಂಚಾಯಿತಿಗಳ ವ್ಯಾಪ್ತಿಯಲ್ಲಿ ಈಗಾಗಲೇ ನಿವೇಶನ ಹೊಂದಿರುವವರು ಮನೆ ಕಟ್ಟಿಕೊಳ್ಳಲು, ನಕ್ಷೆ ಅನುಮೋದನೆ, 11ಇ ನಕ್ಷೆ ಹಾಗೂ ಇ- ಸ್ವತ್ತುಗಳನ್ನು ಹೊಂದಲು ಮಸೂದೆಯಿಂದ ಅನುಕೂಲವಾಗುತ್ತದೆ. ಇದಕ್ಕೆ ಕಟ್‌ಆಫ್ ದಿನಾಂಕವೂ ಇದೆ. ಆ ಬಳಿಕ ನಿರ್ಮಾಣವಾದ ಮನೆ ಅಥವಾ ಬಡಾವಣೆಗಳಿಗೆ ಇದು ಅನ್ವಯವಾಗುವುದಿಲ್ಲ' ಎಂದು ಹೇಳಿದರು.

'ನಗರ ಯೋಜನಾ ಪ್ರಾಧಿಕಾರಗಳ ವ್ಯಾಪ್ತಿಗೆ ಒಳಪಟ್ಟರೆ ಆ ಪ್ರದೇಶದಲ್ಲಿ ನಿಯಮ ಕಠಿಣವಾಗುತ್ತದೆ. ಬಡವರಿಗೆ ನಿವೇಶನ ತೆಗೆದುಕೊಳ್ಳಲು ಆಗುವುದಿಲ್ಲ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಸಮಜಾಯಿಷಿ ನೀಡಿದರು.

'ಇದು ಯೋಜನಾ ಪ್ರಾಧಿಕಾರದ ವ್ಯಾಪ್ತಿಗೆ ಬರುವುದಿಲ್ಲ. ಈವರೆಗೆ ಇದೊಂದು ದೊಡ್ಡ ಕಗ್ಗಂಟಾಗಿತ್ತು. ಸಿಕ್ಕುಗಳನ್ನು ಬಿಡಿಸುವ ಕೆಲಸ ಮಾಡುತ್ತಿದ್ದೇವೆ. ರಿಯಲ್ ಎಸ್ಟೇಟ್ ವ್ಯಕ್ತಿಗಳಿಗೆ ಇದರಿಂದ ಅನುಕೂಲ ಆಗುವುದಿಲ್ಲ' ಎಂದು ಅವರು ಹೇಳಿದರು.

ಜೆಡಿಎಸ್‌ನ ಎ.ಟಿ.ರಾಮಸ್ವಾಮಿ, ಕೆ.ಎಂ.ಶಿವಲಿಂಗೇಗೌಡ, ವಿರೋಧ ಪಕ್ಷದ ಉಪನಾಯಕ ಯು.ಟಿ.ಖಾದರ್, ಅಮರೇಗೌಡ ಬಯ್ಯಾಪುರ ಅವರು, ಮಸೂದೆಯಿಂದ ಭೂಗಳ್ಳರು ಮತ್ತು ರಿಯಲ್ ಎಸ್ಟೇಟ್ ವ್ಯಕ್ತಿಗಳಿಗೆ ಅನುಕೂಲ ಆಗಬಹುದು' ಎಂದು ಆಕ್ಷೇಪಿಸಿದರು. ಅದೇ ಪಕ್ಷದ ಇತರ ಸದಸ್ಯರು ಮಸೂದೆಯನ್ನು ಸ್ವಾಗತಿಸಿದರು.

ಅಂಗೀಕಾರಗೊಂಡ ಮಸೂದೆಗಳು:

- ಕರ್ನಾಟಕ ಸರಕು ಮತ್ತು ಸೇವೆಗಳ ತೆರಿಗೆ (ತಿದ್ದುಪಡಿ) 2022
- ಬಿಬಿಎಂಪಿ ಚುನಾವಣೆಯಲ್ಲಿ ಎಸ್‌ಸಿ, ಎಸ್‌ಟಿ, ಒಬಿಸಿ ಮತ್ತು ಮಹಿಳೆಯರಿಗೆ ಶೇ 50 ರಷ್ಟು ಮೀಸಲಾತಿ ನೀಡುವ ಉದ್ದೇಶದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ (ತಿದ್ದುಪಡಿ) ಮಸೂದೆ
- ಆನ್‌ಲೈನ್‌ನಲ್ಲಿ ರೇಷ್ಮೆ ಉತ್ಪನ್ನ ಮಾರಾಟಕ್ಕೆ ಅವಕಾಶ ಕಲ್ಪಿಸುವ ಕರ್ನಾಟಕ ರೇಷ್ಮೆ ಹುಳು ಬಿತ್ತನೆ, ಗೂಡು ಮತ್ತು ನೂಲು (ಉತ್ಪಾದನೆ- ಸರಬರಾಜು-ವಿತರಣೆ- ಮಾರಾಟ) (ತಿದ್ದುಪಡಿ) ಮಸೂದೆ

ಕಾಗದಪತ್ರಗಳಿಲ್ಲದೇ ₹50 ಕೋಟಿ ಹೂಡಿಕೆ ಮಾಡಿದ್ದೇನೆ: ನಿರಾಣಿ ಹೇಳಿಕೆ

ಐಎಎಸ್ ಅಧಿಕಾರಿ ವಿರುದ್ಧ ಸಚಿವರ ಕಿಡಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿಧಾನ ಪರಿಷತ್ ಕಲಾಪದಲ್ಲೇ ಕೈಗಾರಿಕೆ ಇಲಾಖೆ ಕಾರ್ಯದರ್ಶಿ ಪಂಕಜಕುಮಾರ್ ಪಾಂಡೆ ಅವರ ಹೆಸರು ಉಲ್ಲೇಖಿಸಿ ಸಚಿವ ಮುರುಗೇಶ ನಿರಾಣಿ ಅಸಮಾಧಾನ ವ್ಯಕ್ತಪಡಿಸಿದ್ದು, ತೀವ್ರ ಗದ್ದಲ ಸೃಷ್ಟಿಸಿತು.

ಮಂಗಳವಾರ ನಡೆದ ಪ್ರಶ್ನೋತ್ತರ ವೇಳೆಯಲ್ಲಿ ಬಿಜೆಪಿಯ ಸುನೀಲ್ ವಲ್ಯಾಪುರೆ ಅವರ ಪ್ರಶ್ನೆಗೆ ಸಕ್ಕರೆ ಸಚಿವ ಶಂಕರ ಪಾಟೀಲ ಮುನೇನಕೊಪ್ಪ ಉತ್ತರ ನೀಡುತ್ತಿದ್ದಾಗ ಮಧ್ಯಪ್ರವೇಶಿಸಿದ ಸಚಿವ ನಿರಾಣಿ, 'ಪಾಂಡವಪುರದ ಸಕ್ಕರೆ ಕಾರ್ಖಾನೆಯನ್ನು ನಾನು ಲೀಸ್‌ಗೆ ತೆಗೆದುಕೊಂಡಿದ್ದೇನೆ. ಕಾಗದಪತ್ರಗಳಿಲ್ಲದೆಯೇ ಸುಮಾರು ₹50 ಕೋಟಿ ಹೂಡಿಕೆ ಮಾಡಿದ್ದೇವೆ. ಆದರೆ, ಎರಡು ವರ್ಷಗಳಾದರೂ ಕಾರ್ಯದರ್ಶಿ ಪಂಕಜಕುಮಾರ್ ಪಾಂಡೆ ಒಪ್ಪಂದದ ಕಡತಗಳನ್ನು ವಿಲೇವಾರಿ ಮಾಡುತ್ತಿಲ್ಲ. ಕಡತಗಳನ್ನು ತಡೆ ಹಿಡಿದಿದ್ದಾರೆ. ಈ ರೀತಿ ವಿಳಂಬ ನೀತಿ ಅನುಸರಿಸಿದರೆ ಹೇಗೆ?' ಎಂದು ಸದನದಲ್ಲೇ ಹಾಜರಿದ್ದ ಪಂಕಜಕುಮಾರ್ ಅವರತ್ತ ಕೈತೋರಿಸಿ ದೂರಿದರು.

ಅಧಿಕಾರಿ ವಿರುದ್ಧ ಸದನದಲ್ಲಿ ನೇರ ಆರೋಪ ಮಾಡಿದ್ದಕ್ಕೆ ಕಾಂಗ್ರೆಸ್ ಮತ್ತು ಜೆಡಿಎಸ್ ಸದಸ್ಯರು ಆಕ್ಷೇಪ ವ್ಯಕ್ತಪಡಿಸಿ, ಈ ಕುರಿತು ಚರ್ಚೆಗೆ ಅವಕಾಶ ನೀಡುವಂತೆ ಪಟ್ಟು ಹಿಡಿದರು.

ವಿರೋಧ ಪಕ್ಷದ ಮುಖ್ಯ ಸಚೇತಕ ಪ್ರಕಾಶ್ ರಾಠೋಡ್, 'ಒಬ್ಬ ಮಂತ್ರಿ, ಅಧಿಕಾರಿಯ ಹೆಸರು ಪ್ರಸ್ತಾಪಿಸಿ ಎರಡು ವರ್ಷ ಕಡತ ವಿಲೇವಾರಿ ಮಾಡಿಲ್ಲ ಎಂದು ಹೇಳಿದ್ದಾರೆ. ಅಧಿಕಾರಿಯನ್ನು ಅಮಾನತುಗೊಳಿಸಿ ಇಲ್ಲವೇ ಮಂತ್ರಿಗಳು ರಾಜೀನಾಮೆ ನೀಡಲಿ' ಎಂದು ಒತ್ತಾಯಿಸಿದರು.

'ಅಧಿಕಾರಿಗಳ ವಿರುದ್ಧ ಆರೋಪಿಸುತ್ತಿರುವ ನಿರಾಣಿ ಅವರು ಹಿರಿಯ ಸಚಿವರು. ಇಲ್ಲಿ ಸರ್ಕಾರ ಅಸ್ತಿತ್ವದಲ್ಲಿ ಇಲ್ಲ ಎನ್ನುವುದಕ್ಕೆ ಈ ಉದಾಹರಣೆ ಸಾಕ್ಷಿ' ಎಂದೂ ದೂರಿದರು.

ಜೆಡಿಎಸ್‌ನ ಎಸ್.ಎಲ್. ಭೋಜೇಗೌಡ ಮತ್ತು ಟಿ.ಎ.ಶರವಣ ಅವರು, 'ಒಬ್ಬ ಮಂತ್ರಿಗೆ ಈ ಪರಿಸ್ಥಿತಿ ಯಾದರೆ ಉಳಿದವರ ಗತಿ ಏನು? ಅಧಿಕಾರಿ ದೊಡ್ಡವರೋ ಅಥವಾ ಸರ್ಕಾರ ದೊಡ್ಡದೋ' ಎಂದು ಪ್ರಶ್ನಿಸಿದರು.

ಈ ಸಂದರ್ಭದಲ್ಲಿ ನಿರಾಣಿ ಅವರ ಹೇಳಿಕೆಯನ್ನು ಸಮರ್ಥಿಸಿಕೊಳ್ಳಲು ಸಚಿವರು ಮತ್ತು ಆಡಳಿತ ಪಕ್ಷದ ಸದಸ್ಯರು ಧಾವಿಸಿದರು.

'ಕಾರ್ಯಾಂಗದಲ್ಲಿನ ಲೋಪದ ಬಗ್ಗೆ ಒಂದು ಘಟನೆಯನ್ನು ಸಚಿವರು ಉಲ್ಲೇಖಿಸಿದ್ದಾರೆ. ಸಚಿವರು ಮನಸ್ಸಿಗೆ ಗಾಸಿಯಾಗಿದ್ದಕ್ಕೆ ಹೇಳಿದ್ದಾರೆ' ಎಂದು ಸಚಿವ ಕೋಟ ಶ್ರೀನಿವಾಸ ಪೂಜಾರಿ ಮತ್ತು ಬಿಜೆಪಿ ಸದಸ್ಯ ಲಕ್ಷ್ಮಣ ಸವದಿ ಸಮರ್ಥಿಸಿಕೊಂಡರು.

ಆಕ್ಷೇಪಗಳಿಗೆ ಪ್ರತಿಕ್ರಿಯಿಸಿದ ಸಚಿವ ಶಂಕರ ಪಾಟೀಲ ಮುನೇನಕೊಪ್ಪ, 'ನಿರಾಣಿ ಅವರು ನೋವಿನ ಸಂಗತಿ ಹೇಳಿದ್ದಾರೆ. ಪಾಂಡವಪುರ ಸಕ್ಕರೆ ಕಾರ್ಖಾನೆಯ ಗುತ್ತಿಗೆಯನ್ನು ಟೆಂಡರ್ ಪ್ರಕ್ರಿಯೆ ಮೂಲಕ ನಿರಾಣಿ ಸಮೂಹ ಪಡೆದಿದ್ದು, ಸ್ಟ್ಯಾಂಪ್ ಶುಲ್ಕ ವಿನಾಯಿತಿ ನೀಡುವಂತೆ ಕೋರಿದ್ದಾರೆ.

ಈ ಪ್ರಸ್ತಾವವನ್ನು ಹಣಕಾಸು ಇಲಾಖೆಗೆ ಸಲ್ಲಿಸಲಾಗಿದೆ. ಅಧಿಕಾರಿಗಳು ಸಹ ನೀತಿ, ನಿಯಮಗಳನ್ನು ಪಾಲಿಸಬೇಕಾಗುತ್ತದೆ. ಮುಖ್ಯಮಂತ್ರಿ ಅವರು ಈ ವಿಷಯ ಇತ್ಯರ್ಥ ಮಾಡುತ್ತಾರೆ' ಎಂದು ಸಮರ್ಥಿಸಿಕೊಂಡು ಚರ್ಚೆಗೆ ಅಂತ್ಯ ಹಾಡಿದರು.

ವಿಧಾನ ಪರಿಷತ್ ಕಲಾಪದಲ್ಲಿ ವಿರೋಧ ಪಕ್ಷದ ಮುಖ್ಯ ಸಚೇತಕ ಪ್ರಕಾಶ್ ರಾಠೋಡ್ ಮತ್ತು ಕಾಂಗ್ರೆಸ್ ಸದಸ್ಯ ಅಬ್ದುಲ್ ಜಬ್ಬಾರ್ ಸಚಿವರ ವಿರುದ್ಧ ವಾಗ್ದಾಳಿ ನಡೆಸಿದರು. –ಪ್ರಜಾವಾಣಿ ಚಿತ್ರ

ಮುಖ್ಯಾಂಶಗಳು

- ಅಧಿಕಾರಿ ವಿರುದ್ಧ ಸದನದಲ್ಲಿ ನೇರ ಆರೋಪ
- ಕಾಂಗ್ರೆಸ್ ಮತ್ತು ಜೆಡಿಎಸ್ ಸದಸ್ಯರಿಂದ ಆಕ್ಷೇಪ ಚರ್ಚೆಗೆ ಪಟ್ಟು
- 'ಅಧಿಕಾರಿಯನ್ನು ಅಮಾನತುಗೊಳಿಸಿ ಇಲ್ಲವೇ ಮಂತ್ರಿಗಳು ರಾಜೀನಾಮೆ ನೀಡಲಿ'

ದ್ವೇಷ ಭಾಷಣ: 34 ಪ್ರಕರಣ ವಾಪಸ್

ಒಂದನೇ ಪುಟದಿಂದ

ಆಗಸ್ಟ್ 2ರಂದು ನಡೆದ ಸಚಿವ ಸಂಪುಟ ಉಪ ಸಮಿತಿಯ ಸಭೆಯಲ್ಲಿ ಮೊಕದ್ದಮೆಗಳನ್ನು ಹಿಂಪಡೆಯುವ ಕುರಿತಂತೆ 46 ಮೊಕದ್ದಮೆಗಳನ್ನು ಒಳಗೊಂಡ 27 ಕಡತಗಳನ್ನು ಪರಿಶೀಲಿಸಲಾಗಿತ್ತು. ಈ ಯಾವುದೇ ಮೊಕದ್ದಮೆಗಳು 'ಹಿಂಪಡೆಯಲು ಸೂಕ್ತ ಅಲ್ಲ' ಎಂದು ಪೊಲೀಸ್ ಇಲಾಖೆ, ಅಭಿಯೋಗ ಇಲಾಖೆ ಹಾಗೂ ಕಾನೂನು ಇಲಾಖೆ ಅಭಿಪ್ರಾಯ ನೀಡಿದ್ದವು. ಆದರೆ, ಸಿಆರ್‌ಪಿಸಿ 321ರ ಅಡಿಯಲ್ಲಿ (ನ್ಯಾಯಾಲಯದಲ್ಲಿರುವ ಮೊಕದ್ದಮೆಗಳನ್ನು ಹಿಂಪಡೆಯುವ ಅಧಿಕಾರ ಅಭಿಯೋಜಕರಿಗೆ ಮಾತ್ರ) 34 ಮೊಕದ್ದಮೆಗಳನ್ನು ಹಿಂಪಡೆಯುವುದು ಸೂಕ್ತ ಎಂದು ಸಂಪುಟ ಸಭೆಗೆ ಉಪ ಸಮಿತಿ ಶಿಫಾರಸು ಮಾಡಿತ್ತು.

ಕೆಲವು ಮೊಕದ್ದಮೆಗಳು: ಹಿಂದೂ–ಮುಸ್ಲಿಂ ಗಲಭೆ ಉಂಟು ಮಾಡಲು ಮೆರವಣಿಗೆ ನೆಪದಲ್ಲಿ ಮುಸ್ಲಿಂ ಧರ್ಮದ ವಿರುದ್ಧ ಪ್ರಚೋದನಕಾರಿ ಘೋಷಣೆ ಕೂಗಿದ ಆರೋಪದಲ್ಲಿ ಮಡಿಕೇರಿ ಪೊಲೀಸ್ ಠಾಣೆಯಲ್ಲಿ 2015ರಲ್ಲಿ ದಾಖಲಾಗಿದ್ದ ಮೊಕದ್ದಮೆಯನ್ನು ವಾಪಸು ಪಡೆಯುವಂತೆ ಶಾಸಕ ಕೆ.ಜಿ. ಬೋಪಯ್ಯ ಮನವಿ ಮಾಡಿದ್ದರು.

ರಾಷ್ಟ್ರೀಯ ಹೆದ್ದಾರಿ 4ನ್ನು ಬಂದ್ ಮಾಡಿ ಕರ್ತವ್ಯಕ್ಕೆ ಅಡ್ಡಿಪಡಿಸಿದ ಘಟನೆಯಲ್ಲಿ ಹಾವೇರಿಯ ಕುಮಾರಪಟ್ಟಣಂ ಠಾಣೆಯಲ್ಲಿ 2018ರಲ್ಲಿ ರೈತರ ಮೇಲೆ ದಾಖಲಾದ ಪ್ರಕರಣವನ್ನೂ ವಾಪಸು ಪಡೆಯಲು ಮುಖ್ಯಮಂತ್ರಿ ಮತ್ತು ರೈತ ಸಂಘದವರು ಮನವಿ ಸಲ್ಲಿಸಿದ್ದರು. ಹಲಗೇರಿ ಠಾಣೆಯಲ್ಲಿ ಅಪಘಾತ ಪ್ರಕರಣವೊಂದಕ್ಕೆ ಸಂಬಂಧಿಸಿದಂತೆ ದಾಂದಲೆ ನಡೆಸಿದ ಘಟನೆ ಸಂಬಂಧಿಸಿದಂತೆ 2016ರಲ್ಲಿ ಹಾಗೂ ಹೊಲಗಳಿಗೆ ನೀರು ನುಗ್ಗಿದೆ ಎಂದು ಆರೋಪಿಸಿ ರಸ್ತೆ ಅಡ್ಡಗಟ್ಟಿದ ರೈತರ ಮೇಲೆ 2018ರಲ್ಲಿ ದಾಖಲಾದ ಮೊಕದ್ದಮೆಗಳನ್ನು ವಾಪಸು ಪಡೆಯಲು ಸ್ಥಳೀಯ ಶಾಸಕ ಅರುಣ್‌ಕುಮಾರ್ ಆಗ್ರಹಿಸಿದ್ದರು.

ಬೆಂಗಳೂರಿನ ರಾಜಾನುಕುಂಟೆ ಠಾಣಾ ವ್ಯಾಪ್ತಿಯಲ್ಲಿ 2107ರಲ್ಲಿ ಯೇಸುಕ್ರಿಸ್ತನ ಪ್ರಾರ್ಥನೆ ವೇಳೆ ರೆಡ್ಡಿ ಜನಾಂಗಕ್ಕೆ ಸೇರಿದವರು ಅಕ್ರಮ ಪ್ರವೇಶ ಮಾಡಿ ಜಾತಿನಿಂದನೆ ಮಾಡಿರುವ ಪ್ರಕರಣ ತನಿಖೆಯಿಂದ ದೃಢಪಟ್ಟಿದ್ದರೂ ಯಲಹಂಕ ಶಾಸಕ ಎಸ್‌.ಆರ್. ವಿಶ್ವನಾಥ ಅವರ ಮನವಿಯಂತೆ ಹಿಂಪಡೆಯಲು ರಾಜ್ಯ ಸರ್ಕಾರ ಮುಂದಾಗಿದೆ.

ಸಿಎಜಿ ವರದಿ:₹2,730 ಕೋಟಿ ಲಾಭ ಮಾಡಿದ 54 ಉದ್ಯಮಗಳು

34 ಉದ್ದಿಮೆಗಳಿಂದ ₹6,103 ಕೋಟಿ ನಷ್ಟ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ 120 ಸಾರ್ವಜನಿಕ ಉದ್ದಿಮೆಗಳಲ್ಲಿ 54 ಉದ್ದಿಮೆಗಳು ₹2,729.91 ಕೋಟಿ ಲಾಭ ಗಳಿಸಿದ್ದರೆ, 34 ಉದ್ದಿಮೆಗಳು ₹ 6,103 ಕೋಟಿ ನಷ್ಟ ಅನುಭವಿಸಿವೆ.

ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರ (ಸಿಎಜಿ) 2022ರ ಸಾಲಿನ ವರದಿಯಲ್ಲಿ ಈ ಅಂಶವನ್ನು ಉಲ್ಲೇಖಿಸಲಾಗಿದೆ. ವಿಧಾನಸಭೆಯಲ್ಲಿ ಮಂಗಳವಾರ ವರದಿಯನ್ನು ಮಂಡಿಸಲಾಯಿತು.

120 ಉದ್ದಿಮೆಗಳಲ್ಲಿ ₹1,62,348.15 ಕೋಟಿ ಹೂಡಿಕೆ (ಬಂಡವಾಳ ಮತ್ತು ದೀರ್ಘಾವಧಿ ಸಾಲಗಳು ಸೇರಿ) ಮಾಡಲಾಗಿತ್ತು. 2015–16 ರಲ್ಲಿ ಈ ಮೊತ್ತ ₹92,573.62 ಕೋಟಿ ಇತ್ತು. ಇದರಿಂದಾಗಿ ಹೂಡಿಕೆ 2019–20 ರ ವೇಳೆಗೆ ಶೇ 75.37 ರಷ್ಟು ಏರಿಕೆ ಆಗಿದೆ.

ಪ್ರಮುಖ ಅಂಶಗಳು:

- 2019–20 ರ ಸಾಲಿನಲ್ಲಿ ಕೆಪಿಸಿಎಲ್ ₹1,209.56 ಕೋಟಿ, ಕೆಆರ್‌ಐಡಿಎಲ್ ₹293.94 ಕೋಟಿ ಲಾಭ ಮಾಡಿವೆ. ಆರ್‌ಪಿಸಿಎಲ್ ₹2,084.95 ಕೋಟಿ ಮತ್ತು ಜೆಸ್ಕಾಂ ₹987.59 ಕೋಟಿ ನಷ್ಟ ಅನುಭವಿಸಿವೆ.
- ಸಾರ್ವಜನಿಕ ಉದ್ದಿಮೆಗಳು 2016–17 ರಲ್ಲಿ ₹155.12 ಕೋಟಿ ನಿವ್ವಳ ಲಾಭ ತೋರಿಸಿದ್ದರೆ, 2015–16, 2017–18, 2018–19 ಮತ್ತು 2019–20 ರ ಸಾಲಿನಲ್ಲಿ ಕ್ರಮವಾಗಿ ₹144.71 ಕೋಟಿ, ₹2,099.69 ಕೋಟಿ, ₹2,340.99 ಕೋಟಿ ಹಾಗೂ ₹3,374.05 ಕೋಟಿ ಮೊತ್ತದಷ್ಟು ನಿವ್ವಳ ನಷ್ಟ ಅನುಭವಿಸಿವೆ.
- ಬಳ್ಳಾರಿ ಶಾಖೋತ್ಪನ್ನ ವಿದ್ಯುತ್ ಉತ್ಪಾದನಾ ಸ್ಥಾವರದಲ್ಲಿ ₹118.46 ಕೋಟಿ ವೆಚ್ಚದಲ್ಲಿ ನಿರ್ಮಿಸಲಾದ ವಸತಿಗೃಹದಲ್ಲಿ ಉದ್ಯೋಗಿಗಳು ವಾಸಿಸದೇ ಇದ್ದುದರಿಂದ, ಯೋಜನೆಯ ಉದ್ದೇಶವೇ ವಿಫಲವಾಗಿದೆ.
- ಐಟಿ- ಬಿಟಿ, ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ ಕಳಪೆ ಯೋಜನೆ ರೂಪಿಸಿದ್ದರಿಂದಾಗಿ ಗುರಿ ಸಾಧನೆ ಆಗಿಲ್ಲ. ಹಿಂದಿನ ಬಿಡುಗಡೆಯನ್ನು ಖಚಿತಪಡಿಸಿಕೊಳ್ಳದೆ ಹಣ ಬಿಡುಗಡೆ ಮಾಡಲಾಗಿದೆ. ಅನುದಾನಿತ ನವೋದ್ಯಮಗಳ ಕಾರ್ಯಕ್ಷಮತೆಗೆ ಸಂಬಂಧಿಸಿದಂತೆ ಇಲಾಖೆಯಲ್ಲಿ ಸಂಪೂರ್ಣ, ಸಮರ್ಪಕ ಮಾಹಿತಿ ಇರಲಿಲ್ಲ. ₹9.04 ಕೋಟಿ ವೆಚ್ಚದ ಹೆಚ್ಚುವರಿ ತರಬೇತಿ ಪರವಾನಗಿ ಸಮರ್ಥನೆ ಇಲ್ಲದೇ ಖರೀದಿಸಲಾಗಿದೆ.
- ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯಿಂದ ಯೋಜನೆಯ ಕೊರತೆ ಮತ್ತು ಒಳಚರಂಡಿ ಕಾಮಗಾರಿಗಳನ್ನು ಅಸಮರ್ಪಕವಾಗಿ ಜಾರಿ ಮಾಡಿದ್ದರಿಂದ ₹198.75 ಕೋಟಿ ಕಾಮಗಾರಿಗಳು ಅಪೂರ್ಣಗೊಂಡಿವೆ. ಇದರಿಂದ ಸಾರ್ವಜನಿಕರಿಗೆ ಸೌಲಭ್ಯ ಒದಗಿಸಿಕೊಡಲು ಸಾಧ್ಯವಾಗಿಲ್ಲ ಮತ್ತು ಪರಿಸರಕ್ಕೂ ಹಾನಿ ಉಂಟಾಗಿದೆ.
- ಎಲ್‌ಟಿ ಏರಿಯಲ್ ಬಂಚ್ಡ್ ಕೇಬಲ್‌ಗಳ ಖರೀದಿಗೆ ಸಂಬಂಧಿಸಿದಂತೆ ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ ನಿಯಮಿತವು ₹65.34 ಕೋಟಿ ಹೆಚ್ಚುವರಿ ವೆಚ್ಚದ ಗುತ್ತಿಗೆಯನ್ನು ಅಧಿಕ ದರದಲ್ಲಿ ನೀಡಿದೆ.
- ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತ ರಿಯಾಯಿತಿ ಒಡಂಬಡಿಕೆಗಳ ನಿಯಮಗಳನ್ನು ಉಲ್ಲಂಘಿಸಿ ರಿಯಾಯಿತಿದಾರರಿಗೆ ₹63.63 ಕೋಟಿ ಬೋನಸ್ ಅನ್ನು ಅವಧಿಗೆ ಮುಂಚಿತವಾಗಿ ಪಾವತಿಸಿತು.

ವಸತಿ ಗುರಿ 5.17 ಲಕ್ಷ– ಪ್ರಗತಿ 88,395

ಬೆಂಗಳೂರು: ವಸತಿ ಯೋಜನೆಯಲ್ಲಿ ಅನುಮೋದನೆಗೊಂಡಿದ್ದ 5.17 ಲಕ್ಷ ಮನೆಗಳ ನಿರ್ಮಾಣದಲ್ಲಿ ಕೇವಲ ಶೇ 17ರಷ್ಟು ಮಾತ್ರ ಪೂರ್ಣಗೊಂಡಿವೆ.ಇದರಿಂದ, 2022ರ ಅಂತ್ಯಕ್ಕೆ 'ಎಲ್ಲ ರಿಗೂ ವಸತಿ' ಎನ್ನುವುದು ಕಷ್ಟಸಾಧ್ಯ ಎಂದು ಸಿಎಜಿ ವರದಿ ಹೇಳಿದೆ.

ಎಲ್ಲರಿಗೂ ವಸತಿ ಕಲ್ಪಿಸಲು 2015ರಲ್ಲಿ 'ಪ್ರಧಾನಮಂತ್ರಿ ಆವಾಸ್ ಯೋಜನೆ' ಜಾರಿಗೊಳಿಸಲಾಯಿತು. ರಾಜ್ಯ ಸರ್ಕಾರ ಈ ಯೋಜನೆಯೊಂದಿಗೆ ಹೊಂದಾಣಿಕೆಯಾಗುವ ಕರ್ನಾಟಕ ಕೈಗೆಟಕುವ ವಸತಿ ನೀತಿಯನ್ನು ಜಾರಿಗೊ ಳಿಸಿತು. ಜತೆಗೆ, ಜಾರಿಯಲ್ಲಿದ್ದ ರಾಜ್ಯ ವಲಯದ ವಸತಿ ಯೋಜನೆಗಳನ್ನು ಸೇರಿಸಿತು.

2021ರ ಮಾರ್ಚ್‌ನಲ್ಲಿನ ಮಾಹಿತಿ ಅನ್ವಯ, ಕೈಗೆಟಕುವ ಬೆಲೆಯಲ್ಲಿ ವಸತಿ (ಎಎಚ್‌ಪಿ) ಮತ್ತು ವೈಯಕ್ತಿಕ ವಸತಿ ನಿರ್ಮಾಣ (ಬಿಎಲ್‌ಸಿ) ಯೋಜನೆ ಅಡಿಯಲ್ಲಿ 13.71 ಲಕ್ಷ ಫಲಾನುಭವಿ ಗಳನ್ನು ಗುರುತಿಸಲಾಗಿತ್ತು. ಇವರಲ್ಲಿ 5.17 ಲಕ್ಷ ಫಲಾನುಭವಿಗಳನ್ನು ಮಾತ್ರ ಯೋಜನೆಗಳ ವ್ಯಾಪ್ತಿಗೆ ತರಲಾಯಿತು. ಆದರೆ, ಕೇವಲ 88,395 (ಶೇ 17ರಷ್ಟು) ಮನೆಗಳ ನಿರ್ಮಾಣ ಮಾತ್ರ ಪೂರ್ಣಗೊಂಡಿವೆ. 3.28 ಲಕ್ಷ ವಸತಿ ಘಟಕಗಳ ನಿರ್ಮಾಣವು ಇನ್ನೂ ಆರಂಭವಾಗಬೇಕಾಗಿದೆ ಎಂದು ವರದಿ ಹೇಳಿದೆ.

ಯೋಜನೆಯ ಅನುಷ್ಠಾನದಲ್ಲೂ ವಿಳಂಬವಾಗಿದೆ. ಯೋಜನೆ ಆರಂಭಿಸಿದ 5 ವರ್ಷಗಳ ನಂತರ, 2020ರಲ್ಲಿ ವಸತಿ ಕಾರ್ಯಯೋಜನೆಯನ್ನು ರೂಪಿಸಲಾಯಿತು. ಇದು ಕೇವಲ ದಾಖಲಾತಿಯ ಉದ್ದೇಶವನ್ನು ಪೂರೈಸಿತೇ ಹೊರತು ಸಮರ್ಪಕವಾಗಿ ಕಾರ್ಯಗತಗೊಳಿಸಲು ಸಾಧ್ಯವಾಗಲಿಲ್ಲ ಎಂದು ವಿವರಿಸಲಾಗಿದೆ.

₹11 ಲಕ್ಷ ಪರಿಹಾರದ ಬದಲು ₹44.47 ಕೋಟಿ ಮೌಲ್ಯದ ನಿವೇಶನಗಳು

ಬಿಡಿಎದಲ್ಲಿ ಸರಿಯಾದ ಕಾರ್ಯವಿಧಾನ ಅನುಸರಿಸದೇ ಖಾಸಗಿ ಜಮೀನು ಸ್ವಾಧೀನಪಡಿಸಿಕೊಂಡ ಪರಿಣಾಮ ಘೋಷಿಸಲಾದ ₹10.91 ಲಕ್ಷ ಪರಿಹಾರದ ಬದಲು ₹44.47 ಕೋಟಿ ಮೌಲ್ಯದ ಅಭಿವೃದ್ಧಿಪಡಿಸಿದ ನಿವೇಶನಗಳನ್ನು ಹಂಚಿಕೆ ಮಾಡಲಾಗಿದೆ ಎಂದು ಸಿಎಜಿ ವರದಿ ಹೇಳಿದೆ.

ದಾಖಲೆಗಳ ತಿದ್ದುವಿಕೆ, ದಾಖಲೆಗಳ ನೈಜತೆ ಪರಿಶೀಲಿಸುವಲ್ಲಿ ಆಂತರಿಕ ನಿಯಂತ್ರಣದ ಕಾರ್ಯವಿಧಾನದ ವಿಫಲತೆಯ ಕಾರಣ ಸುಳ್ಳು ದಾಖಲೆಗಳ ಆಧಾರದ ಮೇಲೆ ₹10.05 ಕೋಟಿ ಮೌಲ್ಯದ ಕ್ರಯಪತ್ರ ಮಾಡಿಕೊಡಲಾಗಿದೆ ಎಂದೂ ವರದಿ ಉಲ್ಲೇಖಿಸಿದೆ.

'ಖಜಾನೆ–2 ಅಪ್ಲಿಕೇಶನ್ ಸುರಕ್ಷಿತವಲ್ಲ'

ಬೆಂಗಳೂರು: 'ಖಜಾನೆ–2 (ಕೆ–2) ಅಪ್ಲಿಕೇಶನ್ ಹೆಚ್ಚು ಸುರಕ್ಷಿತವಲ್ಲ, ಭದ್ರತಾ ಲೋಪಗಳಿರುವುದರಿಂದ ಹಣಕಾಸಿನ ಮಾಹಿತಿ ದುರುಪಯೋಗಕ್ಕೆ ಅವಕಾಶ ಮಾಡಿಕೊಡುವ ಸಾಧ್ಯತೆ ಇದೆ' ಎಂದು ಸಿಎಜಿ ವರದಿ ಎಚ್ಚರಿಕೆ ನೀಡಿದೆ.

ಡಿಜಿಟಲ್ ಸಹಿ ಪ್ರಕ್ರಿಯೆಯ ವಿಶ್ವಾಸಾರ್ಹತೆಯ ಮೇಲೆ ಪರಿಣಾಮ ಬೀರುವ ಡಿಜಿಟಲ್ ಸಹಿಗಳಿಲ್ಲದ ವಹಿವಾಟುಗಳ ಪ್ರಕರಣಗಳನ್ನು ಗಮನಿಸಿದಾಗ ಈ ಅಂಶ ಪತ್ತೆಯಾಗಿದೆ. ಅತ್ಯಂತ ಸೂಕ್ಷ್ಮ ಎನಿಸುವ ಹಣಕಾಸಿನ ಮಾಹಿತಿ ಅಪಾತ್ರರ ಕೈಗೆ ಸಿಕ್ಕಿದರೆ ದುರುಪಯೋಗ ಆಗಲೂಬಹುದು. ಮಾಹಿತಿ ಗೋಪ್ಯತೆ ಮತ್ತು ಸಮಗ್ರತೆಯನ್ನು ರಾಜಿ ಮಾಡಿಕೊಳ್ಳುವ ಅಪಾಯವನ್ನೂ ಎದುರಿಸುತ್ತಿದೆ ಎಂದೂ ಹೇಳಿದೆ.

ಎಲ್ಲ ಯೋಜಿತ ವ್ಯವಹಾರ ಪ್ರಕ್ರಿಯೆ ಗಳನ್ನು ಕೆ2ವಿನಲ್ಲಿ ಅಳವಡಿಸಬೇಕಿದೆ. ಇದರಿಂದ ಹಲವು ಪ್ರಕ್ರಿಯೆಗಳು ಕೆ2 ಅಪ್ಲಿಕೇಶನ್‌ನಿಂದ ಹೊರಗೆ ಉಳಿದಿವೆ. ಉದ್ದೇಶಿತ ಮಾಡ್ಯೂಲ್‌ಗಳು ಸಿದ್ಧಗೊಂಡಿಲ್ಲ. ಯೋಜನೆ ಜಾರಿಯಾಗಿ ದಶಕ ಕಳೆದರೂ ನಿರೀಕ್ಷಿತ ಫಲಿತಾಂಶ ಸಿಕ್ಕಿಲ್ಲ ಎಂದಿದೆ. ಕೆ2 ಸಾಫ್ಟ್‌ವೇರ್ ಒಪ್ಪಂದದ ನಿರ್ವಹಣೆಯಲ್ಲಿ ನ್ಯೂನತೆಗಳಿದ್ದವು. ಹೆಚ್ಚುವರಿ ಹಣ ಬಿಡುಗಡೆ, ಎರಡು ಬಾರಿ ಪಾವತಿಯಾದ ಸಾಮಾನ್ಯ ಭವಿಷ್ಯನಿಧಿ ಬಿಲ್‌ಗಳು, ಎರಡು ಬಾರಿ ಪಾವತಿಯಾದ ಮರುಪಾವತಿ ಬಿಲ್‌ಗಳು, ಉದ್ಯೋಗಿಗಳ ನಿವೃತ್ತಿಯ ಬಳಿಕವೂ ವೇತನ ಪಾವತಿ ಮಾಡಿರುವುದೂ ಪತ್ತೆಯಾಗಿದೆ ಎಂದು ಸಿಎಜಿ ವರದಿ ತಿಳಿಸಿದೆ.

ಅಧ್ಯಕ್ಷ ಚುನಾವಣೆ: ಸೋನಿಯಾ ಭೇಟಿ ಮಾಡಿದ ವೇಣುಗೋಪಾಲ್

ಕಾಂಗ್ರೆಸ್: ಚಟುವಟಿಕೆ ಬಿರುಸು

ಪ್ರಜಾವಾಣಿ ವಾರ್ತೆ

ಕೇರಳದ ಆಲಪ್ಪುಳ ಜಿಲ್ಲೆಯಲ್ಲಿ ರಾಹುಲ್ ಗಾಂಧಿ ಅವರ ನೇತೃತ್ವದಲ್ಲಿ 13ನೇ ದಿನದ ಭಾರತ್ ಜೋಡೊ ಯಾತ್ರೆ ಮಂಗಳವಾರ ನಡೆಯಿತು –ಪಿಟಿಐ ಚಿತ್ರ

ನವದೆಹಲಿ: ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರು ಪಕ್ಷದ ಅಧ್ಯಕ್ಷರಾಗಲಿ ಎಂಬ ಕೂಗು ಇನ್ನಷ್ಟು ಬಲವಾಗಿದ್ದು, ಎಂಟು ರಾಜ್ಯ ಘಟಕಗಳು ಈ ಸಂಬಂಧದ ನಿರ್ಣಯ ಅಂಗೀಕರಿಸಿವೆ. ಈ ಮಧ್ಯೆ, ಪ್ರಧಾನ ಕಾರ್ಯದರ್ಶಿ ಕೆ.ಸಿ. ವೇಣುಗೋಪಾಲ್ ಅವರು ಪಕ್ಷದ ಅಧ್ಯಕ್ಷೆ ಸೋನಿಯಾ ಗಾಂಧಿ ಅವರನ್ನು ಮಂಗಳವಾರ ಭೇಟಿ ಮಾಡಿದರು.

ರಾಹುಲ್ ಅಧ್ಯಕ್ಷತೆ ವಹಿಸಿಕೊಳ್ಳಲಿ ಎಂದು ಒತ್ತಾಯಿಸಿ ಜಾರ್ಖಂಡ್ ಹಾಗೂ ಹರಿಯಾಣ ಕಾಂಗ್ರೆಸ್ ಘಟಕಗಳು ಮಂಗಳವಾರ ನಿರ್ಣಯ ಅಂಗೀಕರಿಸಿವೆ. ಈವರೆಗೆ 10 ರಾಜ್ಯ ಘಟಕಗಳು ಇದೇ ವಿಚಾರವಾಗಿ ನಿರ್ಣಯ ಅಂಗೀಕರಿಸಿವೆ. ಮೂಲಗಳ ಪ್ರಕಾರ, ರಾಹುಲ್ ಅವರು ಅಧ್ಯಕ್ಷೀಯ ಚುನಾವಣೆಗೆ ಸ್ಪರ್ಧಿಸುವ ಸಾಧ್ಯತೆಯಿಲ್ಲ. ಚುನಾವಣೆಗೆ ನಾಮಪತ್ರ ಸಲ್ಲಿಕೆ ಪ್ರಕ್ರಿಯೆ ನಡೆಯುವ ಸೆ.24ರಿಂದ 30ರ ಅವಧಿಯಲ್ಲಿ ಅವರು ದೆಹಲಿಗೆ ಭೇಟಿ ನೀಡುವ ಸಾಧ್ಯತೆಯೂ ಇಲ್ಲ ಎನ್ನಲಾಗಿದೆ.

'ಭಾರತ್ ಜೋಡೊ ಯಾತ್ರೆ'ಯಲ್ಲಿ ಕಳೆದ ಎರಡು ವಾರಗಳಿಂದ ಭಾಗಿಯಾಗಿದ್ದ ವೇಣುಗೋಪಾಲ್ ಅವರು ಮಂಗಳವಾರ ದೆಹಲಿಗೆ ಬಂದರು. ಅಧ್ಯಕ್ಷೀಯ ಸ್ಥಾನದ ಆಕಾಂಕ್ಷಿ ಶಶಿ ತರೂರ್ ಅವರು ಸೋನಿಯಾ ಅವರನ್ನು ಭೇಟಿಯಾದ ಮರುದಿನ ವೇಣುಗೋಪಾಲ್ ಸೋನಿಯಾ ಮನೆಗೆ ತೆರಳಿ ಮಾತುಕತೆ ನಡೆಸಿದರು. ಅಧ್ಯಕ್ಷೀಯ ಚುನಾವಣೆ ಸಂಬಂಧ ಸೋನಿಯಾ ಅವರ ಜೊತೆ ಮಾತುಕತೆ ನಡೆಸಲಾಗಿದೆ ಎಂಬುದನ್ನು ವೇಣುಗೋಪಾಲ್ ತಳ್ಳಿಹಾಕಿದ್ದಾರೆ. 'ಇದೊಂದು ಸಹಜ ಭೇಟಿ. ಪಕ್ಷ ಸಂಘಟನೆ ಬಗ್ಗೆ ಮಾತುಕತೆ ನಡೆಯಿತು' ಎಂದು ಸ್ಪಷ್ಟಪಡಿಸಿದ್ದಾರೆ.

ರಾಹುಲ್ ಪರವಾಗಿ ರಾಜ್ಯ ಘಟಕಗಳು ನಿರ್ಣಯ ಅಂಗೀಕರಿಸುವ ಕುರಿತು ಸುದ್ದಿಗಾರರು ಕೇಳಿದ ಪ್ರಶ್ನೆಗೆ ಉತ್ತರಿಸಿದ ಅವರು, 'ಇದರಲ್ಲಿ ತಪ್ಪೇನಿಲ್ಲ. ಹಾಗೆ ಮಾಡಲು ಸ್ವಾತಂತ್ರ್ಯವಿದೆ' ಎಂದಿದ್ದಾರೆ.

ಶಶಿ ತರೂರ್ ಅವರು ಪಕ್ಷದ ಅಧ್ಯಕ್ಷೀಯ ಚುನಾವಣೆಯಲ್ಲಿ ಸ್ಪರ್ಧಿಸುವ ಇಂಗಿತ ವ್ಯಕ್ತಪಡಿಸಿರುವುದಕ್ಕೆ ಕೇರಳ ಕಾಂಗ್ರೆಸ್ ಮುಖಂಡರು ವಿರೋಧ ವ್ಯಕ್ತಪಡಿಸಿದ್ದಾರೆ. ಮತ್ತೊಬ್ಬ ಸಂಭಾವ್ಯ ಅಭ್ಯರ್ಥಿ, ರಾಜಸ್ಥಾನದ ಮುಖ್ಯಮಂತ್ರಿ ಅಶೋಕ್ ಗೆಹಲೋತ್ ಅವರು ಬುಧವಾರ ದೆಹಲಿಗೆ ಭೇಟಿ ನೀಡುವ ಸಾಧ್ಯತೆಯಿದೆ. ಅದಕ್ಕೂ ಮುನ್ನ ಪಕ್ಷದ ಶಾಸಕರನ್ನು ಭೇಟಿ ಮಾಡಲು ಮುಂದಾಗಿದ್ದಾರೆ.

> **ಚುನಾವಣೆಯಲ್ಲಿ ಸ್ಪರ್ಧಿಸಲು ಸೋನಿಯಾ ಅವರ ಅನುಮತಿ ಪಡೆಯಬೇಕಿಲ್ಲ. ಒಮ್ಮತದ ಅಭ್ಯರ್ಥಿ ಸಾಧ್ಯವಾಗದಿದ್ದಲ್ಲಿ ಚುನಾವಣೆ ಅನಿವಾರ್ಯ**
> **ಜೈರಾಮ್ ರಮೇಶ್**, ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ

'ಭಾರತ್ ಜೋಡೊ' ಯಾತ್ರೆ 13ನೇ ದಿನಕ್ಕೆ

ಆಲಪ್ಪುಳ (ಪಿಟಿಐ): ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರು 'ಭಾರತ್ ಜೋಡೊ' 13ನೇ ದಿನದ ಯಾತ್ರೆಯನ್ನು ಮಂಗಳವಾರ ಪಕ್ಷದ ಸಾವಿರಾರು ಕಾರ್ಯಕರ್ತರೊಂದಿಗೆ ಚೇಪಾಡಿನಿಂದ ಪ್ರಾರಂಭಿಸಿದರು.

ಸೇಂಟ್ ಮೈಕೆಲ್ ಕಾಲೇಜಿನ ಆವರಣದಲ್ಲಿ ರಾಹುಲ್ ಸಸಿಗಳನ್ನು ನೆಡುವ ಮೂಲಕ ಯಾತ್ರೆ ಆರಂಭಿಸಲಾಯಿತು. ಸಸಿ ನೆಡುವ ಕಾರ್ಯಕ್ರಮವನ್ನು ಪಕ್ಷದ ಕೇರಳ ಘಟಕದ ಪರಿಸರ ವಿಭಾಗ ಶಸ್ತ್ರವೇದಿ ಆಯೋಜಿಸಿತ್ತು. ಬೆಳಿಗ್ಗೆ ಅವಧಿಯ 15 ಕಿ.ಮೀ. ಪಾದಯಾತ್ರೆ ಕುಥಿಯಾಥೋಡುನಲ್ಲಿ ಕೊನೆಯಾಯಿತು. ಕೇರಳದಲ್ಲಿ ಇನ್ನು 12 ದಿನಗಳಲ್ಲಿ 255 ಕಿ.ಮೀ. ಯಾತ್ರೆ ನಡೆಯಲಿದೆ ಎಂದು ಪಕ್ಷದ ಪ್ರಧಾನ ಕಾರ್ಯದರ್ಶಿ ಜೈರಾಮ್ ರಮೇಶ್ ತಿಳಿಸಿದರು.

ಆ್ಯಂಟಿರೆಟ್ರೊವೈರಲ್ ಔಷಧ ಕೊರತೆ ಕೇಂದ್ರಕ್ಕೆ 'ಸುಪ್ರೀಂ' ನೋಟಿಸ್

ನವದೆಹಲಿ (ಪಿಟಿಐ): ಎಚ್‌ಐವಿ ಪೀಡಿತರ ಚಿಕಿತ್ಸೆಗೆ ಬಳಸುವ ಆ್ಯಂಟಿರೆಟ್ರೊವೈರಲ್ ಔಷಧಿಯ ಕೊರತೆ ಇದೆ ಎಂದು ಆರೋಪಿಸಿ ಸಲ್ಲಿಸಲಾಗಿರುವ ಅರ್ಜಿಯೊಂದರ ವಿಚಾರಣೆ ನಡೆಸಿದ ಸುಪ್ರೀಂ ಕೋರ್ಟ್ ಮಂಗಳವಾರ ಕೇಂದ್ರ ಸರ್ಕಾರಕ್ಕೆ ನೋಟಿಸ್ ನೀಡಿದೆ.

ಇಂಡಿಯನ್ ನೆಟ್‌ವರ್ಕ್ ಫಾರ್ ಪೀಪಲ್ ಲಿವಿಂಗ್ ವಿಥ್ ಎಚ್‌ಐವಿ/ ಏಡ್ಸ್ ಎಂಬ ಸ್ವಯಂ ಸೇವಾ ಸಂಸ್ಥೆ (ಎನ್‌ಜಿಒ) ಸಲ್ಲಿಸಿರುವ ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿಗಳಾದ ಡಿ.ವೈ.ಚಂದ್ರಚೂಡ್ ಮತ್ತು ಹಿಮಾ ಕೊಹ್ಲಿ ಅವರನ್ನೊಳಗೊಂಡ ದ್ವಿಸದಸ್ಯ ನ್ಯಾಯಪೀಠವು ಈ ಸಂಬಂಧ ಪ್ರತಿಕ್ರಿಯೆ ನೀಡುವಂತೆ ಕೇಂದ್ರ ಆರೋಗ್ಯ ಸಚಿವಾಲಯ, ರಾಷ್ಟ್ರೀಯ ಏಡ್ಸ್ ನಿಯಂತ್ರಣ ಸಂಸ್ಥೆ ಹಾಗೂ ಇತರರಿಗೆ ಸೂಚಿಸಿದೆ.

ಮಾನ್ ವಿರುದ್ಧದ ಆರೋಪ ಪರಿಶೀಲನೆ: ಸಿಂಧಿಯಾ

ನವದೆಹಲಿ (ಪಿಟಿಐ): ಪಂಜಾಬ್ ಮುಖ್ಯಮಂತ್ರಿ ಭಗವಂತ್ ಮಾನ್ ಅವರು ಜರ್ಮನಿಯ ಫ್ರಾಂಕ್‌ಫರ್ಟ್ ವಿಮಾನ ನಿಲ್ದಾಣಕ್ಕೆ ಮದ್ಯ ಕುಡಿದು ಬಂದಿದ್ದರಿಂದ ಅವರನ್ನು ವಿಮಾನದಿಂದ ಇಳಿಸಲಾಗಿತ್ತು ಎಂದು ಶಿರೋಮಣಿ ಅಕಾಲಿ ದಳವು ಸೋಮವಾರ ಆರೋಪಿಸಿತ್ತು. ಈ ಆರೋಪವನ್ನು ಪರಿಶೀಲಿಸುವುದಾಗಿ ನಾಗರಿಕ ವಿಮಾನಯಾನ ಸಚಿವ ಜ್ಯೋತಿರಾದಿತ್ಯ ಸಿಂಧಿಯಾ ಹೇಳಿದ್ದಾರೆ.

ಐರೋಪ್ಯ ದೇಶಗಳಿಂದ ಹೂಡಿಕೆದಾರರನ್ನು ಸೆಳೆಯುವ ಉದ್ದೇಶದ 8 ದಿನಗಳ ವಿದೇಶ ಪ್ರವಾಸದಿಂದ ಮಾನ್ ಸೋಮವಾರವಷ್ಟೇ ಪಂಜಾಬ್‌ಗೆ ವಾಪಸಾಗಿದ್ದಾರೆ. ಆದರೆ, ಫ್ರಾಂಕ್‌ಫರ್ಟ್ ವಿಮಾನ ನಿಲ್ದಾಣಕ್ಕೆ ಅವರು ಕುಡಿದು ಬಂದಿದ್ದರಿಂದ ಅವರನ್ನು ದೆಹಲಿಗೆ ಹೊರಡಬೇಕಿದ್ದ ಲುಫ್ತಾನ್ಸಾ ವಿಮಾನದಿಂದ ಇಳಿಸಲಾಗಿತ್ತು. ಈ ಕಾರಣದಿಂದ ವಿಮಾನ ಹೊರಡುವುದು ತಡವಾಗಿತ್ತು ಎಂದು ಅಕಾಲಿ ದಳವು ಆರೋಪಿಸಿತ್ತು.

ಈ ಆರೋಪಕ್ಕೆ ಸಂಬಂಧಿಸಿದಂತೆ ತನಿಖೆ ನಡೆಸಿ ಎಂದು ಕಾಂಗ್ರೆಸ್ ನಾಯಕ ಪ್ರತಾಪ್ ಸಿಂಗ್ ಬಾಜ್ವಾ, ಸಚಿವ ಜ್ಯೋತಿರಾದಿತ್ಯ ಸಿಂಧಿಯಾ ಅವರಿಗೆ ಪತ್ರ ಬರೆದಿದ್ದಾರೆ. ಈ ಬಗ್ಗೆ ಸಿಂಧಿಯಾ ಅವರು ಪ್ರತಿಕ್ರಿಯೆ ನೀಡಿದ್ದು, 'ಇದು ವಿದೇಶಿ ನೆಲದಲ್ಲಿ ನಡೆದ ಘಟನೆ. ನಾವು ಸತ್ಯವನ್ನು ಪರಿಶೀಲಿಸಬೇಕು. ಇದಕ್ಕೆ ಸಂಬಂಧಿಸಿದ ಮಾಹಿತಿಯನ್ನು ನೀಡುವುದು ಲುಫ್ತಾನ್ಸಾ ಏರ್‌ಲೈನ್ ವಿವೇಚನೆಗೆ ಬಿಟ್ಟದ್ದು' ಎಂದು ಹೇಳಿದ್ದಾರೆ.

ಮುಖ್ಯಾಂಶಗಳು
- ಮದ್ಯಪಾನ: ಮಾನ್ ಅವರನ್ನು ವಿಮಾನದಿಂದ ಕೆಳಕ್ಕಿಳಿಸಿದ ಆರೋಪ
- ಯಾವುದೇ ಪ್ರತಿಕ್ರಿಯೆ ನೀಡದ ಪಂಜಾಬ್ ಸರ್ಕಾರ, ಮಾನ್

> **ಇದು ಭಾರತದ ಘನತೆ ಮತ್ತು ಪಂಜಾಬ್‌ನ ಗೌರವಕ್ಕೆ ಸಂಬಂಧಿಸಿದ ವಿಚಾರ. ಕೇಂದ್ರವು ತಕ್ಷಣವೇ ಮಧ್ಯಪ್ರವೇಶಿಸಬೇಕು. ಜರ್ಮನಿ ಜತೆ ಮಾತನಾಡಬೇಕು**
> **ಪ್ರತಾಪ್ ಸಿಂಗ್ ಬಾಜ್ವಾ**, ಪಂಜಾಬ್ ವಿಧಾನಸಭೆ ವಿರೋಧ ಪಕ್ಷದ ನಾಯಕ

> **ಇದು ಸುಳ್ಳು ಮತ್ತು ಆಧಾರರಹಿತ ಆರೋಪ. ಮಾನ್ ಅವರ ಜನಪ್ರಿಯತೆಗೆ ಮಸಿ ಬಳಿಯಲು ಎದುರಾಳಿ ಪಕ್ಷಗಳು ಇಂತಹ ಆರೋಪ ಮಾಡುತ್ತಿವೆ**
> **ಮಲ್ವಿಂದರ್ ಸಿಂಗ್ ಕಂಗ್**, ಎಎಪಿ ವಕ್ತಾರ

ಲುಫ್ತಾನ್ಸಾ ಪ್ರತಿಕ್ರಿಯೆ: ಫ್ರಾಂಕ್‌ಫರ್ಟ್‌ನಿಂದ ದೆಹಲಿಗೆ ಬರಬೇಕಿದ್ದ ವಿಮಾನ ವಿಳಂಬವಾದುದರ ಬಗ್ಗೆ ಲುಫ್ತಾನ್ಸಾ ಏರ್‌ಲೈನ್, 'ಸಂಪರ್ಕ ವಿಮಾನ ಬರುವುದು ತಡವಾದ ಕಾರಣ ದೆಹಲಿಗೆ ವಿಮಾನ ಹೊರಡುವುದು ತಡವಾಯಿತು' ಎಂದಷ್ಟೇ ಹೇಳಿತ್ತು.

ಅಬ್ದುಲ್ ಘನಿ, ಸುಬೀನಾ ಬಾನು ಮತ್ತು ಮಕ್ಕಳು ತಿರುಪತಿ ತಿರುಮಲ ದೇವಾಲಯ ಸಮಿತಿಯ ಅಧಿಕಾರಿಗೆ ಮಂಗಳವಾರ ಡಿ.ಡಿ ಹಸ್ತಾಂತರಿಸಿದರು –ಪಿಟಿಐ ಚಿತ್ರ

ಮುಸ್ಲಿಂ ಉದ್ಯಮಿಯಿಂದ ತಿರುಪತಿ ದೇವಸ್ಥಾನಕ್ಕೆ ₹1 ಕೋಟಿ ದೇಣಿಗೆ

ಪ್ರಜಾವಾಣಿ ವಾರ್ತೆ

ಹೈದರಾಬಾದ್: ತಿರುಪತಿ ವೆಂಕಟೇಶ್ವರ ಸ್ವಾಮಿಯ ಭಕ್ತರಾಗಿರುವ ಚೆನ್ನೈನ ಉದ್ಯಮಿ ಅಬ್ದುಲ್ ಘನಿ ಎಂಬುವವರು ದೇವಸ್ಥಾನಕ್ಕೆ ಮಂಗಳವಾರ ₹1.02 ಕೋಟಿ ದೇಣಿಗೆ ನೀಡಿದ್ದಾರೆ.

ಪತ್ನಿ ಸುಬೀನಾ ಬಾನು ಮತ್ತು ಮಕ್ಕಳೊಂದಿಗೆ ಮಂಗಳವಾರ ದೇವರ ದರ್ಶನ ಪಡೆದ ಘನಿ ಅವರು ತಿರುಪತಿ ದೇವಸ್ಥಾನದ ಆವರಣದಲ್ಲಿ ನೂತನವಾಗಿ ನಿರ್ಮಿಸಿರುವ ಶ್ರೀ ಪದ್ಮಾವತಿ ವಿಶ್ರಾಂತಿ ಗೃಹಕ್ಕೆ ಪೀಠೋಪಕರಣ ಹಾಗೂ ಪಾತ್ರೆಗಳನ್ನು ಖರೀದಿಸಲು ₹87 ಲಕ್ಷ ಹಾಗೂ ಎಸ್‌.ವಿ. ಅನ್ನಪ್ರಸಾದಂ ಟ್ರಸ್ಟ್‌ಗೆ ₹15 ಲಕ್ಷ ಒದಗಿಸಿದರು. ದೇವಾಲಯ ಸಮಿತಿಯ ಅಧಿಕಾರಿಯೊಬ್ಬರಿಗೆ ಘನಿ ಕುಟುಂಬದವರು ಈ ಮೊತ್ತದ ಡಿ.ಡಿ ಹಸ್ತಾಂತರಿಸಿದರು.

'ವೆಂಕಟೇಶ್ವರ, ಅಲ್ಲಾ, ಏಸು ಎಲ್ಲರೂ ಒಂದೇ ಎಂದು ನಂಬಿದ್ದೇನೆ. ನಾನು ವೆಂಕಟೇಶ್ವರ ಸ್ವಾಮಿಯ ಭಕ್ತ. ಸುಮಾರು 25 ವರ್ಷಗಳಿಂದ ದೇವಸ್ಥಾನಕ್ಕೆ ಭೇಟಿ ನೀಡುತ್ತಿದ್ದೇನೆ' ಎಂದು ಘನಿ 'ಪ್ರಜಾವಾಣಿ'ಗೆ ತಿಳಿಸಿದ್ದಾರೆ.

ಆಸ್ಕರ್‌ಗೆ ಅಧಿಕೃತ ಪ್ರವೇಶ ಪಡೆದ 'ಛೆಲ್ಲೊ ಶೋ'

ನವದೆಹಲಿ (ಪಿಟಿಐ): 'ಗುಜರಾತಿ ಚಲನಚಿತ್ರ 'ಛೆಲ್ಲೊ ಶೋ' 95ನೇ ಅಕಾಡೆಮಿ ಪ್ರಶಸ್ತಿಗೆ (2023ರ ಆಸ್ಕರ್ ಪ್ರಶಸ್ತಿ) ಅಧಿಕೃತ ಪ್ರವೇಶ ಪಡೆದಿರುವ ಭಾರತೀಯ ಚಲನಚಿತ್ರವಾಗಿದೆ' ಎಂದು ಭಾರತೀಯ ಚಲನಚಿತ್ರ ಫೆಡರೇಷನ್ (ಎಫ್‌ಎಫ್‌ಐ) ಮಂಗಳವಾರ ತಿಳಿಸಿದೆ.

ಪಾನ್ ನಳಿನ್ ನಿರ್ದೇಶಿಸಿರುವ ಈ ಚಿತ್ರವು ಅಕ್ಟೋಬರ್ 14ರಂದು ದೇಶದಾದ್ಯಂತ ಚಿತ್ರಮಂದಿರಗಳಲ್ಲಿ ಬಿಡುಗಡೆಯಾಗಲಿದೆ. ಈ ಚಿತ್ರದ ಮುಖ್ಯಪಾತ್ರಗಳಲ್ಲಿ ಭವಿನ್ ರಾಬರಿ, ಭವೇಶ್ ಶ್ರೀಮಲಿ, ರಿಚಾ ಮೀನಾ, ದಿಪೇನ್ ರಾವಲ್ ಮತ್ತು ಪರೇಶ್ ಮೆಹ್ತಾ ಅವರು ಕಾಣಿಸಿಕೊಂಡಿದ್ದಾರೆ.

ಗುಜರಾತ್‌ನ ಗ್ರಾಮೀಣ ಪ್ರದೇಶದಲ್ಲಿ ಬಾಲ್ಯ ಕಳೆವ ವೇಳೆ ತಾವು ಚಲನಚಿತ್ರಗಳಿಗೆ ಮನಸೋಲುತ್ತಿದ್ದ ನೆನಪುಗಳನ್ನೇ ಸ್ಫೂರ್ತಿಯಾಗಿಸಿಕೊಂಡು ನಿರ್ದೇಶಕ ನಳಿನ್ ಅವರು ಈ ಚಿತ್ರವನ್ನು ಕಟ್ಟಿಕೊಟ್ಟಿದ್ದಾರೆ.

ಛೆಲ್ಲೊ ಶೋ ಎಂದರೆ 'ಕೊನೆಯ ಚಿತ್ರ ಪ್ರದರ್ಶನ' ಎಂದರ್ಥ.

ನೋಂದಣಿ ಸಂಖ್ಯೆ : 36 ಡಿ.ಆರ್ | ದಿನಾಂಕ : 06-03-1943

ದಿ ಸ್ಟೇಟ್ ಬ್ಯಾಂಕ್ ಎಂಪ್ಲಾಯೀಸ್ ಕೋ-ಆಪರೇಟಿವ್ ಕ್ರೆಡಿಟ್ ಸೊಸೈಟಿ ಲಿಮಿಟೆಡ್
ಮೊದಲನೆಯ ಮಹಡಿ, ಎಸ್.ಬಿ.ಐ., ಮೈಸೂರು ಬ್ಯಾಂಕ್ ಸರ್ಕಲ್ ಶಾಖೆ, ಅವಿನ್ಯೂ ರಸ್ತೆ, ಬೆಂಗಳೂರು-560 009

79ನೇ ವಾರ್ಷಿಕ ಸರ್ವ ಸದಸ್ಯರ ಸಾಮಾನ್ಯ ಸಭೆಯ ನೋಟೀಸು

ಸ್ಟೇಟ್ ಬ್ಯಾಂಕ್ ನೌಕರರ ಪತ್ತಿನ ಸಹಕಾರ ಸಂಘ ನಿಯಮಿತ, ಬೆಂಗಳೂರು ಇದರ 2021-22 ನೇ ಸಾಲಿನ 79ನೇ ವಾರ್ಷಿಕ ಸರ್ವ ಸದಸ್ಯರ ಸಭೆಯನ್ನು **ದಿನಾಂಕ 24.09.2022ರ ಶನಿವಾರ ಬೆಳಿಗ್ಗೆ 11.00 ಗಂಟೆಗೆ ಸರ್ ಎಂ. ವಿ. ಆಡಿಟೋರಿಯಂ, ಕೆ.ಇ.ಬಿ. ಇಂಜಿನಿಯರ್ಸ್ ಅಸೋಸಿಯೇಷನ್. ನಂ. 28, ಎಸ್.ಜೆ.ಎಂ ಬಿಲ್ಡಿಂಗ್, ರೇಸ್ ಕೋರ್ಸ್ ಕ್ರಾಸ್ ರಸ್ತೆ. (ಆನಂದರಾವ್ ಸರ್ಕಲ್ ಹತ್ತಿರ). ಬೆಂಗಳೂರು 560 009,** ಇಲ್ಲಿ ನಡೆಸಲು ಏರ್ಪಾಡು ಮಾಡಲಾಗಿದೆ. ಈಗಾಗಲೇ ಸನ್ಮಾನ್ಯ ಸದಸ್ಯರುಗಳ ವಿಳಾಸಗಳಿಗೆ ಸಭೆಯ ಸೂಚನಾ ಪತ್ರವನ್ನು ಅಂಚೆಯ ಮೂಲಕ ಸಕಾಲದಲ್ಲಿ ಕಳುಹಿಸಲಾಗಿದೆ. ಒಂದು ವೇಳೆ ಸೂಚನಾ ಪತ್ರ ತಲುಪದೇ ಇದ್ದಲ್ಲಿ ಇದನ್ನೇ ಸೂಚನಾ ಪತ್ರ ಎಂದು ಪರಿಗಣಿಸಿ ಸನ್ಮಾನ್ಯ ಸದಸ್ಯರುಗಳೆಲ್ಲರೂ ತಪ್ಪದೇ ಸಕ್ರಿಯವಾಗಿ ಭಾಗವಹಿಸಬೇಕಾಗಿ ವಿನಂತಿ.

ಆಡಳಿತ ಮಂಡಳಿಯ ಅಪ್ಪಣೆ ಮೇರೆಗೆ
ಸಹಿ/-
(ಸಿ.ಎ. ವೆಂಕಟಾಚಲಪತಿ)
ಮುಖ್ಯ ಕಾರ್ಯನಿರ್ವಹಣಾಧಿಕಾರಿ

ಸ್ಥಳ: ಬೆಂಗಳೂರು
ದಿನಾಂಕ : 02.09.2022

ವಿಶ್ವೇಶ್ವರಯ್ಯ ವ್ಯಾಪಾರ ಉತ್ತೇಜನ ಕೇಂದ್ರ (ವಿಟಿಪಿಸಿ ಕರ್ನಾಟಕ)
(ರಾಜ್ಯ ಸರ್ಕಾರದ ರಫ್ತು ಉತ್ತೇಜನ ಸಂಸ್ಥೆ)
ವಿಟಿಪಿಸಿ ಕಟ್ಟಡ, ಕಸ್ತೂರಬಾ ರಸ್ತೆ , ಬೆಂಗಳೂರು-560001
ದೂ:080-22860644, 9483534444 ಇ-ಮೇಲ್: vtpckarnataka@gmail.com
ಸಂ:ವಿಟಿಪಿಸಿ/ಸನಿ/ಐಐಟಿಎಫ್–2022/2022–23 ದಿನಾಂಕ: 19.09.2022

ಐಐಟಿಎಫ್–2022ರಲ್ಲಿ ಕರ್ನಾಟಕ ಪೆವಿಲಿಯನ್ ನಿರ್ಮಾಣಕ್ಕಾಗಿ ಇ–ಟೆಂಡರ್ ಆಹ್ವಾನ

ನವದೆಹಲಿಯ ಪ್ರಗತಿ ಮೈದಾನದಲ್ಲಿ ನಡೆಯಲಿರುವ **ಐಐಟಿಎಫ್–2022ರಲ್ಲಿ ಕರ್ನಾಟಕ ಪೆವಿಲಿಯನ್ ನಿರ್ಮಿಸಲು** ಗುತ್ತಿಗೆದಾರರನ್ನು ಆಯ್ಕೆ ಮಾಡಲು ಇ–ಟೆಂಡರ್ ಆಹ್ವಾನಿಸಿದೆ. ವಿವರವಾದ ಟೆಂಡರ್ ದಸ್ತಾವೇಜುಗಳನ್ನು ವೆಬ್‌ಸೈಟ್: https://www.eproc.karnataka.gov.inನಿಂದ ಪಡೆದುಕೊಳ್ಳಬಹುದು. ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: **07.10.2022,** ಮಧ್ಯಾಹ್ನ **3.00** ಗಂಟೆವರೆಗೆ.

ಸಹಿ/–ನಿರ್ದೇಶಕರು (ರಫ್ತು) ಹಾಗೂ ವ್ಯವಸ್ಥಾಪಕ ನಿರ್ದೇಶಕರು, ವಿಟಿಪಿಸಿ

ಕರ್ನಾಟಕ ಸರಕಾರ
ಕಾರ್ಯನಿರ್ವಾಹಕ ಇಂಜಿನಿಯರರ ಕಛೇರಿ, ಲೋಕೋಪಯೋಗಿ ಇಲಾಖೆ ಮಂಗಳೂರು ವಿಭಾಗ, ಮಂಗಳೂರು
ಸಂಖ್ಯೆ:ಲೋ.ಇ:ಮಂ.ವಿ:ಟಿ.ಎನ್.ಡಿ(37ಇ/6ಇ):2022–23:ಜೆಇ–3 ದಿನಾಂಕ: 19.09.2022

ಅಲ್ಪಾವಧಿ ಟೆಂಡರ್ ಪ್ರಕಟಣೆ / 4ನೇ ಕರೆ / 5ನೇ ಕರೆ
(ಸಾರ್ವಜನಿಕ ಪ್ರೊಕ್ಯೂರ್‌ಮೆಂಟ್ ಮೂಲಕ)

ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿತ ಅರ್ಹ ಗುತ್ತಿಗೆದಾರರಿಂದ ಸಾರ್ವಜನಿಕ ಇ–ಪ್ರೊಕ್ಯುರ್‌ಮೆಂಟ್ ಮೂಲಕ **ಲೆಕ್ಕಶೀರ್ಷಿಕೆ :–5054–ಜಿಲ್ಲಾ ಮತ್ತು ಇತರೆ ರಸ್ತೆ ಸುಧಾರಣೆಗಳು ರಡಿ** ಇಂಡೆಂಟ್ ನಂ.153260 ರ ಕಾಮಗಾರಿಗೆ ಟೆಂಡರ್ ಆಹ್ವಾನಿಸಲಾಗಿದ್ದು, ಇ–ಪ್ರೊಕ್ಯುರ್‌ಮೆಂಟ್ ಮುಖಾಂತರ ಟೆಂಡರನ್ನು ಸಲ್ಲಿಸುವ ಕೊನೆಯ **ದಿನಾಂಕ: 27.09.2022 (ಮಧ್ಯಾಹ್ನ 4.00 ಗಂಟೆಯವರೆಗೆ ಮಾತ್ರ)** ನಿಗದಿಪಡಿಸಲಾಗಿರುತ್ತದೆ.

ಲೆಕ್ಕಶೀರ್ಷಿಕೆ :–"ಗ್ರಾಮ ಬಂಧು ಸೇತುವೆ" ಯೋಜನೆಯಡಿ ಇಂಡೆಂಟ್ ನಂ.151900 ರ ಕಾಮಗಾರಿಗೆ **4ನೇ ಕರೆಯಾಗಿ** ಮತ್ತು ಇಂಡೆಂಟ್ ನಂ. 151762 ರ ಕಾಮಗಾರಿಗೆ **5ನೇ ಕರೆಯಾಗಿ** ಟೆಂಡರ್ ಕರೆಯಲಾಗಿದ್ದು, ಟೆಂಡರನ್ನು ಸಲ್ಲಿಸುವ ಕೊನೆಯ **ದಿನಾಂಕ: 28.09.2022 (ಮಧ್ಯಾಹ್ನ 4.00 ಗಂಟೆಯವರೆಗೆ ಮಾತ್ರ)** ನಿಗದಿಪಡಿಸಲಾಗಿರುತ್ತದೆ.

ಈ ಕಾಮಗಾರಿಗಳ ಗರಿಷ್ಠ ಅಂದಾಜು ಮೊತ್ತ **ರೂ.78.00 ಲಕ್ಷ,** ಕನಿಷ್ಠ ಅಂದಾಜು ಮೊತ್ತ ರೂ.8.00 ಲಕ್ಷ ಆಗಿರುತ್ತದೆ. ಹೆಚ್ಚಿನ ವಿವರಗಳಿಗಾಗಿ ಇಲಾಖೆಯ ವೆಬ್‌ಸೈಟ್ **https://eproc.karnataka.gov.in** ನ್ನು ಸಂಪರ್ಕಿಸಲು ಕೋರಲಾಗಿದೆ.

DIPR/MNG/MCA/611/22-23 dt.20.09.2022 | ಸಹಿ/– ಕಾರ್ಯನಿರ್ವಾಹಕ ಇಂಜಿನಿಯರ್

ಕರ್ನಾಟಕ ರಾಜ್ಯ ಪಾನೀಯ ನಿಗಮ ನಿಯಮಿತ (KSBCL)
(ಕರ್ನಾಟಕ ಸರ್ಕಾರದ ಉದ್ದಿಮೆ)
4ನೇ ಮಹಡಿ, ಟಿಟಿಎಂಸಿ ಕಟ್ಟಡ, "ಎ"ಬ್ಲಾಕ್, ಬಿಎಂಟಿಸಿ, ಕೆ.ಹೆಚ್.ರಸ್ತೆ, ಶಾಂತಿನಗರ, ಬೆಂಗಳೂರು – 560 027. ಫೋನ್: 080–22483636/38/39 ಫ್ಯಾಕ್ಸ್:22483645, 22113106
ಸಂಖ್ಯೆ: ಕರಾಪಾನಿನಿ/ಇ–6377/ಆಡಳಿತ/ಎಂ.ಪಿ.ಎಸ್ ಟೆಂಡರ್–1/2022–23 ದಿನಾಂಕ: 19.09.2022

ಇ–ಟೆಂಡರ್ ಪ್ರಕಟಣೆ(ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಮಾತ್ರ)

ಕರ್ನಾಟಕ ರಾಜ್ಯ ಪಾನೀಯ ನಿಗಮ ನಿಯಮಿತವು (ಕೆ.ಎಸ್.ಬಿ.ಸಿ.ಎಲ್) ಪ್ರಸಿದ್ಧ ಮೂಲ ಉಪಕರಣ ತಯಾರಕರು (ಓ.ಇ.ಎಂ)/ ಅಧಿಕೃತ ವಿತರಕರು/ ಮಾರಾಟಗಾರರಿಂದ ಕರ್ನಾಟಕದಾದ್ಯಂತ ವಿವಿಧ ಸ್ಥಳಗಳಲ್ಲಿರುವ ಮದ್ಯ ಮಳಿಗೆಗಳಿಗೆ ಮಲ್ಟಿಫಂಕ್ಷನ್ ನೆಟ್‌ವರ್ಕ್ ಮ್ಯಾನೇಜ್ಡ್ ಪ್ರಿಂಟರ್‌ಗಳನ್ನು ಬಾಡಿಗೆ ಆಧಾರದ ಮೇಲೆ ಪಡೆಯಲು ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ದ್ವಿ–ಲಕೋಟೆ ಪದ್ಧತಿಯಲ್ಲಿ ಇ–ಟೆಂಡರ್ ಆಹ್ವಾನಿಸಿದೆ. ಇ–ಟೆಂಡರ್ ವೇಳಾಪಟ್ಟಿ ಈ ಕೆಳಗಿನಂತಿರುತ್ತದೆ.

1) ಪೂರ್ವ ಬಿಡ್ ಸಭೆಯ **ದಿನಾಂಕ ಮತ್ತು ಸಮಯ: 30.09.2022ರ ಬೆಳಿಗ್ಗೆ 11:30 ಗಂಟೆಗೆ.** 2) ಟೆಂಡರ್‌ಗಳನ್ನು ಸ್ವೀಕರಿಸಲು ಕೊನೆಯ **ದಿನಾಂಕ ಮತ್ತು ಸಮಯ: 10.10.2022ರ ಸಂಜೆ 5:30 ಗಂಟೆಯವರೆಗೆ.** 3) ತಾಂತ್ರಿಕ ಬಿಡ್‌ಗಳನ್ನು ತೆರೆಯುವ **ದಿನಾಂಕ ಮತ್ತು ಸಮಯ: 12.10.2022ರ ಬೆಳಿಗ್ಗೆ 11:30 ಗಂಟೆಗೆ.** 4) ಆರ್ಥಿಕ ಬಿಡ್‌ಗಳನ್ನು ತೆರೆಯುವ **ದಿನಾಂಕ ಮತ್ತು ಸಮಯ: 14.10.2022ರ ಬೆಳಿಗ್ಗೆ 11:30 ಗಂಟೆಗೆ.** ಬಿಡ್ದುದಾರರು ಹೆಚ್ಚಿನ ವಿವರಗಳಿಗಾಗಿ ವೆಬ್‌ಸೈಟ್: **https://eproc.karnataka.gov.in / www.ksbcl.com**ಅನ್ನು ವೀಕ್ಷಿಸಬಹುದು.

ಸಹಿ/–
ವಾಸಾಸಂಇ/ವಾಪ್ರ/ಜಿಎ/2310/2022–23 | ಕಾರ್ಯನಿರ್ವಾಹಕ ನಿರ್ದೇಶಕರು (ಹ & ಆ)

ಕರ್ನಾಟಕ ನೀರಾವರಿ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಒಂದು ಉದ್ಯಮ)
ಕಾರ್ಯಪಾಲಕ ಅಭಿಯಂತರರು, ಕ.ನೀ.ನಿ.ನಿ., ಬೆಣ್ಣೆತೊರಾ ಯೋಜನಾ ವಿಭಾಗ, ಹೆಬ್ಬಾಳ
ಸಂಖ್ಯೆ:ಕಾ.ನಿಅ/ಕ.ನೀ.ನಿ.ನಿ/ಬೆ.ತೊ.ಯೋ/ವಿಭಾಗ/ಹೆಬ್ಬಾಳ/ಪಿ.ಬಿ–3/2022–23/750 ದಿನಾಂಕ:19.09.2022

ಟೆಂಡರ ಅಧಿಸೂಚನೆ (ಇ–ಪ್ರೋಕ್ಯೂರಮೆಂಟ್ ಮುಖಾಂತರ ಮಾತ್ರ).

ಮಾನ್ಯ ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ನೀರಾವರಿ ನಿಗಮ ನಿಯಮಿತ, ಬೆಂಗಳೂರು ಇವರ ಪರವಾಗಿ ಕಾರ್ಯನಿರ್ವಾಹಕ ಇಂಜಿನೀಯರರು, ಕನೀನಿನಿ, ಬೆಣ್ಣೇತೋರಾ ಯೋಜನೆ ವಿಭಾಗ ನಂ–04 ಹೆಬ್ಬಾಳ ಕಲಬುರಗಿ, ಕರ್ನಾಟಕ ಇವರು ಆಧಾರದ ಟೆಂಡರ್ ಆಧಾರದ ಮೇಲೆ ಇ–ಪ್ರೊಕ್ಯೂರಮೆಂಟ ಪೋರ್ಟಾಲ್ ಮುಖಾಂತರ ನೊಂದಾಯಿತ ಅರ್ಹ ಗುತ್ತಿಗೆದಾರರಿಂದ ಈ ಕೆಳಗೆ ನಮೂದಿಸಿದ ಕಾಮಗಾರಿಗೆ ಕೆಟಿಪಿಪಿ ಕಾಯ್ದೆಯ ರೂಲ್ 28 ರನ್ವಯ Two Cover System (ದ್ವಿ–ಲಕೋಟೆ) ಪದ್ಧತಿಯಲ್ಲಿ ಟೆಂಡರನ್ನು ಅಹ್ವಾನಿಸಲಾಗಿದೆ. ಆಸಕ್ತಿಯುಳ್ಳ ಗುತ್ತಿಗೆದಾರರು ತಮ್ಮ ಟೆಂಡರಗಳನ್ನು ಕೆಳಗೆ ತಿಳಿಸಿರುವ ದಿನಾಂಕದವರೆಗೆ ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರಮೆಂಟ ಪೋರ್ಟಲ್ (www.eproc.karnataka.gov.in) ಮುಖಾಂತರ ಅರ್ಹ ಗುತ್ತಿಗೆದಾರರು ಟೆಂಡರಗಳನ್ನು ಸಲ್ಲಿಸಬಹುದಾಗಿದೆ. ಕಾಮಗಾರಿಯ ವಿವರಗಳು ಕೆಳಗಿನಂತಿವೆ.

1) ಇ–ಪ್ರೊಕ್ಯೂರಮೆಂಟ ಇಂಡೆಂಟ ಸಂಖ್ಯೆ : ದ್ವಿ–ಲಕೋಟೆ ಇಂಡೆಂಟ್ ನಂ: 33526, 2) ಖಾಲಿ ಟೆಂಡರ್ ಪುಸ್ತಕಗಳು ಪಡೆಯುವ ದಿನಾಂಕ : **21.09.2022 ರ 11.30 ಗಂಟೆಗೆ,** 3) ಪೂರ್ವ ಬಿಡ್ ಸಭೆ ದಿನಾಂಕ: **30.09.2022 ರ 11.30 ಘಂಟೆಯ ನಂತರ,** 4) ಭರ್ತಿ ಮಾಡಿದ ಟೆಂಡರಗಳನ್ನು ಇ–ಪೋರ್ಟಲ್ ಮುಖಾಂತರ ಸಲ್ಲಿಸಲು ಕೊನೆಯ ದಿನಾಂಕ & ಸಮಯ : **27.10.2022 ರ 15:00 ಘಂಟೆಯವರೆಗೆ,** 5) ತಾಂತ್ರಿಕ ಬಿಡ್‌ನ್ನು (ಲಕೋಟೆ–1) ತೆರೆಯುವ ದಿನಾಂಕ : **28.10.2022 ರ 16:00 ಘಂಟೆಯ ನಂತರ,** 6) ತಾಂತ್ರಿಕ ಬಿಡ್‌ನಲ್ಲಿ (ಲಕೋಟೆ–1) ಪೂರ್ವಾರ್ಹತೆ ಹೊಂದಿದ ಅರ್ಹಗುತ್ತಿಗೆದಾರರ ಆರ್ಥಿಕ ಬಿಡ್‌ನ್ನು (ಲಕೋಟೆ–2) ತೆರೆಯುವ ದಿನಾಂಕ ತಾಂತ್ರಿಕ ಬಿಡ್‌ಗೆ ಸಕ್ಷಮ ಪ್ರಾಧಿಕಾರದಿಂದ ಅನುಮೋದನೆ ಪಡೆದ ನಂತರ.

ಗುತ್ತಿಗೆದಾರರು ಅರ್ಹತೆ/ಟೆಂಡರ್ ನಿಯಮಗಳು/ಟೆಂಡರ್ ಪ್ರೋಸೆಸಿಂಗ್ ಶುಲ್ಕ ಇತ್ಯಾದಿ ವಿವರಗಳಿಗೆ www.eproc.karnataka.gov.in ಮೂಲಕ ಮಾಹಿತಿ ಪಡೆಯಬಹುದು ಅಥವಾ ಕಛೇರಿ ಸಮಯದಲ್ಲಿ ಸಂಪರ್ಕಿಸಬಹುದು. ಟೆಂಡರ್‌ಗಳನ್ನು ಅಂಗೀಕರಿಸುವ ಅಧಿಕಾರಿಯು ಯಾವುದೇ ಕಾರಣ ನೀಡದೇ ಟೆಂಡರ್‌ನ್ನು ಅಥವಾ ಎಲ್ಲ ಟೆಂಡರ್‌ಗಳನ್ನು ತಿರಸ್ಕರಿಸುವ ಅಧಿಕಾರವನ್ನು ಹೊಂದಿರುತ್ತಾರೆ.

ಸಹಿ/– ಕಾರ್ಯಪಾಲಕ ಅಭಿಯಂತರರು, ಕ.ನೀ.ನಿ.ನಿ.,
ಬೆಣ್ಣೆತೊರಾ ಯೋಜನಾ ವಿಭಾಗ, ಹೆಬ್ಬಾಳ.

ವಾ.ಸಾ.ಸಂ.ಇ/ಕಲಬುರಗಿ/637/ಎಂ.ಸಿ.&ಎ/2022–23

ಕರ್ನಾಟಕ ಸರ್ಕಾರ
ಕಾರ್ಯಪಾಲಕ ಇಂಜಿನಿಯರ್‌ರವರ ಕಛೇರಿ, ಲೋ.ಇ ವಿಭಾಗ, ಶಿವಮೊಗ್ಗ
ಟೆಂಡರ್ ಪ್ರಕಟಣೆ ಸಂ.ಕಾಪಾಅ/ಶಿವಿಶಿ/ಜೆಇ–1/ಐಎಫ್‌ಟಿ–28/22–23
ದಿ:19–09–2022

ಅಲ್ಪಾವಧಿ ಟೆಂಡರ್ ಪ್ರಕಟಣೆ (2 ನೇ ಕರೆ)

ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ ಅರ್ಹ ನೋಂದಾಯಿತ 3ನೇ ದರ್ಜೆ, & ಗುತ್ತಿಗೆದಾರರಿಂದ ಇ–ಪ್ರಕ್ಯೂರ್‌ಮೆಂಟ್ ಪೋರ್ಟಲ್ (http://eproc.karnataka.gov.in) ಮೂಲಕ ಈ ಕೆಳಕಂಡ ಕಾಮಗಾರಿಗಳಿಗೆ ಟೆಂಡರ್ ಆಹ್ವಾನಿಸಲಾಗಿದೆ.

ಲೆಕ್ಕ ಶೀರ್ಷಿಕೆ: 4059–80–051–0–29–386 Dept. Building

1. ಸೊರಬ ತಾಲ್ಲೂಕು (ಇ.ನಂ.154547/2ನೇ ಕರೆ)

ಟೆಂಡರ್ ದಾಖಲಾತಿಗಳನ್ನು ಡೌನ್ ಲೋಡ್ ಮಾಡಲು ಮತ್ತು ಸಲ್ಲಿಸಲು ದಿನಾಂಕ:21–09–2022 ರಿಂದ 28–09–2022 ರವರೆಗೆ, ಕಾಮಗಾರಿಗಳನ್ನು ಪೂರ್ಣಗೊಳಿಸಲು ಕಾಲಾವಧಿ (ಮಳೆಗಾಲ ಸೇರಿ) : 6 ತಿಂಗಳು

ಹೆಚ್ಚಿನ ವಿವರಗಳಿಗೆ ಸದರಿ ಕಛೇರಿಯಿಂದ (ದೂರವಾಣಿ 08182–274942) ಹಾಗೂ ಸಹಾಯಕ ದೂರವಾಣಿ ಸಂಖ್ಯೆ: 080–25501216/ 080–25501227 ರಿಂದ ಮಾಹಿತಿ ಪಡೆಯಬಹುದು.

ಸಹಿ/– ಕಾ.ಇಂ, ಲೋಕೋಪಯೋಗಿ ಇಲಾಖೆ, ವಿಭಾಗ, ಶಿವಮೊಗ್ಗ

ವಾ.ಸಾ.ಸಂ.ಇ/ಎಂಸಿಎ/ಶಿ/95/09/22–23/940

ವಿಶ್ವೇಶ್ವರಯ್ಯ ಜಲ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಉದ್ಯಮ)
ಅಲ್ಪಾವಧಿ ಟೆಂಡರ್ ಪ್ರಕಟಣೆ
ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ

ವ್ಯವಸ್ಥಾಪಕ ನಿರ್ದೇಶಕರು, ವಿಶ್ವೇಶ್ವರಯ್ಯ ಜಲ ನಿಗಮ ನಿಯಮಿತ, ಬೆಂಗಳೂರು ಇವರ ಪರವಾಗಿ ಕೆಳಗೆ ಸಹಿ ಮಾಡಿರುವವರಿಂದ ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ 2022–23ನೇ ಸಾಲಿನ ತಿಪಟೂರು ವಿಧಾನಸಭಾ ಕ್ಷೇತ್ರದ 09 ಎಸ್‌ಸಿಪಿ/ಟಿಎಸ್‌ಪಿ ಕಾಮಗಾರಿಗಳಿಗೆ ಟೆಂಡರ್ ಗಿಟ್ಟ ಮೊತ್ತ ರೂ.8.91 ಲಕ್ಷಗಳಿಂದ ರೂ.91.69 ಲಕ್ಷಗಳವರೆಗೆ "ಶೇಕಡಾವಾರು ದರಗಳಲ್ಲಿ" ಏಕ ಲಕೋಟೆ ಹಾಗೂ ದ್ವಿ ಲಕೋಟೆ ಪದ್ಧತಿಯಲ್ಲಿ ಅರ್ಹ ಗುತ್ತಿಗೆದಾರರಿಂದ, ಟೆಂಡರ್ ಆಹ್ವಾನಿಸಲಾಗಿದ್ದು, ಟೆಂಡರ್‌ನ್ನು ಇ–ಪೋರ್ಟಲ್ ನಲ್ಲಿ ದಿ: **21.09.2022** ರಿಂದ ದಿ: **28.09.2022** ರವರೆಗೆ ವೀಕ್ಷಿಸಬಹುದಾಗಿದೆ. ಟೆಂಡರ್‌ನ ಅಂದಾಜು ಮೊತ್ತ/ ಇ.ಎಂ.ಡಿ/ಟೆಂಡರ್ ಪ್ರೋಸೆಸಿಂಗ್ ಶುಲ್ಕ/ ವೇಳಾ ಪಟ್ಟಿ/ ಗುತ್ತಿಗೆದಾರರ ವರ್ಗ/ ಟೆಂಡರ್ ನಿಯಮ/ಟೆಂಡರ್ ಪ್ರಕಟಣೆ/ ಇತ್ಯಾದಿ ವಿವರಗಳನ್ನು https://eproc.karnataka. gov.in ಮೂಲಕ ಮಾಹಿತಿ ಪಡೆಯಬಹುದು ಅಥವಾ ಈ ಕೆಳಗೆ ಸಹಿ ಮಾಡಿದವರನ್ನು ಕಛೇರಿ ಸಮಯದಲ್ಲಿ ದಿನಾಂಕ: **28.09.2022** ರವರೆಗೆ ಸಂಪರ್ಕಿಸಬಹುದು. ಟೆಂಡರ್‌ಗಳನ್ನು ಸ್ವೀಕರಿಸುವ ಅಧಿಕಾರಿಯು ಯಾವುದೇ ಕಾರಣ ನೀಡದೆ ಯಾವುದೇ ಟೆಂಡರ್‌ಗಳನ್ನು ಅಥವಾ ಎಲ್ಲಾ ಟೆಂಡರ್‌ಗಳನ್ನು ತಿರಸ್ಕರಿಸುವ ಅಧಿಕಾರವನ್ನು ಹೊಂದಿರುತ್ತಾರೆ. ತಿದ್ದುಪಡಿ ಪ್ರಕಟಣೆ ಹೊರಡಿಸಿದಲ್ಲಿ ಇ–ಪೋರ್ಟ್‌ಲ್ ವೆಬ್‌ಸೈಟ್‌ನಲ್ಲಿ ಪ್ರಕಟಿಸಲಾಗುವುದು.

ಸಹಿ/– ಕಾರ್ಯಪಾಲಕ ಇಂಜಿನಿಯರ್,
ಎತ್ತಿನಹೊಳೆ ಯೋಜನಾ ವಿಭಾಗ ನಂ.2, ತುಮಕೂರು.
ದೂರವಾಣಿ ಸಂಖ್ಯೆ:0816–2201844, ಇಮೇಲ್ ವಿಳಾಸ–
eeypd2tmk@gmail.com

ಹುಬ್ಬಳ್ಳಿ–ಧಾರವಾಡ ಮಹಾನಗರ ಪಾಲಿಕೆ
ಸರ್ ಸಿದ್ದಪ್ಪ ಕಂಬಳಿ ರಸ್ತೆ ದೂರವಾಣಿ : 2213898, 2213888 website : www.hdmc.gov.in
ಕಾರ್ಯನಿರ್ವಾಹಕ ಅಭಿಯಂತರರು (ದಕ್ಷಿಣ)
ಇ–ಟೆಂಡರ್ ಅಧಿಸೂಚನೆ
ನಂ.ಎಚ್‌ಡಿಎಂಸಿ/63/04/2022–23 ದಿ : 20–09–2022

ಹುಬ್ಬಳ್ಳಿ–ಧಾರವಾಡ ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕ ಆದೇಶ 1999–2000ರ ಪ್ರಕಾರ ಆ್ಯಕ್ಟ್ 2000 ನಿಯಮದಂತೆ ಸ್ಟ್ಯಾಂಡರ್ಡ ಬಿಡ್ ಡಾಕ್ಯೂಮೆಂಟ್ ನಿಯಮದನ್ವಯ PWD/ CPWD/ HDMC/ ಇತರೇ ಸರ್ಕಾರಿ ಇಲಾಖೆಯಲ್ಲಿ ನೊಂದಾಯಿತರಾದ ಅರ್ಹ ಗುತ್ತಿಗೆದಾರರು ಇ–ಪ್ರೋಕ್ಯೂರಮೆಂಟ ಪೋರ್ಟಲ್ ಮುಖಾಂತರ ಸನ್ 2022–23ನೇ ಸಾಲಿನ ಪಾಲಿಕೆ ಅನುದಾನದಡಿಯಲ್ಲಿ ಇಂಡೆಂಟ್ ನಂ. 136984 / **16.20** ಲಕ್ಷ / ಸಾಮಾನ್ಯ, ಇಂಡೆಂಟ್ ನಂ. 136982 / **11.65** ಲಕ್ಷ / ಪ.ಜಾ(ಎಸ್.ಸಿ), ಇಂಡೆಂಟ್ ನಂ. 137081 / **1.90** ಲಕ್ಷ / ಸಾಮಾನ್ಯ, ಇಂಡೆಂಟ್ ನಂ. 136989 / **1.90** ಲಕ್ಷ / ಪ.ಪಂ(ಎಸ್.ಟಿ), ಇಂಡೆಂಟ್ ನಂ. 136255 / **6.00** ಲಕ್ಷ / ಸಾಮಾನ್ಯ, ಇಂಡೆಂಟ್ ನಂ. 136988 / **2.90** ಲಕ್ಷ / ಪ.ಜಾ(ಎಸ್.ಸಿ), ಇಂಡೆಂಟ್ ನಂ. 136986 / **7.42** ಲಕ್ಷ / ಸಾಮಾನ್ಯ / ಸನ್ 2021–22ನೇ ಸಾಲಿನ ಪಾಲಿಕೆ ಅನುದಾನದಡಿಯಲ್ಲಿ ಇಂಡೆಂಟ್ ನಂ. 127986 / **30.50** ಲಕ್ಷ / 6ನೇ ಕರೆ / ಸಾಮಾನ್ಯ, ಇಂಡೆಂಟ್ ನಂ. 132774 / **35.00** ಲಕ್ಷ / 3ನೇ ಕರೆ / ಸಾಮಾನ್ಯ, ಕಾಮಗಾರಿಗಳಿಗೆ ಇ–ಪ್ರೋಕ್ಯೂರಮೆಂಟ್‌ನಲ್ಲಿ ಟೆಂಡರ್‌ಅನ್ನು ಆಹ್ವಾನಿಸಲಾಗಿದೆ. ಕಾಮಗಾರಿಗಳಿಗೆ ಸಂಬಂಧಿಸಿದ ಹೆಸರು ಇ.ಎಂ.ಡಿ, ಕಾಮಗಾರಿ ನಿರ್ವಹಣಾ ಅವಧಿ ಹಾಗೂ ಹೆಚ್ಚಿನ ಮಾಹಿತಿಗಾಗಿ ಗುತ್ತಿಗೆದಾರರು **http:/ www.eproc.karnataka.gov.in** ರಲ್ಲಿ ಪಡೆಯುಬಹುದು. ಸದರ ಟೆಂಡರ್ ದಾಖಲೆಗಳನ್ನು ಇ–ಪ್ರೋಕ್ಯೂರಮೆಂಟ್‌ನಲ್ಲಿ ದಿನಾಂಕ : **22–09–2022** ರಿಂದ ಪಡೆಯಬಹುದಾಗಿದೆ. ಒಂದು ವೇಳೆ ಸದರಿ ಟೆಂಡರ್‌ನಲ್ಲಿ ಯಾವುದೇ ಬದಲಾವಣೆ ಇದ್ದಲ್ಲಿ ಸದರಿ ಬದಲಾವಣೆಯ ವಿವರಗಳನ್ನು ಇ–ಪೋರ್ಟಲ್‌ನಲ್ಲಿ ಮಾತ್ರ ಪ್ರಕಟಿಸಲಾಗುವುದು.

1) ಟೆಂಡರ ಸಲ್ಲಿಸುವ ಕೊನೆಯ ದಿನಾಂಕ : **06/10/2022** ಸಂಜೆ: 4.00 ಘಂಟೆ ವರೆಗೆ
2) ಟೆಂಡರ್ ತೆರೆಯುವ ದಿನಾಂಕ: **07/10/2022** ರಂದು ಸಂಜೆ: 4.30 ಘಂಟೆ ನಂತರ

ಸಹಿ/– ಕಾರ್ಯನಿರ್ವಾಹಕ ಅಭಿಯಂತರರು(ದಕ್ಷಿಣ)
ಹುಬ್ಬಳ್ಳಿ–ಧಾರವಾಡ ಮಹಾನಗರ ಪಾಲಿಕೆ, ಹುಬ್ಬಳ್ಳಿ.

ವಾಸಾಸಂಇ/ಧಾರವಾಡ/ಎಂಸಿಎ/587/2022–23

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಕಾರ್ಯಪಾಲಕ ಅಭಿಯಂತರವರ ಕಛೇರಿ, ರಾಜಾಜಿನಗರ ವಿಭಾಗ,
ಸರ್. ಎಂ. ವಿಶ್ವೇಶ್ವರಯ್ಯ ವಾಣಿಜ್ಯ ಕಟ್ಟಡ, 12ನೇ ಮುಖ್ಯ ರಸ್ತೆ,
2ನೇ ಬ್ಲಾಕ್, ರಾಜಾಜಿನಗರ, ಬೆಂಗಳೂರು–560 010.
ಸಂಖ್ಯೆ:ಕಾ.ಪಾ.ಅ/ರಾಜಾಜಿ/ಇ-ಪ್ರೋ/08/2022-23 ದಿನಾಂಕ: 20-09-2022

ಅಲ್ಪಾವಧಿ ಟೆಂಡರ್‌ಗಾಗಿ ಪ್ರಕಟಣೆ (ದ್ವಿ ಲಕೋಟೆ ಪದ್ಧತಿ) : ಕೆಡಬ್ಲ್ಯೂ-4
(ಕರ್ನಾಟಕ ಸರ್ಕಾರದ ಇ-ಪ್ರೋಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ)

ಕಾರ್ಯಪಾಲಕ ಅಭಿಯಂತರರು ರಾಜಾಜಿನಗರ ವಿಭಾಗ ಬೃಬೆಂಮಪಾ, ಬೆಂಗಳೂರು ಇವರು ಈ ಕೆಳಕಂಡ ಕಾಮಗಾರಿಗಳನ್ನು ನಿರ್ವಹಿಸಲು ಅರ್ಹ ಗುತ್ತಿಗೆದಾರರಿಂದ ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕ್ರ. ಸಂ.	ಅನುಮೋದನೆಗೊಂಡ ಕೆಲಸದ ಹೆಸರು	ಅಂದಾಜು ಮೊತ್ತ(ಕೋಟಿ ರೂ. ಗಳಲ್ಲಿ)	ಕಾಮಗಾರಿಗೆ ಇಟ್ಟ ಅಂದಾಜು ವೆಚ್ಚ (ಲಕ್ಷ ರೂ. ಗಳಲ್ಲಿ)
1)	ರಾಜಾಜಿನಗರ ವಿಧಾನ ಸಭಾ ಕ್ಷೇತ್ರದ ವಾರ್ಡ್ ನಂ.97 ಮತ್ತು 99ರ ಶಾಲಾ ಆಸ್ಪತ್ರೆ ಕಟ್ಟಡದ ಸಮಗ್ರ ಅಭಿವೃದ್ಧಿ ಮತ್ತು ನಿರ್ಮಾಣ ಹಾಗೂ ಇತರ ಸುಧಾರಣೆ ಕಾಮಗಾರಿಗಳು ಅನುಬಂಧ-06 ಪ್ಯಾಕೇಜ್-02ರಲ್ಲಿ ಜಿಓಕೆ ಕ್ರ.ಸಂ.226, 228 229.	1150.00	909.60

ಇಎಂಡಿ ಮೊತ್ತ (ಲಕ್ಷ ರೂ. ಗಳಲ್ಲಿ): **13.64** ಲಕ್ಷಗಳು (ಇ-ಪ್ರೊಕ್ಯೂರ್‌ಮೆಂಟ್ ಮೂಲಕ 1 ಲಕ್ಷ ರೂ ಮತ್ತು ಉಳಿದ ಮೊತ್ತ ಬ್ಯಾಂಕ್ ಗ್ಯಾರೆಂಟಿ / ಎಫ್‌ಡಿಆರ್)

ಟೆಂಡರ್‌ನ ಕಾರ್ಯಸೂಚಿ: 1) ಟೆಂಡರ್ ಡಾಕ್ಯೂಮೆಂಟ್‌ಗಳನ್ನು ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಿಂದ ದಿನಾಂಕ: **23-09-2022** ರಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು. 2) ವಿಚಾರಣೆಗಳನ್ನು ಸ್ವೀಕರಿಸಲು ಕೊನೆಯ ದಿನಾಂಕ: **03-10-2022 ಸಂಜೆ 4:00 ಗಂಟೆಯವರೆಗೆ.** 3) ಪೂರ್ವ ಬಿಡ್ ಸಭೆಯನ್ನು ಮುಖ್ಯ ಅಭಿಯಂತರವರ ಕಚೇರಿ (ಪಶ್ಚಿಮ ವಲಯ) ಮಂತ್ರಿ ಮಾಲ್ ಎದುರು, ಮಲ್ಲೇಶ್ವರಂ, ಬೆಂಗಳೂರು ಇಲ್ಲಿ ದಿನಾಂಕ: **01-10-2022 ಬೆಳಗ್ಗೆ 11:30 ಗಂಟೆಗೆ** ನಡೆಸಲಾಗುವುದು. 4) ಭರ್ತಿಯಾದ ಪ್ರಸ್ತಾವನೆಯನ್ನು ಅಪ್‌ಲೋಡ್ ಮಾಡುವ ಕೊನೆಯ ದಿನಾಂಕ: **10-10-2022 ಸಂಜೆ 4:00 ಗಂಟೆಯವರೆಗೆ.** 5) ತಾಂತ್ರಿಕ ಪ್ರಸ್ತಾವನೆಯನ್ನು ತೆರೆಯುವ ದಿನಾಂಕ: **11-10-2022 ಸಂಜೆ 4:30 ಗಂಟೆಗೆ.** 6) ಆರ್ಥಿಕ ಪ್ರಸ್ತಾವನೆಗಳನ್ನು ತಾಂತ್ರಿಕ ಪ್ರಸ್ತಾವನೆಯ ಅನುಮೋದನೆಯ ನಂತರ ತೆರೆಯಲಾಗುವುದು. ಹೆಚ್ಚಿನ ವಿವರಗಳನ್ನು ಮೇಲ್ಕಂಡ ಕಛೇರಿಯಿಂದ ಕಛೇರಿ ವೇಳೆಯಲ್ಲಿ ಅಥವಾ **https:// eproc.karnataka.gov.in** ಇಲ್ಲಿಗೆ ಲಾಗಿನ್‌ಮಾಡಿ ಪಡೆಯಬಹುದು.

ಸಹಿ/- ಕಾರ್ಯಪಾಲಕ ಅಭಿಯಂತರರು, ರಾಜಾಜಿನಗರ ವಿಭಾಗ, ಬೃಬೆಂಮಪಾ.

ಜಿಲ್ಲಾ ಪಂಚಾಯತ್, ತುಮಕೂರು
ಕಾರ್ಯಪಾಲಕ ಇಂಜಿನಿಯರ್‌ರವರ ಕಛೇರಿ, ಪಂಚಾಯತ್‌ರಾಜ್ ಇಂಜಿನಿಯರಿಂಗ್ ವಿಭಾಗ–ಮಧುಗಿರಿ

ಇ–ಪ್ರೊಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ ಸಂಖ್ಯೆ:13/2022–23
ದಿನಾಂಕ: 17.092022

ಕರ್ನಾಟಕ ರಾಜ್ಯಪಾಲರ ಪರವಾಗಿ ಕಾರ್ಯಪಾಲಕ ಇಂಜಿನಿಯರ್, ಪಂಚಾಯತ್‌ರಾಜ್ ಇಂಜಿನಿಯರಿಂಗ್ ವಿಭಾಗ, ಮಧುಗಿರಿ ವ್ಯಾಪ್ತಿಯ ವಿವಿಧ ಕಾಮಗಾರಿಗಳಿಗೆ ಇ–ಪ್ರೋಕ್ಯೂರ್‌ಮೆಂಟ್ ಟೆಂಡರ್ ಅನ್ನು ಕರೆಯಲಾಗಿದ್ದು, ಇ–ಪ್ರೋಕ್ಯೂರ್‌ಮೆಂಟ್ ಟೆಂಡರ್‌ಗಾಗಿ ಅರ್ಹ ಪಂಚಾಯತ್‌ರಾಜ್ ಇಂಜಿನಿಯರಿಂಗ್ ಇಲಾಖೆಯಲ್ಲಿ ಹಾಗೂ ಇ–ಪ್ರೋಕ್ಯೂರ್ ಮೆಂಟ್ ಪೋರ್ಟ್‌ಲ್‌ನಲ್ಲಿ ನೊಂದಾಯಿಸಿರುವ ಅರ್ಹ ಗುತ್ತಿಗೆದಾರ ರಿಂದ ಅರ್ಜಿ ಸಲ್ಲಿಸಲು ಹಾಗೂ ಭರ್ತಿಮಾಡಿದ ಟೆಂಡರ್‌ಗಳನ್ನು ಸ್ವೀಕರಿಸಲು ಟೆಂಡರ್‌ಗಳಿಗೆ **ದಿ: 17.09.2022** ರಿಂದ **ದಿ: 10.10.2022** ರಂದು ಕೊನೆಯ ದಿನಾಂಕ ವಾಗಿರುತ್ತದೆ. ಹೆಚ್ಚಿನ ವಿವರಗಳಿಗೆ ದೂರವಾಣಿ ಸಂಖ್ಯೆ:080–25501216, 080–25501227ರಲ್ಲಿ ಸಂಪರ್ಕಿಸಲು ಹಾಗೂ ವೆಬ್‌ಸೈಟ್ http://www.eproc.karnataka.gov.in ನಲ್ಲಿ ವಿವರಗಳನ್ನು ಪಡೆಯಬಹುದಾಗಿದೆ.

ಸಹಿ/– ಕಾರ್ಯನಿರ್ವಾಹಕ ಇಂಜಿನಿಯರ್,
ಪಂ.ರಾ.ಇಂ.ವಿಭಾಗ, ಮಧುಗಿರಿ

DIPR/TUM/534MCA/2022-23

ಕರ್ನಾಟಕ ಸರ್ಕಾರ
ಭೂಮಾಪನ ಕಂದಾಯ ವ್ಯವಸ್ಥೆ ಮತ್ತು ಭೂದಾಖಲೆಗಳ ಇಲಾಖೆ
ಭೂದಾಖಲೆಗಳ ಜಂಟಿ ನಿರ್ದೇಶಕರು, ಯುಪಿಓಆರ್ ಯೋಜನೆ, ಕೆ.ಆರ್. ವೃತ್ತ, ಬೆಂಗಳೂರು – 560 001. ದೂರವಾಣಿ: 080–22221037
ಸಂಖ್ಯೆ: JDUPOR/Bandh Peon/02/2022-23 ದಿನಾಂಕ: 19.09.2022

ಇ–ಟೆಂಡರ್ ಪ್ರಕಟಣೆ

ವಿಷಯ: ಅಲ್ಪಾವಧಿ ಟೆಂಡರ್ ಮುಖಾಂತರ ಹೊರಗುತ್ತಿಗೆ ಆಧಾರದ ಮೇಲೆ 200 ಬಾಂದು ಜವಾನರುಗಳನ್ನು ಪಡೆಯಲು ಟೆಂಡರ್ ಆಹ್ವಾನಿಸುವ ಬಗ್ಗೆ.

ಭೂದಾಖಲೆಗಳ ಜಂಟಿ ನಿರ್ದೇಶಕರು, ಯುಪಿಓಆರ್ ಯೋಜನೆ, ಬೆಂಗಳೂರು, ಕಂದಾಯ ಇಲಾಖೆ, ಕರ್ನಾಟಕ ಸರ್ಕಾರ ಕಛೇರಿಗೆ ಹೊರಗುತ್ತಿಗೆ ಆಧಾರದ ಮೇಲೆ 200 ಬಾಂದು ಜವಾನರುಗಳ ಸೇವೆ ಒದಗಿಸುವ ಸಂಬಂಧ ಅರ್ಹ ಪ್ರತಿಷ್ಠಿತ ಸಂಸ್ಥೆಗಳಿಂದ ಟೆಂಡರನ್ನು ಆಹ್ವಾನಿಸಲಾಗಿದೆ.

ಇಲಾಖೆಯು ಈ ಸೇವೆಯನ್ನು ಒದಗಿಸಲು ಆಸಕ್ತಿ ಹೊಂದಿರುವಂತಹ ಸಂಸ್ಥೆಗಳಿಂದ ಆರ್‌ಎಫ್‌ಪಿಯಲ್ಲಿ ಒಳಗೊಂಡಿರುವ ನಿಯಮಗಳು ಮತ್ತು ಷರತ್ತುಗಳ ಅನ್ವಯ ಇ–ಟೆಂಡರ್‌ಗಳನ್ನು ಆಹ್ವಾನಿಸಿದ್ದು, **ದಿನಾಂಕ: 19.09.2022** ರಿಂದ **https://eproc.karnataka.gov.in** ರಲ್ಲಿ ಲಭ್ಯವಿರುತ್ತದೆ. ಆಸಕ್ತ ಸಂಸ್ಥೆಗಳು ಇ–ಆಡಳಿತ ಕೇಂದ್ರದಲ್ಲಿ ನೋಂದಾಯಿಸಿಕೊಂಡು ಬಿಡ್ಡಿಂಗ್ ಪ್ರಕ್ರಿಯೆಯಲ್ಲಿ ಭಾಗವಹಿಸಬಹುದಾಗಿದೆ. ಪ್ರಸ್ತಾವನೆಯನ್ನು ಸಲ್ಲಿಸಲು ಕೊನೆಯ **ದಿನಾಂಕ: 30.09.2022**ರಂದು **ಸಂಜೆ 5.30** ಆಗಿರುತ್ತದೆ.

ಸಂಪರ್ಕಿಸಬೇಕಾದ ಅಧಿಕಾರಿ: ಸುಜಯ್ ಕುಮಾರ್ ಹೆಚ್.ಎಸ್., ಪ್ರಭಾರ ಭೂದಾಲೆಗಳ ಜಂಟಿ ನಿರ್ದೇಶಕರು, ಯುಪಿಓಆರ್ ಯೋಜನೆ, ಭೂಮಾಪನ ಕಂದಾಯ ವ್ಯವಸ್ಥೆ ಮತ್ತು ಭೂದಾಖಲೆಗಳ ಇಲಾಖಾ ಕಟ್ಟಡ, ಕೆ.ಆರ್. ವೃತ್ತ, ಬೆಂಗಳೂರು. ದೂ: 080–22221037.

ವಾಸಾಸಂ/ಬೆಂ.ನ/ಎಎಎ/2308/2022–23 | ಸಹಿ/– ಪ್ರಭಾರ ಭೂದಾಖಲೆಗಳ ಜಂಟಿ ನಿರ್ದೇಶಕರು, ಯುಪಿಓಆರ್ ಯೋಜನೆ, ಬೆಂಗಳೂರು

ಕರ್ನಾಟಕ ಗ್ರಾಮೀಣ ರಸ್ತೆ ಅಭಿವೃದ್ಧಿ ಸಂಸ್ಥೆ
ಕಾರ್ಯನಿರ್ವಾಹಕ ಅಭಿಯಂತರರು, ಯೋಜನಾ ವಿಭಾಗ, ಕೊಪ್ಪಳ
ದೂರವಾಣಿ ಸಂಖ್ಯೆ : 08539–225464 ಫ್ಯಾಕ್ಸ್ : 08539–225464
ಇ–ಮೇಲ್–kn-kop @ pmgsy.nic.in
ಸಂ:ಯೋ.ವಿ.ಕೊ/KKRDB/ಟೆಂಡರ್ ಪ್ರಕಟಣೆ/2022–23/500 ದಿನಾಂಕ:17–09–2022

"ಅಲ್ಪಾವಧಿ ಟೆಂಡರ್ ಪ್ರಕಟಣೆ"

ಕರ್ನಾಟಕ ರಾಜ್ಯದ ರಾಜ್ಯಪಾಲರ ಪರವಾಗಿ ಕಾರ್ಯನಿರ್ವಾಹಕ ಅಭಿಯಂತರರು, ಕರ್ನಾಟಕ ಗ್ರಾಮೀಣ ರಸ್ತೆ ಅಭಿವೃದ್ಧಿ ಸಂಸ್ಥೆ ಯೋಜನಾ ವಿಭಾಗ, ಕೊಪ್ಪಳ ರವರಿಂದ KW–4 ನಿಯಮಗಳನ್ವಯ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಈ ಕೆಳಗಿನ ಅನುಭಂದದಲ್ಲಿಯ2022–23 ನೇ ಸಾಲಿನ ಕೆ.ಕೆ.ಆರ್.ಡಿ.ಬಿ ಮೈಕ್ರೋ ಕಾಮಗಾರಿಗೆ ಪ್ರತ್ಯೇಕ ಐಟಂ ರೇಟ್ ದರಗಳಂತೆ ದ್ವಿ–ಲಕೋಟೆಯಲ್ಲಿ ಟೆಂಡರ್‌ನ್ನು ಆಹ್ವಾನಿಸಲಾಗಿದೆ.

ಕಾಮಗಾರಿಯ ಹೆಸರು & ಇಂಡೆಂಟ್ ಸಂಖ್ಯೆ 1) ಕೊಪ್ಪಳ ಜಿಲ್ಲೆಯ ಕುಷ್ಟಗಿ ತಾಲೂಕಿನ ಜೆ ರಾಂಪುರ ದಿಂದ ಎಂ ಗುಡದೂರ (2ನೇ ಕರೆ) (Ch:0.280 to 3.430km) (Indent No:KRRDA/2022-23/RD/WORK_INDENT5521). ಅಂದಾಜು ಕಾಮಗಾರಿ ಮೊತ್ತ (ರೂ ಲಕ್ಷಗಳಲ್ಲಿ) : **200.00.** ಕಾಮಗಾರಿ ಪೂರ್ಣಗೊಳಿಸಲು ನಿಗದಿತ ಕಾಲಾವಧಿ : **9 ತಿಂಗಳು** (ಮಳೆಗಾಲ ಸಹಿತ). ಇ.ಎಂ.ಡಿ. ಮೊತ್ತ ರೂ. ಲಕ್ಷಗಳಲ್ಲಿ : **3.00** ಲಕ್ಷ.

ಟೆಂಡರ್ ಪಕಿಯೆಯ ವಿವರಗಳು ಕೆಳಕಂಡಂತಿವೆ: 1) ಪ್ರೀ–ಬಿಡ್ ಸಭೆ ಕೆ.ಡ್ಬ್ಯೂ–4 : **21.09.2022, 11.00 hrs.** 2) ಸ್ಪಷ್ಟೀಕರಣೆ/ಆಕ್ಷೇಪಣೆಗಳ ಸ್ವೀಕರಿಸುವ ಅಂತಿಮ ದಿನಾಂಕ ಮತ್ತು ಸಮಯ: **22.09.2022, 16.30 hrs.** 3) ತಾಂತ್ರಿಕ ಹಾಗೂ ಆರ್ಥಿಕ ಬಿಡ್‌ಗಳನ್ನು ಆನ್ ಲೈನ್ ಮುಖಾಂತರ ಸಲ್ಲಿಸುವ ಕೊನೆಯ ದಿನಾಂಕ **27.09.2022, 16.30 hrs.** 4) ತಾಂತಿಕ ಬಿಡ್‌ನ್ನು ತೆರೆಯುವ ದಿನಾಂಕ : **28.09.2022, 16.31 hrs.** 5) ಆರ್ಥಿಕ ಬಿಡ್‌ಗಳನ್ನು ತೆರೆಯುವ ದಿನಾಂಕ : **ತಾಂತ್ರಿಕ ಬಿಡ್ ಅನುಮೋದನೆ ನಂತರ.**

ಗುತ್ತಿಗೆದಾರರು ಹೆಚ್ಚಿನ ಮಾಹಿತಿಯನ್ನು ಈ ಕೆಳಗೆ ಸಹಿ ಮಾಡಿದವರ ಕಛೇರಿಯಲ್ಲಿ ಕೆಲಸದ ವೇಳೆಯಲ್ಲಿ ಖುದ್ದಾಗಿ ಅಥವಾ ಸಹಾಯವಾಣಿ ಸಂ:08539–231054 ಮುಖಾಂತರ ಪಡೆಯಬಹುದು ಹಾಗೂ https://www.eproc.karnataka.gov.in ಈ ಜಾಲತಾಣದಲ್ಲಿ ವಿಕ್ಷಿಸಿಬಹುದು.

ಸಹಿ/– ಕಾರ್ಯನಿರ್ವಾಹಕ ಅಭಿಯಂತರರು
ವಾ.ಸಾ.ಇ./ಕೊಪ್ಪಳ/337/2022–23/ದೇಶಪಾಂಡೆ ಪಬ್ಲಿಸಿಟಿ | ಯೋಜನಾ ವಿಭಾಗ, ಕೊಪ್ಪಳ

ಕರ್ನಾಟಕ ನೀರಾವರಿ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಉದ್ಯಮ)
KARNATAKA NIRAVARI NIGAM LIMITED
(A Karnataka Government Enterprise)
Corporate Identity Number (CIN)-U85110KA1998SGCO24503
Fax & Phone No 08332-286223 Mail address:eeglbcknnldiv1@gmail.com
ಕಾರ್ಯನಿರ್ವಾಹಕ ಇಂಜಿನೀಯರವರ ಕಚೇರಿ, ಕರ್ನಾಟಕ ನೀರಾವರಿ ನಿಗಮ ನಿಯಮಿತ,ಘ.ಎ.ದಂ.ಕಾ. ವಿಭಾಗ–1, ಘಟಪ್ರಭಾ
ಫೋನ/ಫ್ಯಾಕ್ಸ ನಂ:08332–286223

ಇ–ಪ್ರೋಕ್ಯೂರಮೆಂಟ್ ಅಲ್ಪಾವಧಿ ಟೆಂಡರ ಪ್ರಕಟಣೆ

ಸಂ: ಕನೀನಿನಿ/ಜಿಎಲ್‌ಬಿಸಿ–1/ಪಿಬಿ/2022–23/1078 & 1080
ದಿನಾಂಕ : 19–09–2022

ವ್ಯವಸ್ಥಾಪಕ ನಿರ್ದೇಶಕರು ಕನೀನಿನಿ ಬೆಂಗಳೂರು ಇವರ ಪರವಾಗಿ ಈ ಕೆಳಗೆ ಸಹಿ ಮಾಡಿದವರಿಂದ ಕರ್ನಾಟಕ ಸರ್ಕಾರದ ಇ–ಪ್ರೋಕ್ಯೂರಮೆಂಟ್ ಪೋರ್ಟಲ್‌ನಲ್ಲಿ 3ನೇ ದರ್ಜೆ ಹಾಗೂ ಮೇಲ್ಪಟ್ಟ ದರ್ಜೆ ಕೆ.ಪಿ.ಡಬ್ಲ್ಯೂ.ಡಿ ನೊಂದಾಯಿತ ಗುತ್ತಿಗೆದಾರರಿಂದ ಟೆಂಡರಗಳನ್ನು ಕರೆಯಲಾಗಿದೆ.

1. ಟೆಂಡರ ಕಾಮಗಾರಿಗಳಿಗೆ ಟೆಂಡರ ಶೆಡ್ಯೂಲ ಈ ಕೆಳಗಿನಂತೆ ಇರುತ್ತದೆ. ಟೆಂಡರ ಪ್ರಶ್ನಾವಳಿಗಳಿಗೆ ಕೊನೆಯ ದಿನಾಂಕ ಹಾಗೂ ಸಮಯ: 23–09–2022 ರ ಸಾ:17.00 ಗಂಟೆವರೆಗೆ ಪೂರ್ವಭಾವಿ ಸಭೆ ದಿನಾಂಕ ಹಾಗೂ ಸಮಯ 26–09–2022 ರ ಸಾ:11.00 ಗಂಟೆ ವರೆಗೆ ಟೆಂಡರ ಸ್ವೀಕರಿಸುವ ಕೊನೆಯ ದಿನಾಂಕ ಹಾಗೂ ಸಮಯ: 27–09–2022 ರ ಸಾ:17.00 ಗಂಟೆವರೆಗೆ ತಾಂತ್ರಿಕ ಬಿಡ್‌ನ್ನು ತೆರೆಯುವ ದಿನಾಂಕ ಹಾಗೂ ಸಮಯ 29–09–2022 ರ ಮು:11.00 ಗಂಟೆಯ ನಂತರ ಆರ್ಥಿಕ ಬಿಡ್‌ನ್ನು ತೆರೆಯುವ ದಿನಾಂಕ ಹಾಗೂ ಸಮಯ ತಾಂತ್ರಿಕ ಬಿಡ್‌ಗೆ ಸಕ್ಷಮ ಪ್ರಾಧಿಕಾರದಿಂದ ಅನುಮೋದನೆ ಪಡೆದ ನಂತರ ಕಾರ್ಯನಿರ್ವಾಹಕ ಇಂಜಿನೀಯರು,ಕನೀನಿನಿ ಜಿಎಲ್‌ಬಿಸಿ ವಿಭಾಗ ನಂ.1 ಘಟಪ್ರಭಾ ಕಚೇರಿಯಲ್ಲಿ.

2) ಕಾಮಗಾರಿ : ಘಟಪ್ರಭಾ ಯೋಜನೆಯ ಘಟಪ್ರಭಾ ವಿಭಾಗ ನಂ: 1 ರಡಿಯಲ್ಲಿ ಬರುವ 01 ಕಾಮಗಾರಿ (ಲೆಕ್ಕ ಶೀರ್ಷಿಕೆ 4701 ಎಂ&ಎಂಐ) ಮತ್ತು 03 ಕಾಮಗಾರಿಗಳು (ಲೆಕ್ಕ ಶೀರ್ಷಿಕೆ 4701 ಎಸ್‌ಸಿಪಿ–ಟಿಎಸ್‌ಪಿ)

3) ಅಂದಾಜು ಮೊತ್ತ:ರೂ.20.00 ಲಕ್ಷಗಳಿಂದ 169.84 ಲಕ್ಷಗಳವರೆಗೆ 4) ಇ.ಎಂ.ಡಿ. ಮೊತ್ತ:ರೂ.50000.00 ಯಿಂದ ರೂ.2,55,000/– ವರೆಗೆ

ಕಾಮಗಾರಿಗಳ ಹೆಸರು/ಗುತ್ತಿಗೆದಾರರ ಅರ್ಹತೆ/ ಟೆಂಡರಿನ ನಿಯಮ/ ಟೆಂಡರ ಪ್ರೋಸೆಸಿಂಗ್ ಶುಲ್ಕ ಇತ್ಯಾದಿ ವಿವರಗಳಿಗೆ ಈ ಕೆಳಗೆ ಸಹಿ ಮಾಡಿದವರ ಕಚೇರಿಯಲ್ಲಿ ಕಚೇರಿ ಸಮಯದಲ್ಲಿ ಸಂಪರ್ಕಿಸಬಹುದು. ಅಥವಾ http://www.eproc.karnataka.gov.in ಮೂಲಕ ಮಾಹಿತಿ ಪಡೆಯಬಹುದು. ಟೆಂಡರಗಳನ್ನು ಸ್ವೀಕರಿಸುವ ಅಧಿಕಾರಿಯು ಯಾವುದೇ ಕಾರಣ ನೀಡದೆ ಯಾವುದೇ ಟೆಂಡರನ್ನು ಅಥವಾ ಎಲ್ಲಾ ಟೆಂಡರಗಳನ್ನು ತಿರಸ್ಕರಿಸುವ ಅಧಿಕಾರವನ್ನು ಹೊಂದಿರುತ್ತಾರೆ.

ಸಹಿ/–ಕಾರ್ಯನಿರ್ವಾಹಕ ಇಂಜಿನೀಯರು,
ಕನೀನಿನಿ ಜಿಎಲ್‌ಬಿಸಿ ವಿಭಾಗ ನಂ.1 ಘಟಪ್ರಭಾ.

DIPR/BGM/RO-NO-880/MCA/2022-23

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in

ಸುಭಾಷಿತ

ಒಬ್ಬ ಮನುಷ್ಯ, ಆತನ ಸ್ನೇಹಿತರು ಹಾಡಿ ಹೊಗಳುವಷ್ಟು ಒಳ್ಳೆಯವನೂ ಆಗಿರುವುದಿಲ್ಲ, ಅವನಿಗಾಗದವರು ತೆಗಳಿ ತಿರಸ್ಕರಿಸುವಷ್ಟು ಕೆಟ್ಟವನೂ ಆಗಿರುವುದಿಲ್ಲ.

–ಮಾಸ್ತಿ ವೆಂಕಟೇಶ ಅಯ್ಯಂಗಾರ್

ಚೀತಾ ಯೋಜನೆಯಲ್ಲಿ ಪ್ರತಿಷ್ಠೆಯ ಪ್ರದರ್ಶನ ಸಿಂಹದ ಸಂರಕ್ಷಣೆಯಲ್ಲಿ ಸಂಕುಚಿತ ಭಾವ

ಭಾರತದಲ್ಲಿ ಚೀತಾ ಸಂತತಿ ಅಳಿದು 75ಕ್ಕೂ ಹೆಚ್ಚು ವರ್ಷಗಳಾದ ಬಳಿಕ, ಈ ಪ್ರಾಣಿಯನ್ನು ಮತ್ತೆ ತಂದು ಕಾಡಿಗೆ ಬಿಟ್ಟಿರುವುದರ ಕುರಿತು ಹಲವು ಪ್ರಶ್ನೆಗಳು ಮತ್ತು ಆತಂಕಗಳು ಇವೆ. ನಮೀಬಿಯಾದಿಂದ ತಂದ ಎಂಟು ಚೀತಾಗಳನ್ನು ಪ್ರಧಾನಿ ನರೇಂದ್ರ ಮೋದಿ ಅವರು ಮಧ್ಯಪ್ರದೇಶದ ಕುನೊ ರಾಷ್ಟ್ರೀಯ ಉದ್ಯಾನಕ್ಕೆ ಬಿಟ್ಟಿದ್ದಾರೆ. ಮುಂದಿನ ವರ್ಷಗಳಲ್ಲಿ ದೇಶದಲ್ಲಿ ಚೀತಾ ಸಂತತಿ ಬೆಳೆಯಬೇಕು ಎಂಬುದು ಇದರ ಉದ್ದೇಶ. ಈ ಚೀತಾಗಳು ದೇಶದ ಅತಿಥಿಗಳು, ಅವುಗಳನ್ನು ಚೆನ್ನಾಗಿ ನೋಡಿಕೊಳ್ಳಲಾಗುವುದು ಎಂದು ಪ್ರಧಾನಿ ಮೋದಿ ಹೇಳಿದ್ದಾರೆ. ಸಂರಕ್ಷಣಾ ಪ್ರಯತ್ನಗಳು ಜೀವವೈವಿಧ್ಯವನ್ನು ಮತ್ತು ಸಮತೋಲನವನ್ನು ಮರುಸ್ಥಾಪಿಸುವುದು ಅಥವಾ ಈ ದಿಸೆಯಲ್ಲಿ ಪ್ರಯತ್ನಿಸುವುದು ಸದಾ ಸ್ವಾಗತಾರ್ಹ. ಜಗತ್ತಿನ ವಿವಿಧ ಭಾಗಗಳಲ್ಲಿ ವಿವಿಧ ಜೀವಿಗಳಿಗೆ ಸಂಬಂಧಿಸಿ ಇಂತಹ ಪ್ರಯತ್ನಗಳು ನಡೆಯುತ್ತಲೇ ಇವೆ. ಅಮೆರಿಕದ ಯೆಲ್ಲೋಸ್ಟೋನ್ ಪಾರ್ಕ್‌ನಲ್ಲಿ ಬೂದು ತೋಳಗಳನ್ನು 1995ರಲ್ಲಿ ಬಿಡಲಾಗಿದೆ. ಇದು, ಯಶಸ್ವೀ ಯೋಜನೆ ಎಂದೇ ಪರಿಗಣಿತವಾಗಿದೆ. ಚೀತಾದ ರೀತಿಯಲ್ಲಿಯೇ ಬೂದು ತೋಳಗಳು ಕೂಡ 20ನೇ ಶತಮಾನದಲ್ಲಿ ಬೇಟೆಯ ಕಾರಣದಿಂದಾಗಿಯೇ ನಿರ್ನಾಮವಾಗಿದ್ದವು.

ವಿವಿಧ ಪ್ರಾಣಿಗಳಿಗೆ ವಿವಿಧ ವಾತಾವರಣಗಳಲ್ಲಿ ಭಿನ್ನವಾದ ಸವಾಲುಗಳು ಇರುತ್ತವೆ. ಆ ಸಂಬಂಧ ತಜ್ಞರ ಅಭಿಪ್ರಾಯಗಳಿಗೆ ಕಿವಿಗೊಡುವುದು ಅಗತ್ಯ

ವಿವಿಧ ಪ್ರಾಣಿಗಳಿಗೆ ವಿವಿಧ ವಾತಾವರಣಗಳಲ್ಲಿ ಭಿನ್ನವಾದ ಸವಾಲುಗಳು ಇರುತ್ತವೆ. ಭಾರತಕ್ಕೆ ಚೀತಾಗಳನ್ನು ತರುವುದು ಕಾರ್ಯಸಾಧುವೇ ಮತ್ತು ಅದರ ಅಗತ್ಯ ಇದೆಯೇ ಎಂಬ ವಿಚಾರದಲ್ಲಿ ಪರಿಣತರಲ್ಲಿ ಭಿನ್ನ ಅಭಿಪ್ರಾಯಗಳಿವೆ. ಇದು ಕೋಟ್ಯಂತರ ರೂಪಾಯಿ ವೆಚ್ಚವಾಗುವ ಯೋಜನೆ. ಇನ್ನಷ್ಟು ಚೀತಾಗಳನ್ನು ತರುವ ಅಂಶವೂ ಇದರಲ್ಲಿ ಸೇರಿದೆ. ಅಳಿವಿನ ಅಂಚಿನಲ್ಲಿರುವ ಪ್ರಭೇದವೊಂದಕ್ಕೆ ಆವಾಸಸ್ಥಾನ ಕಲ್ಪಿಸಿಕೊಟ್ಟಿರುವುದರಿಂದ ದೇಶವು ಹೆಮ್ಮೆಪಡಬಹುದು. ಈ ಯೋಜನೆಯಿಂದಾಗಿ ಪ್ರವಾಸೋದ್ಯಮ ಅಭಿವೃದ್ಧಿಯೂ ಸೇರಿದಂತೆ ಹಲವು ಅನುಕೂಲಗಳೂ ಇವೆ. ಆದರೆ, ಇದನ್ನು ವಿರೋಧಿಸುವವರು ಪ್ರತಿಪಾದಿಸುವ ವಿಚಾರಗಳು ಗಂಭೀರವೇ ಆಗಿದ್ದು, ಆ ಬಗ್ಗೆ ಗಮನ ಹರಿಸಬೇಕಾದುದು ಬಹಳ ಮುಖ್ಯ. ಕುನೊ ರಾಷ್ಟ್ರೀಯ ಉದ್ಯಾನದ ವಾತಾವರಣವು ಆಫ್ರಿಕಾದ ಚೀತಾಗಳಿಗೆ ಪೂರಕವಲ್ಲ ಎಂದು ತಜ್ಞರಲ್ಲಿ ಕೆಲವರು ಹೇಳಿದ್ದಾರೆ. ಈ ರಾಷ್ಟ್ರೀಯ ಉದ್ಯಾನದಲ್ಲಿ ಚೀತಾಗಳಿಗೆ ಸಾಕಾಗುವಷ್ಟು ಸ್ಥಳಾವಕಾಶವಾಗಲೀ ಬಲಿಪ್ರಾಣಿ ನೆಲೆಯಾಗಲೀ ಇಲ್ಲ ಎಂದೂ ಹೇಳಲಾಗುತ್ತಿದೆ. ಚಿರತೆಗಳಂತಹ ಇತರ ಪ್ರಾಣಿಗಳ ದಾಳಿಗೆ ಚೀತಾಗಳು ಒಳಗಾಗುವ ಅಪಾಯವೂ ಇದೆ. 40 ವರ್ಷ ಕಳೆದರೂ ಚೀತಾ ಯೋಜನೆಯು ಕಾರ್ಯಸಾಧುವಾಗುವ ಹಂತಕ್ಕೆ ಬರುವುದು ಸಾಧ್ಯವಿಲ್ಲ ಎಂಬ ಪ್ರತಿಪಾದನೆಯೂ ಇದೆ.

ಚೀತಾಗಳನ್ನು ಸಂರಕ್ಷಿಸುವ ಯೋಜನೆಯಲ್ಲಿ ಸಂರಕ್ಷಣೆಗಿಂತ ಪ್ರತಿಷ್ಠೆಯ ಪ್ರದರ್ಶನದ ಹಂಬಲವೇ ಹೆಚ್ಚು ಇದ್ದಂತಿದೆ. ಅತ್ಯಂತ ದಯನೀಯ ಸ್ಥಿತಿಯಲ್ಲಿರುವ ಮತ್ತು ಸಂರಕ್ಷಣೆಯ ಅಗತ್ಯವಿರುವ ಹಲವು ಪ್ರಭೇದಗಳು ಇವೆ. ಗುಜರಾತ್‌ನ ಗಿರ್ ಅರಣ್ಯದಲ್ಲಿ ಮಾತ್ರ ಇರುವ ಏಷ್ಯಾ ಸಿಂಹಗಳಿಗೆ ಇನ್ನಷ್ಟು ಆವಾಸಸ್ಥಾನಗಳನ್ನು ಕಲ್ಪಿಸಿಕೊಡುವ ಜರೂರು ಇದೆ. ಚೀತಾಗಳನ್ನು ತರುವ ಬದಲಿಗೆ ಕುನೊ ರಾಷ್ಟ್ರೀಯ ಉದ್ಯಾನದಲ್ಲಿ ಗಿರ್‌ನಿಂದ ಕೆಲವು ಸಿಂಹಗಳನ್ನು ಒಯ್ದು ಬಿಡಬೇಕಿತ್ತು. ಏಷ್ಯಾ ಸಿಂಹಗಳಿಗೆ ಎರಡನೇ ಆವಾಸ ಅಭಿವೃದ್ಧಿ ಯೋಜನೆಗೆ 1986ರಲ್ಲಿಯೇ ಚಾಲನೆ ನೀಡಲಾಗಿದೆ. ಆದರೆ, ನರೇಂದ್ರ ಮೋದಿ ಅವರೇ ಮುಖ್ಯಮಂತ್ರಿಯಾಗಿದ್ದ ಅವಧಿಯಲ್ಲಿ ಗುಜರಾತ್ ಸರ್ಕಾರ ತೋರಿದ ಅಸಹಕಾರದಿಂದಾಗಿಯೇ ಈ ಯೋಜನೆಯ ಅನುಷ್ಠಾನ ಸಾಧ್ಯವಾಗಿಲ್ಲ. 'ಗುಜರಾತ್‌ನ ಹೆಮ್ಮೆಯಾಗಿರುವ ಸಿಂಹಗಳನ್ನು ಬೇರೆ ರಾಜ್ಯಗಳಿಗೆ ಕೊಡುವ ಪ್ರಶ್ನೆಯೇ ಇಲ್ಲ' ಎಂದು ಗುಜರಾತ್ ಮುಖ್ಯಮಂತ್ರಿಯಾಗಿದ್ದ ವಿಜಯ್ ರೂಪಾಣಿ ಅವರು ಹೇಳಿದ್ದು ವರದಿಯಾಗಿತ್ತು. ಗಿರ್‌ನ ಕೆಲವು ಸಿಂಹಗಳನ್ನು ಕುನೊ ರಾಷ್ಟ್ರೀಯ ಉದ್ಯಾನಕ್ಕೆ ಒಯ್ದು ಆರು ತಿಂಗಳೊಳಗೆ ಬಿಡಬೇಕು ಎಂದು ಸುಪ್ರೀಂ ಕೋರ್ಟ್ 2013ರಲ್ಲಿ ತೀರ್ಪು ನೀಡಿತ್ತು. ಈ ತೀರ್ಪಿನ ಪಾಲನೆಯೇ ಆಗಿಲ್ಲ. ಅಳಿವಿನ ಅಂಚಿನಲ್ಲಿರುವ ಪ್ರಾಣಿಯು ಒಂದೇ ಆವಾಸ ಸ್ಥಾನದಲ್ಲಿ ಇರುವುದು ಸರಿಯಲ್ಲ ಎಂದು ವನ್ಯಜೀವಿ ಪರಿಣತರು ಹೇಳುತ್ತಾರೆ. ಸಾಂಕ್ರಾಮಿಕ ರೋಗಗಳು ಅಥವಾ ಪ್ರಕೃತಿ ವಿಕೋಪದ ಕಾರಣದಿಂದಾಗಿ ಇವು ಅಳಿದುಹೋಗುವ ಅಪಾಯ ಇದೆ. ಈ ಅಂಶವನ್ನು ಸುಪ್ರೀಂ ಕೋರ್ಟ್ ಕೂಡ ಒತ್ತಿ ಹೇಳಿತ್ತು. ಇಷ್ಟೆಲ್ಲ ಆದರೂ ಸಿಂಹಗಳನ್ನು ಮಧ್ಯ ಪ್ರದೇಶದ ಕಾಡಿಗೆ ಬಿಡಲು ಗುಜರಾತ್ ಸರ್ಕಾರ ಸಿದ್ಧವಿಲ್ಲ. 2020ರಲ್ಲಿ ಕೇಂದ್ರ ಸರ್ಕಾರ ರೂಪಿಸಿರುವ 'ಪ್ರಾಜೆಕ್ಟ್ ಲಯನ್'ನಲ್ಲಿ ಕೂಡ ಸಿಂಹಗಳಿಗೆ ಬೇರೊಂದು ಆವಾಸ ಸ್ಥಾನ ಕಲ್ಪಿಸಿಕೊಡುವ ಪ್ರಸ್ತಾವ ಇಲ್ಲ. ಬದಲಿಗೆ, ಬೇರೆಡೆಗೆ ಅವುಗಳನ್ನು ಕಳುಹಿಸುವುದಿಲ್ಲ ಎಂಬ ಅಂಶಕ್ಕೇ ಒತ್ತು ಕೊಡಲಾಗಿದೆ. ವಿನಾಶದ ಅಂಚಿನಲ್ಲಿರುವ ಸಿಂಹವನ್ನು ರಕ್ಷಿಸಲು ಬೇಕಾದ ಪ್ರಯತ್ನಗಳನ್ನು ಕೇಂದ್ರ ಸರ್ಕಾರ ಮಾಡಿಲ್ಲ. ಚೀತಾ ಯೋಜನೆಯಲ್ಲಿ ಪ್ರತಿಷ್ಠೆಯ ಪ್ರದರ್ಶನದ ಪಾಲೇ ಹೆಚ್ಚು ಎಂಬುದಕ್ಕೆ ಇವೆಲ್ಲವೂ ಪುಷ್ಟಿ ಕೊಡುತ್ತವೆ. ಅದೇನೇ ಇರಲಿ, ಚೀತಾ ಸಂತತಿಯನ್ನು ಭಾರತದಲ್ಲಿ ಸಂರಕ್ಷಿಸುವ ಪ್ರಯೋಗ ಆರಂಭವಾಗಿದೆ. ನಿಕಟ ನಿಗಾ ಇರಿಸುವ ಮೂಲಕ ಯೋಜನೆಯನ್ನು ಯಶಸ್ವಿಗೊಳಿಸಬೇಕಿದೆ. ಹಾಗೆಯೇ, ಸಿಂಹದ ಸಂರಕ್ಷಣೆಯ ಬಗ್ಗೆ ತೋರುತ್ತಿರುವ ಸಂಕುಚಿತ ಮನೋಭಾವವನ್ನು ಕೈಬಿಡಬೇಕಿದೆ.

ದಿನದ ಟ್ವೀಟ್

ಒಳ್ಳೆಯದು ಮಾಡಬೇಕೆಂದರೆ...

ದೀರ್ಘಕಾಲದಿಂದ ಸಾರ್ವಜನಿಕ ಬದುಕಿನಲ್ಲಿದ್ದ ವ್ಯಕ್ತಿಯೊಬ್ಬರೊಂದಿಗೆ ಮಾತನಾಡುತ್ತಿದ್ದೆ. ಅವರು ಹೇಳಿದರು: ನೀವು ತುಂಬಾ ಚಿಕ್ಕವಯಸ್ಸಿನವರಾಗಿರುವಾಗ 'ಸ್ವಂತಕ್ಕೆ ಸ್ವಲ್ಪ, ಸಮಾಜಕ್ಕೆ ಸರ್ವಸ್ವ' ಎಂಬ ಮಾತನ್ನು ಗಂಭೀರವಾಗಿ ತೆಗೆದುಕೊಳ್ಳಬೇಡಿ. ಮೊದಲು ನೀವು ಸ್ಥಿರವಾಗಬೇಕು ಮತ್ತು ಸದೃಢರಾಗಬೇಕು. ನೆನಪಿಡಿ; ಜಗತ್ತಿಗೆ ಒಳ್ಳೆಯದನ್ನು ಮಾಡಬೇಕೆಂದರೆ, ನೀವು ಜೀವನದಲ್ಲಿ ಮುಂದೆ ಬರಬೇಕು. ಉಳಿದದ್ದೇನಿದ್ದರೂ ನಂತರ.

ವಿನ್ಯಾಸ್ ಶೆಟ್ಟಿ, ಎಂಜಿನಿಯರ್

ಕಿಡಿನುಡಿ

ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ ಇಂದು ಎಲ್ಲಿದೆ? ಇದು ಭಾರತೀಯವೂ ಅಲ್ಲ, ರಾಷ್ಟ್ರೀಯವೂ ಅಲ್ಲ, ಕಾಂಗ್ರೆಸ್ಸೂ ಅಲ್ಲ. ಇದು ಅಣ್ಣ ಮತ್ತು ತಂಗಿಯ (ರಾಹುಲ್ ಗಾಂಧಿ ಮತ್ತು ಪ್ರಿಯಾಂಕಾ ಗಾಂಧಿ) ಪಕ್ಷ. ಭಾರತ್ ಜೋಡೊ ಬದಲಿಗೆ ಅವರು ಕಾಂಗ್ರೆಸ್ ಜೋಡೊ ಬಗ್ಗೆ ಚಿಂತೆ ಮಾಡಬೇಕು. ಏಕೆಂದರೆ, ಹಿರಿಯ ಮುಖಂಡರೆಲ್ಲ ಪಕ್ಷ ಬಿಟ್ಟು ಹೋಗುತ್ತಿದ್ದಾರೆ.

ಜೆ.ಪಿ. ನಡ್ಡಾ, ಬಿಜೆಪಿ ಅಧ್ಯಕ್ಷ

25 ವರ್ಷಗಳ ಹಿಂದೆ

ಭಾನುವಾರ, 21-9-1997

- **ಮಾಯಾವತಿ ರಾಜೀನಾಮೆ: ಇಂದು ಹೊಸ ಸರ್ಕಾರ**

ಲಖನೌ, ಸೆ. 20 (ಪಿಟಿಐ, ಯುಎನ್‌ಐ)– ಉತ್ತರ ಪ್ರದೇಶದ ಮುಖ್ಯಮಂತ್ರಿ ಮಾಯಾವತಿ ಅವರು ಇಂದು ರಾತ್ರಿ ತಮ್ಮ ಸ್ಥಾನಕ್ಕೆ ನೀಡಿದ ರಾಜೀನಾಮೆಯನ್ನು ರಾಜ್ಯಪಾಲ ರೋಮೇಶ್ ಭಂಡಾರಿ ಅವರು ಅಂಗೀಕರಿಸಿದ್ದು, ಹೊಸ ಸರ್ಕಾರ ರಚಿಸಲು ಬಿಜೆಪಿ ನಾಯಕ ಕಲ್ಯಾಣ್ ಸಿಂಗ್ ಅವರಿಗೆ ಆಹ್ವಾನ ನೀಡಿದ್ದಾರೆ.

ಇದಕ್ಕೂ ಮೊದಲು ಬಿಎಸ್‌ಪಿ ಮುಖ್ಯಸ್ಥ ಕಾನ್ಶಿರಾಂ ಅವರೊಂದಿಗೆ ರಾಜ್ಯಪಾಲರನ್ನು ಭೇಟಿ ಮಾಡಿದ ಮಾಯಾವತಿ ತಮ್ಮ ಸ್ಥಾನಕ್ಕೆ ರಾಜೀನಾಮೆ ಸಲ್ಲಿಸಿದ್ದಲ್ಲದೆ ಕಲ್ಯಾಣ್ ಸಿಂಗ್ ನೇತೃತ್ವದ ಸರ್ಕಾರಕ್ಕೆ ಬೆಂಬಲ ನೀಡುವ ಪತ್ರವನ್ನು ಸಲ್ಲಿಸಿದ್ದರು.

- **ನ್ಯೂಯಾರ್ಕ್: ನಾಳೆ ಕ್ಲಿಂಟನ್–ಗುಜ್ರಾಲ್ ಮಾತುಕತೆ**

ನ್ಯೂಯಾರ್ಕ್, ಸೆ. 20 (ಪಿಟಿಐ)– ಪ್ರಧಾನಿ ಐ.ಕೆ. ಗುಜ್ರಾಲ್ ಅವರು ಇಂದು ರಾತ್ರಿ ಇಲ್ಲಿಗೆ ಆಗಮಿಸಿದ್ದು, ಸೋಮವಾರ ಅಮೆರಿಕ ಅಧ್ಯಕ್ಷ ಬಿಲ್ ಕ್ಲಿಂಟನ್ ಅವರೊಂದಿಗೆ ಮಾತುಕತೆ ನಡೆಸುವರು. ಪ್ರಧಾನಿಯಾಗಿ ಅಧಿಕಾರ ವಹಿಸಿಕೊಂಡ ನಂತರ ಇದೇ ಮೊದಲ ಬಾರಿಗೆ ಅಮೆರಿಕಕ್ಕೆ ಆಗಮಿಸಿರುವ ಗುಜ್ರಾಲ್ ಅವರು ನ್ಯೂಯಾರ್ಕ್‌ನಲ್ಲಿ ಪಾಕ್ ಪ್ರಧಾನಿ ನವಾಜ್ ಷರೀಫ್ ಅವರೊಂದಿಗೆ ಮಾತುಕತೆ ನಡೆಸುವ ಕಾರ್ಯಕ್ರಮವೂ ಇದೆ.

50 ವರ್ಷಗಳ ಹಿಂದೆ

ಗುರುವಾರ, 21-9-1972

- **ಒತ್ತಡ ತಂತ್ರಗಳಿಗೆ ಸರ್ಕಾರ ಮಣಿಯದು: ಸಚಿವ ಕೃಷ್ಣ ಸ್ಪಷ್ಟನೆ**

ಬೆಂಗಳೂರು, ಸೆ. 20– ಹಿಂಸಾಚಾರ ಮತ್ತು ಒತ್ತಡದ ತಂತ್ರಗಳಿಂದ ಬೇಡಿಕೆಗಳನ್ನು ಈಡೇರಿಸಿಕೊಳ್ಳಬಯಸುವ ಕಾರ್ಮಿಕರ ಪ್ರವೃತ್ತಿಗೆ ಸರ್ಕಾರ ಮಣಿಯುವುದಿಲ್ಲ ಎಂದು ಕೈಗಾರಿಕಾ ಮಂತ್ರಿ ಶ್ರೀ ಎಸ್. ಎಂ.ಕೃಷ್ಣ ಅವರು ಭದ್ರಾವತಿ ಕಬ್ಬಿಣ ಕಾರ್ಖಾನೆ ಕಾರ್ಮಿಕರಿಗೆ ಸ್ಪಷ್ಟಪಡಿಸಿದ್ದಾರೆ.

ಕಾರ್ಮಿಕರ ಒಂದು ವರ್ಗ ಹಿಂಸಾಚಾರಕ್ಕೆ ಕೈಹಾಕಿದುದನ್ನು ಉಗ್ರವಾಗಿ ಖಂಡಿಸಿದ ಸಚಿವರು 'ಇದರಿಂದ ಪ್ರಶ್ನೆಗಳು ಇತ್ಯರ್ಥವಾಗುವುದಿಲ್ಲ; ಹಿಂಸಾಚಾರದ ವಿರುದ್ಧ ಸರ್ಕಾರದ ನಿಲುವು ಅತ್ಯಂತ ಬಿಗುವಾಗುವುದು' ಎಂದಿದ್ದಾರೆ.

- **ಪಾಕ್ ಜೊತೆ ಶೃಂಗಕ್ಕೆ ಇಂದಿರಾ ಷರತ್ತು**

ಪಟನಾ ಸೆ. 20– ಪಾಕಿಸ್ತಾನದ ಅಧ್ಯಕ್ಷ ಭುಟ್ಟೋ ಅವರ ಜೊತೆ ತಾವು ಮುಂದಿನ ತಿಂಗಳು ಶೃಂಗಸಭೆ ನಡೆಸುವ ಸಾಧ್ಯತೆಯನ್ನು ಪ್ರಧಾನಮಂತ್ರಿ ಇಂದಿರಾ ಗಾಂಧಿ ಅವರು ಇಂದು ಇಲ್ಲಿ ತಳ್ಳಿಹಾಕಿದರು.

ಪತ್ರಿಕಾಗೋಷ್ಠಿಯೊಂದರಲ್ಲಿ ಇತ್ತೀಚೆಗೆ ಭುಟ್ಟೋ ಅವರು ಈ ಬಗೆಗೆ ಹೇಳಿರುವುದನ್ನು ಅವರ ಗಮನಕ್ಕೆ ತಂದಾಗ 'ಪತ್ರಿಕೆಗಳಲ್ಲಿ ನಾನೂ ನೋಡಿದ್ದೇನೆ. ಕಾಶ್ಮೀರದಲ್ಲಿ ಹತೋಟಿ ರೇಖೆಯನ್ನು ಅಖೈರಾಗಿ ಗುರುತಿಸುವವರೆಗೆ ಯಾವುದೇ ಮಾತುಕತೆ ನಡೆಸುವುದಿಲ್ಲ' ಎಂದು ನುಡಿದರು.

ಕಾಲ್ನಡಿಗೆಯು ಕಾಲೆಳೆಯುವ ನಡಿಗೆಯಾಗದಂತೆ ಎಚ್ಚರ ವಹಿಸಬೇಕಿದೆ

ಭಾರತವನ್ನು ಬೆಸೆಯುವ ಬಗೆ ಹೇಗೆ?

ವಿಶ್ಲೇಷಣೆ

ಬರಗೂರು ರಾಮಚಂದ್ರಪ್ಪ

'ಭಾರತ್ ಜೋಡೊ' ಎಂಬ ಆಶಯದೊಂದಿಗೆ ರಾಹುಲ್ ಗಾಂಧಿ ಅವರು 3,500ಕ್ಕೂ ಹೆಚ್ಚು ಕಿಲೊಮೀಟರ್ ದೂರದ ಪಾದಯಾತ್ರೆಯನ್ನು ಆರಂಭಿಸಿದ್ದಾರೆ. ಇದೊಂದು ಅಸಾಧಾರಣ ಕ್ರಿಯಾರೂಪಕ ಎಂಬುದರಲ್ಲಿ ಅನುಮಾನವಿಲ್ಲ. ಈ ಪಾದಯಾತ್ರೆಯನ್ನು ವ್ಯವಸ್ಥೆ ಮಾಡಿರುವುದು ಕಾಂಗ್ರೆಸ್ ಪಕ್ಷ. ಆದ್ದರಿಂದ ಆ ಪಕ್ಷವು ಇದನ್ನು 'ಪಕ್ಷಾತೀತ ಪಾದಯಾತ್ರೆ'ಯೆಂದು ಹೇಳಿದರೂ ಕಾಂಗ್ರೆಸ್ ಮತ್ತು ರಾಹುಲ್ ಗಾಂಧಿ ಯಾತ್ರೆಯೆಂಬ ಭಾವನೆಯನ್ನು ಹೋಗಲಾಡಿಸುವುದು ಸಾಧ್ಯವಿಲ್ಲ. ಹಾಗೆಂದು ಕಾಂಗ್ರೆಸ್ ಮತ್ತು ರಾಹುಲ್ ಅವರ ಶಕ್ತಿವರ್ಧನೆಗೆ ಈ ಪಾದಯಾತ್ರೆ ಬಳಕೆಯಾಗುವುದನ್ನು ಬೇಡ ಎನ್ನುವಂತಿಲ್ಲ. ಯಾಕೆಂದರೆ ಪಾದಯಾತ್ರೆಯ ರೂವಾರಿಗಳು ಇವರೇ ಆಗಿದ್ದಾರೆ. ಇವರು ಅದರ ಲಾಭ ಪಡೆಯಬೇಕೆಂದು ಬಯಸುವುದು ತಪ್ಪಲ್ಲ.

ಹಿಂದೆ ಗಾಂಧೀಜಿ ಕೈಗೊಂಡ ಪಾದಯಾತ್ರೆಯಂತೆ 'ಲಾಭರಹಿತ' ಯಾತ್ರೆಗಳನ್ನು ಇಂದು ನಿರೀಕ್ಷಿಸುವುದು ಕಷ್ಟ. ಇದೇ ಸಂದರ್ಭದಲ್ಲಿ ಮಾಜಿ ಪ್ರಧಾನಿ ಚಂದ್ರಶೇಖರ್ ಅವರು ನಡೆಸಿದ ಭಾರತ ಯಾತ್ರೆಯೂ ಉಲ್ಲೇಖನೀಯ. ಪಾದಯಾತ್ರೆಯನ್ನು ಸದುದ್ದೇಶದಿಂದ ಯಾವ ಪಕ್ಷವೇ ನಡೆಸಲಿ, ಯಾವ ವ್ಯಕ್ತಿಯೇ ನೇತೃತ್ವ ವಹಿಸಲಿ ಬದ್ಧತೆಯ ಕಾರಣಕ್ಕೆ ಸ್ವಾಗತಾರ್ಹ. ಭಾರತದಲ್ಲಿ ಒಡೆದ ಮನಸ್ಸುಗಳನ್ನು ಬೆಸೆಯಲು ಹೊರಟ ಈ ಪಾದಯಾತ್ರೆಯ ಉದ್ದೇಶ ಒಳ್ಳೆಯದೇ ಆಗಿದೆ. ಆದರೆ ಇದು ಅನಗತ್ಯ ವಿವಾದಕ್ಕೂ ಕಾರಣವಾಗುತ್ತಿರುವುದು ವಿಷಾದಕರ ಸಂಗತಿಯಾಗಿದೆ. ವಿವಾದಗಳ ವಿಸ್ತರಣೆಗೆ ಪಾದಯಾತ್ರೆ ನಿರತ ಪಕ್ಷವೂ ಪಾಲುದಾರ ಆಗುತ್ತಿರುವುದು ಈಗಿನ ಬೆಳವಣಿಗೆಯಾಗಿದೆ.

ಈ ಪಾದಯಾತ್ರೆಯು ಸಹಜವಾಗಿಯೇ ಬಿಜೆಪಿಯ ಕೆಂಗಣ್ಣಿಗೆ ಗುರಿಯಾಗಿದೆ. ಕೆಂಗಣ್ಣು 'ಕೊರತೆ'ಗಳನ್ನು ಹುಡುಕುತ್ತದೆ. ಆದ್ದರಿಂದ ರಾಹುಲ್ ಅವರ ಟಿ ಶರ್ಟು ಥಟ್ಟನೆ ಕಾಣಿಸುತ್ತದೆ. 41 ಸಾವಿರ ರೂಪಾಯಿಗಳ ಟಿ ಶರ್ಟು ಧರಿಸಿದ್ದನ್ನು ಟೀಕಿಸಲಾಗುತ್ತದೆ. ಆಗ ಕಾಂಗ್ರೆಸ್ಸಿಗರು ನರೇಂದ್ರ ಮೋದಿ ಅವರ 9 ಲಕ್ಷ ರೂಪಾಯಿಗಳ ಕೋಟು ಮತ್ತು ಅಮಿತ್ ಶಾ ಅವರ 80 ಸಾವಿರ ರೂಪಾಯಿಗಳ ಮಫ್ಲರ್ ವಿಷಯವನ್ನು ಮುನ್ನೆಲೆಗೆ ತರುತ್ತಾರೆ. ಅಲ್ಲಿಗೇ ಮುಗಿದಿದ್ದರೆ ಏಟಿಗೆ ಎದಿರೇಟು ಎಂದು ಸುಮ್ಮನಾಗಬಹುದಿತ್ತು. ಚೆಡ್ಡಿಗೆ ಬೆಂಕಿ ಹಚ್ಚಿ ಬೇಕಿಲ್ಲದ ಟ್ವೀಟ್ ಮಾಡುತ್ತಾರೆ. ಹೀಗಾಗಿ ಪಾದಯಾತ್ರೆಯು ಎರಡು ಪಕ್ಷಗಳ ಜಟಾಪಟಿಗೆ ಸೀಮಿತವಾಗುತ್ತಿದೆ. ಪಾದಯಾತ್ರೆಗೆ ಇರಬೇಕಾದ ಮೂಲ ಆಶಯ ಹಿನ್ನೆಲೆಗೆ ಸರಿಯುವ ಲಕ್ಷಣ ಕಾಣಿಸುತ್ತಿದೆ. ಪಾದಯಾತ್ರೆ ವಿರೋಧಿಗಳಿಗೆ ಬೇಕಾದದ್ದು ಇದೇ ಆಗಿದೆ. ಕಾಂಗ್ರೆಸ್ ಇದನ್ನು ಅರ್ಥಮಾಡಿಕೊಳ್ಳಬೇಕು.

ಆದರೆ ಕಾಂಗ್ರೆಸ್ ಧುರೀಣರು ಬಿಜೆಪಿಯನ್ನಷ್ಟೇ ಅಲ್ಲ, ಎಡಪಕ್ಷವನ್ನೂ ಬಿಟ್ಟಿಲ್ಲ. ಬಿಜೆಪಿಯ 'ಎ ಟೀಮ್' ಎಂದು ಎಡಪಕ್ಷವನ್ನು ಟೀಕಿಸಿದ್ದಾರೆ. ಎಡಪಕ್ಷಗಳನ್ನು ಟೀಕಿಸಲು ಬೇರೆ ಕೆಲವು ಕಾರಣಗಳು ಸಿಗಬಹುದಾದರೂ ಧಾರ್ಮಿಕ ಮೂಲಭೂತವಾದವನ್ನು ನಿತ್ಯ ನಿರಂತರವಾಗಿ ವಿರೋಧಿಸುತ್ತ ಬಂದಿರುವುದನ್ನು 'ಇಲ್ಲ' ಎನ್ನಲು ಸಾಧ್ಯವಿಲ್ಲ. ಪಾದಯಾತ್ರೆಯು ಕೇರಳದಲ್ಲಿ ಹೆಚ್ಚು ದಿನಗಳ ಕಾಲ ನಡೆಯುವ ಕುರಿತು ಎಡಪಕ್ಷವು ಆಕ್ಷೇಪಿಸಿದ್ದನ್ನು ಪ್ರಶ್ನಿಸಬಹುದೇ ಹೊರತು ಬಿಜೆಪಿಯ 'ಎ ಟೀಮ್' ಎಂದು ಕರೆಯುವುದು ಪ್ರಶ್ನಾರ್ಹ.

ಇಷ್ಟು ಪ್ರಸ್ತಾಪ ಮಾಡಲು ಕಾರಣವೆಂದರೆ, ಕಾಂಗ್ರೆಸ್‌ನ ಕೆಲವರು ಪಾದಯಾತ್ರೆಯ ಸದುದ್ದೇಶವನ್ನು ಬಿತ್ತರಿಸುವ ಬದಲು ಉತ್ತರಿಸುವುದನ್ನೇ ಮುಖ್ಯವಾಗಿಸಿಕೊಂಡಂತೆ ಕಾಣುತ್ತಿದೆ. ಇದು ಪಾದಯಾತ್ರೆಯ ಆದ್ಯತೆಯನ್ನು ಮಂಕು ಮಾಡುತ್ತದೆ. ಆಶಾದಾಯಕ ಅಂಶವೆಂದರೆ- ರಾಹುಲ್ ಅವರು ಟೀಕೆಗಳಿಗೆ ಉತ್ತರಿಸುವ ಗೊಡವೆಗೆ ಹೋಗದೆ, ನಿತ್ಯ ನಡಿಗೆಯಲ್ಲಿ ನಿರತರಾಗಿದ್ದಾರೆ. ಜನರ ಸಂಪರ್ಕ ಸಾಧಿಸುತ್ತಿದ್ದಾರೆ.

ಭಾರತವನ್ನು ಜೋಡಿಸುವುದು ಅಥವಾ ಬೆಸೆಯುವುದು ಹೇಗೆ ಮತ್ತು ಯಾಕೆ ಎಂಬ ಪ್ರಶ್ನೆಗೆ ಉತ್ತರಿಸಿಕೊಂಡರೆ ಪಾದಯಾತ್ರೆಯ ಉದ್ದೇಶಕ್ಕೊಂದು ಸ್ಪಷ್ಟತೆ ಬರುತ್ತದೆ. ನಮ್ಮ ಸಾಮಾಜಿಕ- ಆರ್ಥಿಕ ವ್ಯವಸ್ಥೆಯು ಶತಮಾನಗಳಿಂದ ಶ್ರೇಣೀಕರಣಕ್ಕೆ ಕಾರಣವಾಗಿದೆ. ಜಾತಿ ತಾರತಮ್ಯ ಮತ್ತು ಆರ್ಥಿಕ ಅಸಮಾನತೆಗಳ ಆಧಾರದಲ್ಲಿ 'ಒಡಕು' ಉಂಟಾಗಿದೆ. ಇಂಥ ಸಾಮಾಜಿಕ- ಆರ್ಥಿಕ ಅಸಮಾನತೆಯ ಒಡಕನ್ನು ಬೆಸೆದು ಸಮಾನತೆಯ ಸಮಾಜ ನಿರ್ಮಿಸಲು ಸೂಕ್ತ ಚಿಂತನೆಯ ಹೋರಾಟಗಳೂ ನಡೆದಿವೆ. ಒಡೆದ ಸಮಾಜಕ್ಕೆ ಸಾಂತ್ವನ ನೀಡಿವೆ; ಸ್ವಲ್ಪ ಸುಧಾರಣೆಗೂ ಕಾರಣವಾಗಿವೆ. ಆದರೂ ಇಂದು ಬಂಡವಾಳಶಾಹಿ ಆರ್ಥಿಕ ನೀತಿಯಿಂದ ಅಸಮಾನತೆಯ ಕಂದಕ ಬೇರೊಂದು ರೂಪದಲ್ಲಿ ಕಾಣಿಸುತ್ತಿದೆ.

ಕಾಂಗ್ರೆಸ್ ನೇತೃತ್ವದ ಸರ್ಕಾರವು 1991- 92ರಲ್ಲಿ ಬಿತ್ತಿದ ಉದಾರೀಕರಣವೆಂಬ ಆರ್ಥಿಕ ನೀತಿಯು ಬಿಜೆಪಿ ಆಡಳಿತದಲ್ಲಿ ಹೆಮ್ಮರವಾಗಿ ಬೆಳೆದು ಖಾಸಗೀಕರಣವೇ ಆದಿ ಮತ್ತು ಅಂತ್ಯವಾಗಿ ಪರಿಣಮಿಸುತ್ತಿದೆ. ನಿರುದ್ಯೋಗ ಸಮಸ್ಯೆ ಹಿಂದೆಂದೂ ಇಲ್ಲದಷ್ಟು ಉಲ್ಬಣಗೊಂಡಿದೆ. ರೈತರು, ದಲಿತರು, ಮಹಿಳೆಯರು ಎಂದಿನಂತೆ ಸಂಕಷ್ಟಗಳ ಸುಳಿಯಲ್ಲಿದ್ದಾರೆ. ಬೆಲೆ ಏರಿಕೆಯಿಂದ ಬದುಕು ಬಸವಳಿಯುತ್ತಿದೆ. ಆದ್ದರಿಂದ ಈ ಸಾಮಾಜಿಕ- ಆರ್ಥಿಕ ಕಂದಕವನ್ನು ಬೆಸೆದು ಭಾರತದ ಮರು ಸಂರಚನೆಗೆ ಸಿದ್ಧವಾಗಬೇಕಾಗಿದೆ. ಈ ದಿಸೆಯಲ್ಲಿ ಸ್ಪಷ್ಟ ಸೈದ್ಧಾಂತಿಕ ತಿಳಿವಳಿಕೆ ಮತ್ತು ಯೋಜನಾಬದ್ಧತೆ ಬೇಕು. ಟೀಕೆಗಳನ್ನು ಗೌಣಗೊಳಿಸಿ ಸಾಮಾಜಿಕ ಮರುಸಂರಚನೆಯ ಆಶಯವನ್ನು ಜನರಿಗೆ ಮುಟ್ಟಿಸುವುದು ಪಾದಯಾತ್ರೆಯ ತಾತ್ವಿಕತೆಯಾಗಬೇಕು.

ಇಂದು, ಭಾರತದಲ್ಲಿ ಒಡಕುಂಟು ಮಾಡುತ್ತಿರುವ ಮತ್ತೊಂದು ಅಂಶವೆಂದರೆ- ಎಲ್ಲ ಧರ್ಮಗಳಲ್ಲಿರುವ ಮೂಲಭೂತವಾದಿಗಳು ವಿಸ್ತರಿಸುತ್ತಿರುವ ಧರ್ಮದ್ವೇಷ ಮತ್ತು ಬಹುತ್ವ ವಿರೋಧಿ ಶಕ್ತಿಗಳ ನಿರ್ಭಿಡೆಯ ನಡೆ-ನುಡಿ. ಇಂಥ ಸನ್ನಿವೇಶಕ್ಕೆ ಪಾದಯಾತ್ರೆಯು ಪರಿವರ್ತನಶೀಲ ಪರಂಪರೆಯ ಪ್ರತೀಕಗಳ ಮೂಲಕ ಜನರನ್ನು ಜಾಗೃತಗೊಳಿಸಬೇಕು. ಜನಸಾಮಾನ್ಯರು ಪರಂಪರೆಯನ್ನು ಗೌರವಿಸುತ್ತಾರೆಂಬುದನ್ನು ಗೌರವಿಸಬೇಕು. ಈ ದಿಸೆಯಲ್ಲಿ ನಿದರ್ಶನವಾಗಿ ಮೂರು ಮಾದರಿಗಳನ್ನು ಇಲ್ಲಿ ಪ್ರಸ್ತಾಪಿಸುತ್ತೇನೆ.

ಒಂದು- ಸಂವಿಧಾನ ರಚನಾ ಸಭೆಯಲ್ಲಿ ಧಾರ್ಮಿಕ ಹಕ್ಕುಗಳ ಬಗ್ಗೆ ಡಾ. ಅಂಬೇಡ್ಕರ್ ಮತ್ತು ರಾಧಾಕೃಷ್ಣನ್ ಅವರು ತಳೆದ ನಿಲುವು. ಡಾ. ಅಂಬೇಡ್ಕರ್ ಹಿಂದೂ ಧರ್ಮದ ಹೊರಗೆ ನಿಂತವರು. ಡಾ. ರಾಧಾಕೃಷ್ಣನ್ ಹಿಂದೂ ಧರ್ಮದ ಒಳಗೆ ನಿಂತವರು. ಇಬ್ಬರೂ ಕೂಡಿ ಈ ದೇಶದಲ್ಲಿ ಎಲ್ಲ ಧರ್ಮಗಳೂ ಸಮಾನ ಎಂದು ಪ್ರತಿಪಾದಿಸಿ ಧಾರ್ಮಿಕ ಹಕ್ಕು ಮತ್ತು ಸ್ವಾತಂತ್ರ್ಯಗಳ ಪರವಾಗಿ ನಿಂತರು. ಇದು ಭಾರತವನ್ನು ಬೆಸೆಯುವ ಮನೋಧರ್ಮ. ಎರಡು- ಮುಸ್ಲಿಂ ಸಮುದಾಯದ ಅಶ್ಫಖುಲ್ಲಾಖಾನ್ ಮತ್ತು ಹಿಂದೂ ಧರ್ಮಕ್ಕೆ ಸೇರಿದ ರಾಮಪ್ರಸಾದ್ ಬಿಸ್ಮಿಲ್ ಅವರು ಸೋದರರಂತೆ ಬದುಕುತ್ತ ಒಟ್ಟಾಗಿ ಬ್ರಿಟಿಷರ ವಿರುದ್ಧ ಹೋರಾಡಿದರು. ಇಬ್ಬರೂ ಒಂದೇ ದಿನ- 1927 ಡಿಸೆಂಬರ್ 19ರಂದು- ಬ್ರಿಟಿಷರ ಗಲ್ಲು ಶಿಕ್ಷೆಗೆ ಬಲಿಯಾದರು. ಸಾವಿನಲ್ಲೂ ಒಂದಾದ ಸೋದರರಾದರು. ಮೂರು- ಭಾರತದ ಮೊದಲ ಶಿಕ್ಷಕಿ ಎಂಬ ಖ್ಯಾತಿಯ ಸಾವಿತ್ರಿಬಾಯಿ ಫುಲೆ ಮತ್ತು ಫಾತಿಮಾ ಶೇಖ್ ಒಟ್ಟಾಗಿ ಮಹಿಳೆಯರ ಶಿಕ್ಷಣಕ್ಕಾಗಿ ದುಡಿದರು. ಭಾರತವನ್ನು ಬೆಸೆಯುವ ಇಂತಹ ಸೌಹಾರ್ದ ಪರಂಪರೆಯ ಪ್ರತೀಕಗಳು ಬಹಳಷ್ಟಿವೆ.

ಗಾಂಧೀಜಿ ಧಾರ್ಮಿಕ ಸೌಹಾರ್ದಕ್ಕಾಗಿ ಇಡೀ ಜೀವನ ಮತ್ತು ಜೀವವನ್ನು ಕೊಟ್ಟರು. ಎಲ್ಲ ಧರ್ಮಗಳನ್ನು ಸಮದೃಷ್ಟಿಯಿಂದ ನೋಡಬೇಕೆಂದು ಪ್ರತಿಪಾದಿಸಿದರು. ಡಾ. ಅಂಬೇಡ್ಕರ್ 'ಧರ್ಮ ಇರುವುದು ಮನುಷ್ಯರಿಗಾಗಿ, ಮನುಷ್ಯರಿರುವುದು ಧರ್ಮಕ್ಕಾಗಿ ಅಲ್ಲ' ಎಂದರು. ಸ್ವಾತಂತ್ರ್ಯ, ಸಮಾನತೆ ಮತ್ತು ಸೋದರತೆಗಳ ಪ್ರಜಾಪ್ರಭುತ್ವ ಮುಖ್ಯ ಎಂದರು. ಮೌಲಾನ ಅಬ್ದುಲ್ ಕಲಾಂ ಆಜಾದ್ ಅವರು ಮುಸ್ಲಿಮರು ಅಪ್ಪಟ ಭಾರತೀಯರೆಂಬ ಬದ್ಧತೆಯನ್ನು ಪ್ರತಿಪಾದಿಸಿದರು. ನೆಹರೂ, ಸುಭಾಷ್‌ಚಂದ್ರ ಬೋಸ್, ಭಗತ್ ಸಿಂಗ್, ಸರ್ದಾರ್ ಪಟೇಲ್ ಮುಂತಾದವರ ವಿಚಾರಧಾರೆಗಳು ಭಾರತವನ್ನು ಕಟ್ಟಿ ಬೆಳೆಸಿದ್ದನ್ನು ನಾವು ನೆನೆಯಬೇಕು. ಬುದ್ಧಗುರು, ಬಸವಣ್ಣ, ಸ್ವಾಮಿ ವಿವೇಕಾನಂದರೇ ಮುಂತಾದ ಮಾನವೀಯ ಮನಸ್ಸುಗಳು ದೇಶದ ದಾರಿದೀಪವಾಗಬೇಕು. ಪಾದಯಾತ್ರೆಗೂ ಪ್ರತೀಕವಾಗಬೇಕು.

ಒಟ್ಟಾರೆ, ಜನಪರ ಸಾಮಾಜಿಕ– ಆರ್ಥಿಕ ನೀತಿಗಳ ನಿಲುವು ಮತ್ತು ಧಾರ್ಮಿಕ ಸೌಹಾರ್ದದ ಒಲವುಗಳನ್ನು ಒಂದಾಗಿಸಿಕೊಂಡು ಈ ಪಾದಯಾತ್ರೆಯು ಫಲ ನೀಡುವಂತಾಗಲಿ; ಕಾಲ್ನಡಿಗೆಯು ಕಾಲೆಳೆಯುವ ನಡಿಗೆಯಾಗದಂತೆ ಎಚ್ಚರ ವಹಿಸಲಿ. ಇದು ದೇಶ ಬಯಸುವ ಸದಾಶಯ.

ಚುರುಮುರಿ

ರಿಪೇರಿ ಗೃಹ ಪ್ರವೇಶ

• ಮಣ್ಣೆ ರಾಜು

ಪದ್ಮಾ, ಪರಮೇಶಿ ಬಂದು, 'ಗೃಹ ಪ್ರವೇಶಕ್ಕೆ ಕುಟುಂಬ ಸಮೇತರಾಗಿ ಬನ್ನಿ...' ಎಂದು ಇನ್ವಿಟೇಷನ್ ಕೊಟ್ಟರು.

'ಇನ್ನೊಂದು ಮನೆ ಕಟ್ಟಿಸಿದ್ದೀರಾ?' ಕಾಫಿ ಕೊಡುತ್ತಾ ಸುಮಿ ಕೇಳಿದಳು.

'ಇಲ್ಲಾರೀ, ರಿಪೇರಿ ಗೃಹದ ಪ್ರವೇಶ' ಅಂದಳು ಪದ್ಮಾ.

'ಹೌದು, ರಾಜಕಾಲುವೆ ಮೇಲೆ ಕಟ್ಟಿದ್ವಿ ಅಂತ ಬಿಬಿಎಂಪಿ ಬುಲ್ಡೋಜರ್ ನುಗ್ಗಿ ಮನೆಯ ಕಿಟಕಿ, ಬಾಗಿಲು, ಗೋಡೆ ಕೆಡವಿ ಹೋಗಿತ್ತು, ರಿಪೇರಿ ಮಾಡಿಸಿ ಮನೆಗೆ ಪುನರ್‌ಪ್ರವೇಶ ಮಾಡ್ತಿದ್ದೀವಿ...' ಪರಮೇಶಿ ನೊಂದು ಹೇಳಿದ.

'ಕಾಲುವೆ ಮೇಲೆ ಮನೆ ಕಟ್ಟೋದು ತಪ್ಪಲ್ವಾ?' ಅಂದ ಶಂಕ್ರಿ.

'ಕಾಲುವೆ ಮೇಲೆ ಲೇಔಟ್ ಮಾಡಿ, ಮನೆ ಕಟ್ಟಲು ಪರ್ಮಿಷನ್ ಕೊಟ್ಟ ಅಧಿಕಾರಿಗಳದ್ದು ತಪ್ಪು'.

'ತಪ್ಪಿತಸ್ಥ ಅಧಿಕಾರಿಗಳಿಗೆ ಶಿಕ್ಷೆ ಕೊಡಿಸಿ' ಶಂಕ್ರಿಗೆ ಸಿಟ್ಟು ಬಂತು.

'ಸರ್ಕಾರಿ ಕಚೇರಿಯಲ್ಲಿ ಕಡತ ಹುಡುಕೋದೇ ಕಷ್ಟ, ಇನ್ನು ಅಧ್ವಾನ ಮಾಡಿಹೋದ ಅಧಿಕಾರಿಗಳನ್ನು ಹುಡುಕೋದು ಸುಲಭಾನಾ?' ಅಂದ ಪರಮೇಶಿ.

'ಲೋನ್ ಕೊಡ್ತೀವಿ ಮನೆ ರಿಪೇರಿ ಮಾಡಿಸಿಕೊಳ್ಳಿ ಅಂತ ಬ್ಯಾಂಕಿನವರೇ ಮನೆ ಬಾಗಿಲಿಗೆ ಬಂದಿದ್ದರು. ಅದೇ ಟೈಮಿಗೆ ಕಂಟ್ರಾಕ್ಟರ್ ಬಂದು, ಮಳೆನೀರು, ಬುಲ್ಡೋಜರ್ ನುಗ್ಗದಂತೆ ಮನೆಯನ್ನು ರಿಪೇರಿ ಮಾಡಿಕೊಡ್ತೀನಿ ಅಂದ್ರು... ರಿಪೇರಿ ಗುತ್ತಿಗೆ ವಹಿಸಿದರೆ ಗೃಹ ಪ್ರವೇಶ ಫ್ರೀ ಅಂತ ಆಫರ್ ಕೊಟ್ಟರು' ಅಂದಳು ಪದ್ಮಾ.

'ಕಂಟ್ರಾಕ್ಟರ್‌ಗೆ ಲಾಸ್ ಆಗೋದಿಲ್ವಾ?'

'40 ಪರ್ಸೆಂಟ್ ಕೊಟ್ಟು ಸರ್ಕಾರಿ ಕಾಮಗಾರಿ ಮಾಡೋದಕ್ಕಿಂತ ನಮ್ಮಂಥವರ ಮನೆ ಕಟ್ಟಿ ಗೃಹ ಪ್ರವೇಶ ಮಾಡಿಕೊಡೋದು ಪ್ರಯೋಜನಕಾರಿ ಅಂತ ಕಂಟ್ರಾಕ್ಟರ್ ಹೇಳಿದರು' ಎಂದ ಪರಮೇಶಿ.

'ಚಪ್ಪರ, ಶಾಮಿಯಾನ, ಪುರೋಹಿತರು, ಅಡುಗೆ ಎಲ್ಲವನ್ನೂ ಕಂಟ್ರಾಕ್ಟರ್ ವಹಿಸಿಕೊಂಡಿದ್ದಾರೆ. ಗೃಹ ಪ್ರವೇಶಕ್ಕೆ ಬಂದವರಿಂದ ಮುಯ್ಯಿ ಈಸ್ಕೊಂಡು, ತಾಂಬೂಲ ಕೊಡೋದಷ್ಟೇ ನಮ್ಮ ಕೆಲಸ...' ಪದ್ಮಾ ಸಡಗರದಿಂದ ಹೇಳಿದಳು.

ಸಂಗತ

ಜಾನಪದ ವಿ.ವಿ: ಬಲಪಡಿಸೋಣ

ಜಾನಪದ ವಿಷಯದಲ್ಲಿ ಉನ್ನತ ಶಿಕ್ಷಣ ಪಡೆದವರಿಗೆ ಉದ್ಯೋಗ ಅವಕಾಶ ದೊರಕಿಸಿಕೊಡುವ ಮಾರ್ಗೋಪಾಯಗಳ ಕುರಿತು ಅರ್ಥಪೂರ್ಣ ಚರ್ಚೆಗಳು ನಡೆಯಬೇಕಿದೆ

• ಡಾ. ಎಚ್.ಎಚ್.ನದಾಫ

'ಹಾವೇರಿಯಲ್ಲಿರುವ ಜಾನಪದ ವಿಶ್ವವಿದ್ಯಾಲಯವನ್ನು ಉನ್ನತ ಶಿಕ್ಷಣ ಇಲಾಖೆಯಿಂದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಗೆ ವರ್ಗಾಯಿಸಬೇಕು, ಹಾಗಾದಾಗ ಮಾತ್ರ ಪ್ರಸ್ತುತ ಕುಂಠಿತಗೊಂಡಿರುವ ವಿಶ್ವವಿದ್ಯಾಲಯದ ಚಟುವಟಿಕೆಗಳು ಪುನರಾರಂಭವಾಗಲು ಸಾಧ್ಯ' ಎಂದು ಜಲಸಂಪನ್ಮೂಲ ಸಚಿವ ಗೋವಿಂದ ಕಾರಜೋಳ ವಿಧಾನ ಪರಿಷತ್‌ನಲ್ಲಿ ಹೇಳಿದ್ದಾರೆ. ಸಚಿವರ ಈ ಹೇಳಿಕೆಯ ಹಿಂದೆ ವಿಶ್ವವಿದ್ಯಾಲಯದ ಶೈಕ್ಷಣಿಕ ವಾತಾವರಣ ಮತ್ತು ಶಿಕ್ಷಣದ ಗುಣಮಟ್ಟ ಸುಧಾರಣೆಯ ಹಂಬಲ ಇದೆಯೋ ಅಥವಾ ಅದನ್ನು ಆರ್ಥಿಕವಾಗಿ ಸದೃಢಗೊಳಿಸಬೇಕೆನ್ನುವ ಕಳಕಳಿ ಇದೆಯೋ ಎಂಬ ಪ್ರಶ್ನೆಗಳು ಮೂಡುತ್ತವೆ.

ನಮ್ಮ ಹಿರೀಕರ ಜ್ಞಾನ ಪರಂಪರೆಗೆ ಶೈಕ್ಷಣಿಕ ಸ್ಥಾನಮಾನವನ್ನು ತಂದುಕೊಡಬೇಕೆಂಬ ಹಂಬಲವು ಜಾನಪದ ವಿಷಯದಲ್ಲಿ ಮೊದಲಿಗೆ ಪಿಎಚ್.ಡಿ ಮಾಡಿದ ಗದ್ದಗಿಮಠ ಅವರಿಂದ ಹಿಡಿದು ಗೊ.ರು. ಚನ್ನಬಸಪ್ಪ ಅವರಂತಹ ಅನೇಕ ವಿದ್ವಾಂಸರ ಕನಸಾಗಿತ್ತು. ತರೀಕೆರೆಯಲ್ಲಿ 1967ರಲ್ಲಿ ನಡೆದ ಪ್ರಥಮ ಅಖಿಲ ಭಾರತ ಜಾನಪದ ಸಮ್ಮೇಳನದಲ್ಲಿ ಜಾನಪದ ವಿಶ್ವವಿದ್ಯಾಲಯ ಸ್ಥಾಪನೆ ಸಂಬಂಧ ನಿರ್ಣಯ ತೆಗೆದುಕೊಳ್ಳಲಾಗಿತ್ತು. ಈ ಕನಸನ್ನು 2011ರಲ್ಲಿ ನನಸಾಗಿಸಿದವರು ಆಗ ಮುಖ್ಯಮಂತ್ರಿಯಾಗಿದ್ದ ಬಿ.ಎಸ್.ಯಡಿಯೂರಪ್ಪ. ಇದರಿಂದ ಕನ್ನಡ ಮತ್ತು ಜಾನಪದ ಸಾಂಸ್ಕೃತಿಕ ವಲಯವು ಖುಷಿಪಟ್ಟಿತು. ಈ ಮೂಲಕ ನಮ್ಮ ಅನಕ್ಷರಸ್ಥರ ಜ್ಞಾನಶಿಸ್ತಿಗೆ ಒಂದು ಮೌಲ್ಯ ತಂದುಕೊಡುವುದಷ್ಟೇ ಅಲ್ಲ ಇಂದಿನ ಪೀಳಿಗೆಯು ಅವರ ಮೌಖಿಕ ಪರಂಪರೆಯ ಮಹತ್ವವನ್ನು ಶೈಕ್ಷಣಿಕ ವಲಯದ ಮೂಲಕ ತಿಳಿಯಲು ಸಾಧ್ಯವಾಯಿತು ಎಂಬ ಹರ್ಷ ಎಲ್ಲರಲ್ಲಿ ಮನೆಮಾಡಿತು.

ಅದಕ್ಕಾಗಿಯೇ ಆರಂಭದ ಕುಲಪತಿಗಳು ಜನಪದರ ಒಟ್ಟು ಜ್ಞಾನದ ವಲಯಗಳನ್ನು ಗುರುತಿಸಿ, ಎಂಟು ನಿಕಾಯಗಳನ್ನು (ಫ್ಯಾಕಲ್ಟಿ) ಮಾಡಿ, ಆಯಾ ನಿಕಾಯಕ್ಕೆ ಅನುಗುಣವಾಗಿ ವಿವಿಧ ಸ್ನಾತಕೋತ್ತರ ವಿಭಾಗಗಳನ್ನು ಆರಂಭಿಸಿದ್ದರು. ಅಲ್ಲದೆ ಹಲವಾರು ಅಲ್ಪಾವಧಿ ಶಿಕ್ಷಣ ಕೋರ್ಸ್‌ಗಳನ್ನು, ಡಿಪ್ಲೊಮಾ ಹಾಗೂ ಸರ್ಟಿಫಿಕೆಟ್ ಕೋರ್ಸ್‌ಗಳನ್ನು ಯುಜಿಸಿಯ ಮಾನದಂಡದ ಅಡಿಯಲ್ಲಿಯೇ ಆರಂಭಿಸಿದ್ದರು. ಈ ವಿಭಾಗಗಳ ಪಠ್ಯಗಳು ಪ್ರಾಚೀನ ಜ್ಞಾನದ ಕುರಿತು ತಿಳಿಸುವುದರೊಂದಿಗೆ ಆಧುನಿಕ ಸಂದರ್ಭದಲ್ಲಿ ಅವುಗಳಿಗೆ ಹೇಗೆ ಮುಖಾಮುಖಿಯಾಗಬೇಕು, ಉಳಿಸಬೇಕು ಮತ್ತು ಬೆಳೆಸಬೇಕು ಎಂಬ ತಾತ್ಪರ್ಯವನ್ನು ತಿಳಿಸುತ್ತಿದ್ದವು.

ಜನಪದರ ಮೌಖಿಕ ಪಠ್ಯಗಳಲ್ಲಿಯೂ ಸಂಸ್ಕೃತ ಗ್ರಂಥಗಳಲ್ಲಿ ಇರುವಂತಹ ಜ್ಞಾನವಿದೆ ಎಂಬುದನ್ನು ಅರಿಯುವ ಮತ್ತು ಗುರುತಿಸುವಂತಹ ಸಂಶೋಧನಾ ಚಿಂತನೆಗಳು ನಡೆಯಲಾರಂಭಿಸಿದವು. 2012-13ನೇ ಸಾಲಿನಿಂದ ಆರಂಭವಾದ ಈ ಶೈಕ್ಷಣಿಕ ಕಾರ್ಯಗಳು ಆರಂಭದ ನಾಲ್ಕು ವರ್ಷಗಳವರೆಗೆ ಅತೀ ಉತ್ಸುಕತೆಯಿಂದ ನಡೆದವು. ಎಲ್ಲ ವಿಭಾಗಗಳಲ್ಲಿಯೂ ವಿದ್ಯಾರ್ಥಿಗಳು ಪ್ರವೇಶ ಪಡೆದುಕೊಂಡು ಓದಲು ಆರಂಭಿಸಿದರು. ಆದರೆ ತಮ್ಮ ಎರಡು ವರ್ಷದ ಈ ಪಿ.ಜಿ. ಕೋರ್ಸ್ ಮುಗಿಸಿದ ನಂತರ ತಾವು ಯಾವ ಉದ್ಯೋಗಕ್ಕೆ ಅರ್ಹರು ಎಂಬ ಚಿಂತೆ ಅವರನ್ನು ಕಾಡಲಾರಂಭಿಸಿತು. ಈ ಕೊರಗು ಮುಂದಿನ ವಿದ್ಯಾರ್ಥಿಗಳಿಗೂ ತಟ್ಟಿತು. ಆಗ ಹದಿಹರೆಯದ ಯುವ ಸಮುದಾಯವು ಕೋರ್ಸ್‌ನ ಮೇಲೆ ಇಟ್ಟಂತಹ ಭರವಸೆಗಳು ಕರಗುತ್ತಾ ಬಂದವು.

ಸರ್ಕಾರದ ಎಲ್ಲ ಪದವಿ ಕಾಲೇಜುಗಳಲ್ಲಿ ಜಾನಪದವನ್ನು ಕಲಿಕೆಯ ಒಂದು ವಿಷಯವನ್ನಾಗಿ ಆರಂಭಿಸಬೇಕು ಎಂಬ ಚಿಂತನೆ ಕೆಲವರಲ್ಲಿ ಇತ್ತು. ವಿಶ್ವವಿದ್ಯಾಲಯ ಆರಂಭವಾಗುವುದಕ್ಕಿಂತ ಮೊದಲು ಈ ವಿಷಯ ಎಲ್ಲ ಪದವಿ ಕಾಲೇಜುಗಳಲ್ಲಿ ಇರಬೇಕಾಗಿತ್ತು ಅಥವಾ ವಿಶ್ವವಿದ್ಯಾಲಯ ಆರಂಭವಾದ ಮೇಲಾದರೂ ಅದನ್ನು ಪದವಿ ಕಾಲೇಜುಗಳಲ್ಲಿ ಅಳವಡಿಸುವ ಕಾರ್ಯ ಆರಂಭವಾಗಬೇಕಿತ್ತು ಎಂಬ ವಾದ ಕೇಳಿಬಂದಿತ್ತು. ಹೀಗಾಗಿದ್ದರೆ ಈ ವಿಶ್ವವಿದ್ಯಾಲಯದ ಚಿಂತನ- ಮಂಥನ ಸಕ್ರಿಯವಾಗಿ ವಿಸ್ತರಿಸಲು ಸಾಧ್ಯವಾಗುತ್ತಿತ್ತು. ಹೀಗಾದಾಗ ಉದ್ಯೋಗ ಸೃಷ್ಟಿಯ ಬಗ್ಗೆಯೂ ವಿದ್ಯಾರ್ಥಿಗಳಲ್ಲಿ ಒಂದು ಭರವಸೆ ಮೂಡುತ್ತಿತ್ತು.



ಉದ್ಯೋಗ ಕುರಿತ ಇಂತಹ ಕೊರಗಿನಲ್ಲಿಯೇ ಮುನ್ನಡೆಯುತ್ತಿದ್ದ ವಿಶ್ವವಿದ್ಯಾಲಯಕ್ಕೆ ಚೈತನ್ಯ ತುಂಬಬೇಕೆಂಬ ಹಿತಾಸಕ್ತಿಯಿಂದ ಉದ್ಯೋಗಕ್ಕೆ ಭರವಸೆದಾಯಿ ಆಗಬಹುದಾದ ವಿಭಾಗಗಳನ್ನು ಆರಂಭಿಸಲಾಯಿತು. ಕನ್ನಡ ಮತ್ತು ಜಾನಪದ, ಇಂಗ್ಲಿಷ್, ಅರ್ಥಶಾಸ್ತ್ರ, ಸಮಾಜಶಾಸ್ತ್ರ, ಸಮಾಜಕಾರ್ಯ (ಎಂಎಸ್‌ಡಬ್ಲ್ಯು), ಪ್ರದರ್ಶನ ಕಲೆ (ಎಂಪಿಎ), ದೃಶ್ಯಕಲೆ (ಎಂವಿಎ) ವಿಭಾಗಗಳು ಆರಂಭವಾಗಿರುವುದು ಈ ಹಿನ್ನೆಲೆಯಲ್ಲಿಯೇ. ಇವು 2018-19ನೇ ಶೈಕ್ಷಣಿಕ ವರ್ಷದಿಂದ ಆರಂಭಗೊಂಡು ಕಾರ್ಯನಿರ್ವಹಿಸುತ್ತಿವೆ.

ಇಂತಹ ಸಂದರ್ಭದಲ್ಲಿ ವಿಶ್ವವಿದ್ಯಾಲಯದ ಆಗುಹೋಗುಗಳ ಕುರಿತು ವಿಧಾನ ಪರಿಷತ್ತಿನಲ್ಲಿ ಚರ್ಚೆ ನಡೆದಿರುವುದು ಸ್ವಾಗತಾರ್ಹ. ಆದರೆ ಇಲ್ಲಿನ ಶೈಕ್ಷಣಿಕ ವಾತಾವರಣ ಗಟ್ಟಿಗೊಂಡು ಅದು ಹೆಮ್ಮರವಾಗಲಿ ಎಂಬ ಆಶಯಕ್ಕೆ ಪೂರಕವಾಗಿ ಇಂತಹ ಚರ್ಚೆಗಳು ಸಾಗಬೇಕು. ಕೋರ್ಸ್‌ಗಳ ಉಪಯುಕ್ತತೆ ಕುರಿತು, ಅವುಗಳನ್ನು ಪೂರೈಸಿದವರಿಗೆ ಉದ್ಯೋಗ ಅವಕಾಶ ದೊರಕಿಸಿಕೊಡುವ ಮಾರ್ಗೋಪಾಯಗಳ ಕುರಿತು ಅರ್ಥಪೂರ್ಣ ಚರ್ಚೆಗಳು, ಸಲಹೆ–ಸೂಚನೆಗಳು ಬಂದರೆ ಪ್ರಯೋಜನವಾದೀತು. ವಿಷಯ ಪರಿಣತರು ಈ ದಿಸೆಯಲ್ಲಿ ಬೆಳಕು ಚೆಲ್ಲಬೇಕು. ಸರ್ಕಾರವೇ ಆರಂಭಿಸಿದ ಈ ವಿಶ್ವವಿದ್ಯಾಲಯಕ್ಕೆ ಸಂಬಂಧಿಸಿದಂತೆ ಕೈಗೊಳ್ಳುವ ಯಾವುದೇ ನಿರ್ಣಯವು ಅದು ಮುಂದಡಿ ಇಡುವುದಕ್ಕೆ ಪ್ರೇರಕವಾಗಿ ಇರಬೇಕು ಎಂಬುದನ್ನು ಎಲ್ಲರೂ ನೆನಪಿನಲ್ಲಿ ಇಡಬೇಕು.

ವಾಚಕರ ವಾಣಿ

ಮತದಾರರಿಗೆ ಹೀಗೊಂದು ಶಿಕ್ಷೆ...

ಸುಪ್ರೀಂ ಕೋರ್ಟ್ ಆದೇಶದಂತೆ ಬೀದಿ ಶುನಕದ (ನಾಯಿ) ಕಡಿತಕ್ಕಾಗಿ ಅನ್ನ ಹಾಕಿದವರಿಗೇ ಶಿಕ್ಷೆ ಆಗುವುದಾದರೆ, ಮತದಾರರನ್ನು ಗಾಸಿಗೊಳಿಸಿ ಗೆಲುವಿನ ಸಮೇತ ಬೇರೆ ಪಕ್ಷ ಸೇರುವ ಶಾಸಕರ ಕೃತ್ಯಕ್ಕೂ ಮತದಾರರಿಗೇ ಶಿಕ್ಷೆ ನೀಡಬೇಕು. ಏಕೆಂದರೆ, ಅಲ್ಲಿ ಆ ಪ್ರಾಣಿ ಮುಂದೊಂದು ದಿನ ಕಚ್ಚುವುದೆಂದು ಭಾವಿಸದೆ ಅನ್ನ ಹಾಕಿ ತಪ್ಪು ಮಾಡಿದವರೇ, ಇಲ್ಲಿ ಈ 'ಪ್ರಾಣಿ'ಯ ಮುಂದಿನ ನಡೆ ಅರಿಯದೆ ಮತ ಹಾಕಿ ತಪ್ಪು ಮಾಡಿರುತ್ತಾರೆ.

ತಾ.ಸಿ.ತಿಮ್ಮಯ್ಯ, ಬೆಂಗಳೂರು

'ಚೀತಾ ಫೈಟ್' ಈಗೇಕೆ?

ಚೀತಾ ಬಗೆಗಿನ ಟೀಕಾ ವಿನಿಮಯ ನೋಡಿ ಬಾಲ್ಯ ನೆನಪಾಯಿತು- ಆಗ ಒಂದು ಬೆಂಕಿಕಡ್ಡಿ ಪೊಟ್ಟಣಕ್ಕೆ ಚೀತಾ ಫೈಟ್ (Cheetah fight) ಎಂಬ ಹೆಸರಿತ್ತು. ನಮಗೆ ಅದರ ಮೇಲಿರುವುದು ಹುಲಿಯೋ ಚಿರತೆಯೋ ಗೊತ್ತಿರಲಿಲ್ಲ. ಈಗ ಚೀತಾವನ್ನು ವಿದೇಶದಿಂದ ತಂದ ಹಿರಿಮೆಯ ಬಗೆಗೆ ಜಗಳವಾಡುತ್ತಿದ್ದಾರೆ. ಬೆಂಕಿ ಸುಲಭವಾಗಿ ಹತ್ತುವುದು ಆಗ ಮುಖ್ಯವಾಗಿತ್ತು, ತಂದ ಪ್ರಾಣಿಗಳು ಉಳಿಯಬಲ್ಲವಾ ಎನ್ನುವುದು ಈಗ ಮುಖ್ಯ.

ವನ್ಯಮೃಗ ಸಂರಕ್ಷಣೆಯಲ್ಲಿ ವಲ್ಮೀಕ್ ಥಾಪರ್ ತುಂಬಾ ಅನುಭವಿ. ಅವರು ಟಿ.ವಿ. ಸಂದರ್ಶನವೊಂದರಲ್ಲಿ 'ನಾಯಿ, ಕತ್ತೆಕಿರುಬ, ಚಿರತೆಗಳು (leopard) ಚೀತಾಗಳನ್ನು ಕೊಲ್ಲಬಹುದು. ಅವು ವೇಗವಾಗಿ ಓಡಲು ತಕ್ಕ ಹುಲ್ಲುಗಾವಲು ಇಲ್ಲ. ಅವುಗಳ ಆಹಾರಕ್ಕಾಗಿ ಕೃಷ್ಣಮೃಗ, ಚಿಂಕಾರಾಗಳನ್ನು ಮೊದಲೇ ಸಾಕಬೇಕಿತ್ತು. ಚಿಕ್ಕ ಜಿಂಕೆಗಳನ್ನು ಬೇಟೆಯಾಡಲು ಹೋದಾಗ ಗಾಯಗೊಂಡರೆ ಸಾಯುವಷ್ಟು ಮೃದು ಪ್ರಾಣಿ ಅದು' ಎಂದಿರುವುದು ಗಮನಾರ್ಹ. ಹಿಂದೆ ರಾಜರು ಅವುಗಳನ್ನು ಸಾಕಿ, ತರಬೇತಿ ನೀಡಿ, ಜಿಂಕೆಗಳನ್ನು ಬೇಟೆಯಾಡಲು ಉಪಯೋಗಿಸುತ್ತಿದ್ದುದು ತಿಳಿದ ಸಂಗತಿಯೇ. ಒಟ್ಟಿನಲ್ಲಿ ಚೀತಾಗಳು ಪ್ರದರ್ಶನಕ್ಕಾಗಿ ಅಲ್ಲ. ಮೂರು ತಿಂಗಳ ಅವಧಿ ಅವು ವಾತಾವರಣಕ್ಕೆ ಹೊಂದಿಕೊಳ್ಳಲು ಸಾಕಾಗಲಾರದು.

ಎಚ್.ಎಸ್.ಮಂಜುನಾಥ, ಬೆಂಗಳೂರು

ಕರ್ನಾಟಕದಲ್ಲಿ ಪರಿವಾರ ರಾಜಕಾರಣ

ಪರಿವಾರ ರಾಜಕಾರಣ ಕುರಿತಂತೆ ನೆಹರೂ– ಗಾಂಧಿ ಕುಟುಂಬವನ್ನು ಇನ್ನಿಲ್ಲದಂತೆ ರಾಜ್ಯದಲ್ಲಿ ಟೀಕಿಸಲಾಗುತ್ತಿದೆ. ಹೀಗೆ ನೆಹರೂ– ಗಾಂಧಿ ಕುಟುಂಬದ ರಾಜಕಾರಣವನ್ನು ಟೀಕಿಸುವ ಬಿಜೆಪಿ ಮಂದಿಗೆ ತಮ್ಮ ಮನೆಯೊಳಗಣ ಕುಟುಂಬ ರಾಜಕಾರಣ ಕಾಣುವುದಿಲ್ಲ, ಏಕೆ? ಬಿಡಿಎ ವಸತಿ ಯೋಜನೆಗೆ ಸಂಬಂಧಿಸಿದಂತೆ ಮುಖಂಡ ಬಿ.ಎಸ್.ಯಡಿಯೂರಪ್ಪ, ಮಗ ವಿಜಯೇಂದ್ರ, ಅಳಿಯ ವಿರೂಪಾಕ್ಷಪ್ಪ ಯಮಕನಮರಡಿ, ಅವರ ಮಗ ಶಶಿಧರ ಮರಡಿ, ವಿರೂಪಾಕ್ಷಪ್ಪ ಅವರ ಅಳಿಯ ಸಂಜಯ್ ಹಾಗೂ ಇತರರ ಮೇಲೆ ಎಫ್‌ಐಆರ್ ದಾಖಲಾಗಿದೆ. ಇವರೆಲ್ಲ ಈಗ ಆರೋಪಿಗಳು.

ಈ ಆರೋಪ ಸಾಬೀತಾಗುತ್ತದೋ ಇಲ್ಲವೋ ಎಂಬುದು ಬೇರೆ ಸಂಗತಿ. ಆದರೆ ಕುಟುಂಬದ ತಂದೆ, ಮಗ, ಅಳಿಯ, ಮೊಮ್ಮಗ ಹೀಗೆ ಎಲ್ಲರೂ ಆರೋಪಿಗಳಾಗಿದ್ದಾರೆ. ಇದು ಕುಟುಂಬ, ಪರಿವಾರ ರಾಜಕಾರಣವಲ್ಲವೆ? ಇದರ ಬಗ್ಗೆ ಏಕೆ ಬಿಜೆಪಿ ಮಾತನಾಡುವುದಿಲ್ಲ? ಭ್ರಷ್ಟಾಚಾರದ ಆರೋಪ ಬಂದ ತಕ್ಷಣ ವಿರೋಧ ಪಕ್ಷದವರ ಮೇಲೆ ಐ.ಟಿ, ಇ.ಡಿ ದಾಳಿ ನಡೆಯುತ್ತದೆ. ಈ ಪ್ರಕರಣದಲ್ಲಿ ಅಂತಹ ಕ್ರಮ ಏಕಿಲ್ಲ? ಕುಟುಂಬ ರಾಜಕಾರಣದ ಪರಮೋಚ್ಚ ನಿದರ್ಶನವೆಂದರೆ ಯಡಿಯೂರಪ್ಪ ಕುಟುಂಬದ ರಾಜಕಾರಣವಾಗಿದೆ.

ಟಿ.ಆರ್. ಚಂದ್ರಶೇಖರ, ಬೆಂಗಳೂರು

ಪೊಲೀಸ್ ಕೈಪಿಡಿ: ಪರಿಷ್ಕರಣೆ ಯಾಕಿಲ್ಲ?

ಕರ್ನಾಟಕ ರಾಜ್ಯ ಪೊಲೀಸ್ ಶಿಸ್ತು ನಡವಳಿಕೆ ನಿಯಮಗಳ ತಿದ್ದುಪಡಿಗೆ ಇತ್ತೀಚೆಗೆ ಕ್ರಮ ಕೈಗೊಳ್ಳಲಾಗಿದೆ. ಅದರಲ್ಲಿನ ಕೆಲವು ಅಂಶಗಳನ್ನು ಗಮನಿಸಿದರೆ 'ಗುಬ್ಬಿ ಮೇಲೆ ಬ್ರಹ್ಮಾಸ್ತ್ರ' ಎನ್ನುವ ಮಾತು ಸೂಕ್ತವೆನಿಸುತ್ತದೆ. ಪೊಲೀಸ್ ಇಲಾಖೆಯಲ್ಲಿ ಮೇಲ್ಮಟ್ಟದ ಅಧಿಕಾರಿಗಳು ತಮ್ಮ ಸಿಬ್ಬಂದಿಯನ್ನು ನಿಯಂತ್ರಣದಲ್ಲಿ ಇಟ್ಟುಕೊಳ್ಳಲು ತೋರುತ್ತಿರುವ ಆಸಕ್ತಿಯನ್ನು ಸಾರ್ವಜನಿಕರ ಹಿತಾಸಕ್ತಿ ಅಡಗಿರುವ 1963ರ ಪೊಲೀಸ್ ಕೈಪಿಡಿ ಪರಿಷ್ಕರಣೆಗೆ ಏಕೆ ತೋರಿಸುತ್ತಿಲ್ಲ? ಈಗಲೂ ಪೊಲೀಸ್ ಕೈಪಿಡಿಯಲ್ಲಿ ಮಟ್ಕಾ ಜೂಜಾಟ, ಇಸ್ಪೀಟ್ ಜೂಜಾಟಗಳಿಗೆ ಕೇವಲ ₹ 100- 150 ದಂಡ ಇದೆ. ಇದನ್ನೇ ಬಂಡವಾಳ ಮಾಡಿಕೊಂಡಿರುವ ಆರೋಪಿಗಳು ನಿಯಂತ್ರಣಕ್ಕೆ ಸಿಗದೆ ತಮ್ಮ ಚಾಳಿಯನ್ನು ಮುಂದುವರಿಸುತ್ತಿದ್ದಾರೆ. ಆದರೆ ಇಲಾಖೆ ಅಧಿಕಾರಿಗಳು ಇಂತಹವುಗಳ ಬಗ್ಗೆ ಯೋಚಿಸದೇ ಸಿಬ್ಬಂದಿಯ ನಿಯಂತ್ರಣದ ಬಗ್ಗೆ ಯೋಚಿಸುತ್ತಿರುವುದರ ಉದ್ದೇಶ ಬೇರೆಯದೇ ಇದೆ.

ಮೊದಲು ಪೊಲೀಸ್ ಇಲಾಖೆಗೆ ಕಡಿಮೆ ವಿದ್ಯಾಭ್ಯಾಸದ ಮತ್ತು ಪ್ರಶ್ನಿಸುವ ಜ್ಞಾನಮಟ್ಟ ಇಲ್ಲದವರು ಸೇರ್ಪಡೆಯಾಗುತ್ತಿದ್ದರು. ಆದರೆ ಪ್ರಸ್ತುತ ಪದವೀಧರರು ಮತ್ತು ಸೇವಾ ನಿಯಮಗಳ ಬಗ್ಗೆ ಜ್ಞಾನ ಉಳ್ಳವರು ಸೇರ್ಪಡೆಯಾಗುತ್ತಿದ್ದಾರೆ. ಇದು ಕೆಲ ಅಧಿಕಾರಿಗಳಿಗೆ ಸಹಿಸಲಾಗದ ತುತ್ತಾಗಿದೆ. ದೇಶದಲ್ಲಿ ಮರಣದಂಡನೆಗೆ ಗುರಿಯಾದ ಅಪರಾಧಿಗೆ ಕ್ಷಮಾದಾನ ಕೋರಿ ಅರ್ಜಿ ಸಲ್ಲಿಸಲು ಅವಕಾಶ ಇರುವಾಗ, ಅಂತಹವರನ್ನು ನಿಯಂತ್ರಿಸುವ ಪೊಲೀಸರಿಗೆ ಅಚಾತುರ್ಯ ಘಟನೆಗಳಿಂದಾದ ಸಣ್ಣ ತಪ್ಪಿಗೆ ವೇತನ ಬಡ್ತಿ ಮತ್ತು ಮುಂಬಡ್ತಿಯನ್ನು ತಡೆಯುವ, ಕುಟುಂಬಕ್ಕೆ ಆರ್ಥಿಕ ನಷ್ಟ ಉಂಟು ಮಾಡುವ ಈ ಕೃತ್ಯಕ್ಕೆ ಮೇಲ್ಮನವಿ ಸಲ್ಲಿಸಲು ಅವಕಾಶ ಇಲ್ಲ ಎನ್ನುವುದು ತಂತ್ರಗಾರಿಕೆಯೇ ಸರಿ.

ತಿಮ್ಮೇಶ ಮುಸ್ಟೂರು, ಜಗಳೂರು

ಸಾವಿನಲ್ಲೂ ರಾಜಕೀಯ ತರವೇ?

ಬಳ್ಳಾರಿಯ 'ವಿಮ್ಸ್' ರೋಗಿಗಳ ಸಾವು ಸಹ ರಾಜಕೀಯಕ್ಕೆ ಬಳಕೆಯಾಗುತ್ತಿರುವುದು ಬೇಸರದ ಸಂಗತಿ. ಸರ್ಕಾರಿ ಆಸ್ಪತ್ರೆಗಳಲ್ಲಿ ಸಿಬ್ಬಂದಿಯ ನಿರ್ಲಕ್ಷ್ಯದಿಂದ ಮರಣ ಹೊಂದಿದ ರೋಗಿಗಳ ಕುಟುಂಬಗಳಿಗೆ ಪರಿಹಾರ, ನೆರವು ನೀಡುವ ಬದಲು ಸಾವಿನಲ್ಲೂ ರಾಜಕೀಯ ನಡೆಸುವುದು ನಾಚಿಕೆಗೇಡು. ರಾಜ್ಯದ ಬಹಳಷ್ಟು ಸರ್ಕಾರಿ ಆಸ್ಪತ್ರೆಗಳಲ್ಲಿ ಎದ್ದು ಕಾಣುವ ಅವ್ಯವಸ್ಥೆ, ಅಶಿಸ್ತಿಗೆ ಕಡಿವಾಣ ಹಾಕುವ ದಿಟ್ಟತನವನ್ನು ಮುಖ್ಯಮಂತ್ರಿ ಪ್ರದರ್ಶಿಸಲಿ.

ಕಾಡನೂರು ರಾಮಶೇಷ, ಬೆಂಗಳೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಆದಿವಾಸಿಗಳು ಹಾಗೂ ಅರಣ್ಯವಾಸಿಗಳ ಹಕ್ಕುಗಳನ್ನು ರಕ್ಷಿಸಲು ಜಾರಿಗೆ ತರಲಾಗಿದ್ದ 'ಅರಣ್ಯ (ಸಂರಕ್ಷಣಾ) ನಿಯಮ'ಗಳನ್ನು ಕೇಂದ್ರ ಸರ್ಕಾರ ಸದ್ದಿಲ್ಲದೇ ದುರ್ಬಲಗೊಳಿಸಿದೆ. ಅರಣ್ಯವನ್ನು ಕಡಿಯಲು ಅಥವಾ ಅರಣ್ಯ ಭೂಮಿಯಲ್ಲಿ ಯೋಜನೆಗಳನ್ನು ಕೈಗೆತ್ತಿಕೊಳ್ಳುವ ಮುನ್ನ, ಅಲ್ಲಿನ ಅರಣ್ಯವಾಸಿಗಳ ಅನುಮತಿ ಪಡೆಯಬೇಕು ಎಂಬ ಮಹತ್ವದ ನಿಯಮವನ್ನೇ ದುರ್ಬಲಗೊಳಿಸಲಾಗಿದೆ. ಆದಿವಾಸಿಗಳ ಹಕ್ಕುಗಳನ್ನು ರಕ್ಷಿಸಬೇಕಾದ ಸರ್ಕಾರ, ಅದರಿಂದ ನುಣುಚಿಕೊಂಡಿದೆ ಎಂಬ ಅಂಶಗಳು 'ರಿಪೋರ್ಟರ್ಸ್ ಕಲೆಕ್ಟಿವ್' ವರದಿಯಲ್ಲಿ ಬಹಿರಂಗವಾಗಿವೆ

ಅರಣ್ಯವಾಸಿಗಳ ಹಕ್ಕು ಮೊಟಕು

ಅರಣ್ಯ ಸಂರಕ್ಷಣಾ ನಿಯಮ ದುರ್ಬಲ: ಕಾಡು ಪರಭಾರೆ ಸಲೀಸು

• ತಪಸ್ಯಾ

ಕೇಂದ್ರ ಸರ್ಕಾರವು 2022ರ ಜೂನ್ 28ರಂದು ಅರಣ್ಯ (ಸಂರಕ್ಷಣೆ) ನಿಯಮಗಳಿಗೆ (ಎಫ್‌ಸಿಆರ್) ತಿದ್ದುಪಡಿ ತಂದಿತು. ಅರಣ್ಯ ಪ್ರದೇಶದಲ್ಲಿ ಹಮ್ಮಿಕೊಳ್ಳುವ ಯೋಜನೆಗಳನ್ನು ತಿರಸ್ಕರಿಸುವ ಅಧಿಕಾರ ಹೊಂದಿರುವ ಆದಿವಾಸಿಗಳು ಹಾಗೂ ಅರಣ್ಯವಾಸಿಗಳ ಒಪ್ಪಿಗೆ ಪಡೆಯದೇ, ಅರಣ್ಯವನ್ನು ಕೈಗಾರಿಕೆಗಳಿಗೆ ವರ್ಗಾಯಿಸಲು ನೆರವಾಗುವಂತೆ ತಿದ್ದುಪಡಿ ತರಲಾಗಿದೆ.

ಈ ಸುದ್ದಿ ಹೊರಬೀಳುತ್ತಿದ್ದಂತೆಯೇ ಕಾಂಗ್ರೆಸ್ ಮತ್ತು ಇತರ ವಿರೋಧ ಪಕ್ಷಗಳು ಕೇಂದ್ರ ಸರ್ಕಾರವನ್ನು ತರಾಟೆಗೆ ತೆಗೆದುಕೊಂಡವು. ಸರ್ಕಾರವು ಆಪ್ತರಿಗೆ ನೆರವಾಗುವ ಉದ್ದೇಶದಿಂದ ಅರಣ್ಯ ಕಾಯ್ದೆಯನ್ನು ನಾಶಪಡಿಸಲು ಮುಂದಾಗಿದ್ದು, ಆದಿವಾಸಿಗಳು ಹಾಗೂ ಅರಣ್ಯವಾಸಿಗಳ ಹಕ್ಕುಗಳನ್ನು ದುರ್ಬಲಗೊಳಿಸುತ್ತಿದೆ ಎಂದು ಕಾಂಗ್ರೆಸ್ ಆರೋಪಿಸಿತು. 2006ರಲ್ಲಿ ಯುಪಿಎ ಸರ್ಕಾರದ ಅವಧಿಯಲ್ಲಿ ಅರಣ್ಯ ಹಕ್ಕುಗಳ ಕಾಯ್ದೆ ಜಾರಿಯಾಗಿತ್ತು.

ಕಾಂಗ್ರೆಸ್ ಆರೋಪಕ್ಕೆ ಪ್ರತಿಕ್ರಿಯಿಸಿದ್ದ ಕೇಂದ್ರ ಪರಿಸರ, ಅರಣ್ಯ ಮತ್ತು ಹವಾಮಾನ ಬದಲಾವಣೆ ಇಲಾಖೆಯ ಸಚಿವ ಭೂಪೇಂದ್ರ ಯಾದವ್, ಕಾಯ್ದೆಯ ಯಾವುದೇ ನಿಯಮಗಳನ್ನು ದುರ್ಬಲಗೊಳಿಸುವ ಉದ್ದೇಶವಿಲ್ಲ ಎಂದಿದ್ದರು. ಯೋಜನೆಗಳಿಗೆ ಅಂತಿಮ ಒಪ್ಪಿಗೆ ನೀಡುವಲ್ಲಿ ಆಗುತ್ತಿದ್ದ ವಿಳಂಬವನ್ನು ತಪ್ಪಿಸುವುದರ ಜೊತೆಗೆ ಪ್ರಕ್ರಿಯೆಯನ್ನು ವ್ಯವಸ್ಥಿತಗೊಳಿಸಲು ತಿದ್ದುಪಡಿ ತರಲಾಗಿದೆ ಎಂದು ಅವರು ವಿವರಿಸಿದ್ದರು.



8. Current mechanism of process provided under the FC Rules, 2003 has also been scrutinized in the various high level forum, including in NITI AYOG, Group of Infrastructure etc. wherein it was desired that there is need to further streamline the process of forest clearance by introducing effective strategies and procedures and for eliminating the factors causing substantial impediments in the processes seeking approval under the FC Act. For instance, identification of lands for raising compensatory afforestation, field verification of the proposal, multiple queries etc have been reviewed as major bottlenecks of the process and accordingly, it has been desired to devise mechanism, by way of revising in the existing provisions and if possible by way of revamping the whole processes, to remove such bottlenecks.

ನೂತನ ಅರಣ್ಯ ಸಂರಕ್ಷಣೆ ನಿಯಮಗಳ ಸಮರ್ಥನೆಗೆ ಪರಿಸರ ಸಚಿವಾಲಯವು ನೀಡಿರುವ ಕಾರಣಗಳು

ಬುಡಕಟ್ಟು ಹಕ್ಕುಗಳನ್ನು ರಕ್ಷಿಸುವ ತನ್ನ ಹೊಣೆಗಾರಿಕೆಯಿಂದ ನುಣುಚಿಕೊಳ್ಳಲು ಅರಣ್ಯ ಸಚಿವಾಲಯವು ಎರಡು ವರ್ಷಗಳಿಂದ ಯತ್ನಿಸಿತ್ತು ಎಂಬ ಅಂಶವು 'ರಿಪೋರ್ಟರ್ಸ್ ಕಲೆಕ್ಟಿವ್'ಗೆ ಸಿಕ್ಕಿರುವ ಆಂತರಿಕ ದಾಖಲೆಗಳಿಂದ ತಿಳಿದುಬಂದಿದೆ.

ತಮ್ಮ ಭೂಮಿಯನ್ನು ಕೈಗಾರಿಕೆಗಳಿಗೆ ನೀಡಬೇಕಾದರೆ ಅಲ್ಲಿನ ಅರಣ್ಯವಾಸಿಗಳ ಒಪ್ಪಿಗೆ ಪಡೆಯುವುದು ಕಾಯ್ದೆಯಡಿ ಕಡ್ಡಾಯವಾಗಿತ್ತು. ಆದರೆ, ಕಂಪನಿಗಳು ಅರಣ್ಯವಾಸಿಗಳ ಒಪ್ಪಿಗೆ ಪಡೆಯದೇ ಅರಣ್ಯ ಭೂಮಿಯನ್ನು ಪಡೆಯುವ ವಿಧಾನವನ್ನು ಹೊಸ ತಿದ್ದುಪಡಿಗಳು ಸುಲಭಗೊಳಿಸಿವೆ.

ಉದ್ಯಮಗಳ ಪರವಾಗಿರುವ ಅಂಶಗಳಿಗೆ ತಿದ್ದುಪಡಿ ತರುವ ಮುನ್ನ, ಕಾಯ್ದೆಯ ನೋಡಲ್ ಸಚಿವಾಲಯವಾಗಿ ಕೆಲಸ ಮಾಡುತ್ತಿರುವ ಬುಡಕಟ್ಟು ವ್ಯವಹಾರಗಳ ಸಚಿವಾಲಯವನ್ನು ಪರಿಸರ ಸಚಿವಾಲಯ ಸಂಪರ್ಕಿಸಿಲ್ಲ. ಹೊಸ ನಿಯಮಗಳನ್ನು ರೂಪಿಸುವ ವೇಳೆ, ಅವುಗಳನ್ನು ಇನ್ನಷ್ಟು ದುರ್ಬಲಗೊಳಿಸಲು ಹಾಗೂ ಬುಡಕಟ್ಟು ಜನರ ಹಕ್ಕುಗಳ ವಿಚಾರವನ್ನು ನಿರ್ಲಕ್ಷಿಸಲು ಪರಿಸರ ಸಚಿವಾಲಯವು ಆರಂಭದಲ್ಲಿ ಮುಂದಾಗಿತ್ತು. ಕಾನೂನು ಸಚಿವಾಲಯವು ಈ ಬಗ್ಗೆ ಗಮನ ಸೆಳೆಯುವವರೆಗೂ ಸಚಿವಾಲಯ ಇದೇ ಉದ್ದೇಶ ಹೊಂದಿತ್ತು.

ಅರಣ್ಯ ಹಕ್ಕುಗಳನ್ನು ಎತ್ತಿಹಿಡಿದಿದ್ದ ಯುಪಿಎ

ವಸಾಹತುಶಾಹಿ ಆಳ್ವಿಕೆಯ ಸಂದರ್ಭದಲ್ಲಿ ಅರಣ್ಯವಾಸಿಗಳು ಮತ್ತು ಆದಿವಾಸಿಗಳಿಗೆ ಕಾಡುಗಳ ಮೇಲಿನ ಹಕ್ಕುಗಳು ಇರಲಿಲ್ಲ. ಆದಿವಾಸಿಗಳು ಮತ್ತು ಅರಣ್ಯವಾಸಿಗಳು ತಾವು ಪರಂಪರಾಗತವಾಗಿ ಜೀವಿಸಿದ್ದ ಕಾಡುಗಳ ಮೇಲಿನ ಹಕ್ಕುಗಳಿಂದ ವಂಚಿತರಾಗಿದ್ದರು. ಸ್ವಾತಂತ್ರ್ಯ ಬಂದು ಹಲವು ದಶಕಗಳ ನಂತರವೂ ಸರ್ಕಾರವು ಇವರನ್ನು 'ಒತ್ತುವರಿದಾರರು' ಎಂದೇ ಪರಿಗಣಿಸಿತ್ತು. ಅರಣ್ಯ ಸಂರಕ್ಷಣೆ, ಕೈಗಾರಿಕಾ ಯೋಜನೆ ಅಥವಾ ಗಣಿ ಅಭಿವೃದ್ಧಿಯ ಹೆಸರಿನಲ್ಲಿ ಅವರನ್ನು ಸಾಮೂಹಿಕವಾಗಿ ಒಕ್ಕಲೆಬ್ಬಿಸಲಾಗುತ್ತಿತ್ತು.

ಆದಿವಾಸಿಗಳು ಮತ್ತು ಅರಣ್ಯವಾಸಿಗಳನ್ನು ಹಿಂಸಾತ್ಮಕವಾಗಿ ತೆರವು ಮಾಡುವುದರ ವಿರುದ್ಧ ದೊಡ್ಡ ಕೂಗು ಇತ್ತು. ಹಾಗಾಗಿ, ಹಲವು ಒತ್ತಡ ಗುಂಪುಗಳ ಪ್ರಬಲ ವಿರೋಧದ ಮಧ್ಯೆಯೂ ಯುಪಿಎ ಸರ್ಕಾರವು 2006ರಲ್ಲಿ ಅರಣ್ಯ ಹಕ್ಕುಗಳ ಕಾಯ್ದೆಯನ್ನು (ಎಫ್‌ಆರ್‌ಎ) ಜಾರಿಗೆ ತಂದಿತು.

ಬುಡಕಟ್ಟು ವ್ಯವಹಾರಗಳ ಸಚಿವಾಲಯದ ಅಡಿಯಲ್ಲಿ ಎಫ್‌ಆರ್‌ಎಯನ್ನು ಜಾರಿಗೆ ತರಲಾಗಿತ್ತು. ಆದಿವಾಸಿಗಳು ಮತ್ತು 75 ವರ್ಷಗಳಿಗಿಂತ ಹೆಚ್ಚು ಅಥವಾ ಮೂರು ತಲೆಮಾರಿಗಿಂತ ಹೆಚ್ಚು ಅರಣ್ಯದಲ್ಲಿ ವಾಸಿಸುತ್ತಿರುವ ಬುಡಕಟ್ಟುಯೇತರ ಅರಣ್ಯವಾಸಿಗಳ ಅರಣ್ಯ ಹಕ್ಕುಗಳನ್ನು ಈ ಕಾಯ್ದೆ ಎತ್ತಿಹಿಡಿಯಿತು. 'ಯಾವುದೇ ಕೈಗಾರಿಕೆಗಳಿಗೆ ಕಾಡನ್ನು ಕಡಿಯಲು ಪರವಾನಗಿ ನೀಡುವುದಕ್ಕೂ ಮುನ್ನ ಸಂಬಂಧಿತ ಗ್ರಾಮಸಭೆಗಳ ಮೂಲಕ ಆದಿವಾಸಿಗಳು ಮತ್ತು ಅರಣ್ಯವಾಸಿಗಳ ಲಿಖಿತ ಒಪ್ಪಿಗೆಯನ್ನು ಪಡೆದುಕೊಳ್ಳಬೇಕು' ಎಂಬುದನ್ನು ಕಡ್ಡಾಯ ಮಾಡಲಾಯಿತು. ಆದರೆ ಪರಿಸರ ಸಚಿವಾಲಯದ ಎಫ್‌ಸಿಎ ಕಾಯ್ದೆಯು ಅಧಿಕಾರಶಾಹಿಯ ವಿವೇಚನೆಯನ್ನು ಆಧರಿಸಿದ ಪ್ರಕ್ರಿಯೆಯ ಮೂಲಕ ಕೈಗಾರಿಕೆಗಳಲ್ಲಿ ಅರಣ್ಯವನ್ನು ಕಡಿಯಲು ಅನುಮತಿ ನೀಡುತ್ತಿತ್ತು.

ಈ ಎರಡೂ ಕಾಯ್ದೆಗಳ ನಡುವೆ ಇದ್ದ ವಿರೋಧಾಭಾಸವನ್ನು ಹೋಗಲಾಡಿಸಲು ಯುಪಿಎ ಸರ್ಕಾರವು 2009ರಲ್ಲಿ ಹೊಸ ಆದೇಶವನ್ನು ಹೊರಡಿಸಿತು. 'ಎಫ್‌ಆರ್‌ಎ ಅಡಿ ನೀಡಲಾದ ಅರಣ್ಯ ಹಕ್ಕುಗಳನ್ನು ಪ್ರತಿಯೋಜನೆಯಲ್ಲೂ ಅನುಷ್ಠಾನಕ್ಕೆ ತರಲಾಗಿದೆ ಮತ್ತು ಎಲ್ಲಾ ಪ್ರಕ್ರಿಯೆಗಳನ್ನು ಪೂರೈಸಲಾಗಿದೆ ಎಂದು ರಾಜ್ಯ ಸರ್ಕಾರವು ದೃಢಪಡಿಸಿದ ನಂತರವಷ್ಟೇ, ಪರಿಸರ ಸಚಿವಾಲಯವು ಕಾಡನ್ನು ಕಡಿಯಲು ಕೈಗಾರಿಕೆಗಳಿಗೆ ಅನುಮತಿ ನೀಡಬೇಕು' ಎಂದು ಸರ್ಕಾರವು ತನ್ನ ಆದೇಶದಲ್ಲಿ ಸೂಚಿಸಿತು.

2019ರಿಂದಲೇ ಆರಂಭ

ಖಾಸಗಿ ವಲಯದವರಿಗೆ ಸುಲಭವಾಗಿ ಪರವಾನಗಿ ಸಿಗುವಂತಾಗಬೇಕಾದರೆ, ಅರಣ್ಯ ಸಂರಕ್ಷಣೆ ಕಾಯ್ದೆ ಮತ್ತು ಅರಣ್ಯ ಕಡಿಯಲು ಪರವಾನಗಿ ನೀಡಿಕೆ ನಡುವೆ ಯಾವ ಸಂಬಂಧವೂ ಇರಬಾರದು ಎಂಬ ಸಚಿವಾಲಯದ ಉದ್ದೇಶ 2019ರಿಂದಲೇ ಕೆಲಸ ಮಾಡಲು ಆರಂಭಿಸಿತ್ತು. ಸಂಪುಟ ಕಾರ್ಯಾಲಯದ ಸಭೆಗಳಲ್ಲಿ ಈ ಅಂಶ ಮುಖ್ಯವಾಗಿ ಚರ್ಚೆಯಾಗಿತ್ತು ಎಂಬುದೂ ಪರಿಸರ ಸಚಿವಾಲಯದ ದಾಖಲೆಗಳಲ್ಲಿ ಉಲ್ಲೇಖವಾಗಿದೆ. 'ಉದಾಹರಣೆಗೆ, ಭೂಮಿ ಗುರುತಿಸುವಿಕೆ, ಸ್ಥಳ ಪರಿಶೀಲನೆ ಮೊದಲಾದ ಅಂಶಗಳು ಮುಖ್ಯ ಅಡೆತಡೆಗಳಾಗಿವೆ. ಅರಣ್ಯ ಕಾಯ್ದೆಯಡಿ ಇವುಗಳಿಗೆ ಅನುಮತಿ ನೀಡುವ ಪ್ರಕ್ರಿಯೆ ತೀರಾ ಸಂಕೀರ್ಣವಾಗಿರುವುದರಿಂದ ಸಾಕಷ್ಟು ವಿಳಂಬವಾಗುತ್ತಿದೆ' ಎಂಬ ಅಂಶವು ಪರಿಸರ ಸಚಿವಾಲಯದ ದಾಖಲೆಗಳಲ್ಲಿ ಇದೆ.

ಆದಿವಾಸಿ ಸಮ್ಮತಿಗಿಲ್ಲ ಕಿಮ್ಮತ್ತು

ಸಂಪುಟ ಕಾರ್ಯದರ್ಶಿ, ಕಲ್ಲಿದ್ದಲು, ವಿದ್ಯುತ್, ಪರಿಸರ ಸಚಿವಾಲಯದ ಅಧಿಕಾರಿಗಳಿದ್ದ ಕಾರ್ಯದರ್ಶಿಗಳ ಸಮಿತಿಯ ಸಭೆಯು 2019ರ ಸೆಪ್ಟೆಂಬರ್‌ನಲ್ಲಿ ನಡೆದಿತ್ತು. ಅರಣ್ಯ (ಸಂರಕ್ಷಣೆ) ನಿಯಮಗಳ ಅಡಿಯಲ್ಲಿ ಅನುಮೋದನೆಗಳನ್ನು ನೀಡಲು ಇರುವ 'ಪ್ರಮುಖ ತೊಡಕು'ಗಳ ಕುರಿತು ಈ ಸಭೆಯಲ್ಲಿ ಚರ್ಚೆ ನಡೆದಿತ್ತು.

ಅರಣ್ಯ ಕಡಿಯಲು ಅನುಮೋದನೆ ನೀಡುವುದಕ್ಕಾಗಿ ಅರಣ್ಯ ಹಕ್ಕುಗಳ ಕಾಯ್ದೆಯಿಂದ ಅರಣ್ಯ (ಸಂರಕ್ಷಣೆ) ನಿಯಮಗಳನ್ನು ಬೇರ್ಪಡಿಸುವ ಪ್ರಕ್ರಿಯೆ ನಡೆಯುತ್ತಿದೆ ಎಂದು ಪರಿಸರ ಸಚಿವಾಲಯವು ಹೇಳಿತ್ತು. ಬುಡಕಟ್ಟು ವ್ಯವಹಾರಗಳ ಸಚಿವಾಲಯದ ಜೊತೆಗೆ ಸಮಾಲೋಚನೆ ನಡೆಸಿದ ಬಳಿಕವೇ ಈ ಬದಲಾವಣೆಗಳನ್ನು ಮಾಡಬೇಕು ಎಂದು ಆ ಸಂದರ್ಭದಲ್ಲಿ ಪರಿಸರ ಸಚಿವಾಲಯಕ್ಕೆ ಹೇಳಲಾಗಿತ್ತು.

ಆದರೆ, ಕಾಡು ಕಡಿಯುವುದಕ್ಕೆ ಸಂಬಂಧಿಸಿದ ನಿಯಮಗಳನ್ನು ಬದಲಾಯಿಸುವಾಗ ಬುಡಕಟ್ಟು ವ್ಯವಹಾರಗಳ ಸಚಿವಾಲಯವನ್ನು ಸಂಪರ್ಕಿಸಿಲ್ಲ ಎಂದು ದಾಖಲೆಗಳು ಹೇಳುತ್ತವೆ. ಬದಲಿಗೆ, ರೈಲ್ವೆ, ನಾಗರಿಕ ವಿಮಾನಯಾನ, ರಸ್ತೆ ಸಾರಿಗೆ ಮತ್ತು ಹೆದ್ದಾರಿ, ಇಂಧನ, ಉಕ್ಕು, ಕಲ್ಲಿದ್ದಲು, ಪೆಟ್ರೋಲಿಯಂ ಹಾಗೂ ಗಣಿಗಾರಿಕೆ ಸಚಿವಾಲಯಗಳ ಜತೆಗೆ ಸಮಾಲೋಚನೆ ನಡೆಸಲಾಗಿದೆ. ಹಾಗೆಯೇ ನೀತಿ ಆಯೋಗದ ಜತೆಗೂ ಸಮಾಲೋಚನೆ ನಡೆದಿದೆ.

ಕರಡು ನಿಯಮಗಳನ್ನು ಕಾನೂನು ಸಚಿವಾಲಯಲಕ್ಕೆ ಪರಾಮರ್ಶೆಗಾಗಿ ಕಳುಹಿಸಲಾಗಿತ್ತು. ಅರಣ್ಯ ಹಕ್ಕುಗಳ ಕಾಯ್ದೆ ಪಾಲನೆಯಾಗಿದೆ ಎಂಬುದನ್ನು ಖಾತರಿಪಡಿಸಿಕೊಳ್ಳುವ ಹೊಣೆಗಾರಿಕೆಯಿಂದ ತಪ್ಪಿಸಿಕೊಳ್ಳುವುದಕ್ಕಾಗಿ ಎಲ್ಲವನ್ನೂ ಸಾರ್ವತ್ರಿಕಗೊಳಿಸುವ ಪದಗಳನ್ನು ಸಚಿವಾಲಯವು ಬಳಸಬಾರದು ಎಂದು ಕಾನೂನು ಸಚಿವಾಲಯ ಹೇಳಿತ್ತು.

ಕಾಡು ಕಡಿಯುವುದಕ್ಕೆ ಸಂಬಂಧಿಸಿದ ನಿಯಮಗಳನ್ನು ಇನ್ನಷ್ಟು ದುರ್ಬಲಗೊಳಿಸಲು ಪರಿಸರ ಸಚಿವಾಲಯವು ಆರಂಭದಲ್ಲಿ ಬಯಸಿತ್ತು. ಅನುಮೋದನೆಗೆ ಇದ್ದ ಎರಡು ಹಂತಗಳ ಪ್ರಕ್ರಿಯೆಯನ್ನು ಒಂದೇ ಹಂತಕ್ಕೆ ಇಳಿಸಲು ಬಯಸಿತ್ತು. ಯೋಜನೆಯನ್ನು ಅಭಿವೃದ್ಧಿಪಡಿಸುವ ಸಂಸ್ಥೆಯು ಅದರ ಮೇಲೆ ಹೇರಲಾದ ಎಲ್ಲ ಷರತ್ತುಗಳನ್ನು ಪಾಲಿಸಿದೆಯೇ ಎಂಬುದನ್ನು ಪರಿಶೀಲಿಸುವುದನ್ನು ರಾಜ್ಯಕ್ಕೆ ಮಾತ್ರ ವಹಿಸಲು ನಿರ್ಧರಿಸಿತ್ತು.

'ಎರಡನೇ ಹಂತದ ಅನುಮೋದನಾ ಪ್ರಕ್ರಿಯೆಯನ್ನು ರಾಜ್ಯ ಸರ್ಕಾರಕ್ಕೆ ವಹಿಸಬೇಕು' ಎಂಬ ಉದ್ದೇಶವನ್ನು ಪರಿಸರ ಸಚಿವಾಲಯವು ಹೊಂದಿತ್ತು ಎಂಬುದನ್ನು ಕಡತ ಟಿಪ್ಪಣಿಯೊಂದು ಸೂಚಿಸುತ್ತದೆ. ಅರಣ್ಯ ಹಕ್ಕುಗಳ ಕಾಯ್ದೆಯು ಸೇರಿದಂತೆ ಎಲ್ಲ ಕಾಯ್ದೆಗಳನ್ನು ಯೋಜನಾ ಅಭಿವೃದ್ಧಿ ಸಂಸ್ಥೆಯು ಪಾಲಿಸಿದೆಯೇ ಎಂಬುದನ್ನು ರಾಜ್ಯ ಸರ್ಕಾರವು ಪರಿಶೀಲನೆಗೆ ಒಳಪಡಿಸುವುದಕ್ಕೆ ಮೊದಲೇ ಕಾಡು ಕಡಿಯುವುದಕ್ಕಾಗಿ ಕೇಂದ್ರಕ್ಕೆ ಪರವಾನಗಿ ಶುಲ್ಕ ಪಾವತಿಸುವುದಕ್ಕೆ ಅವಕಾಶ ಒದಗಿಸಲಾಗಿದೆ.

ಒಂದೇ ಹಂತದ ಅನುಮೋದನೆ ಪ್ರಕ್ರಿಯೆಯು 'ಅಸ್ಪಷ್ಟ ಮತ್ತು ಅನುಮಾನಕ್ಕೆ ಕಾರಣವಾಗುವಂತಿದ್ದು, ಭವಿಷ್ಯದಲ್ಲಿ ಸಮಸ್ಯೆಗೆ ಕಾರಣವಾಗಬಹುದು' ಎಂದು ಕಾನೂನು ಸಚಿವಾಲಯವು ಹೇಳಿದ ಬಳಿಕ ಪರಿಸರ ಸಚಿವಾಲಯವು ಈ ಬದಲಾವಣೆ ಮಾಡಿಕೊಂಡಿತು.

ಅನುಮತಿ ಪಡೆಯಲೇಬೇಕು ಎಂದಿದ್ದ ವೇದಾಂತ ತೀರ್ಪು

'**ಗ್ರಾಮಸಭೆಗಳ ಮೂಲಕ** ಆದಿವಾಸಿಗಳು ಮತ್ತು ಅರಣ್ಯವಾಸಿಗಳ ಲಿಖಿತ ಒಪ್ಪಿಗೆಯನ್ನು ಪಡೆದುಕೊಳ್ಳಬೇಕು' ಎಂಬುದನ್ನು ಸುಪ್ರೀಂ ಕೋರ್ಟ್ ಸಹ 2013ರ ತನ್ನ ತೀರ್ಪಿನಲ್ಲಿ ಎತ್ತಿಹಿಡಿದಿತ್ತು. ಈ ತೀರ್ಪು ವೇದಾಂತ ತೀರ್ಪು ಎಂದೇ ಗುರುತಿಸಿಕೊಂಡಿದೆ. ಒಡಿಶಾದ ನಿಯಮಗಿರಿ ಪರ್ವತ ಪ್ರದೇಶದಲ್ಲಿ ಬಾಕ್ಸೈಟ್ ಗಣಿಗಾರಿಕೆ ನಡೆಸಲು ಯೋಜನೆ ರೂಪಿಸಿತ್ತು. ಆದರೆ ಈ ಯೋಜನೆಯನ್ನು ಸಂಬಂಧಿತ 12 ಗ್ರಾಮಸಭೆಗಳು ತಿರಸ್ಕರಿಸಿದ್ದವು. ಗ್ರಾಮಸಭೆಗಳ ನಿರ್ಧಾರವನ್ನು ಸುಪ್ರೀಂ ಕೋರ್ಟ್ ಎತ್ತಿಹಿಡಿದಿತ್ತು.

ಇಂತಹ ಯೋಜನೆಗಳಿಗೆ ಸಂಬಂಧಿಸಿದಂತೆ ಎಫ್‌ಸಿಆರ್ ಅಡಿ ಅನುಮತಿ ಪಡೆಯುವ ಪ್ರಕ್ರಿಯೆಯನ್ನು ಪರಿಸರ ಸಚಿವಾಲಯವು 2017ರಲ್ಲಿ ಬದಲಿಸಿತು. ಕಾಡನ್ನು ಕಡಿಯಲು ಬಯಸುವ ಯೋಜನಾ ಅಭಿವೃದ್ಧಿದಾರರು ಅದಕ್ಕಾಗಿ ಮೊದಲು ರಾಜ್ಯ ಸರ್ಕಾರಕ್ಕೆ ಅರ್ಜಿ ಸಲ್ಲಿಸಬೇಕು ಎಂದು ಬದಲಾವಣೆ ತರಲಾಯಿತು. ಆಗ ಸಂಬಂಧಿತ ಜಿಲ್ಲೆಯ ಜಿಲ್ಲಾಧಿಕಾರಿಯು, ಸಂಬಂಧಿತ ಗ್ರಾಮಸಭೆಗಳ ಮೂಲಕ ಆದಿವಾಸಿಗಳು ಮತ್ತು ಅರಣ್ಯವಾಸಿಗಳ ಒಪ್ಪಿಗೆ ಪಡೆಯುವ ಪ್ರಕ್ರಿಯೆಗೆ ಚಾಲನೆ ನೀಡುತ್ತಿದ್ದರು. ಜತೆಗೆ ಅರಣ್ಯ ಹಕ್ಕುಗಳ ಕಾಯ್ದೆಯು ಪಾಲನೆಯಾಗುವುದನ್ನು ಅವರು ದೃಢಪಡಿಸಿಕೊಳ್ಳಬೇಕಿತ್ತು. ಪರಿಸರ ಸಚಿವಾಲಯವು ಯಾವುದೇ ಯೋಜನೆಗೆ ಮೊದಲ ಹಂತದಲ್ಲಿ ತಾತ್ವಿಕ ಒಪ್ಪಿಗೆ ನೀಡುವಷ್ಟರಲ್ಲೇ ಈ ಎಲ್ಲಾ ಪ್ರಕ್ರಿಯೆಗಳು ಪೂರ್ಣಗೊಳ್ಳಬೇಕಿತ್ತು. ಆನಂತರವೇ ಪರಿಸರ ಸಚಿವಾಲಯವು ಎರಡನೇ ಹಂತದಲ್ಲಿ ಅಂತಿಮ ಒಪ್ಪಿಗೆ ಪಡೆಯಬೇಕಿತ್ತು.

ಆದರೆ ಈ ಎರಡು ಹಂತದ ಪ್ರಕ್ರಿಯೆಗಳನ್ನು ಈಗ ಕೈಬಿಡಲಾಗಿದೆ. ಪರಿಸರ ಸಚಿವಾಲಯವು ಯೋಜನಾ ಅಭಿವೃದ್ಧಿದಾರರಿಗೆ ಕಾಡು ಕಡಿಯಲು ಅನುಮತಿ ನೀಡುತ್ತದೆ ಮತ್ತು ಶುಲ್ಕವನ್ನು ಸಂಗ್ರಹಿಸುತ್ತದೆ.

ತಪಸ್ಯಾ ಅವರು ರಿಪೋರ್ಟರ್ಸ್ ಕಲೆಕ್ಟಿವ್‌ನ ವರದಿಗಾರ್ತಿ. ಲೇಖನದ ಇಂಗ್ಲಿಷ್ ಆವೃತ್ತಿಯು 'ಆರ್ಟಿಕಲ್14' ಪೋರ್ಟಲ್‌ನಲ್ಲಿ ಪ್ರಕಟವಾಗಿದೆ

ಪ್ರಜಾವಾಣಿ **ಪ್ರಜಾಧ್ವನಿ** ಜನರ ಮನದಾಳದ ಮಾತು



ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಮಹೇಶ ಜೋಶಿ ತಮಗೆ ರಾಜತಾಂತ್ರಿಕ ಪಾಸ್‌ಪೋರ್ಟ್ ಬೇಕು ಎಂದು ಮನವಿ ಮಾಡಿರುವುದು ಸರಿಯೇ?

ನಿಮ್ಮ ಅನಿಸಿಕೆ ಹೌದು ಆಗಿದ್ದರೆ PVA, ಇಲ್ಲ ಆಗಿದ್ದರೆ PVB ಎಂದು ಟೈಪ್ ಮಾಡಿ ಇಂದು ಸಂಜೆ 5ರೊಳಗೆ 92460 44440ಗೆ SMS ಮಾಡಿ

ವೇದವ್ಯಾಸರ ಶಿವಪುರಾಣಸಾರ — ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ — 230

ಹರನಲ್ಲಿ ದೇವತೆಗಳ ಮೊರೆ

ದೇವತೆಗಳಿಗೆ ತಾರಕನಿಂದ ತೊಂದರೆಯಾಗದೆಂದು ಭರವಸೆ ನೀಡಿದ ಶಿವ ಮತ್ತೆ ಧ್ಯಾನಾಸಕ್ತನಾದ. ಶಿವನ ಗಣಗಳೆಲ್ಲವೂ ಮೊದಲಿನಂತೆ ಅವನ ಸುತ್ತಲೂ ನೆರೆದು, ರಕ್ಷಣಾಭಾರ ಹೊತ್ತವು. ಜಗತ್ಕರ್ತೃವಾದ ಶಿವನು ಮತ್ತೆ ಧ್ಯಾನಮಗ್ನನಾದುದು ದೇವತೆಗಳೆಲ್ಲರೂ ಗೊಂದಲಕ್ಕೊಳಗಾದರು. ಶಿವನೊಂದಿಗೆ ಇನ್ನೂ ಹಲವು ವಿಷಯಗಳನ್ನು ಚರ್ಚಿಸಬೇಕಿತ್ತು. ಅಷ್ಟರಲ್ಲಿ ಶಿವ ಧ್ಯಾನದಲ್ಲಿ ತಲ್ಲೀನನಾಗಿದ್ದು ದೇವತೆಗಳ ನಿಯೋಗಕ್ಕೆ ನಿರಾಸೆಯಾಯಿತು. ಮತ್ತೆ ಶಿವನನ್ನು ಧ್ಯಾನದಿಂದ ಎಬ್ಬಿಸಲು ದೇವತೆಗಳಿಗೆ ಭಯವಾಯಿತು. ಇದಕ್ಕಾಗಿ ದೇವತೆಗಳು ನಂದಿಯ ಸಲಹೆ ಕೇಳಿದರು, 'ಶಂಕರ ವೈರಾಗ್ಯದಿಂದ ಧ್ಯಾನದಲ್ಲಿ ಕುಳಿತಿದ್ದಾನೆ. ಶಿವನೊಂದಿಗೆ ಕೆಲ ವಿಷಯ ನಿವೇದಿಸಿಕೊಳ್ಳುವ ಬಗೆ ಹೇಗೆ? ನೀನು ಶಂಕರನ ಆಪ್ತಮಿತ್ರ, ಪವಿತ್ರ ಸೇವಕ, ಎಲ್ಲವನ್ನೂ ಬಲ್ಲ ಪ್ರಮಥಶ್ರೇಷ್ಠ. ಶಂಕರನನ್ನು ಯಾವ ಉಪಾಯದಿಂದ ಒಲಿಸಿಕೊಳ್ಳಬಹುದೆಂಬುದನ್ನು ಹೇಳು' ಎಂದು ವಿನಯದಿಂದ ಕೋರಿದರು.

ನಂದಿಗೆ ದೇವತೆಗಳ ಮೇಲೆ ಕನಿಕರವಾಗಿ, 'ದೇವತೆಗಳೇ ಮತ್ತು ಮುನಿಗಳೇ. ಶಿವನು ಮದುವೆಯಾಗಲೇಬೇಕೆಂಬ ಇಚ್ಛೆ ನಿಮಗಿದ್ದರೆ, ಭಕ್ತಿಯಿಂದ ಶಿವನನ್ನು ಚೆನ್ನಾಗಿ ಸ್ತುತಿಸಿರಿ. ಮಹಾದೇವನು ಅಸಾಧಾರಣವಾದ ಭಕ್ತಿಗೆ ವಶನಾಗುವನು. ಸದ್ಭಕ್ತಿಯಿಂದ ಸ್ತುತಿಸುವವರ ಕೋರಿಕೆಯನ್ನು ನೆರವೇರಿಸುವನು. ನೀವೆಲ್ಲ ಸದ್ಭಕ್ತಿಯಿಂದ ಶಿವನ ಸ್ತುತಿ ಮಾಡಿರಿ. ಅದು ಸಾಧ್ಯವಿಲ್ಲದಿದ್ದರೆ ಬಂದಂತೆ ಹಿಂತಿರುಗಿ ನಡೆಯಿರಿ' ಎಂದ ನಿಷ್ಠೂರವಾಗಿ.

ನಂದಿಯ ಮಾತನ್ನು ಕೇಳಿ ದೇವತೆಗಳು 'ನೀನು ಹೇಳಿದಂತೆಯೇ ಮಾಡುತ್ತೇವೆ. ನೀನು ನಮ್ಮ ಮಾರ್ಗದರ್ಶಿ ಮಾತ್ರವಲ್ಲ. ನಮ್ಮ ಹಿತೈಷಿಯೂ ಹೌದು' ಎಂದು ನಂದಿಯ ಸಲಹೆಯನ್ನು ಅಂಗೀಕರಿಸಿ, ಮಹಾಭಕ್ತಿಯಿಂದ ಶಿವನನ್ನು ಸ್ತುತಿಸತೊಡಗಿದರು. 'ದೇವದೇವನೂ ಕರುಣಾಸಮುದ್ರನೂ ಆದ ಓ ಮಹಾದೇವ, ಓ ಪರಮೇಶ್ವರ, ನಾವು ಮಹಾದುಃಖಕ್ಕೆ ಸಿಲುಕಿ ನಿನ್ನ ಶರಣು ಬಂದಿರುವೆವು. ನಮ್ಮನ್ನು ಉದ್ಧರಿಸುವವನಾಗು' ಎಂದು ಪರಿಪರಿಯಾಗಿ ಸ್ತೋತ್ರಮಾಡಿದರು.

ಹೀಗೆ ದೇವತೆಗಳೆಲ್ಲರೂ ಭಕ್ತಿಯುಕ್ತರಾಗಿ ಸ್ತುತಿಸಿದರು. ಬ್ರಹ್ಮ ಮತ್ತು ವಿಷ್ಣು ಸಹ ಮನಸ್ಸಿನಲ್ಲಿ ಶಿವನನ್ನು ಸ್ಮರಿಸುತ್ತಾ, ಭಕ್ತಿಪೂರ್ವಕವಾಗಿ ಶಂಕರನಿಗೆ ವಿಜ್ಞಾಪಿಸಿಕೊಂಡರು. ಹರಿ, ಬ್ರಹ್ಮ ಮತ್ತು ದೇವತೆಗಳೆಲ್ಲರ ಸ್ತುತಿಗೆ ಒಲಿದ ಭಕ್ತವತ್ಸಲನಾದ ಪರಮೇಶ್ವರ ಮತ್ತೆ ಧ್ಯಾನದಿಂದ ಬಹಿರ್ಮುಖನಾದ. ಪ್ರಸನ್ನನಾಗಿ ದೇವತೆಗಳತ್ತ ಕೃಪಾದೃಷ್ಟಿ ಹರಿಸಿದ.

'ದೇವತೆಗಳಿರಾ, ನೀವು ಎಲ್ಲರೂ ಏಕೆ ಇಲ್ಲೇ ಇನ್ನೂ ನಿಂತಿರುವಿರಿ? ನಿಮ್ಮ ಕಷ್ಟ ಪರಿಹರಿಸುವುದಾಗಿ ಆಗಲೇ ಹೇಳಿದೆನಲ್ಲಾ' ಎಂದು ಶಿವ ದೇವತೆಗಳನ್ನು ಪ್ರಶ್ನಿಸುತ್ತಾನೆ. ಆಗ ಹರಿ "ಓ ಮಹೇಶ್ವರ, ನೀನು ಸರ್ವಜ್ಞ, ಅಣುರೇಣು ತೃಣಕಾಷ್ಠಗಳಲ್ಲಿಯೂ ನೀನು ವ್ಯಾಪಿಸಿರುವೆ. ನಿನ್ನ ಅಪ್ಪಣೆಯಂತೆ ವಿಷಯ ನಿವೇದಿಸುವೆ. ನೀನೇನೋ ತಾರಕಾಸುರನ ಉಪಟಳವನ್ನು ತಪ್ಪಿಸುವುದಾಗಿ ಭರವಸೆ ನೀಡಿದ್ದೀಯಾ. ಆದರೆ ಅದು ಯಾವಾಗ ಅನ್ನೋ ವಿಚಾರ ತಿಳಿಯಲು ನಾವು ಉತ್ಸುಕರಾಗಿದ್ದೇವೆ. ತಾರಕಾಸುರನ ವಧೆ ನಿನ್ನ ಪುತ್ರನಿಂದ ಮಾತ್ರ ಸಾಧ್ಯ. ನೀನು ವಿವಾಹವಾಗದೆ, ಆ ದೈತ್ಯನ ಸಂಹಾರವಾಗುವುದಿಲ್ಲ. ಇದಕ್ಕಾಗಿ ನಿನ್ನ ಮತ್ತು ಗಿರಿಜೆಯ ವಿವಾಹ ನೋಡಲು ನಾವೆಲ್ಲಾ ಕಾತರರಾಗಿದ್ದೇವೆ. ಎಷ್ಟು ಬೇಗ ನಿನ್ನ ವಿವಾಹವಾಗುತ್ತೋ, ಅಷ್ಟು ಬೇಗ ನಮ್ಮ ಕಷ್ಟ ತೀರುತ್ತೆ' ಎಂದು ಬಿನ್ನವಿಸುತ್ತಾನೆ.

ಗುಂಡಣ್ಣ



ಬೆರಗಿನ ಬೆಳಕು — ಗುರುರಾಜ ಕರಜಗಿ

ನಮ್ಮ ಕಷ್ಟ ನಮಗೆ ಮಾತ್ರ

ತಲೆಪಾಗಿನೊಳಕೊಳಕ, ಪಂಚೆನಿರಿಯೊಳಹರಕ |
ತಿಳಿಸುವೆಯ ರಜಕಗಲ್ಲದೆ ಲೋಗರಿಂಗೆ? ||
ಅಳಲುದುಗುಡಗಳ ನಿನ್ನೊಳಗೆ ಬಯ್ತಿಡದೆ ನೀ - |
ನಿಳೆಗೆ ಹರಡುವುದೇಕೋ? – ಮಂಕುತಿಮ್ಮ ||
719 ||

ಪದ-ಅರ್ಥ: ತಲೆಪಾಗಿನೊಳಕೊಳಕ = ತಲೆಪಾಗಿನ (ತಲೆಯಪೇಟದ) + ಒಳ + ಕೊಳಕ (ಹೊಲಸು, ಕೊಳೆ), ಪಂಚೆ ನಿರಿಯೊಳಹರಕ = ಪಂಚೆನಿರಿಯ (ಪಂಚೆಯ ನಿರಿಗೆಯ) + ಒಳ + ಹರಕ(ಹರಿದದ್ದು), ರಜಕ = ಅಗಸ, ಲೋಗರಿಂಗೆ = ಲೋಕದ ಜನರಿಗೆ, ಬಯ್ತಿಡದೆ = ಮುಚ್ಚಿಡದೆ, ನೀನಿಳೆಗೆ = - ನೀನು + ಇಳೆಗೆ.

ವಾಚ್ಯಾರ್ಥ: ನಿನ್ನ ತಲೆಯ ಮೇಲಿನ ಪೇಟದೊಳಗಿದ್ದ ಕೊಳಕು, ಸುಕ್ಕುಗಳನ್ನು, ಪಂಚೆಯ ನಿರಿಗೆಯಲ್ಲಿದ್ದ ಹರಕನ್ನು ಅಗಸನಿಗಲ್ಲದೆ ಜಗತ್ತಿಗೆಲ್ಲ ಸಾರುತ್ತೀಯಾ? ನಿನ್ನ ಕಷ್ಟ, ಸಂಕಟಗಳನ್ನು ನಿನ್ನಲ್ಲೇ ಮುಚ್ಚಿಟ್ಟುಕೊಳ್ಳದೆ ಜಗತ್ತಿಗೆ ಏಕೆ ಹರಡುತ್ತೀ?

ವಿವರಣೆ: ಡಿ.ವಿ.ಜಿ ಯವರ ಹತ್ತಿರದ ಸಂಬಂಧಿಯೊಬ್ಬರ ಮನೆಯಲ್ಲಿ ಮದುವೆ. ಆ ಸಮಯದಲ್ಲೇ ಡಿ.ವಿ.ಜಿ ಯವರಿಗೆ ಬೇರೆಲ್ಲಿಗೋ ಪ್ರವಾಸ ನಿಶ್ಚಿತವಾಗಿತ್ತು. ತಮ್ಮ ಧರ್ಮಪತ್ನಿಗೆ ಮದುವೆಗೆ ಹೋಗಲು ತಿಳಿಸಿದ್ದರು. ಮರಳಿ ಬಂದ ಮೇಲೆ ಆಕೆ ಮದುವೆಗೆ ಹೋಗಿಲ್ಲವೆಂದು ತಿಳಿದು ಅವರು ಯಾಕೆ ಹೋಗಲಿಲ್ಲ ಎಂದು ಆಕ್ಷೇಪಿಸಿದರು. ಆಕೆ "ಹೋಗಲಿ ಬಿಡಿ, ಆಗಲಿಲ್ಲ" ಎಂದರೂ ಇವರು ಬಿಡದೆ ಮತ್ತೆ ಮತ್ತೆ ಕಾರಣ ಕೇಳಿದರು. ಆಗ ಆ ತಾಯಿ ಹೇಳಿದರು, "ನನಗೆ ಮನೆಯಲ್ಲಿ ಉಟ್ಟುಕೊಳ್ಳುವುದಕ್ಕೆ ಒಂದೆರಡು ಸೀರೆಗಳಿವೆ. ಮದುವೆಗೆ ಹೋಗಲು ಚೆನ್ನಾದ ಸೀರೆ ನನ್ನ ಬಳಿ ಇಲ್ಲ. ಹಾಗೆ ಸಾಧಾರಣ ಸೀರೆ ಉಟ್ಟುಕೊಂಡು ಹೋದರೆ ಚೆನ್ನಾಗಿರುತ್ತದೆಯೇ? ತಮ್ಮ ಗೌರವಕ್ಕೆ ಚ್ಯುತಿಯಾಗಬಾರದೆಂದು ಹೋಗಲಿಲ್ಲ". ಇದು ತುಂಬ ದೊಡ್ಡ ಮಾತು, ತಿಳುವಳಿಕೆಯ ಮಾತು. ನಮ್ಮ ಮನೆಯ ತೊಂದರೆ ನಮಗಿದೆ. ಅದನ್ನು ಊರೆಲ್ಲ ಸಾರಿ ಹೇಳುವ ಅವಶ್ಯಕತೆ ಇಲ್ಲ. ಹೇಳಿದರೆ ಏನಾದೀತು? ಜಗತ್ತಿನ ಜನ ನಿಮ್ಮ ತೊಂದರೆಯನ್ನು ನಿವಾರಿಸಿಯಾರೆ? ಬದಲಾಗಿ ಅವರ ಅನುಕಂಪೆಗೆ, ಕರುಣೆಗೆ ಗುರಿಯಾಗುವುದಿಲ್ಲವೆ? ನಮ್ಮ ಮನೆ ಕಷ್ಟ ನಮಗಿರಲಿ. ಅದನ್ನು ಎತ್ತಿ ಜನರಿಗೆ ತೋರಿಸುವುದು ಸರಿಯಲ್ಲ. ಕಗ್ಗ ಅದನ್ನು ಸುಂದರವಾಗಿ ಹೇಳುತ್ತದೆ. ನಾವು ತೊಟ್ಟುಕೊಳ್ಳುವ ಪೇಟದ ಒಳಭಾಗದಲ್ಲಿ ಬೆವರಿನ ಕೊಳೆ ಇದೆ, ಸುಕ್ಕಿದೆ. ನಮ್ಮ ಪಂಚೆ ಹಳೆಯದು. ಅದನ್ನೇ ಎಚ್ಚರದಿಂದ ತೊಟ್ಟುಕೊಳ್ಳುತ್ತೇವೆ. ಕೊಂಚ ಹರಿದ ಭಾಗವನ್ನು ನಿರಿಗೆಯಲ್ಲಿ ಅವಿತಿಡುತ್ತೇವೆ. ಆದಷ್ಟು ಮಟ್ಟಿಗೆ ನಮ್ಮ ದೈನ್ಯವನ್ನು, ಬಡತನವನ್ನು ಮುಚ್ಚಿಟ್ಟುಕೊಂಡು ನಗುಮುಖ ತೋರುತ್ತೇವೆ. ಬಟ್ಟೆಯನ್ನು ಶುದ್ಧಮಾಡುವಾಗ ಕಾಣುವ ಕೊಳಕನ್ನು ಜಗತ್ತಿಗೆ ತೋರಗೊಡುವುದಿಲ್ಲ. ಹಾಗೆಯೇ ನಮ್ಮ ಜೀವನದ ಜಂಜಾಟದ ದುಃಖ, ಸಂಕಟಗಳನ್ನು ನಾವೇ ನುಂಗಿಕೊಂಡು ಅನುಭವಿಸಿ ಪರಿಹಾರಕ್ಕೆ ಶ್ರಮಿಸಬೇಕು. ಅದನ್ನು ಜಗತ್ತಿಗೆ ಹರಡಿದರೆ ಏನು ಪ್ರಯೋಜನ? ಜನರಿಗೆ ಆಡಿಕೊಂಡು ನಗುವುದಕ್ಕೆ ವಸ್ತುವಾಗುತ್ತೇವೆ. ಅವರವರಿಗೆ ಅವರವರ ಕಷ್ಟಗಳು ಇದ್ದೇ ಇರುವಾಗ, ನಿನ್ನ ಕಷ್ಟಗಳನ್ನು ಯಾರು ಕೇಳುತ್ತಾರೆ?

ದಿನ ಭವಿಷ್ಯ — ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ — ಬುಧವಾರ ಸೆಪ್ಟೆಂಬರ್ 21, 2022

ಶ್ರೀ ಶುಭಕೃತ್ ನಾಮ ಸಂವತ್ಸರ ದಕ್ಷಿಣಾಯನ ವರ್ಷ ಋತು ತಿಥಿ: ಭಾದ್ರಪದ ಕೃಷ್ಣ ಏಕಾದಶಿ ಗಂ.23-35 ನಕ್ಷತ್ರ: ಪುಷ್ಯ ಗಂ.23-47 ಯೋಗ: ಪರಿಘ ಗಂ.09-12, ಕರಣ: ಬವ ಗಂ.10-34, ಕನ್ಯಾ ಮಾಸದ 04 ನೇ ದಿನ. ರಾಹುಕಾಲ : ಮಧ್ಯಾಹ್ನ 12:00–01:30 ಸೂರ್ಯೋದಯ : 06-23 ಸೂರ್ಯಾಸ್ತ : 06-24 ಮುಸ್ಲಿಂ ದಿನಾಂಕ : 24 ಸಫರ್ ದಿನ ವಿಶೇಷ : ಇಂದಿರ ಏಕಾದಶಿ, ಶ್ರೀ ನಾರಾಯಣ ಗುರುಗಳ ಸಮಾಧಿ ದಿನ (ಕೇರಳ), ಅಖೇರಿ ಚಹಾರ್, ಶುಂಬ (ಮುಸ್ಲಿಂ)
ಅದೃಷ್ಟ ಸಂಖ್ಯೆ : 2, 4

ಮೇಷ: ಅರೆ ಸರ್ಕಾರಿ ಇಲಾಖೆಯಲ್ಲಿ ಕೆಲಸ ಮಾಡುವವರಿಗೆ ಇನ್ನಷ್ಟು ಹೆಚ್ಚಿನ ಅನುಕೂಲವಾಗುವ ಸಾಧ್ಯತೆ ಇದೆ. ನಿರ್ದಿಷ್ಟ ಕೆಲಸಗಳಿಗೆ ಮಾತ್ರ ಗಮನ ಕೊಡುವುದು ಒಳ್ಳೆಯದು.

ವೃಷಭ: ಹಿತಶತ್ರುಗಳ ದ್ವೇಷಾಸೂಯೆಯಿಂದ ಬರುತ್ತಿದ್ದ ಮನಃಕ್ಲೇಶವು ಸಾಮರಸ್ಯದಿಂದ ದೂರಾಗುತ್ತದೆ. ಕಿಂಚಿತ್ ಕಾರ್ಯಸಿದ್ಧಿಯಿಂದ ನೆಮ್ಮದಿ ಕಂಡು ಬರಲಿದೆ. ಹಿಂದುರುಗಿ ಬರಬೇಕಾಗಿರುವ ಹಣ ಕೈ ಸೇರುವುದು.

ಮಿಥುನ: ನಿಮ್ಮ ಕೆಲಸದ ಸಂಪೂರ್ಣತೆಗಾಗಿ ನೀವು ಇಂದು ಕೆಲಸಗಾರರಲ್ಲಿ ಬಹಳ ಶಾಂತ ರೀತಿಯಿಂದ ವರ್ತಿಸುವುದು ಅನಿವಾರ್ಯ. ಸತ್ಯದ ಮಾರ್ಗವು ಜೀವನದಲ್ಲಿ ಎದುರಾದ ಗೊಂದಲದಿಂದ ಹೊರಬರಲು ಅನುಕೂಲ.

ಕರ್ಕಾಟಕ: ತಂದೆಯ ಆರೋಗ್ಯದಲ್ಲಿ ಸಣ್ಣ-ಪುಟ್ಟ ವ್ಯತ್ಯಾಸಗಳಾಗಬಹುದು. ಪ್ರಭಾವಿ ವ್ಯಕ್ತಿಗಳ ನಿಕಟ ಸಂಪರ್ಕದಿಂದ ಕಾರ್ಯಾನುಕೂಲ. ಆತ್ಮೀಯರ ವಿಯೋಗದಿಂದ ದುಃಖದ ವಾತಾವರಣವಿರುವುದು.

ಸಿಂಹ: ಸಿಹಿ ತಿನಿಸುಗಳ ತಯಾರಕರಿಗೆ ಬೇಡಿಕೆ ಹೆಚ್ಚುವುದು. ಕಾರ್ಯಕ್ಷೇತ್ರದಲ್ಲಿ ಶಾಂತಚಿತ್ತದಿಂದ ವ್ಯವಹರಿಸಿದರೆ ನಿಮ್ಮ ಹಾದಿ ಸುಗಮವಾಗಿ ಸಾಗುತ್ತದೆ. ಹಿರಿಯರು ಮಾಡಿದ ಪುಣ್ಯದ ಫಲ ನಿಮಗೆ ಅನುಭವಕ್ಕೆ ಬರಲಿದೆ.

ಕನ್ಯಾ: ಸೇವಕ ವರ್ಗದವರಿಂದ ಹೊಸದೊಂದು ಪಾಠ ಕಲಿಯುವ ಕಾಲ ಬರಲಿದೆ. ಸರ್ಕಾರಿ ಉದ್ಯೋಗದಲ್ಲಿರುವವರಿಗೆ ವರ್ಗಾವಣೆ ಮಾಡಿಸಿಕೊಳ್ಳುವ ಪ್ರಯತ್ನ ಫಲಕೊಡಲಿದೆ. ಈ ದಿನ ಬೂದು ಬಣ್ಣವು ನಿಮಗೆ ಶುಭತರಲಿದೆ.

ತುಲಾ: ಅನಿವಾರ್ಯದ ಸಮಯಕ್ಕೆ ಅಕ್ಕಪಕ್ಕದವರ ಸಹಾಯ ಸಿಕ್ಕುವುದರ ಪರಿಣಾಮ ಸುತ್ತಮುತ್ತಲಿನ ಜನರೊಂದಿಗೆ ಬೆರೆಯುವುದರ ಪ್ರಯೋಜನ ಅನುಭವಕ್ಕೆ ಬರಲಿದೆ. ವಾತಾವರಣ ಸಂತಸದಾಯಕವಾಗಿರುತ್ತದೆ.

ವೃಶ್ಚಿಕ: ಕಲಾತ್ಮಕ ಮತ್ತು ಸೃಜನಶೀಲ ವ್ಯಕ್ತಿತ್ವ ಮುಂದಿನ ದಿನಗಳಲ್ಲಿ ಇನ್ನಷ್ಟು ವರ್ಧಿಸಲಿದೆ. ಇನ್ನಷ್ಟು ಪ್ರತಿಭೆ ಹೆಚ್ಚಿಸಿಕೊಳ್ಳುವ ಕಾಲ ಇದು. ಮಾರಾಟ ಪ್ರತಿನಿಧಿಗಳಿಗೆ ಹೆಚ್ಚಿನ ಕಮಿಷನ್ ಸಿಗಲಿದೆ. ವಿದ್ಯಾರ್ಥಿಗಳಿಗೆ ಸಾಧನೆಗೆ ಸುಸಮಯ.

ಧನು: ಹತ್ತಾರು ವಿಷಯದಲ್ಲಿ ಗಮನ ಹರಿಸುವುದಕ್ಕಿಂತ ನಿರ್ದಿಷ್ಟವಾದ ಒಂದು ಗುರಿಯ ಕಡೆಗೆ ತಲುಪುವ ಪ್ರಯತ್ನ ಮಾಡಿ. ಯಶಸ್ಸು ಲಭಿಸುವುದು. ಕೌಟುಂಬಿಕ ನೆಮ್ಮದಿ ಸಮೃದ್ಧಿಯಾಗಿದ್ದರೂ ಕಿರಿಕಿರಿ ತಪ್ಪದಂತಾಗಲಿದೆ.

ಮಕರ: ಅನಾರೋಗ್ಯ ಸ್ಥಿತಿಯು ಎದುರಾಗಿ ಆರ್ಥಿಕವಾಗಿ ಧನವ್ಯಯವಾಗಲಿದೆ. ದೂರ ಸಂಚಾರದಲ್ಲಿ ವಾಹನದ ಸಮಸ್ಯೆ ಎದುರಾಗಬಹುದು. ಜಾಗ್ರತೆ ವಹಿಸಿರಿ. ಲಕ್ಷ್ಮಿನರಸಿಂಹ ಸ್ವಾಮಿಯನ್ನು ಧ್ಯಾನಿಸುವುದು ಅನುಕೂಲಕರ.

ಕುಂಭ: ವಿದ್ಯಾರ್ಥಿಗಳಿಗೆ ಅತಿ ಹೆಚ್ಚಿನ ಓದಿನಿಂದಾಗಿ ಬೇಸರಗೊಂಡು ಬದಲಾವಣೆಯನ್ನು ಬಯಸುವಂತಾಗಲಿದೆ. ಟ್ರಾವೆಲ್ಸ್ ಉದ್ಯೋಗದವರಿಗೆ ಲಾಭದಾಯಕ ಬೆಳವಣಿಗೆ ಇರುವುದು. ಅನ್ಯರ ಮಾತಿಗೆ ಕಿವಿಗೊಡಬೇಡಿ.

ಮೀನ: ಕಚೇರಿಯಲ್ಲಿ ಇದ್ದ ಭಿನ್ನಾಭಿಪ್ರಾಯಗಳು ಬಗೆಹರಿಯುವುದು. ಅದರಿಂದ ನೆಮ್ಮದಿ ಸಿಗಲಿದೆ. ಪ್ರಭಾವಿ ವ್ಯಕ್ತಿಗಳ ಜೊತೆಯಲ್ಲಿನ ಓಡಾಟ ಹೆಚ್ಚಿನ ಸ್ಥಾನಮಾನ, ಜೊತೆಯಲ್ಲಿ ಸಮವಾದ ಆಯಾಸವನ್ನು ತಂದು ಕೊಡಲಿದೆ.

ಪದಬಂಧ 5086 – ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ಕನ್ನಡಿಗರ ಹೆಮ್ಮೆಯ ನಾಡು (4)
3.ನೂರು ಹೆಜ್ಜೆ ನಡೆಯುವುದು (4)
5.ಬೆಳಗಿನ ಜಾವವಿದು (3)
6.ಎಳ್ಳು ನೀರು ಬಿಡುವಿಕೆ (4)
8.ಸ್ವಪ್ನವಿಲ್ಲಿ ನಿಜವಾಗಿದೆ (3)
10.ಸಭೆಯಲ್ಲಿ ಕುಳಿತಿರುವವನು (3)
11.ಕೆಟ್ಟಚೇಷ್ಟೆಯಿದು (3)
12.ಮಾತೆ ತೋರಿರುವ ಪ್ರೀತಿ (3)
14.ತುಸುವೇ ಬೀರಿರುವ ಮಂದಹಾಸ (4)
17.ಅನೇಕ ಚಿಕ್ಕ ಚಿಕ್ಕ ಮನೆಗಳುಳ್ಳ ಆವಾರ(3)
18.ಸಾರವಾದ ಭಾಗದೊಂದಿಗಿರುವ ಕ್ಷೀರ(4)
19.ಅತ್ಯಂತ ಪರಾಕ್ರಮಿ (4)

ಮೇಲಿಂದ ಕೆಳಕ್ಕೆ
1.ಬಣ್ಣದ ದಾರದಿಂದ ಬಟ್ಟೆಮೇಲೆ ಮಾಡಿದ ಹೆಣಿಗೆ (3)
2.ಕನ್ನ ಹಾಕಿ ಕದ್ದಿರುವ ಚಿನ್ನವೇ ಇದು! (3)
3.ಮುಂದಾಗುವುದನ್ನು ತಿಳಿಸುವುದು (3)
4.ಸೊಂಟಕ್ಕೆ ಸುತ್ತಿಕೊಳ್ಳುವ ಬಟ್ಟೆ (2)
7.ಯಾವ ಉದ್ದೇಶವೂ ಇಲ್ಲದ್ದು (5)
9.ಅಂತಶ್ಶಕ್ತಿಯಿದು (5)
13.ಅತಿಯಾದ ಬಯಕೆ (3)
14.ಪಾಪಿಗಳ ಲೋಕ (3)
15.ನೆಲವನ್ನು ಅಗೆಯುವ ಕಬ್ಬಿಣದ ಸಾಧನ(3)
16.ಬೇಸಿಗೆಯ ತಾಪ (2)



5085ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಐಹಿಕ 3.ಮಸ್ತಕ
5.ರವಿಕಿರಣ 6.ತಡ
8.ನಾಯಿ 9.ನಾರಿ
10.ಕದ 14.ನರಭಕ್ಷಕ
15.ಕಡಲು 16.ವಿನಾಶ

ಮೇಲಿಂದ ಕೆಳಕ್ಕೆ:
1.ಐರಾವತ 2.ಕರಡಿ
3.ಮಣಕ 4 ಕಸುಗಾಯಿ
7.ಡಬರಿ 8.ನಾಸ್ತಿಕ
9.ನಾಗರಿಕ 11.ದಶಮಾಂಶ
12.ಹೊನಲು 13.ಕುಕವಿ

ಸುಡೊಕು 5472

2		9			7	1		4
	6							
5		7	4		6	2		3
					5		3	1
	5	1		8			2	
3			9					8
		2		1		8		5
9			7		8		1	2
	8			2		4		6

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5471 ಸುಡೊಕು

2	1	6	3	7	4	8	5	9
9	4	7	5	8	6	3	1	2
3	8	5	9	2	1	4	6	7
1	2	3	8	6	5	9	7	4
5	9	8	2	4	7	1	3	6
6	7	4	1	9	3	5	2	8
7	3	9	6	1	8	2	4	5
4	5	2	7	3	9	6	8	1
8	6	1	4	5	2	7	9	3

ದೆಹಲಿ ಗಲಭೆ ಆರೋಪಿ ಖುಲಾಸೆ

ನವದೆಹಲಿ (ಪಿಟಿಐ): 2020ರಲ್ಲಿ ದೆಹಲಿಯಲ್ಲಿ ನಡೆದಿದ್ದ ಗಲಭೆ ಪ್ರಕರಣದ ಆರೋಪಿ ನೂರ್ ಮಹಮ್ಮದ್ ಎಂಬುವವರನ್ನು ಇಲ್ಲಿನ ಹೆಚ್ಚುವರಿ ಸೆಷನ್ಸ್ ನ್ಯಾಯಾಲಯವು ಸೋಮವಾರ ಖುಲಾಸೆಗೊಳಿಸಿದೆ.

'ನೂರ್ ಅವರ ಮೇಲಿನ ಆರೋಪ ಸಾಬೀತುಪಡಿಸುವಂತಹ ಯಾವುದೇ ಸಾಕ್ಷ್ಯಗಳೂ ಲಭ್ಯವಿಲ್ಲ. ಹೀಗಾಗಿ ಅವರನ್ನು ಈ ಪ್ರಕರಣದಿಂದ ಖುಲಾಸೆಗೊಳಿಸುತ್ತಿದ್ದೇವೆ' ಎಂದು ಹೆಚ್ಚುವರಿ ಸೆಷನ್ಸ್ ನ್ಯಾಯಾಲಯದ ನ್ಯಾಯಾಧೀಶ ಪುಲಸ್ತ್ಯ ಪ್ರಮಾಚಲಾ ತೀರ್ಪಿನಲ್ಲಿ ಹೇಳಿದ್ದಾರೆ.

ಷೇರುಪೇಟೆ ವಹಿವಾಟು

578



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	17,622
ಇಂದಿನ ಅಂತ್ಯ	17,816
▲	194
ದಿನದ ಕನಿಷ್ಠ	17,919

ವಿನಿಮಯ ದರ

$ ಡಾಲರ್	79.74
£ ಪೌಂಡ್	91
€ ಯುರೊ	79.8
¥ ಯೆನ್ (100ಕ್ಕೆ)	55.47

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು

100 ಮೊಟ್ಟೆಗೆ	₹440
12 ಮೊಟ್ಟೆಗೆ	₹60

ಮೈಸೂರು

100 ಮೊಟ್ಟೆಗೆ	₹440

ಖಾದ್ಯ ತೈಲ ಮುಂಬೈ

(10 ಕೆಜಿಗೆ)

ಶೇಂಗಾ (ರಿಫೈಂಡ್)	₹1680 (1680)
ಸೋಯಾ (ರಿಫೈಂಡ್)	₹1170 (1170)
ಸೂರ್ಯಕಾಂತಿ (ರಿಫೈಂಡ್)	₹1340 (1340)
ಪಾಮೋಲಿನ್	₹920 (930)

ಕೊಬ್ಬರಿ ಧಾರಣೆ

ಗುಬ್ಬಿ	₹13000-13200
ತುರುವೇಕೆರೆ	₹14000-14000

ಎನ್.ಆರ್.ಪುರ ರಬ್ಬರ್

(ಪ್ರತಿ ಕೆ.ಜಿಗೆ)

ಆರ್‌ಎಸ್‌ಎಸ್-4	₹ 145.50
ಆರ್‌ಎಸ್‌ಎಸ್-5	₹ 135.50
ಗುಡ್ ಲಾಟ್	₹ 131

ಮುಂಬೈ ಧಾರಣೆ

ಶೇಂಗಾ

20-9-2022

ಜಾವಾ 70/80(ಹೊಸ)	11850-11900
ಜಾವಾ 80/90(ಹೊಸ)	10850-10900
ದಪ್ಪ ಮಧ್ಯಪ್ರದೇಶ(ಹೊಸ)	10400-10500
ದಪ್ಪ ಗುಜರಾತ್(ಹೊಸ)	11000-11100

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1690 (1690)
ಒಂದು ವಾರದ ಡೆಲಿವರಿ	1685 (1685)
ಸೋಯಾ ಕಚ್ಚಾ	1120 (1125)
ಪಾಮ್ ವಾರದ ಡೆಲಿವರಿ	918 (928)
ಸೂರ್ಯಕಾಂತಿ ಎಣ್ಣೆ ಕಚ್ಚಾ	1270 (1270)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ
49,100 (49,150)
ಬೆಳ್ಳಿ ಕೆ.ಜಿ 56,300 (56,300)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ
ಸಕಲೇಶಪುರ

ಕೂಳೆ	400-420
ನಡುಗೋಲು	450-480
ರಾಶಿ	500- 520
ರಾಶಿ ಉತ್ತಮ	550-600
ಜರಡಿ	600 - 650
ಹೆರಕಿದ್ದು	1,000-1,100
ಹಸಿರು ಸಾಧಾರಣ	600-700
ಹಸಿರು ಉತ್ತಮ	900-1,000
ಹಸಿರು ಅತಿ ಉತ್ತಮ	1,150-1,250
ಕಾಳು ಮೆಣಸು	480

ಬಂಟ್ವಾಳ

ಕೋಕ	12500-25000
ಹೊಸತು	27500-47500
ಹಳತು	46000-56000

ಚನ್ನಗಿರಿ

ರಾಶಿ	45229-51299

ಚಿತ್ರದುರ್ಗ

ಅಪಿ	51419-51829
ಬೆಟ್ಟೆ	39559-39999
ಕೆಂಪುಗೋಟು	30009-30410
ರಾಶಿ	50939-51369

ಕಾರ್ಕಳ

ಹೊಸತು	40000-47500

ಪುತ್ತೂರು

ಕೋಕ	11000-26000
ಹೊಸತು	34500-47500

ಸಾಗರ

ಬಿಳಿಗೋಟು	28899-31199
ಚಾಲಿ	33989-39069
ಕೋಕ	30199-31969
ಕೆಂಪುಗೋಟು	17989-37799
ರಾಶಿ	37009-50839
ಸಿಪ್ಪೆಗೋಟು	6290-22599

ಶಿವಮೊಗ್ಗ

ಬೆಟ್ಟೆ	50669-55069
ಗೊರಬಲು	17000-37919
ರಾಶಿ	46599-50599
ಸರಕು	59869-81010

ಸಿದ್ದಾಪುರ

ಬಿಳಿಗೋಟು	29799-35099
ಚಾಲಿ	37199-42869
ಕೋಕ	27699-35899
ಕೆಂಪುಗೋಟು	32699-35899
ರಾಶಿ	49109-51309
ತಟ್ಟಿಬೆಟ್ಟೆ	39099-49099

ಶಿರಸಿ

ಬೆಟ್ಟೆ	21919-49481
ಬಿಳಿಗೋಟು	14218-36899
ಚಾಲಿ	38899-43699
ಕೆಂಪುಗೋಟು	30799-37561
ರಾಶಿ	44379-52189

ಸುಳ್ಯ

ಹೊಸತು	30000-47500

ತುಮಕೂರು

ರಾಶಿ	50200-53400

ಯಲ್ಲಾಪುರ

ಬಿಳಿಗೋಟು	26899-36899
ಚಾಲಿ	37699-43290
ಕೋಕ	18200-32919
ಕೆಂಪುಗೋಟು	30169-37299
ರಾಶಿ	49019-56399
ತಟ್ಟಿಬೆಟ್ಟೆ	38400-48119

ಕಾಫಿ (50 ಕೆ.ಜಿಗೆ ₹ ಗಳಲ್ಲಿ)

	ಮೂಡಿಗೆರೆ	ಹಾಸನ		
	ಮುದ್ರೆಮನೆ	ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	16000	15800	15850	221.10 ಸೆಂಟ್ಸ್
ಎಸಿ	9100	8400	8700	
ಆರ್‌ಪಿ	9800	9800	9800	ಲಂಡನ್
ಆರ್‌ಸಿ	4800	4500	4725	2202 ಡಾಲರ್ಸ್

ಷೇರು ಮಾರುಕಟ್ಟೆ: ಮುಂದುವರಿದ ಚೇತರಿಕೆ

ಮುಂಬೈ (ಪಿಟಿಐ): ವಿವಿಧ ದೇಶಗಳ ಕೇಂದ್ರೀಯ ಬ್ಯಾಂಕ್‌ಗಳು ಬಡ್ಡಿ ದರವನ್ನು ಇನ್ನಷ್ಟು ಹೆಚ್ಚಿಸಬಹುದು ಎಂಬ ಕಳವಳದ ನಡುವೆಯೂ ದೇಶದ ಷೇರುಪೇಟೆ ಸೂಚ್ಯಂಕಗಳು ಮಂಗಳವಾರದ ವಹಿವಾಟಿನಲ್ಲಿ ಚೇತರಿಕೆ ಕಂಡವು.

ಮುಂಬೈ ಷೇರುಪೇಟೆ ಸೂಚ್ಯಂಕ ಸೆನ್ಸೆಕ್ಸ್ 578 ಅಂಶ, ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ ನಿಫ್ಟಿ 194 ಅಂಶ ಏರಿಕೆ ದಾಖಲಿಸಿದವು.

'ಪಾಶ್ಚಿಮಾತ್ಯ ದೇಶಗಳ ಮಾರುಕಟ್ಟೆಗಳಲ್ಲಿನ ಅಸ್ಥಿರತೆಯು ಭಾರತದ ಮೇಲೆ ಪರಿಣಾಮ ಉಂಟುಮಾಡಲಿಲ್ಲ. ವಾಸ್ತವದಲ್ಲಿ, ಅಮೆರಿಕದ ಫೆಡರಲ್ ರಿಸರ್ವ್ ತೆಗೆದುಕೊಳ್ಳುವ ನಿರ್ಧಾರದ ಬಗ್ಗೆ ಭಾರತದ ಮಾರುಕಟ್ಟೆಗಳು ತಲೆಕೆಡಿಸಿಕೊಂಡಂತೆ ಕಾಣುತ್ತಿಲ್ಲ. ಮಾರುಕಟ್ಟೆಗಳು ಕುಸಿದಾಗಲೆಲ್ಲ ಹೆಚ್ಚು ಖರೀದಿಸಬೇಕು ಎಂಬುದನ್ನು ಈ ವಿದ್ಯಮಾನ ಸೂಚಿಸುತ್ತಿದೆ' ಎಂದು ಜಿಯೋಜಿತ್ ಫೈನಾನ್ಶಿಯಲ್ ಸರ್ವಿಸಸ್‌ನ ಸಂಶೋಧನಾ ಮುಖ್ಯಸ್ಥ ವಿನೋದ್ ನಾಯರ್ ಹೇಳಿದ್ದಾರೆ.

ಬಿಎಸ್‌ಇ ಮಿಡ್‌ಕ್ಯಾಪ್ ಸೂಚ್ಯಂಕ ಶೇ 1.65ರಷ್ಟು, ಸ್ಮಾಲ್‌ಕ್ಯಾಪ್ ಸೂಚ್ಯಂಕ ಶೇ 1.01ರಷ್ಟು ಏರಿಕೆ ಕಂಡಿದೆ. ವಿದೇಶಿ ಸಾಂಸ್ಥಿಕ ಹೂಡಿಕೆದಾರರು ಮಂಗಳವಾರ ಒಟ್ಟು ₹ 1,196 ಕೋಟಿ ಮೌಲ್ಯದ ಷೇರುಗಳನ್ನು ಖರೀದಿಸಿದ್ದಾರೆ.

ಯೆಸ್ ಬ್ಯಾಂಕ್‌ನ ಎನ್‌ಪಿಎ ಜೆಸಿ ಫ್ಲವರ್ಸ್ ಹೆಗಲಿಗೆ

ನವದೆಹಲಿ (ಪಿಟಿಐ): ಎನ್‌ಪಿಎ ಆಗಿರುವ ಒಟ್ಟು ₹ 48 ಸಾವಿರ ಕೋಟಿ ಸಾಲವನ್ನು ಅಮೆರಿಕ ಮೂಲದ ಜೆಸಿ ಫ್ಲವರ್ಸ್ ಆಸ್ತಿ ಪುನರ್‌ರಚನಾ ಕಂಪನಿಗೆ (ಎಆರ್‌ಸಿ) ಮಾರಾಟ ಮಾಡಲು ಆಡಳಿತ ಮಂಡಳಿ ಒಪ್ಪಿದೆ ಎಂದು ಯೆಸ್ ಬ್ಯಾಂಕ್ ಮಂಗಳವಾರ ತಿಳಿಸಿದೆ.

ಈ ಸಾಲಕ್ಕೆ ಬೇರೆ ಬಿಡ್ಡರ್‌ಗಳು ಇರಲಿಲ್ಲ. 'ಜೆಸಿ ಫ್ಲವರ್ಸ್ ಎಆರ್‌ಸಿ'ಯ ಶೇ 19.99ರಷ್ಟು ಷೇರುಗಳ ಖರೀದಿಗೂ ಆಡಳಿತ ಮಂಡಳಿ ಒಪ್ಪಿದೆ ಎಂದು ಯೆಸ್ ಬ್ಯಾಂಕ್ ಷೇರುಪೇಟೆಗೆ ಮಾಹಿತಿ ನೀಡಿದೆ.

ಆನ್‌ಲೈನ್ ಆಟ: ಶುಲ್ಕ ಮಿತಿಗೆ ಸ್ವದೇಶಿ ಜಾಗರಣ ಮಂಚ್ ಒತ್ತಾಯ

ನವದೆಹಲಿ (ರಾಯಿಟರ್ಸ್): ಆನ್‌ಲೈನ್ ಆಟಗಳಲ್ಲಿ ಪಾಲ್ಗೊಳ್ಳುವವರು ಪಾವತಿ ಮಾಡಬೇಕಿರುವ ಪ್ರವೇಶ ಶುಲ್ಕಕ್ಕೆ ಮಿತಿ ಹೇರಬೇಕು ಎಂದು ಸ್ವದೇಶಿ ಜಾಗರಣ ಮಂಚ್ ಆಗ್ರಹಿಸಿದೆ.

ದೇಶದಲ್ಲಿ ಹಣ ತೊಡಗಿಸಿ ಆಡುವ ಆನ್‌ಲೈನ್ ಆಟಗಳು ಜನಪ್ರಿಯ ಆಗುತ್ತಿವೆ. ಇಂತಹ ಆಟಗಳಿಗೆ ಕೆಲವು ಕ್ರಿಕೆಟಿಗರ ಬೆಂಬಲ ಕೂಡ ಇದೆ. ಆನ್‌ಲೈನ್ ಆಟಗಳಲ್ಲಿ ಹಣ ತೊಡಗಿಸಿ, ಜನ ಹಣ ಕಳೆದುಕೊಂಡಿರುವ, ಸಣ್ಣ ವಯಸ್ಸಿನವರು ಆತ್ಮಹತ್ಯೆ ಮಾಡಿಕೊಂಡಿರುವ ವರದಿಗಳು ಇವೆ.

ಹಣ ತೊಡಗಿಸಿ ಆಡುವ ಆಟಗಳು ಒಟ್ಟು ಆನ್‌ಲೈನ್ ಆಟಗಳ ಮಾರುಕಟ್ಟೆಯ ಶೇಕಡ 53ರಷ್ಟು ಪಾಲನ್ನು ಪಡೆಯುವ ಅಂದಾಜು ಇದೆ. 2026ರ ವೇಳೆಗೆ ಆನ್‌ಲೈನ್ ಆಟಗಳ ಮಾರುಕಟ್ಟೆಯು ₹ 55 ಸಾವಿರ ಕೋಟಿ ವಹಿವಾಟು ಕಾಣುವ ಅಂದಾಜು ಇದೆ.

ಪ್ರಾತಿನಿಧಿಕ ಚಿತ್ರ

'ಪ್ರವೇಶ ಶುಲ್ಕವು ₹ 50ಕ್ಕಿಂತ ಹೆಚ್ಚಿರಬಾರದು' ಎಂದು ಸ್ವದೇಶಿ ಜಾಗರಣ ಮಂಚ್‌ನ ಪದಾಧಿಕಾರಿ ಅಶ್ವನಿ ಮಹಾಜನ್ ಹೇಳಿದ್ದಾರೆ. ಈ ಸಂಬಂಧ ತಾವು ಸಂಬಂಧಪಟ್ಟ ಸಚಿವಾಲಯಗಳ ಜೊತೆ ಮಾತುಕತೆ ನಡೆಸುವುದಾಗಿ ಅವರು ಹೇಳಿದ್ದಾರೆ. ಈ ಸಂಘಟನೆಯು ಸಂಘ ಪರಿವಾರಕ್ಕೆ ಸೇರಿದೆ.

ದೇಶದ ಆನ್‌ಲೈನ್ ಆಟಗಳ ಉದ್ಯಮದಲ್ಲಿ ಟೈಗರ್ ಗ್ಲೋಬಲ್, ಸಿಕೋಯಾ ಕ್ಯಾಪಿಟಲ್‌ನಂತಹ ಸಂಸ್ಥೆಗಳು ಹಣ ಹೂಡಿಕೆ ಮಾಡಿವೆ. ಕೇಂದ್ರ ಸರ್ಕಾರ ರಚಿಸಿದ್ದ ಸಮಿತಿಯೊಂದು, ಆನ್‌ಲೈನ್ ಆಟಗಳಲ್ಲಿ ತೊಡಗಿಸುವ ಹಣಕ್ಕೆ ಹಾಗೂ ಅಲ್ಲಿಂದ ಹಿಂದಕ್ಕೆ ಪಡೆಯುವ ಮೊತ್ತಕ್ಕೆ ಮಿತಿ ಇರಬೇಕು ಎಂದು ಈಚೆಗೆ ಶಿಫಾರಸು ಮಾಡಿದೆ. ಆದರೆ ಪ್ರವೇಶ ಶುಲ್ಕಕ್ಕೆ ಮಿತಿ ಇರಬೇಕು ಎಂದು ಅದು ಹೇಳಿಲ್ಲ.

ಹೀಗಿದ್ದರೂ, ಸಮಿತಿಯ ಶಿಫಾರಸುಗಳು ಆನ್‌ಲೈನ್ ಆಟ ಉದ್ಯಮದ ವರಮಾನ ಹಾಗೂ ಬೆಳವಣಿಗೆಯ ಸಾಮರ್ಥ್ಯದ ಮೇಲೆ ಪರಿಣಾಮ ಉಂಟು ಮಾಡುತ್ತವೆ ಎಂದು ಉದ್ಯಮದ ಮೂಲಗಳು ಹೇಳಿವೆ.

ಈ ವಿಚಾರವನ್ನು ಕೇಂದ್ರದ ಗಮನಕ್ಕೆ ತರುವುದಾಗಿಯೂ ಮೂಲಗಳು ತಿಳಿಸಿವೆ.

ಇ-ಗೇಮಿಂಗ್ ಒಕ್ಕೂಟದ ಮುಖ್ಯ ಕಾರ್ಯನಿರ್ವಾಹಕ ಸಮೀರ್ ಬರ್ಡೆ ಅವರು, 'ಇಂತಹ ಮಿತಿಗಳು ನ್ಯಾಯ ಸಮ್ಮತವಲ್ಲ. ಇಂತಹ ಮಿತಿಗಳು ಇದ್ದಾಗ ಕಂಪನಿಗಳಿಗೆ ಕೆಲಸ ಮಾಡಲು ಆಗುವುದಿಲ್ಲ' ಎಂದು ಪ್ರತಿಕ್ರಿಯಿಸಿದ್ದಾರೆ.

ಸ್ಪೈಸ್‌ಜೆಟ್: 80 ಪೈಲಟ್‌ಗಳಿಗೆ ವೇತನರಹಿತ ರಜೆ

ನವದೆಹಲಿ (ಪಿಟಿಐ): ಸ್ಪೈಸ್‌ಜೆಟ್ ಕಂಪನಿಯು 80 ಪೈಲಟ್‌ಗಳಿಗೆ ಮೂರು ತಿಂಗಳ ಅವಧಿಗೆ ವೇತನ ರಹಿತ ರಜೆ ಪಡೆದುಕೊಳ್ಳುವಂತೆ ಮಂಗಳವಾರ ಸೂಚಿಸಿದೆ. ವೆಚ್ಚಗಳ ಮೇಲೆ ನಿಯಂತ್ರಣ ಸಾಧಿಸಲು ತಾತ್ಕಾಲಿಕವಾಗಿ ಈ ಕ್ರಮವನ್ನು ಕೈಗೊಳ್ಳಲಾಗುತ್ತಿದೆ ಎಂದು ಕಂಪನಿ ಹೇಳಿದೆ.

'ಯಾವ ನೌಕರನನ್ನೂ ಕೆಲಸದಿಂದ ತೆಗೆಯಬಾರದು ಎಂಬುದು ಕಂಪನಿಯ ನಿಯಮ. ಅದಕ್ಕನುಗುಣವಾಗಿ ಈ ಕ್ರಮ ಕೈಗೊಳ್ಳಲಾಗಿದೆ. ಕೋವಿಡ್ ತೀವ್ರವಾಗಿದ್ದಾಗಲೂ ಕಂಪನಿಯು ಈ ನಿಯಮ ಪಾಲಿಸಿತ್ತು. ಈ ಕ್ರಮವು ಪೈಲಟ್‌ಗಳನ್ನು ಹೆಚ್ಚು ದಕ್ಷವಾಗಿ ಬಳಸಿಕೊಳ್ಳಲು ನೆರವಾಗುತ್ತದೆ' ಎಂದು ಕಂಪನಿಯ ಹೇಳಿಕೆ ತಿಳಿಸಿದೆ.

ಪ್ರಶ್ನೋತ್ತರ

ಪ್ರಮೋದ ಶ್ರೀಕಾಂತ ದೈತೋಟ
ತೆರಿಗೆ ಮತ್ತು ವೈಯಕ್ತಿಕ ಹಣಕಾಸು ತಜ್ಞ

ಹೆಸರು ಬೇಡ, ಶಿವಮೊಗ್ಗ

- **ಪ್ರಶ್ನೆ:** ನಾನು ಐ.ಟಿ. ಕಂಪನಿಯೊಂದರಲ್ಲಿ ಉದ್ಯೋಗದಲ್ಲಿ ಇದ್ದೇನೆ. ನನ್ನ ವಯಸ್ಸು 26 ವರ್ಷ. ಮದುವೆ ಆಗಿಲ್ಲ. ನನಗೆ ಪ್ರತಿ ತಿಂಗಳು ಕೈಗೆ ಸಿಗುವ ಸಂಬಳ ₹ 44,130. ಶೈಕ್ಷಣಿಕ ಸಾಲ ಮರುಪಾವತಿಗೆ ಪ್ರತಿ ತಿಂಗಳು ₹ 7,000 ಹಾಗೂ ತಿಂಗಳ ಮನೆ ಖರ್ಚು ಮತ್ತು ಇತರೆ ಖರ್ಚುಗಳು ₹ 10,000 ಆಗುತ್ತವೆ. ಪ್ರತಿ ತಿಂಗಳೂ ಆರ್.ಡಿ.ಗೆ ₹ 4,000 ಪಾವತಿಸುತ್ತಿದ್ದೇನೆ. ಇನ್ನು ಉಳಿದ ಹಣವನ್ನು ಎಲ್ಲಿ ಮತ್ತು ಹೇಗೆ ತೊಡಗಿಸಬಹುದು? ಒಂದು ನಿವೇಶನ ಇರುವುದರಿಂದ ಮನೆ ಕಟ್ಟಿಸುವ ಆಸೆ ಇದೆ. ಉತ್ತಮ ಗೃಹ ಸಾಲ ಯಾವುದು?

ಉತ್ತರ: ನೀವು ನೀಡಿರುವ ಮಾಹಿತಿ ಪ್ರಕಾರ, ನಿಮ್ಮ ಈಗಿನ ಹೂಡಿಕೆ, ತಿಂಗಳ ಖರ್ಚು ಹಾಗೂ ಸಾಲದ ಇಎಂಐ ಪಾವತಿಸಿ ಹೆಚ್ಚುವರಿ ಹೂಡಿಕೆಗೆ ಉಳಿಯುವ ಮೊತ್ತ ತಿಂಗಳಿಗೆ ಅಂದಾಜು ₹ 23,000. ಇದು ಒಂದು ವರ್ಷಕ್ಕೆ ಸುಮಾರು ₹ 2.76 ಲಕ್ಷ ಆಗುತ್ತದೆ. ವಿಭಿನ್ನ ವರ್ಗಗಳಿಗೆ ಸೇರಿದ ಹೂಡಿಕೆ ಉತ್ಪನ್ನಗಳನ್ನು ಆಯ್ಕೆ ಮಾಡುವ ಮೂಲಕ ಈ ಮೊತ್ತವನ್ನು ತೊಡಗಿಸಿ. ಬ್ಯಾಂಕ್ ಠೇವಣಿಗಳನ್ನು ನಿಮ್ಮ ತಾತ್ಕಾಲಿಕ ಹೂಡಿಕೆಯನ್ನಾಗಿ ಇಟ್ಟುಕೊಳ್ಳಿ. ಉತ್ತಮ ಹೂಡಿಕೆಗೆ ಅವಕಾಶ ಬಂದಾಗ ಬ್ಯಾಂಕ್ ಠೇವಣಿಯಿಂದ ಷೇರುಗಳು, ಮ್ಯೂಚುವಲ್ ಫಂಡ್, ಇಟಿಎಫ್ (ವಿನಿಮಯ ವಹಿವಾಟು ನಿಧಿ), ಚಿನ್ನದ ಬಾಂಡ್ ಹಾಗೂ ಒಂದಿಷ್ಟು ಮೊತ್ತವನ್ನು ಯೂಲಿಪ್‌ಗಳಲ್ಲಿ ಹೂಡಿಕೆ ಮಾಡಿ. ಇದಕ್ಕಾಗಿ ಸ್ವಂತ ಅಧ್ಯಯನದ ಜೊತೆ ನಿಮ್ಮ ಹತ್ತಿರದ ಹೂಡಿಕೆ ಪರಿಣತರೊಂದಿಗೆ ಮುಖಾಮುಖಿ ಸಮಾಲೋಚಿಸಿ.

ನಿಮ್ಮ ಶೈಕ್ಷಣಿಕ ಸಾಲ ಸಂಪೂರ್ಣ ಮರುಪಾವತಿ ಆದ ನಂತರ ಹೆಚ್ಚುವರಿಯಾಗಿ ಉಳಿಯುವ ₹ 7,000ವನ್ನು ಉತ್ತಮ ಮ್ಯೂಚುವಲ್ ಫಂಡ್‌ಗಳಲ್ಲಿ ತೊಡಗಿಸಿ. ಅವಕಾಶವಿದ್ದರೆ, ಬಾಕಿ ಉಳಿದ ಸಾಲದ ಮೊತ್ತವನ್ನು ಅವಧಿಗೂ ಮುನ್ನ ಪಾವತಿಸಿ ಹಾಗೂ ಇಎಂಐ ಪಾವತಿಯ ಹೊರೆಯನ್ನು ಸಂಪೂರ್ಣವಾಗಿ ನಿವಾರಿಸಿಕೊಳ್ಳಿ. ಅದಕ್ಕಾಗಿ ಅಗತ್ಯವಿರುವ ಹಣವನ್ನು ಬ್ಯಾಂಕ್ ಠೇವಣಿಗಳಲ್ಲಿ ಮೊದಲು ಸಂಗ್ರಹಿಸಿ.

ನಿಮ್ಮ ಮುಂದಿನ ಉಳಿತಾಯಕ್ಕೆ ಸಂಬಂಧಿಸಿದಂತೆ: ಸೆಕ್ಷನ್ 80ಸಿ ಅಡಿ ಬರುವ ತೆರಿಗೆ ಉಳಿತಾಯ ಯೋಜನೆಗಳಲ್ಲಿ ಮೊದಲು ಹೂಡಿಕೆ ಮಾಡಿ. ವರ್ಷಕ್ಕೆ ₹ 1.50 ಲಕ್ಷ ಮೊತ್ತವನ್ನು ತೆರಿಗೆಯ ಪ್ರಮಾಣ ನೋಡಿಕೊಂಡು ಹೂಡಿಕೆ ಮಾಡುತ್ತಾ ಹೋಗಿ. ಇದಲ್ಲದೆ, ನಿವೃತ್ತಿ ಬದುಕಿಗಾಗಿ ನೀವು ಈಗಲೇ ಎನ್‌ಪಿಎಸ್‌ನಲ್ಲೂ ಹೂಡಿಕೆ ಆರಂಭಿಸಿ. ಇದರಲ್ಲಿ ನಿಮ್ಮ ವಯಸ್ಸಿಗೆ ಅನುಗುಣವಾಗಿ ಆ್ಯಕ್ಟಿವ್ ವರ್ಗದ ಹೂಡಿಕೆಗಳನ್ನು ಆಯ್ಕೆ ಮಾಡಿ. ವಯಸ್ಸು 50 ವರ್ಷ ಆಗುವತನಕ ಈ ವರ್ಗದಲ್ಲಿ ಶೇ 75ರಷ್ಟು ಮೊತ್ತವನ್ನು ಈಕ್ವಿಟಿ ವಿಭಾಗದಲ್ಲಿ ತೊಡಗಿಸಲಾಗುತ್ತದೆ. ಇದರಿಂದ ದೀರ್ಘಾವಧಿಯಲ್ಲಿ ನಿಮ್ಮ ಹೂಡಿಕೆ ಉತ್ತಮ ನಿಧಿಯನ್ನು ಸಂಗ್ರಹಿಸಿ ಕೊಡಬಲ್ಲದು. ಇದು ಮೇಲಿನ ಒಟ್ಟಾರೆ ₹ 1.50 ಲಕ್ಷದ ತೆರಿಗೆ ಉಳಿತಾಯ ಮಿತಿಯಲ್ಲೇ ಬರುತ್ತದೆ.

ನೀವು ನಿಮ್ಮ ಹೆಸರಲ್ಲಿ ಅವಧಿ ವಿಮೆ ಪಡೆಯುವುದು ಉತ್ತಮ. ಇದಲ್ಲದೆ ವೈದ್ಯಕೀಯ ವಿಮೆ ಯೋಜನೆಯಡಿ ನೀವು ಮತ್ತು ನಿಮ್ಮ ತಂದೆ-ತಾಯಿ ಒಳಗೊಂಡಂತೆ ಫ್ಲೋಟರ್ ಪಾಲಿಸಿ ಪಡೆಯುವ ಬಗ್ಗೆ ವಿಮಾ ಕಂಪನಿಗಳಿಂದ ಹೆಚ್ಚಿನ ಮಾಹಿತಿ ಪಡೆದು ಮುಂದುವರಿಯಿರಿ. ಈ ಎರಡು ವಿಮೆಗಳು ಹೂಡಿಕೆಯಲ್ಲದಿದ್ದರೂ ತೆರಿಗೆ ಲಾಭವನ್ನು ನೀಡುತ್ತವೆ ಹಾಗೂ ಆಪತ್ತಿನ ಸಂದರ್ಭದಲ್ಲಿ ವಿಮಾ ರಕ್ಷೆ ನೀಡುತ್ತವೆ. ಹೂಡಿಕೆಯ ಉದ್ದೇಶಕ್ಕಾಗಿ ಸಾಂಪ್ರದಾಯಿಕ ವಿಮಾ ಯೋಜನೆಯಲ್ಲೂ ಪಾಲ್ಗೊಳ್ಳಿ. ಮುಂದಿನ ವರ್ಷಗಳಲ್ಲಿ ಇನ್ನೂ ಹೆಚ್ಚುವರಿಯಾಗಿ ಹೂಡಿಕೆ ಮಾಡುವ ಹಾಗೂ ತೆರಿಗೆ ಉಳಿಸುವ ಉದ್ದೇಶವಿದ್ದಲ್ಲಿ, ಆದಾಯ ತೆರಿಗೆ ಕಾಯ್ದೆಯ ಸೆಕ್ಷನ್ 80ಸಿಸಿಡಿ(1ಬಿ) ಅಡಿ ₹ 50,000ದ ಹೆಚ್ಚುವರಿ ವಿನಾಯಿತಿಯ ಪ್ರಯೋಜನ ಇರುವ ಹೂಡಿಕೆಯಲ್ಲಿ ಹಣ ತೊಡಗಿಸಿ.

ದೇವರಾಜ, ಬೆಂಗಳೂರು

- **ಪ್ರಶ್ನೆ:** ನನ್ನ ಪಿತ್ರಾರ್ಜಿತ ಆಸ್ತಿಯಿಂದ ಬಂದ ಆದಾಯದಿಂದ ನಾನು ಕೊಂಡುಕೊಂಡಿದ್ದ ಒಂದು ನಿವೇಶನವನ್ನು ₹ 50 ಲಕ್ಷಕ್ಕೆ ಮಾರಿದ್ದೇನೆ. ನನ್ನ ಇಬ್ಬರು ಮಕ್ಕಳಿಗೆ ಅರ್ಧ ಹಣವನ್ನು, ನಾನು ಹಾಗೂ ಹೆಂಡತಿ ಇನ್ನುಳಿದ ಅರ್ಧ ಭಾಗವನ್ನು ಹಂಚಿಕೊಂಡೆವು. ಈಗ ನನ್ನಲ್ಲಿರುವ ಹಣಕ್ಕೆ ಮಾತ್ರ ತೆರಿಗೆಯೋ ಅಥವಾ ಪೂರ್ಣ ಹಣಕ್ಕೆ ತೆರಿಗೆ ಕಟ್ಟಬೇಕೋ?

ಉತ್ತರ: ಆದಾಯ ತೆರಿಗೆ ಕಾನೂನಿನಲ್ಲಿ ಉಲ್ಲೇಖಿಸಲಾದ ಐದು ವರ್ಗದ ಆದಾಯಗಳಲ್ಲಿ ಬಂಡವಾಳ ಆಸ್ತಿ ಮಾರಾಟದಿಂದ ಬಂದ ಆದಾಯದ ಮೇಲಿನ ತೆರಿಗೆಯೂ ಒಂದು. ತೆರಿಗೆದಾರನೊಬ್ಬ ತನ್ನ ಸ್ಥಿರ ಆಸ್ತಿಗಳನ್ನು ಖರೀದಿ ಮೌಲ್ಯಕ್ಕಿಂತ ಅಧಿಕ ಬೆಲೆಗೆ ಮಾರಾಟ ಮಾಡಿದಾಗ ಕಾನೂನಿನ ಇತರ ಉಪವಿಧಿಗಳ ಅನ್ವಯ ಲೆಕ್ಕ ಹಾಕಲಾದ ಲಾಭದ ಮೇಲೆ ತೆರಿಗೆ ಇರುತ್ತದೆ. ಆಸ್ತಿ ಖರೀದಿಸಿದ ಸಮಯದಿಂದ ಎರಡು ವರ್ಷಗಳ ನಂತರ ಮಾರಾಟ ಮಾಡಿದ್ದರೆ ಅಂತಹ ಆಸ್ತಿಯ ಲಾಭದ ಮೇಲೆ ಶೇ 20.8ರಷ್ಟು ತೆರಿಗೆ ಇರುತ್ತದೆ. ಅದರೊಳಗಿನ ಅವಧಿಯಲ್ಲಿ ಮಾರಾಟ ಮಾಡಿದ ಸಂದರ್ಭದಲ್ಲಿ ವೈಯಕ್ತಿಕ ತೆರಿಗೆ ದರ ಅನ್ವಯವಾಗುತ್ತದೆ.

ನೀವು ಗಳಿಸಿದ ಐವತ್ತು ಲಕ್ಷ ರೂಪಾಯಿ ಮಾರಾಟ ಬೆಲೆಯಷ್ಟೇ. ಇಲ್ಲಿ, ನಿಮಗೆ ಬಂದ ಒಟ್ಟು ಹಣ ತೆರಿಗೆಗೆ ಅನ್ವಯ ಆಗುವುದಿಲ್ಲ. ಈ ಮೊತ್ತದಲ್ಲಿ ಅಸಲು ಮೊತ್ತ ಕಳೆದು ಬರುವ ಲಾಭಾಂಶ ಲೆಕ್ಕ ಹಾಕಲು ನಿಮ್ಮ ಆಸ್ತಿಯ ಬೆಲೆಯನ್ನು ಗೊತ್ತುಮಾಡಿಕೊಳ್ಳಿ. ಅನಂತರ ತೆರಿಗೆ ನಿಯಮಗಳಂತೆ ಬರುವ ಲಾಭದ ಮೇಲೆ ಅನ್ವಯವಾಗುವ ತೆರಿಗೆಯನ್ನು ಭೂ ಮಾಲೀಕರಾದ ನೀವು, ಮಾರಾಟ ಮಾಡಿದ ವರ್ಷದಲ್ಲಿ ತೆರಬೇಕಾಗುತ್ತದೆ. ಆದರೆ ನೀವು ಹಂಚಿಕೆ ಮಾಡಿದ ಮೊತ್ತವನ್ನು ಸಮೀಪದ ಸಂಬಂಧಿಕರ ವರ್ಗದಲ್ಲಿ ಹಂಚಲಾದ ಉಡುಗೊರೆ ಎಂದು ಪರಿಗಣಿಸಲಾಗುವುದರಿಂದ ನಿಮ್ಮ ಪತ್ನಿ ಹಾಗೂ ಮಕ್ಕಳು ಮತ್ತೆ ತೆರಿಗೆ ಕೊಡಬೇಕಾಗಿಲ್ಲ. ಅವರಿಗೆ ವರ್ಗಾಯಿಸಲಾದ ಮೊತ್ತಕ್ಕೆ ದಾಖಲೆಯಾಗಿ ಅಗತ್ಯ ಗಿಫ್ಟ್ ಡೀಡ್ ಮಾಡಿಸಿಕೊಳ್ಳಿ.

ಹಣಕಾಸು, ತೆರಿಗೆ ಸಮಸ್ಯೆಗೆ ಪರಿಹಾರ

ಹಣಕಾಸಿಗೆ ಸಂಬಂಧಿಸಿದ ಪ್ರಶ್ನೆಗಳನ್ನು ಪತ್ರದಲ್ಲಿ (ದೂರವಾಣಿ ಸಂಖ್ಯೆ ಸಹಿತ) ಬರೆದು ಕಳುಹಿಸಿ. ವಿಳಾಸ: ಪ್ರಶ್ನೋತ್ತರ, ವಾಣಿಜ್ಯ ವಿಭಾಗ, ಪ್ರಜಾವಾಣಿ, ನಂ.75, ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು-560001
ಇ-ಮೇಲ್: businessdesk@prajavani.co.in

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

An Initiative from Sri. M. S. Ramaiah
Navkis College of Engineering, Hassan
SHRADDHAVAN LABHATHE GNANAM

Navkis Group of Institutions, founded by Shri Anandram Ramaiah from the House of MS Ramaiah is amongst the reputed educational institution chains in Karnataka with presence in Bangalore, Mysore and Hassan.
The Navkis Group manages and operates Preschools, CBSE K12 schools, PU Colleges and Higher Educational Institutions offering professional courses in Engineering, Commerce and Management.
We seek suitably qualified and experienced candidates in our Engineering College @Hassan as under.

Professor | Associate Professor | Assistant Professor
in the following departments
- Mathematics
- Civil Engineering
- Computer Science & Engineering
- Artificial Intelligence & Data Science Engineering
- Electronics & Communication Engineering

- Mininum qualification for above positions is as per AICTE norms.
- Salary will be as per VI AICTE pay scale and negotiable for deserving candidates.
- Highly qualified candidates may be considered for senior positions.
- Selection is subject to the discretion of the management.

Interested candidates may send their resume by email on or before 16th October, 2022 to the Human Resource Department, Navkis College of Engineering, Hassan.
KIADB, Thimmanahalli Industrial Area, Kandali, Hassan 573 217
Email: hroffice@navkisedu.com | Call 9036288516

ಭವಿಷ್ಯ
Astrology
ಕೆಲಸದ ನಂತರ ಕಾಣಿಕೆ. ಸ್ತ್ರೀ ಪುರುಷ ವಶೀಕರಣ. ನಿಮ್ಮ ಯಾವುದೇ ಗುಪ್ತಸಮಸ್ಯೆಗಳಿಗೆ, ಇಷ್ಟಪಟ್ಟವರು. ನಿಮ್ಮಂತೆ ಆಗಲು, 2 ದಿನದಲ್ಲಿ ಪರಿಹಾರ: 9591580089.

ವ್ಯಾಪಾರ
Business to Business
Finance
FINANCE Available against Property (Simple Mortgage), Cheques and Salary Slips
M/s. MURUGAN ASSOCIATES
Contact: 88380 32143, 86086 19358
e-Mail: murugankmurugan68@gmail.com
Business Offers
Franchise

ಪ್ರವಾಸ
Travel
3.11.2022ರಿಂದ ಎಸಿ.ಬಸ್ಸು ಎಸಿ.ರೂನೊಂದಿಗೆ ಪಂಚರಾಮ ಕ್ಷೇತ್ರ ಸಮೇತ ಭದ್ರಾಚಲಂ, ಅನ್ನಾವರಂ,ಹೈದರಾಬಾದ್, ವಾಸವಿಪೆನ್ನಗೊಂಡ,ಅಹೋಬಲಂ. 39000/`ಹಾಗೂ 9ದಿನಗಳ ನವಗ್ರಹ ಸಮೇತ ಗುರುವಾಯೂರು,ಮದುರೈ, ರಾಮೇಶ್ವರ, ತ್ರಿವೇಂದ್ರಮ್, ಕನ್ಯಾಕುಮಾರಿ 27000/`ಏಷ್ಯನ್ ಟ್ರಾವೆಲ್`ಲೈನ್ಸ್,164/3` ಅರ್.ವಿ.ರಸ್ತೆ.ಬೆಂಗಳೂರು. ಸಂಪರ್ಕಿಸಿ:`ಷಣ್ಮುಗಾನಂದ. 8105657052/ 26565085
ವಿಮಾನ/ A/C ಬಸ್ಸಿನಲ್ಲಿ 18.11.2022 ರಿಂದ 16 ದಿನಗಳ ಅಷ್ಟಜ್ಯೋತಿರ್ಲಿಂಗಗಳ ಪ್ರವಾಸ. ಸೋಮನಾಥ ದ್ವಾರಕ,ನಾಗೇಶಂ ಮೌಂಟ್‌ಅಬು ಮಹಾಕಾಳೇಶ್ವರ ಓಂಕಾರೇಶ್ವರ್,ಭಾವನಗರ ವಲ್ಲಭಬಾಯಿ ಪಟೇಲರ ಪ್ರತಿಮೆ ಇತ್ಯಾದಿ. ಸಂಪರ್ಕಿಸಿ: ಜೈರಾಮ್ ಟೂರ್ಸ್ ವಿ.ವಿ.ಪುರಂ ಬೆಂಗಳೂರು-4. 9342514289 9686721196
Travel Agencies
10/11/2022 6/10 ದಿನಗಳು AC ಬಸ್ಸಿನಲ್ಲಿ ಕಾಶಿ, ಗಯಾ, ಬುದ್ಧಗಯಾ, ಅಲಹಾಬಾದ್, ಅಯೊಧ್ಯ 15500/ (ಕೆಲವೇ ಸೀಟುಗಳಿವೆ) ಅಂಡಮಾನ್ ಹವಳದ್ವೀಪ 5/8 ದಿನಗಳು ಹಡಗು/ವಿಮಾನದಲ್ಲಿ. ರಾಯಲ್ ಪ್ಯಾಕೇಜ್. ಶ್ರೀಸಾಯಿ ರಾಘವೇಂದ್ರ ಟ್ರಾವೆಲ್ಸ್9739847429/ 9845560219.

Franchise OPPORTUNITY Right Now In Karnataka
START YOUR HOME TOWN YOUR OWN BUSINESS
You Are Own Boss
• QUALIFIED OPTOMETRIST • LIFE TIME EYE CHECK-UP SYSTEMS • HOME VISIT EYE CHECK-UP • NATIONAL AND INTERNATIONAL LENS AND FREMS LUXURY BRAND ITEMS
i2 OPTICAL STORE
BANK LOAN FACILITY PROVIDE*
CONTACT : 9741285359
e-mail i2franchise@gmail.com

ADMISSION CORNER
NARGUND GROUP OF INSTITUTIONS
ADMISSION OPEN FOR 2022-2023
+91 8026720604 | +91 9886201746
+91 7019425622 | +91 9448270604
office@nargund.edu.in
www.nargund.edu.in
2nd main, Dattatreyanagar, BSK 3rd stage, Bangalore-85
BANGALORE CAMPUS
Nargund College of Pharmacy — B. Pharm | D. Pharm | Pharm. D M. Pharm | Ph. D
Nargund College of Physiotherapy — Bachelor of Physiotherapy
Nargund Independent PU College — PCMB | HEBA
KOPPAL CAMPUS
Dr. Gurachar Nargund College of Pharmacy — B. PHARM | D. PHARM
Bheemajja PU College — PCMB | HEBA

ಉದ್ಯೋಗಾವಕಾಶ
Cook
ಮಲ್ಲೇಶ್ವರಂನಲ್ಲಿ ಫೈನ್ ಡೈನಿಂಗ್ ರೆಸ್ಟೋರೆಂಟ್ ಪ್ರಾರಂಭವಾಗುತ್ತಿದ್ದು ಅನುಭವಸ್ಥ ಅಡುಗೆ ಭಟ್ಟರು ಸೌತ್/ನಾರ್ತ್ ಮಾಸ್ಟರ್ ಗಳು ಹಾಗೂ ದೋಸೆ ಭಟ್ಟರು ಬೇಕಾಗಿದ್ದಾರೆ. ಉದ್ಯಮದಲ್ಲಿ ಸಂಬಳ ಅತ್ಯುತ್ತಮವಾಗಿರುತ್ತದೆ ಸಂಪರ್ಕಿಸಿ: 9845577977/ 9632044727/ 8884442517.

Part-Time Jobs
WANTED PART-TIME Field Verification Executives all over Karnataka. Call or WhatsApp : +91 8197713169
ಕನ್ನಡ ಮತ್ತು ಇಂಗ್ಲೀಷ್ ಓದಲು,ಬರೆಯಲು ಬರುವ ಯುವಕ/ಯುವತಿಯರಿಗೆ, ಗೃಹಿಣಿಯರಿಗೆ, ಮನೆಯಲ್ಲೆ ಕುಳಿತು,ಬುಕ್ ಬರೆಯುವ ಮೂಲಕ ತಿಂಗಳಿಗೆ 14,000- 16,000/- ರವರೆಗೆ ಸಂಪಾದಿಸಿ.(ಕೊರಿಯರ್ ಇದೆ).8884686861, 8884686860.

ವಿದ್ಯಾರ್ಥಿಗಳಿಗೆ, ಗೃಹಿಣಿಯರಿಗೆ & ವಯಸ್ಕರಿಗೆ ಮನೆಯಲ್ಲಿಯೇ ಕುಳಿತು ನಾವು ಕೊಡುವ ಫಾರಂನಲ್ಲಿ ಅಂಕಿಗಳನ್ನು & ಅಕ್ಷರಗಳನ್ನು ತುಂಬುವ ಹಾಗೂ ಬುಕ್ ಬರೆಯುವ ಮೂಲಕ ತಿಂಗಳಿಗೆ 15000-20000 ಗಳಿಸಿ. ಕರೆಮಾಡಿ: 9611225266/ 9611225388
ಕನ್ನಡ ಮತ್ತುಇಂಗ್ಲೀಷ್ ಓದಲು,ಬರೆಯಲು ಬರುವ ಯುವಕ/ಯುವತಿಯರಿಗೆ,ಗೃಹಿಣಿಯರಿಗೆ ವಯಸ್ಸಾದವರು ಮನೆಯಲ್ಲೇ ಕುಳಿತು ನಾವು ಕೊಡುವ ಬುಕ್ ಬರೆಯುವ ಮೂಲಕ ತಿಂಗಳಿಗೆ 12,000- 15,000 ವರೆಗೆ ಸಂಪಾದಿಸಿ.ಕೊರಿಯರ್ ಸೌಲಭ್ಯವಿದೆ.8884777502, 8884777503

Accounts & Finance
REQUIRED SENIOR accountant aged 40 for manufacturing facility. Should reside around Yeshwanthpur/ Peenya.Email - cofplanter@gmail.com. 9480237094
General
ಕರ್ನಾಟಕದ್ಯಂತ MNC ಕಂಪನಿಗಳಿಗೆ SSLC ಮೇಲ್ಪಟ್ಟು 1986 ಯುವಕರು, ಯುವತಿಯರು ಬೇಕಾಗಿದ್ದಾರೆ. ವಸತಿಯೂಟವಿರುತ್ತದೆ. ಸಂಬಳ 16,000- 80000. 7760014526, 7795199673
ಕಂಪನಿಗಳಿಗೆ ಬೇಕಾಗಿದ್ದಾರೆ: ಟಾಟಾಮೋಟಾರ್ಸ್, ಟಯೋಟಾ, ಟಿ.ವಿ.ಎಸ್, ಬ್ರಿಟಾನಿಯಾಗಳಿಗೆ ಎಸ್.ಎಸ್.ಎಲ್.ಸಿ, ಪಿಯುಸಿ, ಡಿಗ್ರಿ, ಐಟಿಐನವರುಗಳು 18,100- 56,000 (ವಿದ್ಯಾರ್ಹತೆಯಿಲ್ಲದವರಿಗೂ) ವಸತಿಯೂಟದೊಂದಿಗೆ. 9686220858
ರಾವ್ ಸಂಸ್ಥೆಗೆ ವಯಸ್ಸಾದವರನ್ನು, ರೋಗಿಗಳನ್ನು, ಮಕ್ಕಳನ್ನು ನೋಡಿಕೊಳಲ್ಲೂ ಮನೆಕೆಲಸಕ್ಕೆ, ಅಡುಗೆಗೆ, ಮಹಿಳೆಯರು ಹುಡುಗಿಯರು, ಹುಡುಗರು ಬೇಕಾಗಿದ್ದಾರೆ ಊಟವಸತಿಯಿದೆ 10,000 - 15,000. 8951315839, 9880545002

Wanted
ತಕ್ಷಣ ಬೇಕಾಗಿದ್ದಾರೆ. ಬೆಂಗಳೂರಿನಲ್ಲಿ ಕೆಲಸಕ್ಕೆ ಮಹಿಳೆಯರು ಅಥವಾ ಪುರುಷರು ಅಡುಗೆ ಕೆಲಸಕ್ಕೆ, ಮನೆಕೆಲಸಕ್ಕೆ, ಮಗುವನ್ನು, ಬಾಣಂತಿಯರನ್ನು, ವೃದ್ಧರನ್ನು, ವಯಸ್ಸಾದವರನ್ನು ರೋಗಿಯನ್ನು ನೋಡಿಕೊಳ್ಳಲು ಜನರುಬೇಕಾಗಿದ್ದಾರೆ. ಅನುಭವ ಇರಬಹುದು ಅಥವಾ ಇಲ್ಲದಿರಬಹುದು. ಉಚಿತ ಊಟ ವಸತಿ ಸಂಬಳ 12,000/- ರಿಂದ 15,000/- ESI, PF ಸೌಲಭ್ಯವಿರುತ್ತದೆ. ಬೆಂಗಳೂರು ಸಂಪರ್ಕಿಸಿ: 9606523337, 9606385001

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
GM-Advertisement

DH DECCAN HERALD ಪ್ರಜಾವಾಣಿ
JOB CORNER
BOOK DOUBLE COLUMN JOB ADS ON WEEDAY + SUNDAY
@ Rs. 750/- pscm
condition apply*
For More Details Contact:
9731810277 | 9901641752 | 9845114560 | 9886213331
080- 45557163 | 45557164

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ
ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ
ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.
ದಯವಿಟ್ಟು ಸಂಪರ್ಕಿಸಿ:
Vishal : 9845114560
Jerry : 9731810277 | Tanveer : 9886213331
Ravichandra : 9901641752 | Anitha R: 9900428036
ನಿಮ್ಮ ಮಾರ್ಗದರ್ಶನಕ್ಕಾಗಿ ಕೆಲವು ಅನುಕೂಲಕರ ಫಾರ್ಮ್ಯಾಟ್ ಹಾಗೂ ಟೆಕ್ಸ್ಟ್ ಆಯ್ಕೆಗಳನ್ನು ಹೊಂದಿರುವ ಒಂದು ವೆಬ್‌ಸೈಟ್‌ನ್ನು ಕೂಡ ನಾವು ಆರಂಭಿಸಿದ್ದೇವೆ. ದಯವಿಟ್ಟು ಲಾಗಾನ್ ಮಾಡಿರಿ
https://homages.deccanherald.com
ಅಥವಾ QR code ಸ್ಕ್ಯಾನ್ ಮಾಡಿ
ನಮ್ಮ ಆನ್‌ಲೈನ್ ಬುಕ್ಕಿಂಗ್ ಫಾರಂ ಪಡೆಯಿರಿ.

ಟಿ20: ಕಳಪೆ ಫೀಲ್ಡಿಂಗ್‌ಗೆ ಬೆಲೆ ತೆತ್ತ ಭಾರತ; ರಾಹುಲ್, ಹಾರ್ದಿಕ್ ಆಟ ವ್ಯರ್ಥ; ಆಸೀಸ್‌ಗೆ ಜಯ

ಮೊಹಾಲಿಯಲ್ಲಿ ಗ್ರೀನ್, ವೇಡ್ ಅಬ್ಬರ

ಮೊಹಾಲಿ (ಪಿಟಿಐ): ಭಾರತದ ಫೀಲ್ಡರ್‌ಗಳು ಬಿಟ್ಟ ಕ್ಯಾಚ್‌ಗಳು ತುಟ್ಟಿಯಾದವು. ಇದರಿಂದಾಗಿ ಹಾರ್ದಿಕ್ ಪಾಂಡ್ಯ ಹಾಗೂ ಕೆ.ಎಲ್. ರಾಹುಲ್ ಅಬ್ಬರದ ಅರ್ಧಶತಕಗಳಿಗೆ ಗೆಲುವಿನ ಫಲ ಸಿಗಲಿಲ್ಲ.

ಮಂಗಳವಾರ ಪಂಜಾಬ್ ಕ್ರಿಕೆಟ್ ಸಂಸ್ಥೆಯ ಐ.ಎಸ್. ಬಿಂದ್ರಾ ಕ್ರೀಡಾಂಗಣದಲ್ಲಿ ನಡೆದ ಮೊದಲ ಟಿ20 ಪಂದ್ಯದಲ್ಲಿ ಆಸ್ಟ್ರೇಲಿಯಾ ತಂಡವು 4 ವಿಕೆಟ್‌ಗಳಿಂದ ಜಯಿಸಿತು.

ಆಸ್ಟ್ರೇಲಿಯಾ ತಂಡವು ಟಾಸ್ ಗೆದ್ದು ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿತು. ರಾಹುಲ್ (55; 35ಎ, 4X4, 6X3) ಹಾಗೂ ಹಾರ್ದಿಕ್ (ಅಜೇಯ 71; 30ಎ, 4X7, 6X5) ಅವರ ಅಮೋಘ ಬ್ಯಾಟಿಂಗ್‌ನಿಂದಾಗಿ ತಂಡ 20 ಓವರ್‌ಗಳಲ್ಲಿ 6 ವಿಕೆಟ್‌ಗಳಿಗೆ 208 ರನ್ ಗಳಿಸಿತು.

ಆದರೆ, ಆಸ್ಟ್ರೇಲಿಯಾದ ಇನಿಂಗ್ಸ್‌ನ ಎಂಟನೇ ಓವರ್‌ನಲ್ಲಿ ಅಕ್ಷರ್ ಪಟೇಲ್ ಕೈಬಿಟ್ಟ ಕ್ಯಾಚ್‌ನಿಂದ ಜೀವದಾನ ಪಡೆದ ಕ್ಯಾಮರಾನ್ ಗ್ರೀನ್ (61; 30ಎ), 9ನೇ ಓವರ್‌ನಲ್ಲಿ ಅಕ್ಷರ್ ಬೌಲಿಂಗ್‌ನಲ್ಲಿ ರಾಹುಲ್ ಕೈಚೆಲ್ಲಿದ ಕ್ಯಾಚ್‌ನಿಂದ ಉಳಿದುಕೊಂಡ ಸ್ಟೀವ್ ಸ್ಮಿತ್ (35; 24ಎ) ಹಾಗೂ 18ನೇ ಓವರ್‌ನಲ್ಲಿ ಹರ್ಷಲ್ ಪಟೇಲ್ ತಮ್ಮದೇ ಬೌಲಿಂಗ್‌ನಲ್ಲಿ ಮ್ಯಾಥ್ಯೂ ವೇಡ್ ಕ್ಯಾಚ್ ಪಡೆಯುವಲ್ಲಿ ವಿಫಲರಾಗಿದ್ದು ಆಸ್ಟ್ರೇಲಿಯಾಕ್ಕೆ ವರದಾನವಾಯಿತು.

ಇದಲ್ಲದೇ 19ನೇ ಓವರ್‌ನಲ್ಲಿ ಭುವನೇಶ್ವರ್ ಕುಮಾರ್ ಬಿಟ್ಟುಕೊಟ್ಟ 16 ರನ್‌ಗಳೂ ಪ್ರವಾಸಿ ಬಳಗದ ಗೆಲುವು ಸುಲಭಗೊಳಿಸಿದವು. ತಂಡವು 19.2 ಓವರ್‌ಗಳಲ್ಲಿ 6 ವಿಕೆಟ್‌ಗಳಿಗೆ 211 ರನ್ ಗಳಿಸಿತು.

ಕ್ಯಾಮರಾನ್ ಗ್ರೀನ್ ಬ್ಯಾಟಿಂಗ್ ಸೊಬಗು –ಎಎಫ್‌ಪಿ ಚಿತ್ರ

ರಾಹುಲ್, ಹಾರ್ದಿಕ್ ಅಬ್ಬರ: ಏಷ್ಯಾ ಕಪ್ ಟೂರ್ನಿಯಲ್ಲಿ ವೈಫಲ್ಯ ಅನುಭವಿಸಿದ್ದ ರಾಹುಲ್ ಇಲ್ಲಿ ಚೆಂದದ ಆಟವಾಡಿದರು. ಅವರು ಸೂರ್ಯಕುಮಾರ್ (46; 25ಎ, 4X2, 6X4) ಜೊತೆಗೂಡಿ ಮೂರನೇ ವಿಕೆಟ್‌ಗೆ 67 ರನ್‌ಗಳನ್ನು ಸೇರಿಸಿದರು.

12ನೇ ಓವರ್‌ನಲ್ಲಿ ಜೋಷ್ ಹ್ಯಾಜಲ್‌ವುಡ್ ಬೌಲಿಂಗ್‌ನಲ್ಲಿ ರಾಹುಲ್ ಔಟಾದರು. 14ನೇ ಓವರ್‌ನಲ್ಲಿ ಗ್ರೀನ್ ಎಸೆತದಲ್ಲಿ ಸೂರ್ಯ ಕೂಡ ಔಟಾದರು.

ಇನ್ನೊಂದು ಬದಿಯಲ್ಲಿ ಕ್ರೀಸ್‌ಗೆ ಬಂದ ಬ್ಯಾಟರ್‌ಗಳು ಹೆಚ್ಚು ಹೊತ್ತು ಆಡದೇ ನಿರ್ಗಮಿಸಿದರು. ಈ ನಡುವೆಯೇ ಹಾರ್ದಿಕ್ ಭುಜಬಲ ಪರಾಕ್ರಮ ಮೆರೆದರು.

ಕೇವಲ 30 ಎಸೆತಗಳಲ್ಲಿ 71 ರನ್‌ಗಳನ್ನು ಗಳಿಸಿದರು. ಅವರ ಬಿರುಸಿನ ಆಟಕ್ಕೆ ಇನಿಂಗ್ಸ್‌ನ ಕೊನೆಯ ಎರಡು ಓವರ್‌ಗಳಲ್ಲಿ 34 ರನ್‌ಗಳು ಸೇರಿದವು. ತಂಡದ ಮೊತ್ತವೂ ದ್ವಿಶತಕದ ಗಡಿ ದಾಟಿತು.

ಹಾರ್ದಿಕ್ 236.67ರ ಸ್ಟ್ರೈಕ್‌ರೇಟ್‌ನಲ್ಲಿ ರನ್ ಗಳಿಸಿದರು.

ಕಾರ್ತಿಕ್‌ಗೆ ಸ್ಥಾನ: ಈ ಪಂದ್ಯದಲ್ಲಿ ಅನುಭವಿ ವಿಕೆಟ್‌ಕೀಪರ್ ಬ್ಯಾಟರ್ ದಿನೇಶ್ ಕಾರ್ತಿಕ್ ಅವರಿಗೆ ಸ್ಥಾನ ನೀಡಲಾಯಿತು. ರಿಷಭ್ ಪಂತ್ ವಿಶ್ರಾಂತಿ ಪಡೆದರು. ವೇಗಿ ಬೂಮ್ರಾ ಅವರಿಗೂ ವಿಶ್ರಾಂತಿ ನೀಡಲಾಯಿತು.

ಸ್ಕೋರ್ ಕಾರ್ಡ್

ಭಾರತ 6ಕ್ಕೆ 208 (20 ಓವರ್)

ರಾಹುಲ್ ಸಿ ಎಲಿಸ್ ಬಿ ಹ್ಯಾಜಲ್‌ವುಡ್ 55 (35ಎ, 4X4, 6X3), ರೋಹಿತ್ ಸಿ ಎಲಿಸ್ ಬಿ ಹ್ಯಾಜಲ್‌ವುಡ್ 11 (9ಎ, 4X1, 6X1), ವಿರಾಟ್ ಸಿ ಗ್ರೀನ್ ಬಿ ಎಲಿಸ್ 2 (7ಎ), ಸೂರ್ಯಕುಮಾರ್ ಸಿ ವೇಡ್ ಬಿ ಗ್ರೀನ್ 46 (25ಎ, 4X2, 6X4), ಹಾರ್ದಿಕ್ ಔಟಾಗದೆ 71 (30ಎ, 4X7, 6X5), ಅಕ್ಷರ್ ಸಿ ಗ್ರೀನ್ ಬಿ ಎಲಿಸ್ 6 (5ಎ, 4X1), ದಿನೇಶ್ ಎಲ್‌ಬಿಡಬ್ಲ್ಯು ಬಿ ಎಲಿಸ್ 6 (5ಎ), ಹರ್ಷಲ್ ಔಟಾಗದೆ 7 (4ಎ, 4X1)

ಇತರೆ: (ವೈಡ್ 4) 4

ವಿಕೆಟ್ ಪತನ: 1-21 (ರೋಹಿತ್ ಶರ್ಮಾ, 2.4), 2-35 (ವಿರಾಟ್ ಕೊಹ್ಲಿ, 4.5), 3-103 (ಕೆ.ಎಲ್.ರಾಹುಲ್, 11.5), 4-126 (ಸೂರ್ಯಕುಮಾರ್ ಯಾದವ್, 13.3), 5-146 (ಅಕ್ಷರ್ ಪಟೇಲ್, 15.5), 6-176 (ದಿನೇಶ್ ಕಾರ್ತಿಕ್, 18.1)

ಬೌಲಿಂಗ್: ಜೋಶ್ ಹ್ಯಾಜಲ್‌ವುಡ್ 4–0–39–2, ಪ್ಯಾಟ್ ಕಮಿನ್ಸ್ 4–0–47–0, ಆ್ಯಡಂ ಜಂಪಾ 4–0–36–0, ನೇಥನ್ ಎಲಿಸ್ 4–0–30–3, ಕ್ಯಾಮರಾನ್ ಗ್ರೀನ್ 3–0–46–1, ಗ್ಲೆನ್ ಮ್ಯಾಕ್ಸ್‌ವೆಲ್ 1–0–10–0

ಆಸ್ಟ್ರೇಲಿಯಾ 6ಕ್ಕೆ 211 (19.2 ಓವರ್)

ಫಿಂಚ್ ಬಿ ಅಕ್ಷರ್ 22 (13ಎ, 4X3, 6X1), ಗ್ರೀನ್ ಸಿ ಕೊಹ್ಲಿ ಬಿ ಅಕ್ಷರ್ 61 (30ಎ, 4X8, 6X4), ಸ್ಮಿತ್ ಸಿ ದಿನೇಶ್ ಬಿ ಉಮೇಶ್ 35 (24ಎ, 4X3, 6X1), ಮ್ಯಾಕ್ಸ್‌ವೆಲ್ ಸಿ ದಿನೇಶ್ ಬಿ ಉಮೇಶ್ 1 (3ಎ), ಇಂಗ್ಲಿಸ್ ಬಿ ಅಕ್ಷರ್ 17 (10ಎ, 4X3), ಟಿಮ್ ಸಿ ಹಾರ್ದಿಕ್ ಬಿ ಚಾಹಲ್ 18 (14ಎ, 4X1, 6X1), ವೇಡ್ ಔಟಾಗದೆ 45 (21ಎ, 4X6, 6X2), ಕಮಿನ್ಸ್ ಔಟಾಗದೆ 4 (1ಎ, 4X1)

ಇತರೆ: (ಲೆಗ್‌ಬೈ 2, ವೈಡ್ 6) 8

ವಿಕೆಟ್ ಪತನ: 1-39 (ಆ್ಯರನ್ ಫಿಂಚ್, 3.3), 2-109 (ಕ್ಯಾಮರಾನ್ ಗ್ರೀನ್, 10.1), 3-122 (ಸ್ಟೀವನ್ ಸ್ಮಿತ್, 11.3), 4-123 (ಗ್ಲೆನ್ ಮ್ಯಾಕ್ಸ್‌ವೆಲ್, 11.6), 5-145 (ಜೋಶ್ ಇಂಗ್ಲಿಸ್, 14.1), 6-207 (ಟಿಮ್ ಡೇವಿಡ್, 19.1)

ಬೌಲಿಂಗ್: ಭುವನೇಶ್ವರ್ ಕುಮಾರ್ 4–0–52–0, ಉಮೇಶ್ ಯಾದವ್ 2–0–27–2, ಅಕ್ಷರ್ ಪಟೇಲ್ 4–0–17–3, ಯುಜುವೇಂದ್ರ ಚಾಹಲ್ 3.2–0–42–1, ಹರ್ಷಲ್ ಪಟೇಲ್ 4–0–49–0, ಹಾರ್ದಿಕ್ ಪಾಂಡ್ಯ 2–0–22–0

ಫಲಿತಾಂಶ: ಆಸ್ಟ್ರೇಲಿಯಾಕ್ಕೆ 4 ವಿಕೆಟ್ ಗೆಲುವು

ಚೆಂಡಿನ ಹೊಳಪು: ಎಂಜಲು ಬಳಕೆ ನಿಷೇಧ

ಅಕ್ಟೋಬರ್ 1ರಿಂದ ಐಸಿಸಿ ಪರಿಷ್ಕೃತ ನಿಯಮ ಜಾರಿ

ನವದೆಹಲಿ (ಪಿಟಿಐ): ಕ್ರಿಕೆಟ್ ಪಂದ್ಯಗಳಲ್ಲಿ ಚೆಂಡಿನ ಹೊಳಪು ನಿರ್ವಹಿಸಲು ಎಂಜಲು ಬಳಸುವುದನ್ನು ಶಾಶ್ವತವಾಗಿ ನಿಷೇಧಿಸಲಾಗಿದೆ.

ಅಕ್ಟೋಬರ್ 1ರಿಂದ ಜಾರಿಯಾಗಲಿರುವ ಪರಿಷ್ಕೃತ ನಿಯಮಗಳ ಅಂತಿಮ ಪಟ್ಟಿಯನ್ನು ಅಂತರರಾಷ್ಟ್ರೀಯ ಕ್ರಿಕೆಟ್ ಕೌನ್ಸಿಲ್ (ಐಸಿಸಿ) ಮಂಗಳವಾರ ಪ್ರಕಟಿಸಿದೆ.

ಕೋವಿಡ್ ಕಾಲಘಟ್ಟದಲ್ಲಿ ಚೆಂಡಿಗೆ ಎಂಜಲು ಬಳಸುವುದನ್ನು ತಾತ್ಕಾಲಿಕವಾಗಿ ತಡೆ ನೀಡಲಾಗಿತ್ತು. ಈಗ ಆ ನಿಯಮವನ್ನು ಶಾಶ್ವತವಾಗಿ ಜಾರಿ ಮಾಡಲಾಯಿತು. ಕೊನೆಯ ಹಂತದ ಓವರ್‌ಗಳಲ್ಲಿ ಚೆಂಡಿನ ಹೊಳಪು ಕುಂದುವುದರಿಂದ ಬೌಲರ್ ಗಳಿಗೆ ರಿವರ್ಸ್ ಸ್ವಿಂಗ್ ಮಾಡುವುದು ಕಠಿಣವಾಗಲಿದೆ ಎನ್ನಲಾಗಿದೆ. ಇದರಿಂದಾಗಿ ರಿವರ್ಸ್ ಸ್ವಿಂಗ್ ಎಸೆತಗಳು ನೇಪಥ್ಯಕ್ಕೆ ಸರಿಯಬಹುದು.

ಉಳಿದಂತೆ ಇನ್ನೂ ಕೆಲವು ಪ್ರಮುಖ ನಿಯಮಗಳನ್ನು ಪರಿಷ್ಕರಣೆ ಮಾಡಲಾಗಿದೆ.

ನಾನ್‌ಸ್ಟ್ರೈಕರ್ ಬ್ಯಾಟರ್‌ಗಳು ಎಸೆತ ಹಾಕುವ ಮುನ್ನವೇ ಕ್ರೀಸ್‌ನಿಂದ ಹೊರಗಡಿಯಿಟ್ಟಿದ್ದರೆ ರನೌಟ್ ಮಾಡಲು ಬೌಲರ್‌ಗೆ ಈಗ ಅವಕಾಶ ಇದೆ. ಇನ್ನು ಮುಂದೆ ಇದನ್ನು ಮಂಕಡಿಂಗ್ ಎಂದೂ ಕರೆಯಲಾಗುವುದಿಲ್ಲ. ಆದರೆ ರನ್‌ಔಟ್ ಎಂದು ಪರಿಗಣಿಸಲಾಗುವುದು.

ಐಪಿಎಲ್ ಟೂರ್ನಿಯಲ್ಲಿ ಸ್ಪಿನ್ನರ್ ಆರ್. ಅಶ್ವಿನ್ ಹಾಗೂ ಇಂಗ್ಲೆಂಡ್‌ನ ಜೋಸ್ ಬಟ್ಲರ್ ಅವರನ್ನು 'ಮಂಕಡಿಂಗ್' ರೀತಿಯಲ್ಲಿ ಔಟ್ ಮಾಡಿದಾಗ ಬಹಳಷ್ಟು ಪರ–ವಿರೋಧ ಚರ್ಚೆಗಳು ನಡೆದಿದ್ದವು. ಈ ರೀತಿ ಔಟ್ ಮಾಡುವುದು ಬ್ಯಾಟರ್‌ಗಳಿಗೆ ಮಾಡುವ ಅವಮಾನ ಎಂದೂ ಹೇಳಲಾಗಿತ್ತು.

ಪ್ರಮುಖ ನಿಯಮಗಳ ಪರಿಷ್ಕರಣೆ

- ಚೆಂಡನ್ನು ಹೊಳಪುಗೊಳಿಸಲು ಮಾಡುತ್ತಿದ್ದ ಎಂಜಲು ಬಳಕೆಗೆ ಶಾಶ್ವತ ನಿಷೇಧ
- ಏಕದಿನ ಹಾಗೂ ಟೆಸ್ಟ್ ಪಂದ್ಯಗಳಲ್ಲಿ ಬ್ಯಾಟರ್‌ಗಳು ಕ್ರೀಸ್‌ಗೆ ಎರಡು ನಿಮಿಷಗಳಲ್ಲಿ ಬರಬೇಕು. ಈ ಮೊದಲು ಮೂರು ನಿಮಿಷದ ನಿಯಮ ಇತ್ತು. ಟಿ20 ಮಾದರಿಯಲ್ಲಿ ಮೊದಲಿನಂತೆ 90 ಸೆಕೆಂಡುಗಳ ಅವಧಿಯೇ ಮುಂದುವರಿಯುವುದು.

- ಪಿಚ್‌ನಲ್ಲಿ ಬೌಲರ್‌ಗಳು ನಿಯಮಬಾಹಿರ ಹಾಗೂ ದುರುದ್ದೇಶಪೂರ್ವಕವಾಗಿ ಓಡಿದರೆ ತಂಡಕ್ಕೆ ಐದು ರನ್‌ಗಳ ದಂಡ ಹಾಕಲಾಗುವುದು. ಅಲ್ಲದೇ ಆ ಎಸೆತವನ್ನು ಡೆಡ್ ಬಾಲ್ ಎಂದು ಘೋಷಿಸಲಾಗುವುದು.
- ಮಂಕಡಿಂಗ್ ಕೈಬಿಡಲಾಗಿದ್ದು, ಇನ್ನು ಮುಂದೆ ಇದನ್ನು ರನೌಟ್ ಎಂದು ಪರಿಗಣಿಸಲಾಗುವುದು. ಬೌಲರ್‌ಗಳು ಎಸೆತ ಹಾಕುವ ಮುನ್ನವೇ ನಾನ್‌ಸ್ಟ್ರೈಕರ್ ಬ್ಯಾಟರ್‌ಗಳು ಕ್ರೀಸ್ ಬಿಟ್ಟಾಗ, ಬೌಲರ್ ರನ್‌ಔಟ್ ಮಾಡಲು ಇದರಿಂದ ಅವಕಾಶ ದೊರೆತಿದೆ.
- ಫೀಲ್ಡಿಂಗ್ ಮಾಡುವ ತಂಡವು ನಿಗದಿತ ಸಮಯದೊಳಗೆ ತಮ್ಮ ಪಾಲಿನ ಓವರ್‌ಗಳನ್ನು ಮುಗಿಸದಿದ್ದರೆ ಇನಿಂಗ್ಸ್‌ನ ಬಾಕಿ ಓವರ್‌ಗಳಲ್ಲಿ ಒಬ್ಬ ಫೀಲ್ಡರ್ ಮೂವತ್ತು ಯಾರ್ಡ್ ವೃತ್ತದೊಳಗೆ ನಿಲ್ಲಬೇಕು. ಅಲ್ಲದೇ ಈಚೆಗೆ ಟಿ20 ಕ್ರಿಕೆಟ್‌ನಲ್ಲಿ ಆರಂಭಿಸಲಾಗಿರುವ ದಂಡದ ನಿಯಮವೂ ಉಳಿದ ಮಾದರಿಗಳಿಗೆ ಅನ್ವಯವಾಗಲಿದೆ.

ಅನಂತ್ ಗಣೇಶ್, ರಾಜೇಶ್ ಪೀಟರ್‌ಸನ್, ಆದಿತ್ಯ ಮತ್ತು ಜೋನಾ ಎಡ್ವರ್ಡ್

ಸಾಕಾ ವಿಶ್ವಕಪ್‌ನಲ್ಲಿ ರಾಜ್ಯದ ಆಟಗಾರರು

ಬೆಂಗಳೂರು: ಕರ್ನಾಟಕದ ಆದಿತ್ಯ ಬುದ್ಧನ್, ಅನಂತ್ ಗಣೇಶ್, ಜೋನಾ ಎಡ್ವರ್ಡ್ ಮತ್ತು ರಾಜೇಶ್ ಪೀಟರ್‌ಸನ್ ಅವರು ಸಾಕಾ ವಿಶ್ವಕಪ್ ಟೂರ್ನಿಯಲ್ಲಿ ಭಾರತ ತಂಡವನ್ನು ಪ್ರತಿನಿಧಿಸಿದ್ದರು.

ಹಂಗರಿಯ ಬುಡಾಪೆಸ್ಟ್‌ನಲ್ಲಿ ಇದೇ 10ರಿಂದ 18ರವರೆಗೆ ಟೂರ್ನಿ ನಡೆದಿತ್ತು. ಆದಿತ್ಯ ಬೆಂಗಳೂರು ದಕ್ಷಿಣದ ಡೆಲ್ಲಿ ಪಬ್ಲಿಕ್ ಸ್ಕೂಲ್ ವಿದ್ಯಾರ್ಥಿಯಾಗಿದ್ದಾರೆ. ಅನಂತ್ ಗಣೇಶ್ ಕೆನಡಿಯನ್ ಇಂಟರ್‌ನ್ಯಾಷನಲ್ ಸ್ಕೂಲ್ ಮತ್ತು ಜೋನಾ ಎಡ್ವರ್ಡ್ ಬಿಷಪ್ ಕಾಟನ್ ಸ್ಕೂಲ್ ವಿದ್ಯಾರ್ಥಿಯಾಗಿದ್ದಾರೆ.

2024ರ ಒಲಿಂಪಿಕ್ಸ್‌ಗೆ 75 ಕ್ರೀಡಾಪಟುಗಳ ಪಟ್ಟಿ; ಮನುಗೆ ಸ್ಥಾನ ಸಾಧ್ಯತೆ

ಅಮೃತ ಯೋಜನೆ: ಪೂವಮ್ಮಗೆ ಕೊಕ್?

ಪ್ರಜಾವಾಣಿ ವಾರ್ತೆ

ಬೆಂಗಳೂರು: ಉದ್ದೀಪನ ಮದ್ದು ಸೇವನೆ ಮಾಡಿ ಎರಡು ವರ್ಷಗಳ ನಿಷೇಧ ಶಿಕ್ಷೆಗೊಳಗಾಗಿರುವ ಅಥ್ಲೀಟ್ ಎಂ.ಆರ್. ಪೂವಮ್ಮ ಅವರನ್ನು ಅಮೃತ ಕ್ರೀಡಾ ದತ್ತು ಯೋಜನೆಯಿಂದ ಕೈಬಿಡಲು ಯುವ ಸಬಲೀಕರಣ ಹಾಗೂ ಕ್ರೀಡಾ ಇಲಾಖೆಯು ಸಿದ್ಧವಾಗಿದೆ.

ಭಾರತದ ಸ್ವಾತಂತ್ರ್ಯಮಹೋತ್ಸವದ ಅಂಗವಾಗಿ ಆರಂಭಿಸಲಾಗಿರುವ ಈ ಯೋಜನೆಯಲ್ಲಿ 2021–22ರ ಸಾಲಿನಲ್ಲಿ 75 ಕ್ರೀಡಾಪಟುಗಳನ್ನು ಆಯ್ಕೆ ಮಾಡಲಾಗಿದೆ. ಅದರಲ್ಲಿ ಟ್ರ್ಯಾಕ್ ಹಾಗೂ ಫೀಲ್ಡ್‌ನಿಂದ 12 ಅಥ್ಲೀಟ್‌ಗಳು ಇದ್ದಾರೆ. ಅದರಲ್ಲಿ ಪೂವಮ್ಮ ಕೂಡ ಒಬ್ಬರು. ಈ ಯೋಜನೆಯಲ್ಲಿ ಆಯ್ಕೆಯಾದ ಅಥ್ಲೀಟ್‌ಗೆ ₹ 5 ಲಕ್ಷ ನೀಡಲಾಗುತ್ತದೆ. 2021ರ ಆಗಸ್ಟ್ 1ರಿಂದ 2022ರ ಆಗಸ್ಟ್ 22ರವರೆಗೆ ಆಯ್ಕೆ ಮಾಡಿದ್ದ ಪಟ್ಟಿಯಲ್ಲಿ ಪೂವಮ್ಮ ಇದ್ದರು. ಈ ಪಟ್ಟಿಯಲ್ಲಿದ್ದ ಎಲ್ಲರಿಂದಲೂ ಒಂದು ವರ್ಷದ ಸಾಧನೆಯ ವಿವರಗಳನ್ನು ನೀಡುವಂತೆ ಇಲಾಖೆಯು ಕೇಳಿತ್ತು.

ಇದೀಗ ಪೂವಮ್ಮ ಪ್ರಕರಣ ವರದಿಯಾಗಿರುವುದರಿಂದ ಪಟ್ಟಿಯ ಮರುಪರಿಷ್ಕರಣೆಗಾಗಿ ತಜ್ಞರ ಸಮಿತಿಯ ಸಭೆ ಕರೆಯಲು ಇಲಾಖೆ ಸಿದ್ಧತೆ ನಡೆಸಿದೆ.

ಆರ್ ಪೂವಮ್ಮ

'ಕ್ರೀಡಾ ಸಚಿವರು ಅಧ್ಯಕ್ಷರಾಗಿರುವ ಸಮಿತಿಯ ಸಭೆಯನ್ನು ಶೀಘ್ರದಲ್ಲಿ ಕರೆಯಲಾಗುವುದು. ಯೋಜನೆಯ ಫಲಾನುಭವಿಗಳು ಕಳೆದ ಒಂದು ವರ್ಷದಲ್ಲಿ ಮಾಡಿದ ಸಾಧನೆಗಳನ್ನು ಮೌಲ್ಯಮಾಪನ ಮಾಡಲಾಗುವುದು. ನಿರೀಕ್ಷಿತ ಸಾಧನೆ ಮಾಡದವರನ್ನು ಕೈಬಿಡಲಾಗುವುದು. ಇತ್ತೀಚೆಗೆ ಸಾಧನೆ ಮಾಡಿದವರಿಗೆ ಅವಕಾಶ ನೀಡಲಾಗುವುದು. 2024ರ ಒಲಿಂಪಿಕ್ಸ್ ವೇಳೆಗೆ ರಾಜ್ಯದಿಂದ ಅರ್ಹ ಅಥ್ಲೀಟ್‌ಗಳನ್ನು ಸಿದ್ಧಗೊಳಿಸುವುದು ಈ ಯೋಜನೆಯ ಉದ್ದೇಶ. ಉತ್ತಮರಿಗೆ ಮಾತ್ರ ಅವಕಾಶ ನೀಡಲಾಗುವುದು ಯಾವುದೇ ರಾಜೀ ಇಲ್ಲ' ಎಂದು ಇಲಾಖೆಯ ಆಯುಕ್ತ ಎಚ್.ಎನ್. ಗೋಪಾಲಕೃಷ್ಣ 'ಪ್ರಜಾವಾಣಿ'ಗೆ ತಿಳಿಸಿದರು.

ಮನು, ಸಿಮಿಗೆ ಸಿಗುವುದೇ ಸ್ಥಾನ?

ಬರ್ಮಿಂಗ್‌ಹ್ಯಾಮ್‌ನಲ್ಲಿ ಈಚೆಗೆ ನಡೆದ ಕಾಮನ್‌ವೆಲ್ತ್ ಕ್ರೀಡಾಕೂಟದಲ್ಲಿ ಸ್ಪರ್ಧಿಸಿದ್ದ ಕರ್ನಾಟಕದ ಜಾವೆಲಿನ್ ಥ್ರೋ ಪಟು ಡಿ.ಪಿ. ಮನು ಹಾಗೂ ರಿಲೆ ಓಟಗಾರ್ತಿ ಎನ್.ಎಸ್. ಸಿಮಿ ಅವರಿಗೆ ಅಮೃತ ದತ್ತು ಯೋಜನೆಯಲ್ಲಿ ಸ್ಥಾನ ಸಿಗುವ ಸಾಧ್ಯತೆ ಇದೆ.

ಸದ್ಯ ಪುಣೆಯ ಸೇನಾ ಕ್ರೀಡಾ ಅಕಾಡೆಮಿಯಲ್ಲಿ ತರಬೇತಿ ಪಡೆಯುತ್ತಿರುವ ಮನು ಹಾಸನ ಜಿಲ್ಲೆಯವರು. ಕಾಮನ್‌ವೆಲ್ತ್ ಕ್ರೀಡಾಕೂಟದಲ್ಲಿ ಅವರು ಜಾವೆಲಿನ್ ಥ್ರೋನಲ್ಲಿ 82.28 ಮೀಟರ್ಸ್ ಸಾಧನೆ ಮಾಡಿದ್ದರು. ಆದರೆ ಐದನೆ ಸ್ಥಾನ ಪಡೆದಿದ್ದರು.

ಇದೇ ವರ್ಷ ಅವರು ಚೆನ್ನೈನಲ್ಲಿ ನಡೆದಿದ್ದ ಸೀನಿಯರ್ ಅಂತರರಾಜ್ಯ ಅಥ್ಲೆಟಿಕ್ಸ್‌ನಲ್ಲಿ 84.35 ಮೀಟರ್ಸ್ ಸಾಧನೆ ಮಾಡಿದ್ದರು. ಇದೇ ವರ್ಷ ಓಪನ್ ನ್ಯಾಷನಲ್ಸ್, ಫೆಡರೇಷನ್ ಕಪ್ ಹಾಗೂ ಇಂಡಿಯನ್ ಗ್ರ್ಯಾನ್‌ಪ್ರೀ ಚಾಂಪಿಯನ್‌ಷಿಪ್‌ನಲ್ಲಿಯೂ ಪದಕ ಸಾಧನೆ ಮಾಡಿದ್ದರು.

'ನೀರಜ್ ಚೋಪ್ರಾ ಅವರ ಹಾದಿಯಲ್ಲಿರುವ ಪ್ರತಿಭೆ ಮನು. ಕಠಿಣ ಪರಿಶ್ರಮದಿಂದ ಅಭ್ಯಾಸ ಮಾಡುತ್ತಿದ್ದಾರೆ. ಮುಂದೊಂದು ದಿನ ಅಂತರರಾಷ್ಟ್ರೀಯ ಮಟ್ಟದಲ್ಲಿ ದೇಶಕ್ಕೆ ಜಾವೆಲಿನ್ ಥ್ರೋನಲ್ಲಿ ಪದಕ ತಂದುಕೊಡುವ ಭರವಸೆಯ ಅಥ್ಲೀಟ್' ಎಂದು ಕೋಚ್ ಕಾಶಿನಾಥ್ ನಾಯ್ಕ ವಿಶ್ವಾಸ ವ್ಯಕ್ತಪಡಿಸಿದ್ದಾರೆ.

ಮಹಿಳೆಯರ 4X100 ಮೀ ರಿಲೆಯಲ್ಲಿ ಸಿಮಿ ಅವರಿದ್ದ ತಂಡವು ಕಾಮನ್‌ವೆಲ್ತ್ ಕೂಟದಲ್ಲಿ 11.85 ಸೆಕೆಂಡುಗಳಲ್ಲಿ ಗುರಿ ಮುಟ್ಟಿತ್ತು. ಅಲ್ಲದೇ ಈ ವರ್ಷ ನಡೆದ ರಾಷ್ಟ್ರಮಟ್ಟದ ಚಾಂಪಿಯನ್‌ಷಿಪ್‌ಗಳಲ್ಲಿ ಅವರ ಸಾಧನೆ ಗಮನಾರ್ಹವಾಗಿದೆ.

'ಹೋದ ವರ್ಷದ ಪಟ್ಟಿಯಲ್ಲಿ ಅವರಿಬ್ಬರ ಹೆಸರು ಇರಲಿಲ್ಲ. ಸಂಬಂಧಪಟ್ಟ ಕ್ರೀಡಾ ಸಂಸ್ಥೆಯಿಂದ ಬರುವ ಪಟ್ಟಿಯನ್ನು ಪರಿಶೀಲಿಸಿ ತೀರ್ಮಾನ ಕೈಗೊಳ್ಳಲಾಗುವುದು. ಪರಿಣತರು ಇರುವ ಸಮಿತಿಯೇ ಅಂತಿಮ ಶಿಫಾರಸು ಮಾಡಲಿದೆ. ಅದನ್ನು ಇಲಾಖೆಯು ಪರಿಗಣಿಸುವುದು' ಎಂದು ಆಯುಕ್ತರು ತಿಳಿಸಿದ್ದಾರೆ.

'ವಿಶ್ವಕಪ್‌ಗೆ ಸಜ್ಜಾಗಲು ಪಾಕ್‌ಗೆ ಅವಕಾಶ'

ಬೆಂಗಳೂರು: 'ಇಂಗ್ಲೆಂಡ್‌ನ ಆಕ್ರಮಣಕಾರಿ ಆಟಕ್ಕೆ ಪ್ರತಿತಂತ್ರ ರೂಪಿಸಿಕೊಂಡೇ ಪಾಕಿಸ್ತಾನ ತಂಡ ಟಿ20 ಸರಣಿಯಲ್ಲಿ ಕಣಕ್ಕಿಳಿಯಲಿದೆ' ಎಂದು ಪಾಕ್ ತಂಡದ ಮಾಜಿ ಆಟಗಾರ ಮತ್ತು ವೀಕ್ಷಕ ವಿವರಣೆಕಾರ ಬಾಜಿದ್ ಖಾನ್ ಹೇಳಿದ್ದಾರೆ.

ಪಾಕಿಸ್ತಾನ– ಇಂಗ್ಲೆಂಡ್ ನಡುವಿನ ಸರಣಿಯ ಹಿನ್ನೆಲೆಯಲ್ಲಿ ಸೋನಿ ಸ್ಪೋರ್ಟ್ಸ್ ನೆಟ್‌ವರ್ಕ್ ಆಯೋಜಿಸಿದ್ದ ಸಂವಾದ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, 'ಇಂಗ್ಲೆಂಡ್ ತಂಡ ಕಳೆದ ಕೆಲ ಸಮಯಗಳಿಂದ ಆಕ್ರಮಣಕಾರಿ ಆಟದಿಂದ ಹೆಸರು ಪಡೆದುಕೊಂಡಿದೆ. ನಿಗದಿತ ಓವರ್‌ಗಳ ಪಂದ್ಯವಲ್ಲದೆ, ಟೆಸ್ಟ್‌ನಲ್ಲೂ ಅತಿಯಾದ ಆಕ್ರಮಣಕಾರಿ ಮನೋಭಾವದಿಂದ ಆಡುತ್ತಿದೆ' ಎಂದರು.

'ಏಳು ಪಂದ್ಯಗಳ ಟಿ20 ಸರಣಿಯು ಇಂಗ್ಲೆಂಡ್‌ನ ಬ್ಯಾಟಿಂಗ್ ಮತ್ತು ಪಾಕಿಸ್ತಾನದ ಬೌಲಿಂಗ್ ನಡುವಿನ ಹಣಾಹಣಿ ಎನಿಸಲಿದೆ. ಪಾಕ್ ತಂಡಕ್ಕೆ ವಿಶ್ವಕಪ್‌ಗೆ ಸಜ್ಜಾಗಲು ಈ ಟೂರ್ನಿ ಉತ್ತಮ ಅವಕಾಶ ಕಲ್ಪಿಸಿಕೊಟ್ಟಿದೆ' ಎಂದು ನುಡಿದರು.

ಇಡೀ ದೇಶದಲ್ಲಿ ಕ್ರಿಕೆಟ್ ಹವಾ: 'ಇಂಗ್ಲೆಂಡ್ ತಂಡ 17 ವರ್ಷಗಳ ಬಳಿಕ ಪಾಕಿಸ್ತಾನಕ್ಕೆ ಬಂದಿದೆ. ಇದು ಇಡೀ ದೇಶದಲ್ಲಿ ಕ್ರಿಕೆಟ್ ಹವಾ ಸೃಷ್ಟಿಸಿದೆ. ಎಲ್ಲರ ಬಾಯಲ್ಲೂ ಕ್ರಿಕೆಟ್‌ನದ್ದೇ ಮಾತು ಕೇಳಿಬರುತ್ತಿದೆ' ಎಂದರು.

ಹರ್ಮನ್‌ಪ್ರೀತ್ ಪಡೆಗೆ ಸರಣಿ ಜಯದ ತವಕ

ಕ್ಯಾಂಟರ್‌ಬರಿ, ಇಂಗ್ಲೆಂಡ್ (ಪಿಟಿಐ): ಸುಮಾರು 23 ವರ್ಷಗಳ ಬಳಿಕ ಇಂಗ್ಲೆಂಡ್ ನೆಲದಲ್ಲಿ ಸರಣಿ ಗೆಲುವಿನ ತವಕದಲ್ಲಿರುವ ಭಾರತ ಮಹಿಳಾ ತಂಡವು ಎರಡನೇ ಏಕದಿನ ಪಂದ್ಯದಲ್ಲಿ ಬುಧವಾರ ಆತಿಥೇಯ ತಂಡದ ಸವಾಲು ಎದುರಿಸಲಿದೆ.

1999ರಲ್ಲಿ ಭಾರತ ಮಹಿಳಾ ತಂಡವು ಇಂಗ್ಲೆಂಡ್‌ನಲ್ಲಿ 2–1ರಿಂದ ಸರಣಿ ಜಯಿಸಿತ್ತು. ಆ ಸರಣಿಯಲ್ಲಿ ಅಂಜುಮ್ ಚೋಪ್ರಾ ತಲಾ ಒಂದು ಶತಕ ಮತ್ತು ಅರ್ಧಶತಕ ಸಿಡಿಸಿ ತಂಡದ ಗೆಲುವಿಗೆ ನೆರವಾಗಿದ್ದರು.

ಈ ಬಾರಿ ಟಿ20 ಸರಣಿಯನ್ನು 1–2ರಿಂದ ಕಳೆದುಕೊಂಡಿರುವ ಹರ್ಮನ್‌ಪ್ರೀತ್ ಕೌರ್ ನಾಯಕತ್ವದ ಭಾರತ, ಮೂರು ಪಂದ್ಯಗಳ ಏಕದಿನ ಸರಣಿಯ ಮೊದಲ ಹಣಾಹಣಿಯಲ್ಲಿ ಆತಿಥೇಯ ತಂಡವನ್ನು ಏಳು ವಿಕೆಟ್‌ಗಳಿಂದ ಮಣಿಸಿತ್ತು. ಭಾನುವಾರ ನಡೆದ ಈ ಪಂದ್ಯದಲ್ಲಿ ಇಂಗ್ಲೆಂಡ್ ಪರ ಅನುಭವಿ ಆಟಗಾರ್ತಿಯರು ಕಣಕ್ಕಿಳಿದಿರಲಿಲ್ಲ. ಆದರೆ ಭಾರತ ತಂಡದ ಪ್ರದರ್ಶನ ಉತ್ತಮವಾಗಿತ್ತು. ಅದೇ ಲಯದೊಂದಿಗೆ ಮುನ್ನುಗ್ಗುವ ಛಲದಲ್ಲಿ ತಂಡವಿದೆ.

ವೇಗಿ ಜೂಲನ್ ಗೋಸ್ವಾಮಿ ಅವರಿಗೆ ಇದು ವಿದಾಯದ ಸರಣಿಯಾಗಿದೆ. 2023ರ ಜೂನ್‌ತನಕ ಭಾರತಕ್ಕೆ ಯಾವುದೇ ಏಕದಿನ ಪಂದ್ಯಗಳಿಲ್ಲ.

ಪಂದ್ಯ ಆರಂಭ: ಮಧ್ಯಾಹ್ನ 3.30

ನೇರ ಪ್ರಸಾರ: ಸೋನಿ ಸ್ಪೋರ್ಟ್ಸ್ ನೆಟ್‌ವರ್ಕ್

ಸಂಕ್ಷಿಪ್ತ ಸುದ್ದಿ

ಮಹಿಳಾ ಕ್ರಿಕೆಟ್: ಅ.7ರಂದು ಭಾರತ–ಪಾಕ್ ಮುಖಾಮುಖಿ

ಕ್ವಾಲಾಲಂಪುರ (ಪಿಟಿಐ): ಭಾರತ ತಂಡವು ಏಷ್ಯಾಕಪ್ ಮಹಿಳಾ ಟಿ20 ಕ್ರಿಕೆಟ್ ಟೂರ್ನಿಯಲ್ಲಿ ಅಕ್ಟೋಬರ್ 7ರಂದು ಪಾಕಿಸ್ತಾನ ತಂಡಕ್ಕೆ ಮುಖಾಮುಖಿಯಾಗಲಿದೆ. ಏಷ್ಯಾ ಕ್ರಿಕೆಟ್ ಕೌನ್ಸಿಲ್ ಅಧ್ಯಕ್ಷ ಜಯ್ ಶಾ ಮಂಗಳವಾರ ಈ ವಿಷಯ ತಿಳಿಸಿದರು.

ಬಾಂಗ್ಲಾದೇಶದ ಸಿಲೆಟ್‌ನಲ್ಲಿ ಅಕ್ಟೋಬರ್ 1ರಿಂದ ಟೂರ್ನಿ ಆರಂಭವಾಗಲಿದ್ದು ಏಳು ತಂಡಗಳು ಭಾಗವಹಿಸಲಿವೆ. ರೌಂಡ್ ರಾಬಿನ್ ಮಾದರಿಯಲ್ಲಿ ಅಗ್ರ ನಾಲ್ಕು ಸ್ಥಾನ ಗಳಿಸುವ ತಂಡಗಳು ಸೆಮಿಫೈನಲ್ ತಲುಪಲಿವೆ.

ಟೂರ್ನಿಯ ಮೊದಲ ದಿನ ಭಾರತ ತಂಡವು ಶ್ರೀಲಂಕಾವನ್ನು ಎದುರಿಸಲಿದೆ. ಬಳಿಕ ಮಲೇಷ್ಯಾ (ಅ.3), ಯುಎಇ (ಅ.4) ಮತ್ತು ಪಾಕಿಸ್ತಾನದ ಎದುರು ಆಡಲಿದೆ. ಅಕ್ಟೋಬರ್ 8 ಮತ್ತು 10ರಂದು ಕ್ರಮವಾಗಿ ಬಾಂಗ್ಲಾದೇಶ ಮತ್ತು ಥಾಯ್ಲೆಂಡ್ ತಂಡಗಳ ವಿರುದ್ಧ ಭಾರತ ಕಣಕ್ಕಿಳಿಯಲಿದೆ.

ಪ್ಯಾರಾ ಬ್ಯಾಡ್ಮಿಂಟನ್: ಕರ್ನಾಟಕಕ್ಕೆ 3 ಚಿನ್ನ

ಬೆಂಗಳೂರು: ಕರ್ನಾಟಕದ ಪ್ಯಾರಾ ಬ್ಯಾಡ್ಮಿಂಟನ್ ಪಟುಗಳು ಉಗಾಂಡದ ಕಂಪಾಲದಲ್ಲಿ ನಡೆದ ಪ್ಯಾರಾ ಬ್ಯಾಡ್ಮಿಂಟನ್ ಟೂರ್ನಿಯಲ್ಲಿ ಮೂರು ಚಿನ್ನ ಮತ್ತು ಐದು ಕಂಚಿನ ಪದಕಗಳನ್ನು ಗೆದ್ದುಕೊಂಡಿದ್ದಾರೆ.

ಟೂರ್ನಿಯು ಇದೇ 13ರಿಂದ 18ರವರೆಗೆ ನಡೆದಿತ್ತು. ಕರ್ನಾಟಕ ಪ್ಯಾರಾ ಬ್ಯಾಡ್ಮಿಂಟನ್ ಸಂಸ್ಥೆಯ ಕಾರ್ಯದರ್ಶಿ ಕೆ.ವೈ. ವೆಂಕಟೇಶ್ ಪ್ರಕಟಣೆಯಲ್ಲಿ ಈ ವಿಷಯ ತಿಳಿಸಿದ್ದಾರೆ.

ವಿಶ್ವಸಂಸ್ಥೆ 77ನೇ ಅಧಿವೇಶನದ ಅಧ್ಯಕ್ಷರ ಜೊತೆ ಚರ್ಚೆ: ಎಸ್.ಜೈಶಂಕರ್ ಪ್ರತಿಪಾದನೆ

ಸುಸ್ಥಿರಾಭಿವೃದ್ಧಿ ಗುರಿ ಸಾಧನೆಗೆ ಕಾರ್ಯಸೂಚಿ

ನ್ಯೂಯಾರ್ಕ್ (ಪಿಟಿಐ): 'ಜಾಗತಿಕ ಪ್ರಗತಿ ನಿಟ್ಟಿನಲ್ಲಿ ಸುಸ್ಥಿರಾಭಿವೃದ್ಧಿ ಗುರಿ ಕಾರ್ಯಸೂಚಿ ಹೊಂದಬೇಕು' ಎಂದು ಭಾರತ ಪ್ರತಿಪಾದಿಸಿದೆ.

ವಿಶ್ವಸಂಸ್ಥೆಯ 77ನೇ ಸಾಮಾನ್ಯ ಅಧಿವೇಶನದ ಅಧ್ಯಕ್ಷ ಕ್ಸಾಬಾ ಕೊರೊಸಿ ಅವರನ್ನು ಇಲ್ಲಿ ಭೇಟಿ ಮಾಡಿದ್ದ ವಿದೇಶಾಂಗ ಸಚಿವ ಎಸ್.ಜೈಶಂಕರ್ ಈ ಕುರಿತು ಗಂಭೀರ ಚರ್ಚೆ ನಡೆಸಿದರು. ಬಹುಪಕ್ಷೀಯ ಚಿಂತನೆಗೂ ಭಾರತ ಬದ್ಧವಾಗಿದೆ ಎಂದೂ ಭರವಸೆ ನೀಡಿದರು. ಕ್ಸಾಬಾ ಕೊರೊಸಿ ಅವರನ್ನು ವಿಶ್ವಸಂಸ್ಥೆಯ ಕೇಂದ್ರ ಕಚೇರಿಯಲ್ಲಿ ಭೇಟಿಯಾಗಿದ್ದ ಅವರು ಸಾಮಾನ್ಯ ಅಧಿವೇಶನದ ಆದ್ಯತೆ, ಉದ್ದೇಶ ಜಾರಿಗೆ ಭಾರತ ಪೂರ್ಣ ಸಹಕಾರ ನೀಡಲಿದೆ ಎಂದು ಹೇಳಿದರು.

ಮೂಲಗಳ ಪ್ರಕಾರ, ಅಂತರರಾಷ್ಟ್ರೀಯ ಸಮುದಾಯದ ಅಗತ್ಯವನ್ನು ಆಧರಿಸಿ ಸುರಕ್ಷತೆ, ಆಹಾರ ಭದ್ರತೆ, ರಸಗೊಬ್ಬರ, ಆರೋಗ್ಯ ಕ್ಷೇತ್ರ, ಸಾಲದ ಹೊರೆ ಮತ್ತು ವಾಣಿಜ್ಯ ವಹಿವಾಟಿಗೆ ಇರುವ ತೊಡಕುಗಳ ಚರ್ಚೆಗೆ ಒತ್ತುನೀಡಬೇಕು ಎಂಬ ನಿಲುವನ್ನು ಭಾರತ ಪುನರುಚ್ಚರಿಸಿದೆ.

ಎಸ್.ಜೈಶಂಕರ್ ಅವರು ಕ್ಸಾಬಾ ಕರೋಸಿ ಅವರನ್ನು ಭೇಟಿಯಾಗಿ ಚರ್ಚಿಸಿದರು –ಪಿಟಿಐ ಚಿತ್ರ

ವಿವಿಧ ಪ್ರಮುಖರ ಜೊತೆ ಚರ್ಚೆ: ಇದೇ ವೇಳೆ ಜೈಶಂಕರ್ ಅವರು ವಿದೇಶಾಂಗ ಸಚಿವರಾದ ಈಜಿಪ್ಟ್‌ನ ಸಮೆ ಶೌಕ್ರಿ, ಕ್ಯೂಬಾದ ಬ್ರುನೊ ರೋಡ್ರಿಗಜ್ ಪರ್ರಿಲ್ಲಾ, ಇಥಿಯೋಪಿಯಾದ ಮೆಕೊನೆನ್ ಹಸೀನ್, ಯೂರೋಪ್‌ನ ಅಲ್ಬನಿಯಾ ಅವರ ಜೊತೆಗೂ ಚರ್ಚಿಸಿದರು.

ತ್ರಿಪಕ್ಷೀಯ ಮಾತುಕತೆ: ಭಾರತ, ಫ್ರಾನ್ಸ್ ಮತ್ತು ಯುಎಇಯ ವಿದೇಶಾಂಗ ಸಚಿವರು ಇದೇ ಮೊದಲಿಗೆ ಅಭಿವೃದ್ಧಿಗೆ ಪರಸ್ಪರ ಕೈಜೋಡಿಸುವ ಕುರಿತಂತೆ ತ್ರಿಪಕ್ಷೀಯ ಮಾತುಕತೆ ನಡೆಸಿದರು. ಎಸ್.ಜೈಶಂಕರ್ ಹಾಗೂ ಯುಎಇ ವಿದೇಶಾಂಗ ಸಚಿವ ಶೇಕ್ ಅಬ್ದುಲ್ಲಾ ಬಿನ್ ಝಯೇದ್ ಅಲ್ ನಹನ್ ಮತ್ತು ಫ್ರಾನ್ಸ್‌ನ ವಿದೇಶಾಂಗ ಸಚಿವ ಕ್ಯಾಥರೈನ್ ಕೊಲೊನ್ನಾ ಚರ್ಚೆಯಲ್ಲಿ ಪಾಲ್ಗೊಂಡರು.

ಮ್ಯಾನ್ಮಾರ್ ಸ್ಥಿತಿ ಕುರಿತು ಚರ್ಚೆ: ಮ್ಯಾನ್ಮಾರ್‌ನಲ್ಲಿನ ಸ್ಥಿತಿಗತಿ, ಪರಿಸ್ಥಿತಿ ಸುಧಾರಣೆಯ ಸಾಧ್ಯತೆ ಕುರಿತು ಜೈಶಂಕರ್ ಅವರು ಇಂಡೊನೇಷಿಯದ ವಿದೇಶಾಂಗ ಸಚಿವ ರೆಟ್ನೊ ಮರ್ಸುಡಿ ಅವರೊಂದಿಗೆ ಚರ್ಚಿಸಿದರು. ಮ್ಯಾನ್ಮಾರ್‌ನಲ್ಲಿ ಪರಿಸ್ಥಿತಿ ತಿಳಿಗೊಳಿಸಲು 'ಆಸಿಯಾನ್' ಸದಸ್ಯ ರಾಷ್ಟ್ರಗಳು ಕಾರ್ಯತತ್ಪರವಾಗಬೇಕಿದೆ ಎಂಬ ಅಭಿಪ್ರಾಯ ವ್ಯಕ್ತವಾಯಿತು ಎಂದು ಮೂಲಗಳು ತಿಳಿಸಿವೆ.

'ಹಸಿವಿನಿಂದ ಪ್ರತಿ 4 ಸೆಕೆಂಡ್‌ಗೆ ಒಬ್ಬರ ಸಾವು'

ಜಿನೀವಾ (ಎಎಫ್‌ಪಿ): 'ವಿಶ್ವದಲ್ಲಿ ಹಸಿವಿನಿಂದ ಪ್ರತಿ ನಾಲ್ಕು ಸೆಕೆಂಡ್‌ಗೆ ಒಬ್ಬರು ಸಾಯುತ್ತಿದ್ದಾರೆ' ಎಂದು 200ಕ್ಕೂ ಹೆಚ್ಚು ಸೇವಾ ಸಂಸ್ಥೆಗಳು ಪ್ರತಿಪಾದಿಸಿವೆ. ಹಸಿವಿನ ಬಿಕ್ಕಟ್ಟು ಅಂತ್ಯಗೊಳಿಸಲು ಅಂತರರಾಷ್ಟ್ರೀಯವಾಗಿ ನಿರ್ಣಾಯಕ ಯೋಜನೆ ಅಗತ್ಯ ಎಂದೂ ಒತ್ತಾಯಿಸಿವೆ.

ನ್ಯೂಯಾರ್ಕ್‌ನಲ್ಲಿ ವಿಶ್ವಸಂಸ್ಥೆಯ 77ನೇ ಸಾಮಾನ್ಯ ಅಧಿವೇಶನದಲ್ಲಿ ಪಾಲ್ಗೊಳ್ಳಲು ಸೇರಿರುವ ವಿಶ್ವ ಸಮುದಾಯದ ನಾಯಕರನ್ನು ಉದ್ದೇಶಿಸಿ, 75 ರಾಷ್ಟ್ರಗಳಿಗೆ ಸೇರಿದ 238 ಸಂಘಟನೆಗಳು ಜಂಟಿಯಾಗಿ ಬಹಿರಂಗ ಪತ್ರವನ್ನು ಬರೆದಿವೆ.

'ಹಸಿವಿನಿಂದಾಗಿ ಪ್ರತಿನಿತ್ಯ ಸುಮಾರು 19,700 ಜನರು ಸಾಯುತ್ತಿದ್ದಾರೆ. ಅಂದರೆ, ಪ್ರತಿ ನಾಲ್ಕು ಸೆಕೆಂಡ್‌ಗೆ ಒಬ್ಬರು ಸಾಯುತ್ತಿದ್ದಾರೆ ಎಂದಾಗುತ್ತದೆ. ಇದು, ಆತಂಕದ ಸ್ಥಿತಿ. ಕೃಷಿ ಕ್ಷೇತ್ರದಲ್ಲಿ ಹೊಸ ಕಾರ್ಯತಂತ್ರಗಳ ಅಳವಡಿಕೆಯ ನಂತರವೂ 21ನೇ ಶತಮಾನದಲ್ಲೂ ಹಸಿವಿನ ಕುರಿತು ಚರ್ಚಿಸುವ ಪರಿಸ್ಥಿತಿ ಇದೆ' ಎಂದು ಪತ್ರಕ್ಕೆ ಸಹಿ ಹಾಕಿರುವ ಮೊಹಾನ್ನಾ ಅಹಮ್ಮದ್ ಅಲಿ ಎಲ್‌ಜಬಲೆ ಅಭಿಪ್ರಾಯಪಟ್ಟರು.

ಐಎಫ್‌ಎಚ್‌ಇ ವಿ.ವಿಗೆ 'ನ್ಯಾಕ್' ಎ++ ಮಾನ್ಯತೆ

ಹೈದರಾಬಾದ್: ಇಲ್ಲಿನ ದಿ ಐಸಿಎಫ್‌ಎಐ ಫೌಂಡೇಷನ್ ಫಾರ್ ಹೈಯರ್ ಎಜುಕೇಶನ್ (ಐಎಫ್‌ಎಚ್‌ಇ) ಡೀಮ್ಡ್ ವಿಶ್ವವಿಶ್ವವಿದ್ಯಾಲಯಕ್ಕೆ ರಾಷ್ಟ್ರೀಯ ಮೌಲ್ಯಾಂಕನ ಮತ್ತು ಮಾನ್ಯತಾ ಮಂಡಳಿಯಿಂದ (ನ್ಯಾಕ್) ಎ + + ಗ್ರೇಡ್ ಮಾನ್ಯತೆ ಲಭಿಸಿದೆ.

ಈ ಸಂಸ್ಥೆಗೆ ಮಾನ್ಯತಾ ಕ್ರಮದಲ್ಲಿ ಸಿಜಿಪಿಎ 4ರಲ್ಲಿ 3.59 ಲಭಿಸಿದ್ದು, ಈ ಮಾನ್ಯತೆ 5 ವರ್ಷಗಳವರೆಗೆ ಇರಲಿದೆ ಎಂದು ಐಸಿಎಫ್‌ಎಐ ಸಮೂಹದ ಬ್ರಾಂಡಿಂಗ್ ನಿರ್ದೇಶಕ ಸುಧಾಕರ ರಾವ್ ಅವರು ಹೇಳಿಕೆಯಲ್ಲಿ ತಿಳಿಸಿದ್ದಾರೆ.

ಪಠ್ಯಕ್ರಮ, ಬೋಧನೆ, ಕಲಿಕೆ, ಸಂಶೋಧನೆ, ಅತ್ಯಾಧುನಿಕ ಮೂಲ ಸೌಕರ್ಯ, ವಿದ್ಯಾರ್ಥಿಗಳ ಸಹಕಾರ ಮತ್ತು ಪ್ರಗತಿ, ಪಾರದರ್ಶಕ ಆಡಳಿತ ಮೊದಲಾವುಗಳನ್ನು ಪರಿಗಣಿಸಿ 'ನ್ಯಾಕ್' ನಿಂದ ಎ + + ಮಾನ್ಯತೆ ಲಭಿಸಿದೆ ಎಂದಿದ್ದಾರೆ.

'ದೇಶದಲ್ಲಿರುವ 1000ಕ್ಕೂ ಅಧಿಕ ವಿವಿಗಳ ಪೈಕಿ 30 ವಿವಿಗಳು ಎ + + ಮಾನ್ಯತೆ ಪಡೆದಿದ್ದು, ಅದರಲ್ಲಿ ನಮ್ಮ ಸಂಸ್ಥೆಯೂ ಒಂದು' ಎಂದು ಕುಲಪತಿ ಪ್ರೊ.ಎಲ್.ಎಸ್.ಗಣೇಶ್ ತಿಳಿಸಿದ್ದಾರೆ.

ಸಚಿವ ರಾಣೆ ಒಡೆತನದ ಬಂಗಲೆಯ ಅನಧಿಕೃತ ಭಾಗ ಕೆಡವಿ: ಹೈಕೋರ್ಟ್

ಮುಂಬೈ (ಪಿಟಿಐ): 'ಕೇಂದ್ರ ಸಚಿವ ನಾರಾಯಣ ರಾಣೆ ಅವರು ಜುಹು ಪ್ರದೇಶದಲ್ಲಿ ಹೊಂದಿರುವ ಬಂಗಲೆಯ ಕೆಲವು ಭಾಗಗಳನ್ನು ಅನಧಿಕೃತವಾಗಿ ನಿರ್ಮಾಣ ಮಾಡಲಾಗಿದ್ದು, ಅವುಗಳನ್ನು ಎರಡು ವಾರಗಳೊಳಗೆ ಧ್ವಂಸಗೊಳಿಸಿ' ಎಂದು ಬಾಂಬೆ ಹೈಕೋರ್ಟ್, ಬೃಹತ್ ಮುಂಬೈ ಮಹಾನಗರ ಪಾಲಿಕೆಗೆ (ಬಿಎಂಸಿ) ಮಂಗಳವಾರ ಸೂಚಿಸಿದೆ.

'ಬಂಗಲೆ ನಿರ್ಮಾಣದ ವೇಳೆ ಫ್ಲೋರ್ ಸ್ಪೇಸ್ ಇಂಡೆಕ್ಸ್ (ಎಫ್‌ಎಸ್‌ಐ) ಹಾಗೂ ಕರಾವಳಿ ನಿಯಂತ್ರಣ ವಲಯ (ಸಿಆರ್‌ಜೆಡ್) ನಿಯಮಗಳನ್ನು ಉಲ್ಲಂಘಿಸಲಾಗಿದೆ' ಎಂದು ನ್ಯಾಯಮೂರ್ತಿಗಳಾದ ಆರ್.ಡಿ.ಧನುಕಾ ಮತ್ತು ಕಮಲ್ ಖಥಾ ಅವರನ್ನೊಳಗೊಂಡ ವಿಭಾಗೀಯ ನ್ಯಾಯಪೀಠ ಹೇಳಿದೆ.

'ಅನಧಿಕೃತವಾಗಿ ನಿರ್ಮಾಣ ಮಾಡಲಾಗಿರುವ ಭಾಗಗಳನ್ನು ಸಕ್ರಮಗೊಳಿಸುವಂತೆ ಅರ್ಜಿ ಸಲ್ಲಿಸಲಾಗಿದೆ. ಈ ಸಂಬಂಧ ನಾವು ಚರ್ಚಿಸಿ ತೀರ್ಮಾನ ಕೈಗೊಳ್ಳುತ್ತೇವೆ' ಎಂದು ಬಿಎಂಸಿಯು ನ್ಯಾಯಪೀಠಕ್ಕೆ ತಿಳಿಸಿತು.

ಇದಕ್ಕೆ ಪ್ರತಿಕ್ರಿಯಿಸಿದ ನ್ಯಾಯಪೀಠ, 'ಮೊದಲ ಅರ್ಜಿ ವಜಾಗೊಳಿಸಿದ್ದ ಬಿಎಂಸಿ, ಎರಡನೇ ಬಾರಿ ಸಲ್ಲಿಕೆಯಾಗಿರುವ ಅರ್ಜಿ ಸಂಬಂಧ ಚರ್ಚಿಸುವುದಾಗಿ ಹೇಳುತ್ತಿದೆ. ಬಿಎಂಸಿಯ ಈ ನಡೆ ಅಚ್ಚರಿ ಮೂಡಿಸಿದೆ. ಅದರ ವಾದ ಪುರಸ್ಕರಿಸಿದ್ದೇ ಆದಲ್ಲಿ ನಗರದಲ್ಲಿ ನೆಲೆಸಿರುವ ಯಾವುದೇ ವ್ಯಕ್ತಿ ಬೇಕಾದರೂ ಅಕ್ರಮವಾಗಿ ಕಟ್ಟಡ ನಿರ್ಮಿಸಿ ಬಳಿಕ ಅದನ್ನು ಸಕ್ರಮಗೊಳಿಸುವಂತೆ ಮನವಿ ಸಲ್ಲಿಸಬಹುದು. ಹೀಗಾಗಿ ರಾಣೆ ಅವರ ಕುಟುಂಬದ ಒಡೆತನವಿರುವ ಕಂಪನಿ ಸಲ್ಲಿಸಿರುವ ಎರಡನೇ ಅರ್ಜಿಯನ್ನು ಪುರಸ್ಕರಿಸಲು ಬಿಎಂಸಿಗೆ ಅವಕಾಶ ನೀಡುವುದಿಲ್ಲ' ಎಂದು ಹೇಳಿತು.

'ಧ್ವಂಸ ಪ್ರಕ್ರಿಯೆ ಪೂರ್ಣಗೊಂಡ ನಂತರದ ಒಂದು ವಾರದೊಳಗೆ ಈ ಕುರಿತ ಸಮಗ್ರ ವರದಿಯನ್ನು ಪೀಠಕ್ಕೆ ಸಲ್ಲಿಸಿ' ಎಂದು ಬಿಎಂಸಿಗೆ ನಿರ್ದೇಶಿಸಿತು.

ರಾಣೆ ಅವರಿಗೆ ₹10 ಲಕ್ಷ ದಂಡವನ್ನೂ ವಿಧಿಸಿದ ನ್ಯಾಯಪೀಠ, ಈ ಮೊತ್ತವನ್ನು ಎರಡು ವಾರಗಳೊಳಗೆ ಮಹಾರಾಷ್ಟ್ರ ರಾಜ್ಯ ಕಾನೂನು ಸೇವಾ ಪ್ರಾಧಿಕಾರದ ಖಾತೆಗೆ ಸಂದಾಯ ಮಾಡಬೇಕೆಂದು ಸೂಚಿಸಿತು.

ರಕ್ಷಣಾ ಕ್ಷೇತ್ರ: ಭಾರತ–ಈಜಿಪ್ಟ್ ಒಪ್ಪಂದ

ಕೈರೊ (ಪಿಟಿಐ): ರಕ್ಷಣಾ ಕ್ಷೇತ್ರದಲ್ಲಿ ದ್ವಿಪಕ್ಷೀಯ ಸಹಕಾರವನ್ನು ಇನ್ನಷ್ಟು ಬಲಪಡಿಸಲು ಭಾರತ ಮತ್ತು ಈಜಿಪ್ಟ್ ಮಂಗಳವಾರ ಒಪ್ಪಂದಕ್ಕೆ ಸಹಿ ಹಾಕಿದವು. ಇದೇ ವೇಳೆ ರಕ್ಷಣಾ ಸಚಿವ ರಾಜನಾಥ್ ಸಿಂಗ್ ಮತ್ತು ಈಜಿಪ್ಟ್‌ನ ಜನರಲ್ ಮೊಹಮ್ಮದ್ ಝಕಿ ವಿಸ್ತೃತ ಚರ್ಚೆ ನಡೆಸಿದರು.

ಮೂರು ದಿನಗಳ ಭೇಟಿಗಾಗಿ ರಾಜನಾಥ್ ಅವರು ಇಲ್ಲಿಗೆ ಬಂದಿದ್ದಾರೆ. ಸಿಬ್ಬಂದಿ ತರಬೇತಿಗೆ ಸಹಕಾರ ನೀಡುವ ಕುರಿತೂ ಚರ್ಚಿಸಲಾಯಿತು ಎಂದು ಸಚಿವಾಲಯ ಹೇಳಿಕೆ ನೀಡಿದೆ.

ಕಾಲಮಿತಿಯಲ್ಲಿ ರಕ್ಷಣಾ ಕ್ಷೇತ್ರದ ಉದ್ಯಮಗಳ ಜೊತೆಗೆ ಪರಸ್ಪರ ಸಹಕಾರ ವೃದ್ಧಿ ಸಾಧ್ಯತೆಗಳ ಬಗ್ಗೆಯೂ ಉಭಯ ಮುಖಂಡರು ಚರ್ಚಿಸಿದ್ದಾರೆ.

ಬಾಹ್ಯಾಕಾಶ ಕೇಂದ್ರಕ್ಕೆ ಹಾನಿ

ಟೋಕಿಯೊ (ಎಪಿ): ಚಂಡಮಾರುತ, ಧಾರಾಕಾರ ಮಳೆಯಿಂದಾಗಿ ತನೆಗಾಶಿಮಾ ದ್ವೀಪದಲ್ಲಿರುವ ಜಪಾನ್ ಏರೋಸ್ಪೇಸ್ ಮತ್ತು ಎಕ್ಸ್‌ಪ್ಲೋರೇಶನ್ ಸಂಸ್ಥೆಯ ಬಾಹ್ಯಾಕಾಶ ಕೇಂದ್ರಕ್ಕೆ ಹಾನಿಯಾಗಿದೆ ಎಂದು ಆರ್ಥಿಕ ಮತ್ತು ಕೈಗಾರಿಕಾ ಸಚಿವಾಲಯ ತಿಳಿಸಿದೆ.

ರಾಕೆಟ್ ಜೋಡಣೆಗೆ ಬಳಸಲಾಗಿದ್ದ ಕಟ್ಟಡಕ್ಕೆ ಹಾನಿಯಾಗಿದ್ದು, ಪ್ರಮಾಣವನ್ನು ಅಂದಾಜಿಸಲಾಗುತ್ತಿದೆ. ಚಂಡಮಾರುತದಿಂದಾಗಿ ಇಬ್ಬರು ಮೃತಪಟ್ಟಿದ್ದು, 100ಕ್ಕೂ ಹೆಚ್ಚು ಮಂದಿ ಗಾಯಗೊಂಡಿದ್ದಾರೆ.

ಹಿರೋಷಿಮಾ ಪಶ್ಚಿಮ ಪ್ರಾಂತ್ಯದಲ್ಲಿ ಒಬ್ಬ ವ್ಯಕ್ತಿ ನಾಪತ್ತೆಯಾಗಿದ್ದರೆ, 115ಕ್ಕೂ ಮಂದಿ ಗಾಯಗೊಂಡಿದ್ದಾರೆ.



ಚೆಸ್: ಅಗ್ರಸ್ಥಾನದಲ್ಲಿ ಅರ್ಜುನ್ ಎರಿಗೈಸಿ

ನ್ಯೂಯಾರ್ಕ್ (ಪಿಟಿಐ): ಭಾರತದ ಅರ್ಜುನ್ ಎರಿಗೈಸಿ ಅವರು ಜೂಲಿಯಸ್ ಬಾರ್ ಕಪ್ ಆನ್‌ಲೈನ್ ಚೆಸ್ ಟೂರ್ನಿಯಲ್ಲಿ ಅಗ್ರಸ್ಥಾನಕ್ಕೇರಿದ್ದಾರೆ. ಆರ್. ಪ್ರಗ್ನಾನಂದ ಎರಡನೇ ಸ್ಥಾನ ಕಾಯ್ದುಕೊಂಡಿದ್ದಾರೆ.

ಎಂಟು ಸುತ್ತಿನ ಬಳಿಕ ಅರ್ಜುನ್ ಅವರು 17 ಮತ್ತು ಪ್ರಗ್ನಾನಂದ 15 ಪಾಯಿಂಟ್ಸ್ ಕಲೆಹಾಕಿದ್ದರು.

ಎಂಟನೇ ಸುತ್ತಿನಲ್ಲಿ ಪ್ರಗ್ನಾನಂದ ಅವರು ನಾರ್ವೆಯ ಮ್ಯಾಗ್ನಸ್ ಕಾರ್ಲ್‌ಸನ್ ಅವರೊಂದಿಗೆ ಡ್ರಾ ಸಾಧಿಸಿದರು. ಕಾರ್ಲ್‌ಸನ್ ಕೂಡ ಎರಡನೇ ಸ್ಥಾನದಲ್ಲಿದ್ದರು.

ದಿನದ ಮೊದಲ ಪಂದ್ಯದಲ್ಲಿ ಅರ್ಜುನ್ ಅವರು ಅಮೆರಿಕದ ಹಾನ್ಸ್ ನೀಮನ್ ಎದುರು ಗೆದ್ದರೆ ಬಳಿಕ ಲೆವೊನ್ ಅರೊನಿಯನ್ ಅವರನ್ನು ಸೋಲಿಸಿದರು. ಮೂರನೇ ಸುತ್ತಿನಲ್ಲಿ ಅರ್ಜುನ್ ಮತ್ತು ಪ್ರಗ್ನಾನಂದ ನಡುವಣ ಸೆಣಸಾಟ ಸಮಬಲವಾಯಿತು. ಎಂಟನೇ ಮತ್ತು ದಿನದ ಕೊನೆಯ ಸುತ್ತಿನಲ್ಲಿ ಅರ್ಜುನ್, ಕ್ರೊವೇಷ್ಯಾದ ಇವಾನ್ ಸ್ಟಾರಿಚ್ ಎದುರು ಡ್ರಾ ಸಾಧಿಸಿದರು.

ಅರ್ಜುನ್ ಎರಿಗೈಸಿ– ಟ್ವಿಟರ್ ಚಿತ್ರ

ಕಾರ್ಲ್‌ಸನ್ ಅಚ್ಚರಿಯ ನಡೆ: ನೀಮನ್ ಎದುರು ಆಡುತ್ತಿದ್ದ ಪಂದ್ಯದಲ್ಲಿ ಕಾರ್ಲ್‌ಸನ್ ಎರಡೇ ನಡೆಗಳಲ್ಲಿ ಹಿಂದೆ ಸರಿದು ಅಚ್ಚರಿ ಮೂಡಿಸಿದರು. ಈ ಹಿಂದೆ ಸೇಂಟ್ ಲೂಯಿಸ್‌ನಲ್ಲಿ ನಡೆದ ಟೂರ್ನಿಯಲ್ಲಿ ಅಮೆರಿಕದ ಆಟಗಾರನ ಎದುರು ಕಾರ್ಲ್‌ಸನ್ ಸೋತಿದ್ದರು. ನೀಮನ್ ಮೋಸದ ಆಟವಾಡಿದ್ದಾರೆಂದು ಆ ಟೂರ್ನಿಯಿಂದಲೇ ನಾರ್ವೆ ಆಟಗಾರ ಹಿಂದೆ ಸರಿದಿದ್ದರು.

ದಕ್ಷಿಣ–ಪಶ್ಚಿಮ ಪೈಪೋಟಿ ಇಂದಿನಿಂದ

ಕೊಯಮತ್ತೂರು: ದುಲೀಪ್ ಟ್ರೋಫಿ ಕ್ರಿಕೆಟ್ ಟೂರ್ನಿಯ ಫೈನಲ್ ಪಂದ್ಯ ಇಲ್ಲಿನ ಎಸ್‌ಎನ್‌ಆರ್ ಕಾಲೇಜು ಮೈದಾನದಲ್ಲಿ ಬುಧವಾರ ಆರಂಭವಾಗಲಿದ್ದು, ದಕ್ಷಿಣ ವಲಯ ಮತ್ತು ಪಶ್ಚಿಮ ವಲಯ ತಂಡಗಳು ಪ್ರಶಸ್ತಿಗೆ ಪೈಪೋಟಿ ನಡೆಸಲಿವೆ.

ಸೆಮಿಫೈನಲ್ ಪಂದ್ಯಗಳಲ್ಲಿ ಭಾರಿ ಅಂತರದಿಂದ ಗೆಲುವು ಪಡೆದಿದ್ದ ಎರಡೂ ತಂಡಗಳು ಆತ್ಮವಿಶ್ವಾಸದಲ್ಲಿದ್ದು, ಫೈನಲ್‌ನಲ್ಲಿ ಪ್ರಬಲ ಪೈಪೋಟಿ ನಿರೀಕ್ಷಿಸಲಾಗಿದೆ.

ನಾಲ್ಕರಘಟ್ಟದ ಪಂದ್ಯಗಳಲ್ಲಿ ದಕ್ಷಿಣ ವಲಯ ತಂಡ 645 ರನ್‌ಗಳಿಂದ ಉತ್ತರ ವಲಯ ತಂಡವನ್ನು ಮಣಿಸಿದ್ದರೆ, ಪಶ್ಚಿಮ ವಲಯ 279 ರನ್‌ಗಳಿಂದ ಕೇಂದ್ರ ವಲಯ ಎದುರು ಗೆದ್ದಿತ್ತು.

ದಕ್ಷಿಣ ವಲಯ ತಂಡ ಸೆಮಿಫೈನಲ್ ಪಂದ್ಯವನ್ನು ಇದೇ ಮೈದಾನದಲ್ಲಿ ಆಡಿತ್ತು. ಆರಂಭಿಕ ಬ್ಯಾಟರ್ ರೋಹನ್ ಕುನ್ನುಮಲ್, ನಾಯಕ ಹನುಮ ವಿಹಾರಿ ಮತ್ತು ರಿಕಿ ಭುಯಿ ಅವರು ಶತಕ ಗಳಿಸಿದ್ದರು. ಫೈನಲ್‌ನಲ್ಲೂ ಇವರು ಉತ್ತಮ ಪ್ರದರ್ಶನದ ವಿಶ್ವಾಸದಲ್ಲಿದ್ದಾರೆ. ಬೌಲಿಂಗ್‌ನಲ್ಲಿ ಎಡಗೈ ಸ್ಪಿನ್ನರ್ ಆರ್.ಸಾಯಿ ಕಿಶೋರ್ ಅವರು ತಂಡದ ಬಲ ಎನಿಸಿದ್ದಾರೆ. ಸೆಮಿಯಲ್ಲಿ ಅವರು 10 ವಿಕೆಟ್ ಪಡೆದಿದ್ದರು.

ಪೃಥ್ವಿ ಶಾ ಮತ್ತು ಶಮ್ಸ್ ಮುಲಾನಿ ಅವರನ್ನೊಳಗೊಂಡ ಪಶ್ಚಿಮ ವಲಯ ಕೂಡಾ ಎದುರಾಳಿ ತಂಡಕ್ಕೆ ತಕ್ಕ ಪೈಪೋಟಿ ನೀಡಲು ಸಜ್ಜಾಗಿದೆ.

ಶೌಚಾಲಯದಲ್ಲಿಟ್ಟಿದ್ದ ಆಹಾರ ತಟ್ಟೆಗೆ ಹಾಕಿಕೊಳ್ಳುತ್ತಿರುವುದು –ಪಿಟಿಐ ಚಿತ್ರ

ಶೌಚಾಲಯದಲ್ಲಿಟ್ಟ ಆಹಾರ ಕ್ರೀಡಾಪಟುಗಳಿಗೆ ವಿತರಣೆ!

ಸಹರಾನ್‌ಪುರ, ಉತ್ತರಪ್ರದೇಶ (ಪಿಟಿಐ): ಇಲ್ಲಿ ನಡೆದ ರಾಜ್ಯಮಟ್ಟದ ಕಬಡ್ಡಿ ಟೂರ್ನಿಯಲ್ಲಿ ಮಹಿಳಾ ಆಟಗಾರ್ತಿಯರಿಗೆ ಶೌಚಾಲಯದಲ್ಲಿ ಇಟ್ಟಿದ್ದ ಆಹಾರ ಪೂರೈಸಲಾಗಿದೆ ಎಂಬ ಆರೋಪ ಕೇಳಿಬಂದಿದೆ. ಈ ಹಿನ್ನೆಲೆಯಲ್ಲಿ ಜಿಲ್ಲೆಯ ಕ್ರೀಡಾ ಅಧಿಕಾರಿಯೊಬ್ಬರನ್ನು ಅಮಾನತು ಮಾಡಲಾಗಿದೆ.

ಇದೇ 16ರಂದು ನಡೆದಿದೆ ಎನ್ನಲಾದ ಈ ಘಟನೆಯ ವಿಡಿಯೊ ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆಗಿತ್ತು. ಡಾ. ಭೀಮರಾವ್ ಅಂಬೇಡ್ಕರ್ ಕ್ರೀಡಾಂಗಣದಲ್ಲಿ ನಡೆದ ಸಬ್‌ಜೂನಿಯರ್ ಟೂರ್ನಿಯಲ್ಲಿ ಭಾಗವಹಿಸಿದ್ದ ಆಟಗಾರ್ತಿಯರಿಗೆ ಶೌಚಾಲಯದಲ್ಲಿಟ್ಟಿದ್ದ ಅನ್ನ ಮತ್ತು ಪೂರಿ ವಿತರಿಸಿದ್ದು ವಿಡಿಯೊದಲ್ಲಿ ಕಂಡುಬಂದಿತ್ತು.

ಈ ಟೂರ್ನಿಯಲ್ಲಿ 16 ಡಿವಿಷನ್‌ಗಳ 300ಕ್ಕೂ ಹೆಚ್ಚು ಆಟಗಾರ್ತಿಯರು ಪಾಲ್ಗೊಂಡಿದ್ದರು. ಘಟನೆಯ ಕುರಿತು ಜಿಲ್ಲಾ ಮ್ಯಾಜಿಸ್ಟ್ರೇಟ್ ಅಖಿಲೇಶ್ ಸಿಂಗ್ ಅವರು ತನಿಖೆಗೆ ಆದೇಶಿಸಿದ್ದಾರೆ.

ಎಚ್‌ಐ ಅಧ್ಯಕ್ಷ ಸ್ಥಾನ: ತ್ರಿಕೋನ ಸ್ಪರ್ಧೆ

ನವದೆಹಲಿ (ಪಿಟಿಐ): ಹಾಕಿ ಇಂಡಿಯಾ (ಎಚ್‌ಐ) ಅಧ್ಯಕ್ಷ ಸ್ಥಾನಕ್ಕೆ ತ್ರಿಕೋನ ಸ್ಪರ್ಧೆ ಏರ್ಪಟ್ಟಿದ್ದು, ಭಾರತ ತಂಡದ ಮಾಜಿ ನಾಯಕ ದಿಲೀಪ್ ಟಿರ್ಕೆ ಅವರು ಉತ್ತರ ಪ್ರದೇಶ ಹಾಕಿ ಸಂಸ್ಥೆ ಅಧ್ಯಕ್ಷ ರಾಕೇಶ್ ಕತ್ಯಾಲ್ ಮತ್ತು ಹಾಕಿ ಜಾರ್ಖಂಡ್ ಅಧ್ಯಕ್ಷ ಭೋಲಾ ನಾಥ್ ಸಿಂಗ್ ಅವರಿಂದ ಪೈಪೋಟಿ ಎದುರಿಸಲಿದ್ದಾರೆ.

ಅ.1 ರಂದು ಎಚ್‌ಐ ಅಧ್ಯಕ್ಷ ಸ್ಥಾನದ ಚುನಾವಣೆ ನಡೆಯಲಿದ್ದು, ಮೂವರು ಉಮೇದುವಾರಿಕೆ ಸಲ್ಲಿಸಿದ್ದಾರೆ. ನಾಮಪತ್ರ ವಾಪಸ್ ಪಡೆಯಲು ಸೆ.23 ಕೊನೆಯ ದಿನ.

ಈ ನಡುವೆ ಉತ್ತರ ಪ್ರದೇಶ ಹಾಕಿ ಸಂಸ್ಥೆ ಕಾರ್ಯದರ್ಶಿ ಆರ್.ಪಿ. ಸಿಂಗ್ ಅವರು, ನಾಮಪತ್ರ ವಾಪಸ್ ಪಡೆದು ಟಿರ್ಕೆ ಅವರನ್ನು ಬೆಂಬಲಿಸುವಂತೆ ರಾಕೇಶ್ ಅವರಿಗೆ ಮನವಿ ಮಾಡಿದ್ದಾರೆ.

ಭೋಲಾ ನಾಥ್ ಅವರು ಅಧ್ಯಕ್ಷ ಸ್ಥಾನ ಮಾತ್ರವಲ್ಲದೆ, ಕಾರ್ಯದರ್ಶಿ ಸ್ಥಾನಕ್ಕೂ ನಾಮಪತ್ರ ಸಲ್ಲಿಸಿದ್ದಾರೆ. ದೆಹಲಿ ಹಾಕಿ ಸಂಸ್ಥೆ ಅಧ್ಯಕ್ಷ ಹಿತೇಶ್ ಸಿಂದ್ವಾನಿ ಮತ್ತು ಹಾಕಿ ಮಹಾರಾಷ್ಟ್ರ ಉಪಾಧ್ಯಕ್ಷ ಮನೋಜ್ ಭೋರೆ ಅವರೂ ಕಾರ್ಯದರ್ಶಿ ಸ್ಥಾನಕ್ಕೆ ಸ್ಪರ್ಧಿಸುತ್ತಿದ್ದಾರೆ.

ಸುಬ್ರಮಣ್ಯ ಸ್ಪರ್ಧೆ: ಹಾಕಿ ಕರ್ನಾಟಕದ ಅಧ್ಯಕ್ಷ ಎಸ್.ವಿ.ಎಸ್. ಸುಬ್ರಮಣ್ಯ ಅವರು ಉಪಾಧ್ಯಕ್ಷ ಸ್ಥಾನಕ್ಕೆ ಸ್ಪರ್ಧಿಸಿದ್ದಾರೆ. ಅವರಿಗೆ ಹಾಕಿ ಜಮ್ಮು ಮತ್ತು ಕಾಶ್ಮೀರ ದ ಆಸಿಮಾ ಅಲಿ ಪೈಪೋಟಿ ಒಡ್ಡಿದ್ದಾರೆ. ಖಜಾಂಚಿ ಸ್ಥಾನಕ್ಕೆ ಹಾಕಿ ತಮಿಳುನಾಡು ಅಧ್ಯಕ್ಷ ಶೇಖರ್ ಜೆ. ಮನೋಹರನ್ ಮಾತ್ರ ನಾಮಪತ್ರ ಸಲ್ಲಿಸಿದ್ದಾರೆ.